
ಕಸ್ತೂರಿ



ಜನವರಿ, ೧೯೬೨

ಬೆಲೆ : ೭೫ ನ.ಪೈ.

ಜನೆವರಿ ಬಿಡುಗಡೆ!



ಎವರ್‌ಗ್ರೀನ್ ಪ್ರೊಡಕ್ಷನ್ಸ್ ರವರ

ರತ್ನ ಮಂಜರಿ

(ಕನ್ನಡ)

...ಸರ್ವೋನ್ನತ ಮನರಂಜನೆಯ ಜಾನಪದ ಚಿತ್ರ...



ಕಸ್ತೂರಿ

ಕನ್ನಡ ಡೈಜೆಸ್ಟ

ಪ್ರತಿತಿಂಗಳ ೧ ನೆ ದಿನಾಂಕ ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ದಾಸಯ್ಯ
ಸಿ. ಭೋಜರಾಜ

ಚಂದಾ ದರ :

ವಾರ್ಷಿಕ (ಅಂಚೆಸೇರಿ).	ರೂ.೮.೦೦
ಅರ್ಧ ವರ್ಷ —	ರೂ.೪.೫೦
ಬಿಡಿಸಂಚಿಕೆ —	ರೂ.೦.೭೫

Kasturi, January 1962

ಲೇಖಕರಿಗೆ ಸಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡರೆ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕವಿಭಾಗ



ಕಸ್ತೂರಿ

ಸಂಚಿಕೆ ೫ ಜನೆವರಿ, ೧೯೬೨ ವರ್ಷ ೬

ಶ್ರೀಮಂತನಾರು?

ಎಪಿಕ್ಟೇಟಸ್‌ನೆಂಬೊಬ್ಬ ನಿಗ್ರಹಿಯಾದ ತತ್ತ್ವಜ್ಞಾನಿಯಿದ್ದ. ರೋಮ ನಗರದ ಪ್ರಖ್ಯಾತ ವಕ್ತಾರನೂ ವಕೀಲನೂ ಆದ ಧನಾಢ್ಯ ವ್ಯಕ್ತಿಯೊಬ್ಬ ಒಂದು ದಿನ ಇವನ ಬಳಿ ಬಂದು "ಅಯ್ಯಾ, ನನಗೆ ನಿಮ್ಮ ತತ್ತ್ವಜ್ಞಾನ ಕಲಿಸಿರಿ" ಎಂದ.

ಅವನು ತತ್ತ್ವಜ್ಞಾನವೆಂದರೆ ಎಲ್ಲೊ ಹರಟೆಯ ವಿಷಯವೆಂದು ತಿಳಿದುಬಂದಿದ್ದಾನೆಂಬುದನ್ನರಿತ ಎಪಿಕ್ಟೇಟಸ್, "ನನ್ನ ತತ್ತ್ವಜ್ಞಾನ ನಿಮಗೆ ರುಚಿಸಲಾರದು. ನೀವು ಆ ಮೇಲೆ ನನ್ನನ್ನು ನಿಂದಿಸಬಹುದು. ತತ್ತ್ವಜ್ಞಾನವನ್ನು ಆಚರಿಸುಸುವುದು ಕಷ್ಟ. ಆ ಇಷ್ಟ ನಿಮಗಿಲ್ಲ" ಎಂದ.

ವಕೀಲ ಒಪ್ಪಿಕೊಂಡ. "ಹೌದು, ನಿಮ್ಮಮಾತು ನಿಜ. ನಿಮ್ಮಂತೆ ತತ್ತ್ವಜ್ಞಾನವನ್ನು ನಾನು ಆಚರಿಸಿದರೆ ನಾನೂ ನಿಮ್ಮಂತೆ ಬೀದಿಯ ಭಿಕಾರಿಯಾಗಿ ಬಿಟ್ಟೇನು. ಆಮೇಲೆ ಸೀಜರನಿಂದ ಸನ್ಮಾನವೂ ಸಿಗಲಾರದು. ಜನತೆಯಲ್ಲಿ ಗೌರವವೂ ಸಿರಿಸಂಪತ್ತೂ ಉಳಿಯಲಾರವು."

ಆಗ ತಟ್ಟನೆ ಎಪಿಕ್ಟೇಟಸ್ ನುಡಿದ: "ನೋಡಿ, ಈಗ ನಾನು ಬಡವನೆನ್ನುತ್ತೀರಲ್ಲ; ಸ್ವಲ್ಪ ವಿಚಾರ ಮಾಡಿರಿ. ಆಗ ನೀವೇ ನನಗಿಂತ ಬಡವರೆಂಬುದು ನಿಮಗೆ ತಿಳಿಯದಿರದು. ನಾನು ಸೀಜರನ ಸನ್ಮಾನಕ್ಕಾಗಿ ಚಿಂತಿಸುವುದಿಲ್ಲ. ನಾನು ನನ್ನ ಸರ್ವಾಧಿಕಾರಿ . . . ನಿಮ್ಮಲ್ಲಿ ಬೆಳ್ಳಿಯ ತಾಟುಗಳಿವೆ. ಆದರೆ ನಿಮ್ಮ ತತ್ತ್ವಗಳು ಮಾತ್ರ ಮಣ್ಣಿನವಾಗಿವೆ. ನನ್ನದು ತದ್ವಿರುದ್ಧ. ನನ್ನ ಮನಸ್ಸಿನ ಸಾಮ್ರಾಜ್ಯದ ಆಡಳಿತವನ್ನು ವ್ಯವಸ್ಥಿತವಾಗಿಡುವುದರಲ್ಲಿ ನನಗೆ ಸಂತೋಷ ದೊರೆಯುತ್ತದೆ. ಆದರೆ ನಿಮ್ಮ ಮನಸ್ಸಿಗೆ ಕೆಲಸವಿಲ್ಲದ್ದರಿಂದ ಅಸಂತೋಷವು ನಿಮ್ಮನ್ನು ಸುತ್ತಿಕೊಂಡಿರುತ್ತದೆ. ನಿಮ್ಮ ಹತ್ತಿರಿರುವ ವಸ್ತುಗಳು ನಿಮಗೆ ಕಃಪದಾರ್ಥವೆನಿಸುವವು. ನನಗೆ ನನ್ನ ಬಳಿಯಿರುವ ವಸ್ತುಗಳು ಅಮೂಲ್ಯವೆನಿಸುವವು. ನೀವು ಯಾವತ್ತೂ ತೃಷಿತರು. ನಾನು ಯಾವತ್ತೂ ತೃಪ್ತನು."

ವಕೀಲ ಮುಂದೆ ಮಾತೆತ್ತಲಿಲ್ಲ. *

ಜನತೆಯ ಸೇವೆಯೆ ಭಗವಂತನ ಸೇವೆ ಎನ್ನುವುದು ಇವರ ಮಂತ್ರ

ಸವ್ಯಸಾಚಿ ಹುಕ್ಕೇರಿಕರ ರಾಮರಾಯರು

ಆರ್. ಜಿ. ಮುತಾಲಿಕ ದೇಸಾಯಿ

ಧಾರವಾಡದಿಂದ ಹುಬ್ಬಳ್ಳಿಗೆ ಹೊರಟಾಗ ಸುಮಾರು ಒಂದು ಮೈಲು ಸಾಗಿದ ನಂತರ ದಾರಿಯ ಎಡಬದಿಯ ಗುಡ್ಡದ ಮೇಲೆ ಹಬ್ಬಿಕೊಂಡ ಜನತಾ ಶಿಕ್ಷಣ ಸಮಿತಿಯ ಕಟ್ಟಡಗಳು ಒಂದು ದೃಷ್ಟಿಯಿಂದ ಹುಕ್ಕೇರಿಕರ ರಾಮರಾಯರ ಜೀವಂತ ಸ್ಮಾರಕ ಮಂದಿರಗಳೇ. ಕೇವಲ ೧೫ ವರುಷಗಳ ಹಿಂದೆ ಈ ಬೆಟ್ಟ ಒಂದು ನಿರ್ಜನ ಕಾಡಾಗಿತ್ತು. (ಅದರ ಆಚೆ ಮಗ್ಗಲಿಗೆ ಸ್ಮಶಾನ ಬೇರೆ ಇದೆ.) ಇಂದು ಅಲ್ಲಿ ಆರ್ಟ್ಸ್, ಸಾಯನ್ಸ್, ಎಂಜಿನಿಯರಿಂಗ್ ಮತ್ತು ಲಾ ಕಾಲೇಜುಗಳೂ ಗ್ರಾಮೋದ್ಯೋಗ ಮೊದಲಾದ ಸಂಸ್ಥೆಗಳೂ ಚಟುವಟಿಕೆಯಿಂದ ಸಜೀವವಾಗಿದ್ದರೆ ಅದು ರಾಮರಾಯರ ಕಲ್ಪನಾಶಕ್ತಿ, ಸಾಮರ್ಥ್ಯ, ಕರ್ತೃತ್ವಗಳ ಕಾರಣದಿಂದಲೇ.

ಹುಕ್ಕೇರಿಕರರ ಸಾರ್ವಜನಿಕ ಜೀವನದ ಐವತ್ತು ವರ್ಷಗಳು ಬಹುಮುಖ ಚಟುವಟಿಕೆಗಳಿಂದ ವೈವಿಧ್ಯಪೂರ್ಣವಾಗಿವೆ. ರಾಷ್ಟ್ರೀಯ ಹೋರಾಟದಲ್ಲಿ ಅವರ ಪಾತ್ರ ಚಿರಸ್ಥಾಯಿಯಾಗಿದೆ; ಅವರು ವಿಧಾಯಕ ಕಾರ್ಯಗಳನ್ನು ನಿರಂತರವಾಗಿ ಸಾಗಿಸುತ್ತ ಬಂದಿದ್ದಾರೆ; ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯಲ್ಲಿಯೂ ಅವರ ಕೈಯನ್ನು ಕಾಣುತ್ತೇವೆ. ಆದರೆ ಶಿಕ್ಷಣ ಅವರನ್ನು ಪ್ರಚೋದಿಸಿದಷ್ಟು ಮತ್ತಾವುದೂ ಪ್ರಚೋದಿಸಿದ ಹಾಗಿಲ್ಲ. ಅದು ಅವರ ಬಾಲ್ಯ ಜೀವನದ ಕಷ್ಟತೃಪ್ತ ಶಿಕ್ಷಣತೃಷ್ಣೆಯ ಫಲವಾಗಿರಬಹುದು; ಅಥವಾ ಲೋಕಮಾನ್ಯರಿತ್ತ ದೀಕ್ಷೆಯ ಸ್ಫೂರ್ತಿಯಿಂದ ಉದ್ಭವಿಸಿರಬಹುದು. ಹುಕ್ಕೇರಿಕರರ ಬಾಳಿನಲ್ಲಿ ಅನುಕೂಲವಂತಿಕೆ ಎಂದೂ ಇರಲಿಲ್ಲ. ಆದರೆ ತಾವು ಕಟ್ಟಿದ ಶಿಕ್ಷಣ ಸಂಸ್ಥೆಗಳಿಗೆ ಹಣದ ಕೊರತೆಯುಂಟಾಗದಂತೆ ಅವರು ನೋಡಿಕೊಂಡಿದ್ದಾರೆ. ವಾಸ್ತವಿಕವಾಗಿ ಸಾರ್ವಜನಿಕ ಕಾರ್ಯಗಳಲ್ಲಿ ನಿರತರಾದವರಿಗೆ ಆ ಕಾರ್ಯಗಳಿಗಾಗಿ ದುಡ್ಡು ದೊರೆಯುವುದಿಲ್ಲೆಂಬ ಸಂಶಯ ರಾಯರಿಗೆಂದೂ ಉಂಟಾಗಿಲ್ಲ. ಅವರು ಸ್ವಪ್ರಾಂತ ಪರಪ್ರಾಂತಗಳಿಂದ ಸದಾ ಧನ ಸಹಾಯವನ್ನು ಬಾಚುತ್ತಾರೆ ಇಂದು ಎಪ್ಪತ್ತೈದರಲ್ಲಿ ಅವರಿನ್ನೂ ಸಂಸ್ಥೆಗಳನ್ನು ಬೆಳಸುತ್ತಲೇ ಇದ್ದಾರೆ.

ಹುಕ್ಕೇರಿಕರ ರಾಮರಾಯರು ಚಿಂಚಲಿಯಲ್ಲಿ ೧೮೮೬ ಅಕ್ಟೋಬರ ೨೨ ರಂದು ಹುಟ್ಟಿದರು. ಅವರ ತಂದೆ ಶ್ರೀನಿವಾಸರಾಯರು ಉಕ್ಕಿನ ನಿರ್ಧಾರದ ವ್ಯಕ್ತಿ. ಅಣ್ಣನೊಡನೆ ಯಾವುದೋ ಚಿಕ್ಕ ಕಾರಣಕ್ಕಾಗಿ ಆದ ಜಗಳದ ಫಲವಾಗಿ ಈ ಅವಮಾನದ ಸ್ಥಳವೂ ಬೇಡ, ಅವಮಾನ ಮಾಡುವವರ ಸಂಬಂಧವೂ ಬೇಡ ಎಂದು ಹುಕ್ಕೇರಿಯನ್ನು ಬಿಟ್ಟು ಚಿಂಚಲಿಯಲ್ಲಿ ನೆಲಸಿ ಜೀವಮಾನದಲ್ಲಿ ಒಮ್ಮೆಯೂ ತಮ್ಮ ಜನ್ಮಸ್ಥಳವನ್ನು ಹೊರಳಿ ನೋಡಲಿಲ್ಲ. ಚಿಂಚಲಿಯ ದೇಸಾಯರಲ್ಲಿ ನಾಕರಿಗೆ ನಿಂತಿದ್ದರೂ ಅವರ ನಿಷ್ಠಾವಂತ ಜೀವನ... ದೇಸಾಯರಲ್ಲಿ ಪುರಾಣಪಠನ ಮೊದಲಾದ... ಗಳಿಂದ ಅವರ ಪರಮ ಮಿತ್ರರಂತೆಯೆ ಇದ್ದರು.

ರಾಮರಾಯರು ಎಂಟು ವರ್ಷದವರಾಗಿದ್ದಾ... ಶ್ರೀನಿವಾಸರಾಯರು ಸ್ವರ್ಗಸ್ಥರಾದರು. ಮೂ... ವರು ಅಣ್ಣಂದಿರಿದ್ದರೂ ಅವರೆಲ್ಲ ನಾಕರಿಗಾ...

ಗಿಯೋ ಶಿಕ್ಷಣಕ್ಕಾಗಿಯೋ ಬೇರೆ ಕಡೆಗೆ ಹೋ-
ಗಿದ್ದುದರಿಂದ ಬಾಲಕ ರಾಮರಾಯರ ಮೇಲೆ
ಒಂದು ತರಹದಿಂದ ಯಜಮಾನಿಕೆಯ ಹೊಣೆ
ಬಿತ್ತು. ವಿಧವೆ ತಾಯಿ ಮತ್ತು ದೇಸಾಯರ ಪತ್ನಿ
(ಅವರೂ ಪತಿವಿಯೋಗ ಹೊಂದಿದ್ದರು) ಯ
ಮನಶ್ಶಾಂತಿಗಾಗಿ ರಾಮಾಯಣ ಮಹಾಭಾರತ
ಗಳನ್ನು ಓದಿ ಹೇಳುತ್ತಿದ್ದರು. ಇದರಿಂದ ಎಳೆಯ
ವಯಸ್ಸಿನಲ್ಲೇ ರಾಯರ ಮನಸ್ಸು ಗಾಢವಾದ
ಸಂಸ್ಕಾರ ಹೊಂದಿತು. ಸಮವಯಸ್ಸಿನವರು
ಆಟಪಾಟಗಳಲ್ಲಿರುವಾಗ ಇವರಿಗೆ ಮನೆಗೆಲಸ
ಗಳೇ ವ್ಯಾಯಾಮವಾದವು. ನಿತ್ಯವೂ ಹಳ್ಳಕ್ಕೆ
ಹೋಗಿ, ಎಮ್ಮೆಯ ಮೈ ತೊಳೆದು, ಅರಿವೆ
ಒಗೆದು, ಸ್ನಾನ ಮಾಡಿ ಕೊಡದಲ್ಲಿ ನೀರು ತುಂಬಿ
ಕೊಂಡು ಬರುತ್ತಿದ್ದರು.

ರಾಯರ ಪ್ರಾಥಮಿಕ ಶಿಕ್ಷಣ ಮರಾಠಿಯಲ್ಲಿ
ಅನಿವಾರ್ಯವಾಗಿ ಸಾಗಿತು. ಮುಲಕೀ ವರ್ಗದ
ವರೆಗೆ ಅಭ್ಯಾಸ ಮಾಡಿದರೂ ಆ ಕಾಲದ ನಿಯ
ಮದ ಪ್ರಕಾರ ವಯಸ್ಸು ಸಾಕಷ್ಟಾಗದ್ದರಿಂದ
ಎರಡು ವರ್ಷ ಮನೆಯಲ್ಲಿ ಕೂಡಬೇಕಾಯಿತು.
ಇಂಗ್ಲೀಷ್ ಕಲಿಯುವ ಹಟದಿಂದ ಕೊಲ್ಹಾಪುರ,
ಸಾಂಗಲಿ, ಜಮಖಂಡಿಗಳ ಕಡೆ ಅಲೆದಾಡಿ
ನಿರಾಶರಾಗಿ ಮರಳಿದರು. ತಾಯಿಯನ್ನು
ಹೇಗೋ ಮನವೊಲಿಸಿ ಶಹಾಪೂರಕ್ಕೆ ಬಂದು
ವಸತಿ ಮಾಡಿದ ಮೇಲೆಯೆ ಇಂಗ್ಲೀಷ್ ಮೊದ
ಲನೇ ವರ್ಗದ ಓದು ಪ್ರಾರಂಭವಾದದ್ದು.

ಮ್ಯಾಟ್ರಿಕ್ ಪಾಸಾದಾಗ ಅವರಿಗೆ ೧೯ ವರ್ಷ
ವಾಗಿ ಹೋಗಿತ್ತು. ಆರಂಭದಿಂದ ೧೯೧೨ ರಲ್ಲಿ
ಪುಣೆಯಿಂದ ಎಂ. ಎ. ಮುಗಿಸುವ ವರೆಗೂ ಬಡ
ತನದ ಕಾಲ. ಹೈಸ್ಕೂಲಿನಲ್ಲಿ ಉಳಿದ ಸಹಪಾಠಿ
ಗಳಿಗಿಂತ ದೊಡ್ಡವರಾಗಿದ್ದುದರಿಂದ ಹೇಗಾ
ದರೂ ಮ್ಯಾಟ್ರಿಕ್ಕನ್ನು ಪೂರೈಸುವ ಅವಸರದಲ್ಲಿ
ವರ್ಗಗಳನ್ನು ಹಾರಿಸಿದ್ದುದರಿಂದ ಮುಂದೆ
ಕಾಲೇಜಿನಲ್ಲಿ ಅವರ ಪ್ರಗತಿಗೆ ತೊಡಕಾಯಿತು.
ಖಾಸಗಿ ಶಿಕ್ಷಣದಿಂದ ಸುಧಾರಿಸಿಕೊಳ್ಳಬೇಕೆಂ-
ದರೆ ಧನಾಭಾವ ಅಡ್ಡಬಂತು.

ಆದರೆ ಪರೀಕ್ಷಾರಂಗದಲ್ಲಿದ್ದ ವಿದಗ್ಧತೆಯ
ಕೊರತೆಯನ್ನು ತುಂಬಲು ಅವರು ಪುಣೆಯ
ಅಂದಿನ ವಾತಾವರಣದಿಂದ ಪಡೆದ ಆದರ್ಶ
ವಾದ ಧಾರಾಳವಾಗಿತ್ತು. ೧೯೦೫-೬ ರ ವಂಗ
ಭಂಗದ ಕಾಲದಲ್ಲಿ ಟಿಳಕರ "ಸ್ವದೇಶಿ",
"ಬಹಿಷ್ಕಾರ", "ರಾಷ್ಟ್ರೀಯ ಶಿಕ್ಷಣ" ಮತ್ತು
"ಸ್ವರಾಜ್ಯ"ದ ರಾಷ್ಟ್ರೀಯ ಚಳವಳಿಯಿಂದ ಪ್ರಭಾ
ವಿತರಾಗಿದ್ದ ಅವರು ಬೆಳಗಾವಿಯಲ್ಲಿ ಶಾಲೆ ಕಲಿ
ಯುತ್ತಿದ್ದಾಗಲೇ ಕಪಿಲೇಶ್ವರ ದೇವಸ್ಥಾನದೆ-
ದುರು ನಡೆದ ವಿದೇಶಿ ವಸ್ತ್ರದ ಹೋಳಿಯಲ್ಲಿ
ತಮ್ಮ ಅಂಗಿಯನ್ನು ಆಹುತಿ ಕೊಟ್ಟಿದ್ದರಂತೆ.
ಕಾಲೇಜಿನಲ್ಲಿದ್ದಾಗ ತಮ್ಮ ಅಣ್ಣನ ನೆರವಿನಿಂದ
ಲೋಕಮಾನ್ಯ ಟಿಳಕರ ಪರಿಚಯ ಲಾಭವಾದ
ಮೇಲಂತೂ ನಿತ್ಯ "ಕೇಸರಿ" ಯನ್ನೋದುವುದೂ
ಸಭೆ ಸಮ್ಮೇಳನಗಳಿಗೆ ಹೋಗುವುದೂ ಪ್ರಾರಂ-
ಭವಾಯಿತು.

ಒಮ್ಮೆ ರಾಯರು ಲೋಕಮಾನ್ಯರನ್ನು ಕಂಡು
ಶಿಕ್ಷಣ ಮುಗಿದ ನಂತರ ಯಾವುದನ್ನು ತಮ್ಮ
ಸೇವಾಕ್ಷೇತ್ರವಾಗಿ ಮಾಡಿಕೊಳ್ಳಬೇಕೆಂದು ಸ-
ಲಹೆ ಕೇಳಿದಾಗ ಅವರು ಸ್ವಾತಂತ್ರ್ಯ, ಸಾಮಾ
ಜಿಕ ಸ್ಥಾನಮಾನ ಮತ್ತು ಧನಾರ್ಜನೆ ಇವೆಲ್ಲ
ವುಗಳಿಂದ ಕೂಡಿದ ವಕೀಲವೃತ್ತಿ ಉತ್ತಮ,
ಅನಂತರ ಅನೇಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ
ರಾಷ್ಟ್ರೀಯತೆಯನ್ನು ರೂಪಿಸಲು ಅವಕಾಶ
ವಿರುವ ಶಿಕ್ಷಕವೃತ್ತಿ, ಕೊನೆಗೆ ಸ್ವದೇಶಿ ವಸ್ತುಗಳ
ವ್ಯಾಪಾರವಾದರೂ ಅಡ್ಡಿಯಿಲ್ಲ ಎಂದರಂತೆ.

ಹುಕ್ಕೇರಿಕರರ ಮನಸ್ಸು ಪುಣೆಯಲ್ಲಿ ಕಳೆದ
ಆರು ವರ್ಷಗಳಲ್ಲಿ ಶಿಕ್ಷಣವೃತ್ತಿಯತ್ತ ಸೆಳೆಯು
ತ್ತಿತ್ತು. ಫರ್ಗುಸನ್ ಕಾಲೇಜಿನಲ್ಲಿದ್ದಾಗ ಪ್ರಿನ್ಸಿ
ಪಾಲ ಪರಾಂಜಪೆ, ಪ್ರೊಫೆಸರ್ ಭಾಟೆ, ಪ್ರೊಫೆ
ಸರ್ ರಾಜವಾಡೆ ಇಂಥವರ ಸ್ನೇಹಸೌಭಾಗ್ಯ
ದೊರೆತು ಅವರ ಆದರ್ಶವಾದದಿಂದ, ವಿದ್ಯಾರ್ಥಿ
ಗಳ ಸೇವೆಯೇ ತಮ್ಮ ಪರಮ ಗುರಿ ಎಂಬ
ಭಾವನೆಯಿಂದ ಸ್ಫೂರ್ತಿ ಪಡೆದಿದ್ದರು.

ಈ ಆದರ್ಶವಾದದಿಂದ ತುಂಬಿತುಳುಕುತ್ತಿದ್ದ



ಕಾಲದಲ್ಲೇ ವಿಧಿಯ ಅಣಕವೊಂದು ರಾಮರಾಯರನ್ನು ತಮ್ಮ ಆದರ್ಶಕ್ಕೆ ಸಂಗತವಾಗದ ರೀತಿಯಲ್ಲಿ ವಿವಾಹಬಂಧನದಲ್ಲಿ ಸಿಲುಕಿಸಿತು. ಒಂದು ರಾತ್ರಿ ಅವರ ಬಿಡಾರದ ಕೋಣೆಯ ಬಾಗಿಲನ್ನು ಯಾರೋ ಬಡಿದರು. ಬಾಗಿಲು ತೆರೆದಾಗ ಬ್ರಾಹ್ಮಣ ಗೃಹಸ್ಥರೊಬ್ಬರು ಒಳಬಂದು, ತನ್ನ ಮಗಳ ಧರ್ಮಸೆರೆ ಬಿಡಿಸಬೇಕೆಂದು ಪರಿಪರಿಯಾಗಿ ಗೋಗರೆದರು. ಅವರ ಹೆಸರು ಕಾನುಗೋ ಎಂದಿತ್ತು. ವೈಷ್ಣವರು ಕಡಿಮೆಯಾಗಿದ್ದ ಪುಣೆಯಲ್ಲಿ ಮಗಳಿಗೆ ಅನುರೂಪ ವರನನ್ನು ಸಂಪಾದಿಸಲಾರದೆ ಕಾನುಗೋ ಅವರು ಯಾರಿಂದಲೋ ರಾಮರಾಯರು ವೈಷ್ಣವರೆಂದರಿತು ಬಂದಿದ್ದರು. ಪ್ರೊ. ಭಾಟೆಯವರ ಸುಧಾರಣಾವಾದಿ ವಿಚಾರಗಳಿಂದ ಪ್ರೇರಿತರಾಗಿದ್ದ ರಾಮರಾಯರು ಮಾಡಿಕೊಂಡರೆ ಬಾಲವಿಧವೆಯನ್ನೇ ಮದುವೆ ಮಾಡಿಕೊಳ್ಳುವೆನೆಂದು ಸಂಕಲ್ಪ ಮಾಡಿಕೊಂಡಿದ್ದರು. ಈಗ ಈ ಬ್ರಾಹ್ಮಣ ಗಂಟುಬಿದ್ದಿದ್ದಾನೆ. ಮನಸು ಗಟ್ಟಿ ಮಾಡಿ ರಾಯರು ಖಂಡಿತೋಕ್ತಿಯಿಂದ ನಿರಾಕರಿಸಿದರು. ಆದರೆ ಅಷ್ಟು ಸುಲಭವಾಗಿ ಪಾರಾಗಲು ಸಾಧ್ಯವಾಗಲಿಲ್ಲ. ಅವರ ನಿಕಟ ಮಿತ್ರರೊಬ್ಬರ ಸಲಹೆಯಂತೆಯೇ ಕಾನುಗೋ ಅವರು ರಾಯರ ಕಡೆ ಬಂದಿದ್ದರು. ಮಿತ್ರರ ಒತ್ತಾಯ ಬಲವಾಯಿತು. ರಾಯರು ಒಪ್ಪಲೇಬೇಕಾಯಿತು. ಈ ವಿಧಿ ತಂದ ವಧು"—ಜಾನಕೀಬಾಯಿ—ರಾಯರೊಡನೆ, ಅವರ ಬಡತನ, ಸಂಕಷ್ಟ, ರಾಷ್ಟ್ರೀಯ ಸಂಗ್ರಾಮದಲ್ಲಿ ವಹಿಸಿದ ಪಾತ್ರದಿಂದ ಒದಗಿದ ವಿರಹ ಇವೆಲ್ಲವನ್ನೂ ನಗುಮೊಗದಿಂದ ಸಹಿಸಿಕೊಂಡು ಹನ್ನೆರಡು ವರ್ಷಕಾಲ ಪತಿಯ ನೆರಳಿನ ನೆರಳಾಗಿ ಬಾಳಿ ಎರಡು ಮಕ್ಕಳನ್ನು ಬಿಟ್ಟು ಕಣ್ಮುಚ್ಚಿದರು.

ಶಿಕ್ಷಣಕ್ಷೇತ್ರದಲ್ಲಿ ದುಡಿಯುವುದಾಗಿ ರಾಯರು ಲೋಕಮಾನ್ಯರ ಬೋಧನೆಯಿಂದಾಗಿ ನಿರ್ಧರಿಸಿದರು. ಅದೇ ಸಮಯದಲ್ಲಿ ಅವರ ಸಹಪಾಠಿ ಗುತ್ತಲ ರಂಗಾಚಾರ್ಯರು ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು ಆ ಶಾಲೆಯನ್ನು ಬಲಪಡಿಸುವುದಾಗಿ ಯೋಚಿಸುತ್ತಿರುವಾಗ ರಾಮರಾಯರು ಎಂ. ಎ. ಪಾಸಾದುದರಿಂದ ರಂಗಾಚಾರ್ಯರು ಅವರ ಮನವೊಲಿಸಿ ವಿಕ್ಟೋರಿಯಾ ಹೈಸ್ಕೂಲಿಗೆ ಆಜೀವಸದಸ್ಯರಾಗಿ ಕರೆತಂದರು. ೧೯೧೨ ರಿಂದ ಒಂಭತ್ತು ವರ್ಷ ಕಾಲ ಹುಕ್ಕೇರಿಕರರು ವಿಕ್ಟೋರಿಯಾ ಹೈಸ್ಕೂಲಿನ ಪ್ರಿನ್ಸಿಪಾಲರಾಗಿ ಅದನ್ನು ಖಾಸಗಿ ಶಾಲೆಗಳಲ್ಲಿ ಶ್ರೇಷ್ಠ ತರಗತಿಯದನ್ನಾಗಿ ರೂಪಿಸಿದರು. ರಾಷ್ಟ್ರೀಯ ದೃಷ್ಟಿಯ ಶಿಕ್ಷಣವನ್ನು ವಿಸ್ತರಿಸುವ ಅಪೇಕ್ಷೆಯಿಂದ ಅದರ ಶಾಖಾ ಶಾಲೆಗಳನ್ನು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಐನಾಪುರಗಳಲ್ಲಿ ತೆರೆಯಲಾಯಿತು.

ವಿಕ್ಟೋರಿಯಾ ಹೈಸ್ಕೂಲಿನ ಒಂದು ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಬಂದಿದ್ದ ರ್‍ಯಾಂಗ್ಲರ್ ಪರಾಂಜಪೆಯವರ ಮುಂದೆ ಈ ಹೈಸ್ಕೂಲನ್ನು ಕಾಲೇಜಾಗಿ ಬೆಳೆಸುವ ವಿಚಾರವನ್ನು ರಾಯರು ಪ್ರಕಟಿಸಿದರು. ಪರಾಂಜಪೆಯವರು ಅದನ್ನು ಸಮರ್ಥಿಸಿದರು. ಈ ಕಲ್ಪನೆಗೆ ಚಾಲನೆ ದೊರೆತು ೧೯೨೦ ರಲ್ಲಿ ವಿಕ್ಟೋರಿಯಾ ಕಾಲೇಜು ತೆರೆಯಿತು. ಆದರೆ ಕಾಲೇಜು ತೆರೆಯುವುದರಲ್ಲಿ ಸಹಕರಿಸಿದ ಮಿತ್ರರಲ್ಲೇ ತಾತ್ವಿಕ ಮತಭೇದಗಳು ಹುಟ್ಟಿಕೊಂಡು ಒಂದೇ ವರ್ಷದಲ್ಲಿ ಅದು ಮುಚ್ಚುವಂತಾಯಿತು. ಸಂಸ್ಥೆಗಳನ್ನು ಕಟ್ಟಲು ಬೇಕಾದ ಮನಸಿನ ದೊಡ್ಡತನ, ಸಹಕಾರಭಾವ ಇವುಗಳ ಕೊರತೆ ಕರ್ನಾಟಕದಲ್ಲಿರುವುದಕ್ಕೆ ಇದೊಂದು ನಿದರ್ಶನವಾಗಿತ್ತು. ಹುಕ್ಕೇರಿಕರರ ಕಾಲೇಜಿನ ಕನಸು ಹೀಗೆ ಮೊಟಕಾದದ್ದು ಪುನಃ ಕೊನರಲು ಮಧ್ಯೆ ಕಾಲು ಶತಮಾನ ಗತಿಸಬೇಕಾಯಿತು.

ಆ ಮುಂದಿನ ವರ್ಷಗಳು ರಾಯರ ಬಾಳಿನಲ್ಲಿ ಹೋರಾಟದ ಕಾಲವೇ. ೧೯೨೧ ರ ಅಸಹಕಾರ ಚಳವಳಿಯಲ್ಲಿ ವಿಕ್ಟೋರಿಯಾ ಹೈಸ್ಕೂಲು ಮತ್ತು ಕಾಲೇಜು ಮುಚ್ಚಿದವು. ರಾಯರು ಸಂಪೂರ್ಣ ಸಾರ್ವಜನಿಕ ಜೀವನದಲ್ಲಿ ಧುಮುಕಿದರು.

ಲೋಕಮಾನ್ಯರ ಅಭಿಪ್ರಾಯದಂತೆ ಚಳವಳಿಯನ್ನು ಹಿಡಿತದಿಂದ ಸಾಗಿಸಲು ಒಂದು ಪತ್ರಿಕೆ ಬೇಕೆಂದು ತಮ್ಮ ಪರಮಮಿತ್ರರಾದ ದಿವಾಕರ ರಂಗರಾವ್ ಮತ್ತು ಕಬ್ಬೂರ ಮಧ್ವರಾಯರೊಡನೆ ಕೂಡಿ ೧೫ ಫೆಬ್ರವರಿ ೧೯೨೧ ರಂದು "ಕರ್ಮವೀರ" ಪತ್ರಿಕೆಯನ್ನು ಪ್ರಾರಂಭಿಸಿದರು. ಅಚ್ಚು ಮನೆಯಲ್ಲಿ ಮೊಳೆ ಜೋಡಿಸುವುದರಿಂದಾರಂಭಿಸಿ ಸಂಪಾದಕೀಯ ಲೇಖ ಬರೆಯುವ ವರೆಗೆ ಎಲ್ಲ ಕಾರ್ಯಗಳನ್ನೂ ತಾವೇ ನಿರ್ವಹಿಸುತ್ತಿದ್ದರು "ಕರ್ಮವೀರ" ದಿನ ಕಳೆದಂತೆ ಜನಪ್ರಿಯವಾಗುತ್ತಿತ್ತು. ಕೆಲವೇ ಕಾಲದಲ್ಲಿ ಆಲೂರ ವೆಂಕಟರಾಯರ "ಭೂರಕ್ಕಸಾಯಸ್ವಾಹಾ" ಎಂಬ ಲೇಖ "ಕರ್ಮವೀರ"ದಲ್ಲಿ ಪ್ರಕಟವಾದುದರ ಫಲವಾಗಿ ಹುಕ್ಕೇರಿಕರರಿಗೆ ರಾಜದ್ರೋಹಕ್ಕಾಗಿ ಒಂದು ವರ್ಷ ಶಿಕ್ಷೆಯಾಯಿತು.

ಶ್ರೀ ದಿವಾಕರರು ಹುಕ್ಕೇರಿಕರರನ್ನನುಸರಿಸಿ ಸೆರೆಮನೆಗೆ ಬಂದರು. ಅಲ್ಲಿ ಅವರು ಇಂಗ್ಲೀಷ್ ಪತ್ರಿಕೆಯೊಂದನ್ನು ಹೊರಡಿಸಿ ಕರ್ನಾಟಕದ ಸಮಾಚಾರಗಳು ಹೊರಪ್ರಾಂತಗಳಿಗೆ ತಿಳಿಯುವಂತೆ ಮಾಡಬೇಕೆಂದು ಯೋಜನೆ ಮಾಡಿದರು. ಬಿಡುಗಡೆಯಾದ ಮೇಲೆ "ನವಶಕ್ತಿ" ಎಂಬ ಇಂಗ್ಲೀಷ್ ವಾರಪತ್ರಿಕೆಯನ್ನು ಕರ್ನಾಟಕದಲ್ಲೇ ಮೊದಲನೆಯದಾಗಿ ಪ್ರಾರಂಭಿಸಿದರು. ೧೯೨೩ ಅಗಸ್ಟ್ ೧ ರಂದು ಹೊರಟ ಈ ಪತ್ರಿಕೆ ಎರಡು ವರ್ಷ ಕಾಲ ನಡೆದು ಆರ್ಥಿಕ ಅನಾನುಕೂಲತೆಯಿಂದ ನಿಂತುಹೋಯಿತು. ಮುಂದಿನ ಕೆಲವು ವರ್ಷಗಳಲ್ಲಿ ರಾಯರು "ಧನಂಜಯ" ಮತ್ತು United Karnataka ಎಂಬ ಕನ್ನಡ ಹಾಗು ಇಂಗ್ಲೀಷ್ ಪತ್ರಿಕೆಗಳನ್ನು ತೆಗೆದರೂ ಅವೂ ಆರ್ಥಿಕ ವಿಪನ್ನಾವಸ್ಥೆಯಿಂದ ನಿಂತು ಹೋದವು.

ಹುಕ್ಕೇರಿಕರರ ಪತ್ರಿಕಾವ್ಯವಸಾಯ ಯಶಸ್ವಿಯಾಗಲಿಲ್ಲವಾದರೂ ಅವರು ಉಚ್ಚ ದರ್ಜೆಯ ಪತ್ರಿಕೋದ್ಯೋಗಿಯಾಗಿದ್ದರು. ಬಾಲ್ಯದಲ್ಲಿ ಮರಾಠಿ ಕಲಿತು ವ್ಯವಸ್ಥಿತ ಕನ್ನಡ ಅಭ್ಯಾಸಕ್ಕೆ ಅವಕಾಶವೇ ದೊರೆಯದಿದ್ದರೂ ಎಂಥ ಕ್ಲಿಷ್ಟ ವಿಚಾರಗಳನ್ನೂ ಅತ್ಯಂತ ಸರಳವಾದ ಕನ್ನಡ ಮಾತಿನಲ್ಲಿ ವ್ಯಕ್ತಪಡಿಸಬಲ್ಲ ಅವರ ಸಾಮರ್ಥ್ಯಕ್ಕಾಗಿ ನಾವಿಂದಿಗೂ ಬೆರಗಾಗಬೇಕಾಗುತ್ತದೆ.

ರಾಮರಾಯರ ರಾಜಕೀಯ ಜೀವನದ ಕಾಲ ಸಂಧಿಕಾಲ. ಈ ನಿಟ್ಟಿನಲ್ಲಿ ಹದಿನಾಲ್ಕು ವರ್ಷ ಅವರು ಕರ್ನಾಟಕ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಅದನ್ನು ಸಂಘಟಿಸಿದರು. ಕಾಂಗ್ರೆಸ್ ಕಚೇರಿಯನ್ನು ವ್ಯವಸ್ಥೆಗೊಳಿಸಿ ಅದನ್ನು ಒಂದು ಪದಕ್ಕೆ ತಂದರು. ೧೯೩೪ ರಲ್ಲಿ ಗಾಂಧೀಜಿಯವರು ಕರ್ನಾಟಕದಲ್ಲಿ ಹರಿಜನ ಪ್ರವಾಸ ಕೈಕೊಂಡಾಗ ಜನ ಮೆಚ್ಚುವಂತೆ ಅದನ್ನು ಯೋಜಿಸಿದರು. ಸ್ವದೇಶಿ ಮತ್ತು ಬಹಿಷ್ಕಾರ ಚಳವಳಿ ಕಾಲದಲ್ಲಿ ಧಾರವಾಡ ಮತ್ತು ರಾಣೆಬೆನ್ನೂರಿನಲ್ಲಿ ಪಿಕೆಟಿಂಗ್ ಸಂಘಟನೆ ಮಾಡಿದರು. ೧೯೪೨ ರ ಚಲೇಜಾವ್ ಚಳವಳಿಯ ಕಾಲದಲ್ಲಿ ಮುಂಬಯಿಯಲ್ಲಿ ಭೂಗತರಾಗಿದ್ದು ಕರ್ನಾಟಕದಲ್ಲಿ ಅದನ್ನು ನಿರ್ದೇಶಿಸುತ್ತಿದ್ದರು. ಒಂದು ಸಲ ಪ್ರವಾಸ ಮಾಡುವಾಗ ಲೋಣಾವಳ ಸ್ಟೇಶನ್ನಿನಲ್ಲಿ ಧಾರವಾಡದ ಪೋಲೀಸನೊಬ್ಬ ಅವರನ್ನು ಗುರುತಿಸಿದ್ದರಿಂದ ಅವರು ಸ್ಥಾನಬದ್ಧತೆಗೊಳಗಾಗಬೇಕಾಯಿತು.

ಚಳವಳಿಯಲ್ಲಿ ನುರಿತ ರಾಜಕಾರಣಿಗಳು ವಿಧಾಯಕ ಮತ್ತು ವಿಧಾನ ಸಭಾರಂಗಗಳಲ್ಲಿ ಸಫಲವಾಗಿ ಕೆಲಸ ಮಾಡುವುದು ವಿರಳ. ಆದರೆ ಹುಕ್ಕೇರಿಕರ ರಾಮರಾಯರು ಅಂಥ ಸವ್ಯಸಾಚಿಗಳಲ್ಲೊಬ್ಬರು. ವಿಧಾಯಕ ಕಾರ್ಯಗಳು ಅವರ "ಸೆಕೆಂಡ್ ಲವ್" ನಂತಿವೆ. ೧೯೩೩ ರಲ್ಲೇ ಅವರು ಬಳ್ಳಾರಿಯಲ್ಲಿ ಸ್ವದೇಶಿ ಗ್ರಾಮೋದ್ಯೋಗ ಪ್ರದರ್ಶನವನ್ನು ಏರ್ಪಡಿಸಿ ತಮ್ಮ ಒಲವನ್ನು ಪ್ರದರ್ಶಿಸಿದ್ದರು. ಇಂದಿಗೂ ಶಿಕ್ಷಣರಂಗದಲ್ಲಿ ಅವರು ವ್ಯಸ್ತರಾಗಿದ್ದರೂ ಗ್ರಾಮೋದ್ಯೋಗಗಳ ಉದ್ಧಾರದ ಅವರ ಹುಮ್ಮಸ್ಸು ಕುಂದಿಲ್ಲ. ಮೈಲಾರಲಿಂಗನ ಗುಡ್ಡದಲ್ಲಿನ ಗ್ರಾಮೋದ್ಯೋಗ ಕರ್ಮಶಾಲೆಗಳು ಭಾರತದ ಮೂಲೆ

ಶ್ರೀ ಹುಕ್ಕೇರಿಕರರು ೭೫ ನ್ನು ದಾಟಿದ ಸಂದರ್ಭ ಅವರ ಸಾರ್ವಜನಿಕ ಜೀವನದ ಸ್ವರ್ಣಮಹೋತ್ಸವದ ಸಂದರ್ಭವೂ ಆಗಿದೆ. ಈ ಕಾಲದಲ್ಲಿ ಅವರನ್ನು ಅಭಿನಂದಿಸಲು ಇದೇ ತಿಂಗಳಲ್ಲಿ ಧಾರವಾಡದಲ್ಲಿ ಸಾರ್ವಜನಿಕ ಸಮಾರಂಭ ಜರುಗಲಿದೆ. ಆ ಸಮಯದಲ್ಲಿ ಅವರಿಗೊಂದು ನಿಧಿ ಅರ್ಪಿಸುವವರಿದ್ದಾರೆ.

ಶ್ರೀ ಆರ್. ಜಿ. ಮುತಾಲಿಕ ದೇಸಾಯಿಯವರು ಬಿ. ಎಸ್‌ಸಿ. ಪದವೀಧರರಾಗಿದ್ದು ಜನತಾ ಶಿಕ್ಷಣ ಸಮಿತಿಯ ಅರ್ಥಶಾಸ್ತ್ರ ಸಂಶೋಧನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶ್ರೀ ಹುಕ್ಕೇರಿಕರರ ಜೀವನ ಚರಿತ್ರೆಯೊಂದನ್ನು ಇವರು ರಚಿಸಿದ್ದು ಅದು ಹುಕ್ಕೇರಿಕರರ ಸಾರ್ವಜನಿಕ ಜೀವನದ ಸ್ವರ್ಣಮಹೋತ್ಸವಾಚರಣೆಯ ಕಾಲದಲ್ಲಿ— ಇದೇ ತಿಂಗಳು ಪ್ರಕಟವಾಗಲಿದೆ. ಅದರ ಆಧಾರದಿಂದಲೇ ಈ ಸಂಕ್ಷಿಪ್ತ ಲೇಖನವನ್ನು ಸಿದ್ಧಪಡಿಸಲಾಗಿದೆ.

ಮೂಲೆಯಿಂದ ಜನರನ್ನಾಕರ್ಷಿಸುತ್ತಿವೆ. ಭಾರತ ಸೇವಕ ಸಮಾಜ ಗಾಂಧೀ ಸ್ಮಾರಕ ನಿಧಿಗಳ ಕಾರ್ಯದಲ್ಲೂ ಅವರು ಸೇವೆ ಸಲ್ಲಿಸಿದ್ದಾರೆ.

೧೯೪೬ ರಲ್ಲಿ ಮುಂಬಯಿ ವಿಧಾನಸಭೆಗೆ ಆರಿಸಿ ಬಂದು ರಾಮರಾಯರು ತಮ್ಮ ಕಾರ್ಯದಿಂದ ಮೆಚ್ಚಿಕೆ ಪಡೆದರು. ಮುಂದಿನ ಚುನಾವಣೆಯಲ್ಲಿ ಅವರು ಮೇಲ್ಮನೆಗೆ ಆರಿಸಲ್ಪಟ್ಟರು. ಮುಂಬಯಿ ಮೇಲ್ಮನೆಗೆ ಅವರು ೧೯೫೬ ರಲ್ಲಿ ರಾಜ್ಯಪುನರ್ಘಟನೆಯಾಗುವ ವರೆಗೂ ಅಧ್ಯಕ್ಷರಾಗಿದ್ದರು. ಸರಳ ಶಾಲಾ ಮಾಸ್ತರನೊಬ್ಬ ಒಂದು ದೊಡ್ಡ ರಾಜ್ಯದ ಮೇಲ್ಮನೆಯ ಸಭಾಪತಿಯಾಗಿ, ಸರ್ವ ಪಕ್ಷಗಳ ಸದಸ್ಯರ ಆದರ ವಿಶ್ವಾಸಗಳನ್ನು ಪಡೆದು ಕಾರ್ಯಕಲಾಪಗಳನ್ನು ಬೊಟ್ಟುಕಚ್ಚುವ ರೀತಿಯಲ್ಲಿ ನಡೆಸಿ ಕೊಡುತ್ತಿದ್ದುದೊಂದು ಅಸಾಧಾರಣ ಸಂಗತಿಯು ಸೆ.

೧೯೪೭ ರಲ್ಲಿ ದೇಶಕ್ಕೆ ಸ್ವಾತಂತ್ರ್ಯಲಾಭವಾದ ಮೇಲೆ ಹುಕ್ಕೇರಿಕರರಿಗೆ ತಮ್ಮ ಅತ್ಯಂತ ಪ್ರೀತಿ ವಿಷಯವಾದ ಶಿಕ್ಷಣದ ಕಡೆ ಮನ ಕೊಡಲು ಪುನಃ ಅನುವು ದೊರೆಯಿತು. ೧೯೪೪ ರಲ್ಲಿಯೇ ಸ್ಥಾಪಿತವಾಗಿದ್ದ ಕೆ. ಇ ಬೋರ್ಡ್ ಆರ್ಟ್ಸ್ ಕಾಲೇಜು ಕೆಸರಲ್ಲಿ ಸಿಲುಕಿದಂತಾಗಿದ್ದಾಗ ರಾಯರು ಅದರ ಹೊಣೆಯನ್ನು ಸ್ವೀಕರಿಸಿದರು. ೧೯೫೪ ರಲ್ಲಿ ಅವರ ಜನತಾ ಶಿಕ್ಷಣ ಸಮಿತಿಯು ಸ್ಥಾಪಿತವಾಯಿತು. ಹದಿನೈದು ವರ್ಷದೊಳಗೇ ಮೈಲಾರಲಿಂಗನಗುಡ್ಡದೊಳಗೊಂದು ಮಾಯಕವಾಗಿಬಿಟ್ಟಿದೆ. ಆರ್ಟ್ಸ್, ಸಾಯನ್ಸ್, ಲಾ ಕಾಲೇಜುಗಳು, ಕೆ. ಎಚ್. ಕಬ್ಬೂರ್ ಎಂಜನಿಯರಿಂಗ್ ಇನ್‌ಸ್ಟಿಟ್ಯೂಟ್, ಇನ್‌ಸ್ಟಿಟ್ಯೂಟ್ ಆಫ್ ಇಕನಾಮಿಕ್ ರಿಸರ್ಚ್, ಕೌಜಲಗಿ ಹನುಮಂತ ರಾವ್ ಸ್ಮಾರಕ ಗ್ರಾಮೋದ್ಯೋಗ ಕೇಂದ್ರ, ಮತ್ತು ವೃತ್ತಿಶಿಕ್ಷಣ ಶಾಲೆ ಅಲ್ಲಿ ಅರಳಿವೆ. ಮೈಲಾರಲಿಂಗನ ಬೆಟ್ಟ ಅಕ್ಷರಶಃ " ವಿದ್ಯಾಗಿರಿ " ಯಾಗಿದೆ. ರಾಯರ ಈ ಬಹುಮುಖ ಸಂಸ್ಥೆಗಳನ್ನು ನೋಡಿದ ಶಿಕ್ಷಣ ತಜ್ಞರೊಬ್ಬರು, "ಹುಕ್ಕೇರಿಕರರು ತಮ್ಮ ಸುತ್ತಲೂ ಒಂದು ವಿಶ್ವವಿದ್ಯಾಲಯವನ್ನೇ ನಿರ್ಮಿಸಿಕೊಂಡಿದ್ದಾರೆ" ಎಂದು ಉದ್ಗಾರ ತೆಗೆದರು.

ಭಾರತದಲ್ಲಿ ಕ್ರೈಸ್ತ ಮಿಶನರಿಗಳು, ರಾಮಕೃಷ್ಣ ಆಶ್ರಮದವರು, ಆರ್ಯ ಸಮಾಜದವರು ಇವರನ್ನು ಹೊರತುಪಡಿಸಿದರೆ ಇಷ್ಟು ವ್ಯಾಪಕವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಬಹಳ ಉದಾಹರಣೆಗಳು ಸಿಗಲಿಕ್ಕಿಲ್ಲ.

ಮತ್ತೆ ಇವೆಲ್ಲವನ್ನೂ ಸಾಧಿಸುವುದಕ್ಕೆ ರಾಯರ ಮೂಲಧನ ಶೂನ್ಯಪ್ರಾಯವಾಗಿದ್ದಿತೆಂಬುದು ಗಮನಾರ್ಹವಾದದ್ದು. ಇಂದು ಜನತಾಶಿಕ್ಷಣ ಸಮಿತಿಯ ಆಸ್ತಿ ೧೫ ಲಕ್ಷಕ್ಕೆ ಮೀರಿದೆ. ಅವರು ಇಷ್ಟೆಲ್ಲ ಹಣವನ್ನು ಸಾರ್ವಜನಿಕರಿಂದ ಸಂಗ್ರಹಿಸಿದ್ದಾರೆ. ಅವರಿಗೆ ನೆರವಾಗಲು ಮುಂದೆ ಬಂದ ಮಹಾದಾನಿಗಳಲ್ಲಿ ವಿವಿಧ ಜಾತಿ, ಮತ, ಪಂಥದವರಿರುವುದನ್ನು ಕಂಡರೆ ಅವರ ಕರ್ತೃತ್ವ ಮತ್ತು ಸೇವಾನಿಷ್ಠೆಯಲ್ಲಿ ಎಷ್ಟು ಸಾರ್ವತ್ರಿಕ ವಿಶ್ವಾಸವಿದೆಯೆಂದು ಅರ್ಥವಾಗುತ್ತದೆ. ಜನತಾ ಶಿಕ್ಷಣ ಸಮಿತಿಯ ದಾತರಲ್ಲಿ ಗದುಗಿನ ಕೇಶವ ದಾಸ ಸಾವುಕಾರ, ಬಾಗಲಕೋಟೆಯ ಸಕ್ರಿ ವೆಂಕಪ್ಪಣ್ಣ, ಮುಂಬಯಿಯ ರಾಜಸೇವಾಪ್ರಸಕ್ತ ಎನ್. ಎಸ್. ಗುಬ್ಬಿ, ಶ್ರೀಮತಿ ಸೋನುಬಾಯಿ ಕಬ್ಬೂರರಂಥವರಿದ್ದಾರೆ. ಸಂಸ್ಥೆಗಾಗಿ ಭೂಮಿ ದಾನವನ್ನು ಪಡೆಯುವ ವಿನೂತನ ಕಲ್ಪನೆ ಹುಕ್ಕೇರಿಕರರದೇ ಒಂದು ಆವಿಷ್ಕಾರವೆನ್ನಬೇಕು. ಸುಮಾರು ೫೦೦ ಎಕರೆ ಭೂಮಿಯನ್ನುವರು ಭೂದಾನವಾಗಿ ಪಡೆದು ಅದರಲ್ಲಿ ಬಹು ಭಾಗವನ್ನು ಮಾರಿ ಸಂಸ್ಥೆಗೆ ಮೂಲಧನ ದೊರಕಿಸಿದ್ದಾರೆ. ಅವರ ಕಾರ್ಯಶಕ್ತಿಯ ಮೇಲೆ ಭರವಸೆಯಿಟ್ಟು, ಮೈಸೂರ ಕಿರ್ಲೋಸ್ಕರ ಟ್ರಸ್ಟಿನವರು ಹರಿಹರದಲ್ಲಿನ ತಮ್ಮ ಟ್ರಸ್ಟ್ ಶಾಲೆಯನ್ನು ನಡೆಸುವ ಹೊಣೆಯನ್ನು ೧೯೫೫ ರಲ್ಲಿ ಜನತಾ ಶಿಕ್ಷಣ ಸಮಿತಿಗೆ ವಹಿಸಿಕೊಟ್ಟರು.

೧೯೬೧ ಅಕ್ಟೋಬರದಲ್ಲಿ ಹುಕ್ಕೇರಿಕರ ರಾಮರಾಯರು ೭೫ ನೇ ವಯಸ್ಸನ್ನು ದಾಟಿದರು. ಮಧ್ಯಮ ನಿಲುವು, ಸಾದಗಪ್ಪು ಮೈಬಣ್ಣದ ರಾಯರು ತಮ್ಮ ವಯಸ್ಸಿಗೆ ಗಟ್ಟಿಮುಟ್ಟಾಗಿಯೇ ಇದ್ದಾರೆ. ಸಾವಕಾಶವೂ ಸ್ಪಷ್ಟವೂ ನಿಸ್ಸಂದಿಗ್ಧವೂ ಆದ ಮಾತುಗಳಿಂದ ಅವರು ತತ್‌ಕ್ಷಣ ನಮ್ಮ ಮೇಲೆ ತಮ್ಮ ವ್ಯಕ್ತಿತ್ವದ ಮಂತ್ರಶಕ್ತಿಯನ್ನು ಬೀರುತ್ತಾರೆ.

ಅವರದು ತುಂಬು ಜೀವನ ಶಿಸ್ತು ಅದರ ತಳಪಾಯವಾಗಿದ್ದರೂ ಅವರು ವಿರಕ್ತರಲ್ಲ. ಜೀವನದ ಎಲ್ಲ ಬಗೆಯ ಅನುಭವಗಳನ್ನು ಅರ್ಥ[illegible] ಮಾಡಿಕೊಂಡು ಸಮನ್ವಯ ಸಾಧಿಸಲು ಅವರ[illegible] ಯತ್ನಿಸುತ್ತಿದ್ದಾರೆ. ಸದಾ ಪ್ರವಾಸಿಗಳಾದ[illegible] ಅವರು ಯಾವ ಊರಲ್ಲಿಯೂ ತಮ್ಮ ಕಾ[illegible] ಮುಗಿದಾಗ "ಇಸ್ ಗಾಂವಕಾ ಚೀಜ್ ಕ್[illegible] ಹೈ?" ಎಂದು ವಿಚಾರಿಸಿ ಕೇಳಿ ಜ್ಞಾನಸಂಗ್ರ[illegible] ಮಾಡುವರು. ಒಮ್ಮೆ ಉಜ್ಜಯಿನಿಗೆ ಕಾಳಿ[illegible] ದಾಸ ಜಯಂತಿ ಸಮಾರಂಭಕ್ಕೆ ಹೋದವ[illegible] ಮರಳಿ ಬರುವಾಗ ದಾರಿಯಲ್ಲಿ ಒಂದು ಬಗೆಯ[illegible] ಬಾರಿ ಹಣ್ಣನ್ನು ಕಂಡು ಅದನ್ನು ತರಿಸಿ ಸವಿದರು[illegible] ಮೊದಲನೇ ಪತ್ನಿ ಮಡಿದ ಮೇಲೆ ಎರಡನೆ[illegible] ಬಾರಿ ವಿವಾಹವಾಗುವುದರಲ್ಲೂ ಇದೇ ವಿಚಾ[illegible] ಧಾರೆ ಇತ್ತು. ಜೀವನದ ಚಿಕ್ಕ ಪುಟ್ಟ ಆನಂ[illegible] ಗಳಿಂದ ವಂಚಿತರಾಗುವುದರಲ್ಲಿ ಪುರುಷಾರ್ಥ[illegible] ವಿಲ್ಲವೆನಿಸುತ್ತದೆ ಅವರಿಗೆ.

ಶೈಕ್ಷಣಿಕ ರಂಗದಲ್ಲಿ ಅವರದು ವಿಶಾಲದೃಷ್ಟಿ[illegible] ಸಂಸ್ಥೆಗಳ ಸ್ವಾತಂತ್ರ್ಯದಲ್ಲಿ ಹೆಚ್ಚಾಗಿ ಕೈಹಾ[illegible] ಬಾರದೆಂದು ಅವರು ಹೇಳುವರು. ವಿಕ್ಟೋರಿಯ[illegible] ಹೈಸ್ಕೂಲಿನ ದಿನಗಳಲ್ಲಿ ಒಬ್ಬ ಭಾರತೀಯ[illegible] ಎಜ್ಯುಕೇಶನ್ ಇನ್‌ಸ್ಪೆಕ್ಟರ್ ತೋರಿಸಿದ ವಿಚಿತ್ರ[illegible] ಮನೋವೃತ್ತಿಯನ್ನು ಅವರು ಉದಾಹರಿಸ[illegible] ತ್ತಾರೆ. ಅವರು ಸರಕಾರದಿಂದ ಮನ್ನಣೆ ಪಡೆಯ[illegible] ದಿದ್ದ ಸಂಸ್ಕೃತ ಪುಸ್ತಕವೊಂದನ್ನು ಪಠ್ಯವಾ[illegible] ಹಚ್ಚಿದ್ದರು. ಅದನ್ನು ಇನ್‌ಸ್ಪೆಕ್ಟರ್ ಖಂಡಿ[illegible] ದನು. ಅದರಲ್ಲಿದ್ದ ಪಾಠಗಳೆಲ್ಲ ಮನ್ನಣೆ ಪಡೆ[illegible] ಗ್ರಂಥಗಳಿಂದ ಆಯ್ದವೆಂದು ಶ್ರೀ ಆರ್. ಎಸ್[illegible] ಹುಕ್ಕೇರಿಕರರು ವಿವರಿಸಿದರೆ ಆತನಿಗೆ ಸ[illegible] ಹೋಗಲಿಲ್ಲ. ಇವರೂ ಸುಲಭವಾಗಿ ಬಿಟ[illegible] ಕೊಡುವವರಲ್ಲ. ಬ್ರಿಟಿಶನಾಗಿದ್ದ ಮೇಲಧಿಕಾ[illegible] ರಿಗೆ ಬರೆದರು. ಆತ ರಾಯರ ಅಭಿಪ್ರಾಯ[illegible] ನ್ನೊಪ್ಪಿ ಪುಸ್ತಕಕ್ಕೆ ಮನ್ನಣೆ ಕೊಟ್ಟ. ಇಂದಿ[illegible] ಸರಕಾರಗಳಾದರೂ ಈ ಬಗೆಯ ಮನೋವೃತ್ತಿ[illegible] ಯಿಂದ ಮುಕ್ತವಾಗಿಲ್ಲವೆಂದು ಅವರು ವ್ಯ[illegible] ಯಿಂದ ಹೇಳುತ್ತಾರೆ.

ಧಾರ್ಮಿಕ ವಿಚಾರಗಳಲ್ಲೂ ಅವರ ಮ[illegible]

ಸುಧಾರಕ ವೃತ್ತಿಯದಾಗಿದೆ. ಇಂದಿನ ಬ್ರಾಹ್ಮಣ ಸಮಾಜದ ಸಂಕುಚಿತ ವೃತ್ತಿಗಾಗಿ ಅವರು ನೊಂದುಕೊಂಡು ಕಾಲಮಾನಕ್ಕನುಸಾರವಾಗಿ ನಮ್ಮ ರೂಢಿ ಸಂಪ್ರದಾಯಗಳಲ್ಲಿ ಮಾರ್ಪಾಟಾಗ ಬೇಕೆಂದು ಹೇಳುತ್ತಾರೆ. ಅರ್ಥವರಿಯದೆ ಸ್ನಾನ, ಸಂಧ್ಯಾವಂದನೆ, ಪೂಜಾ ಪುರಸ್ಕಾರಗಳನ್ನು ಮಾಡಿದರೇನು ಫಲ? ವಿಧಿಗಳು ಮನುಷ್ಯನ ಬಾಳನ್ನು ಹಸನಾಗಿಸುವುದಕ್ಕೆ ಒಂದು ಸಾಧನವಾಗಬೇಕಲ್ಲದೆ ಅವೇ ಮುಖ್ಯವಲ್ಲ. "ಭಕ್ತಿ ಕೇವಲ ಪ್ರದರ್ಶನ ವೃತ್ತಿಯಾಗದಿರಲಿ. ಜನತೆಯ ಸೇವೆಯೆ ಭಗವಂತನ ಸೇವೆ" ಇದು ಅವರ ವಿಚಾರ.

ರಾಯರು ಕೆಲಸದ ಹುಮ್ಮಸವನ್ನು ಕಳೆದುಕೊಂಡಿರದಿದ್ದರೂ ತಮ್ಮ ಜೀವನ ಕಾರ್ಯದ ಬಗ್ಗೆ ಸಂತುಷ್ಟರಾಗಿಯೆ ಇದ್ದಾರೆ. ಸಂಸಾರ ವಂದಿಗರಾದ ಅವರು ಆರು ಮಕ್ಕಳ ತಂದೆಯಾಗಿ ಪಿತೃಋಣವನ್ನು ತೀರಿಸಿದ್ದಾರೆ. ಸೇವಾ ಕಾರ್ಯಗಳಿಂದ ಸಮಾಜ ಋಣವನ್ನು ತೀರಿಸಿದ್ದಾರೆ. ಒಂದೇ ಕೊರತೆ ಒಮ್ಮೊಮ್ಮೆ ಅವರನ್ನು ಪೀಡಿಸುತ್ತದೆ. ತಮ್ಮ ಭಾರವನ್ನು ಮುಂದೆ ಸಾಗಿಸಬಲ್ಲ ಉಪಸೇನಾಪತಿಯನ್ನು ಕಂಡು ಹಿಡಿಯುವುದು ಅವರಿಗಿನ್ನೂ ಸಾಧ್ಯವಾಗಿಲ್ಲ. ಟಿಳಕ ಮತ್ತು ಪರಾಂಜಪೆ ಗುಂಪುಗಳ ನಿಷ್ಠೆಯಿಂದ ಪ್ರಾರಂಭಿಕ ಸ್ಫೂರ್ತಿಪಡೆದ ಅವರಿಗೆ ಇಂದಿನ ತಮ್ಮ ಕೆಲ ಸಹಕಾರಿಗಳಲ್ಲಿ ಸಾಕಷ್ಟು ಆದರ್ಶವಾದ ಕಾಣಿಸದೆ ಅತೃಪ್ತಿಯಾಗುವುದೂ ಉಂಟು. ಆದರೆ ಬಹುಶಃ ಆಲದ ಮರದ ಕೆಳಗೆ ಏನೂ ಬೆಳೆಯದು ಎಂಬುದೂ ನಿಜವೇನೋ. ಹೀಗಿದ್ದರೂ ನಾಳಿನ ಚಿಂತೆ ಎಂದೂ ಹುಕ್ಕೇರಿಕರರ ಇಂದಿನ ಕಾರ್ಯವನ್ನು ಕುಂಠಿತಗೊಳಿಸಲು ಶಕ್ತವಾಗಿಲ್ಲ. ನಾಡಿನ ಇತಿಹಾಸದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿರುವುದಂತೂ ಖಂಡಿತ. *



ನಿರುಪಯುಕ್ತ ಮಾಹಿತಿ

ಭಾರತದ ಜನರಲ್ಲಿ ಅಧಿಕ ವರ್ಷ ಬಾಳುವವರು ಪಂಜಾಬಿನ ಜಾಟ ಜಾತಿಯ ಜನರು.

*　　　*　　　*

ಸ್ವಾತಂತ್ರ್ಯ ಪಡೆಯುವ ಮೊದಲು ಭಾರತದಲ್ಲಿ ಕೇವಲ ವೈಸರಾಯನ (Viceroy) ಕಾರು ಮಾತ್ರ ನಂಬರಿಲ್ಲದೆ ತಿರುಗಬಹುದಾಗಿತ್ತು.

*　　　*　　　*

ಜಗತ್ತಿನಲ್ಲಿ ಸ್ಕಾಟ್‌ಲೆಂಡಿನ 'ಟೇ ಬ್ರಿಡ್ಜ್' ಅತ್ಯಂತ ಉದ್ದವಾದುದಾಗಿದೆ. ಉದ್ದ ೫೦॥ ಮೈಲು.

*　　　*　　　*

ಸೈಬೇರಿಯಾದ ಈಸ್ಟ್ ಕ್ಯಾಂಪ್‌ನಲ್ಲಿ ಸರ್ವಪ್ರಥಮವಾಗಿ ಸೂರ್ಯೋದಯವಾಗುತ್ತದೆ.

*　　　*　　　*

ವಾಯುವಿನ ತೀವ್ರತಮ ವೇಗ ಪ್ರತಿ ಗಂಟೆಗೆ ೫೦೦ ಮೈಲು ಎಂದು ಅಂದಾಜು ಮಾಡಲಾಗಿದೆ.

—ಅನು : ಚಕ್ರಧಾರಿ

ಅವರು ನುಂಗಿದ ತುತ್ತು
ಗಂಟಲು ಸುಡುವಂತಾಗಿತ್ತು



ಚೀನದಲ್ಲಿ ಬರಗಾಲ

ಚೀನದೊಳಗೆ ಭೀಕರ ಬರಗಾಲ ಬಿದ್ದಿದೆ. ಅಲ್ಲಿಂದ ಬರುವ ಸುದ್ದಿಗಳು ದಿನಗಳೆದಂತೆ ಹೆಚ್ಚು ಘೋರವಾಗುತ್ತಿವೆ. ಉತ್ತರದ ಮಂಚೂರಿಯದಿಂದ ದಕ್ಷಿಣದ ಯುನಾನ್ ವರೆಗೆ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಒಂದೇ ಪ್ರಶ್ನೆ ಭೂತಾಕಾರದಿಂದ ಕುಣಿಯುತ್ತಿದೆ: ಮುಂದಿನ ಊಟ ಹೇಗೆ ಸಿಕ್ಕೀತು?

ದಕ್ಷಿಣದ ಪ್ರಧಾನ ನಗರವಾದ ಕ್ಯಾಂಟನ್ನಿನ ರೇಲ್ವೆ ನಿಲ್ದಾಣದಲ್ಲಿ ರೇಲ್ವೆ ಡಬ್ಬಿಗಳು ದುಲ[...] ಕ್ಷದ ಲಕ್ಷಣಗಳನ್ನು ತೋರಿಸುತ್ತವೆ. ಹಾಂಕಾಂ[...] ನಿಂದ ಕ್ಯಾಂಟನ್ನಿನ ವರೆಗಿನ ಮೂರು ಗಂಟೆಯ[...] ಯಾತ್ರೆಯಲ್ಲಿ ಕಳೆಗುಂದಿದ ಮುಖದ ಪ್ರವಾಸಿ[...] ರನ್ನು ಅಸಂಖ್ಯವಾಗಿ ಕಾಣಬಹುದು. ಮೂರ[...] ವರ್ಷಗಳ ಕೆಳಗೆ ಈ ಡಬ್ಬಿಗಳು ಹೊಸ ಬಣ[...] ದಿಂದ ತಳತಳಿಸುತ್ತಿದ್ದುದನ್ನು, ಈ ಪ್ರವಾಸಿಗಳ[...] ಉತ್ಸಾಹದಿಂದ ತುಂಬಿ ತುಳುಕುತ್ತಿದ್ದುದನ್ನು[...] ಕ್ಯಾಂಟನ್ ನಿಲ್ದಾಣ ಠೀಕುಠಾಕಾಗಿದ್ದುದನ[...] ಕಂಡವರು ಈ ಬದಲಾವಣೆಯನ್ನು ತಟ್ಟ[...] ಗುರುತಿಸುತ್ತಾರೆ.

ಪ್ರತಿಯೊಂದು ಪಟ್ಟಣದಲ್ಲೂ ಆಹಾರಕ್ಕಾ[...] ಹನುಮಂತನ ಬಾಲದಂಥ ಕ್ಯೂಗಳು ನಿಂತಿರ[...] ತ್ತವೆ. ಕ್ಯೂನಲ್ಲಿ ಪ್ರಥಮ ಸ್ಥಾನ ಪಡೆಯಲ[...] ಬೆಳಗಿನ ಜಾವದ ಎರಡು ಮೂರು ಗಂಟೆಗ[...] ಜನ ಬಂದಿರುತ್ತಾರೆ. ನವಚೀನದ ಜಮ್‌ಶೆಡ[...] ಪುರವಾದ ವೂಹಾನ್‌ನಲ್ಲಿ ಒಂದು ತಿಂಗ[...] ರೇಶನ್ ಮೂರು ದಿನಗಳಿಗೂ ಸಾಲದಂತಾ[...] ರುವುದರಿಂದ ಕಾರಖಾನೆಗಳು ಅರೆ ಹೊತ[...] ನಡೆಯುತ್ತಿವೆ. ಟಿಯೆಂಟ್ಸಿನ್‌ನಲ್ಲಿ ಗಂಜಿಗೆ ಹುಲ್[...] ಕೊಚ್ಚಿ ಹಾಕಿ ಎಮ್ಮೆಗೆ ಮಾಡಿದಂತೆ "ಮಿಶ್ರಣ[...] ತಯಾರಿಸಿ ಜನ ಹೊಟ್ಟೆ ತುಂಬಿಕೊಳ್ಳು[...] ದ್ದಾರೆ. ಮರದ ತೊಗಟೆಗಳನ್ನು ತಿನ್ನುವ ಸುದ[...] ಗಳು ಬೇರೆಡೆಗಳಿಂದ ಬರುತ್ತಿವೆ.

ರಾಜಧಾನಿ ಪೇಕಿಂಗ್‌ನಲ್ಲಿಯೆ ವಿದ್ಯುಚ್ಛ[...] ಕೊರತೆಯಿಂದ ಹತ್ತರಲ್ಲೊಂದು ಬೀದಿ ದೀ[...] ಮಾತ್ರ ಉರಿಯುತ್ತಿದೆ. ವಿದೇಶಗಳಲ್ಲಿರು[...] ಚೀನೀಯರು- ಚೀನದಲ್ಲಿರುವ ತಮ್ಮ ಬಂಧ[...] ಗಳ ಗೋಳು ಕೇಳಿ ಕಳಿಸುತ್ತಿರುವ ಆಹಾ[...] ಪುಡಿಕೆಗಳು ಕಳೆದ ಎರಡು ವರ್ಷಗಳಲ್ಲಿ ಹತ್ತ[...] ಪಟ್ಟು ಏರಿವೆ. ಕೆಲವೇ ವರ್ಷಗಳ ಹಿಂದೆ ಬ[...] ಬೇಡುವುದನ್ನು ಸಂಪೂರ್ಣ ನಿರ್ನಾಮ ಮಾ[...] ರುವುದಾಗಿ ಕಮ್ಯುನಿಸ್ಟ್ ಸರಕಾರ[...] ಜಂ[...] ಕೊಚ್ಚಿತ್ತು. ಇಂದು ಕ್ಯಾಂಟನ್ನಿನ ಬೀದಿಗಳಲ್ಲಿ ತಿರುಪೆಯೆತ್ತುವವರು ಮೂಲೆ ಮೂಲೆಗಳ[...] ಕಣ್ಣಿಗೆ ಬೀಳುತ್ತಾರೆ. ಅವರು ಕಸದ ರಾಶಿಯ[...]

ಅಗಳುಗಳನ್ನು ಹೆಕ್ಕುತ್ತಾರೆ. ಬಿಕ್ಕೆ ಸಿಗದಿದ್ದರೆ ಅವರು ಆಹಾರವನ್ನು ನಿರ್ದಯವಾಗಿ ಕದಿಯುತ್ತಾರೆ. ಹತ್ತಿರ ಇದ್ದ ಪೋಲೀಸರು ಆಗ ಜಾಣತನದಿಂದ ಬೇರೆ ದಿಕ್ಕಿಗೆ ನೋಡುತ್ತಾರೆ.

ಚೀನದ ಕಮ್ಯುನಿಸ್ಟ್ ಅಧಿಕಾರಶಾಹಿಯು ಇದೆಲ್ಲವನ್ನು ಮುಚ್ಚಿಟ್ಟು ಜಗತ್ತಿಗೆ ತಿಂದುಂಡು ಸುಖಪಡುತ್ತಿರುವ ಜನರ ಚಿತ್ರವನ್ನು ತೋರಿಸಲು ಹೆಣಗುತ್ತಿದೆ. ದಷ್ಟಪುಷ್ಟ ಮಕ್ಕಳನ್ನು, ದುಡಿಮೆಯನ್ನು ಪ್ರೀತಿಸುವ ಕೂಲಿಕಾರರನ್ನು, ಠೀಕುಠಾಕಾದ ಸೈನಿಕರನ್ನು ಅವರ ಪ್ರಚಾರ ಚಲಚ್ಚಿತ್ರಗಳೂ ಸಚಿತ್ರ ಪತ್ರಿಕೆಗಳೂ ವಿದೇಶಗಳಲ್ಲಿ ತೋರಿಸುತ್ತಿವೆ. ಆದರೆ ಚೀನದ ತರುಣರು ನಿಜವಾಗಿ ಬಂಡಾಯವೇಳುತ್ತಿದ್ದಾರೆ. ಪರಿಸ್ಥಿತಿ ಎಷ್ಟು ತೀವ್ರವಾಗಿದೆಯೆಂದರೆ ಕಮ್ಯುನಿಸ್ಟ್ ಪತ್ರಿಕೆಗಳಲ್ಲಿಯೂ ಸರಕಾರಿ ಪ್ರಕಟನೆಗಳಲ್ಲಿಯೂ ಅದರ ಪ್ರಸ್ತಾಪ ಅನಿವಾರ್ಯವಾಗಿ ಕಾಣಿಸಿಕೊಳ್ಳತೊಡಗಿದೆ. ಕಮ್ಯುನಿಸ್ಟ್ ಪಕ್ಷದ ಅಧಿಕಾರಿಗಳನ್ನು ರಾಜಧಾನಿಯ ಬೀದಿಗಳಲ್ಲೇ ಥಳಿಸುವ ಘಟನೆಗಳಾಗುತ್ತಿವೆ. ಹಸಿವು ಎಷ್ಟು ಆಳವಾಗಿ ತನ್ನ ಕೆಲಸ ಮಾಡಿದೆಯೆಂದರೆ ಕಮ್ಯುನಿಸ್ಟ್ ಪಕ್ಷದ "ಲಂಚ ಮುಟ್ಟದ"ವರೆಂದು ಪ್ರಸಿದ್ಧರಾದ ಕಾರ್‍ಯಕರ್ತರಲ್ಲಿಯೂ ನಿರಾಶೆ ಮೂಡಿ ಕರ್ತವ್ಯಚ್ಯುತಿ ಹಬ್ಬುತ್ತಿದೆ. ಕ್ಷುಲ್ಲಕ ಲಂಚಗುಳಿತನ ಎಲ್ಲ ಕೆಳಮಟ್ಟದ ಅಧಿಕಾರಿಗಳಲ್ಲೂ ತಾನೇ ತಾನಾಗಿದೆ.

ಚೀನದೊಳಗಿನ ಪರಿಸ್ಥಿತಿ ಈಗ ಸರಕಾರ ಪೂರ್ತಿ ಮುಚ್ಚಿಡಲಾರದಷ್ಟು ಗಂಭೀರವಾಗಿದೆ. ಸ್ವತಃ ಸರ್ವಾಧಿಕಾರಿ ಮಾವೊ ತ್ಸೆ ತುಂಗರೇ "ವಿದೇಶಗಳಲ್ಲಿ ಚೀನದಲ್ಲಿ ಬರಗಾಲವುಂಟಾಗಿದೆಯೆಂದು ಪ್ರಚಾರ ಸಾಗಿದೆ. ಇದು ಅತಿಶಯೋಕ್ತಿ - ನಿಜವಾಗಿಯೆಂದರೆ ಈಗ ನಮಗೆ ತಾತ್ಕಾಲಿಕ ಆಹಾರ ಕೊರತೆಯಾಗಿದೆಯಷ್ಟೇ" ಎಂದು ಅಪ್ರತ್ಯಕ್ಷವಾಗಿ ದೇಶದ ದುರವಸ್ಥೆಯನ್ನು ವಿದೇಶಿ ಪತ್ರಿಕೋದ್ಯಮಿಗಳ ಮುಂದೆ ಒಪ್ಪಿಕೊಳ್ಳಬೇಕಾಗಿ ಬಂತು. ಚೀನದಲ್ಲಿ ಸಾವಿರಗಟ್ಟಳೆ ಜನ ಬೀದಿಯಲ್ಲಿ ಉಪವಾಸ ಸಾಯುವಂಥ ಬರಗಾಲದ ದೃಶ್ಯಗಳು ಸಿಗುವುದಿಲ್ಲೆಂಬುದು ಒಪ್ಪತಕ್ಕ ಮಾತು. ಆದರೆ ಅದಕ್ಕೆ ಕಾರಣ ಕಮ್ಯುನಿಸ್ಟರು ಹಸಿವನ್ನು ದೇಶದಲ್ಲೆಲ್ಲ ಸಮವಾಗಿ ಹಂಚಿರುವುದೇ ಆಗಿದೆ. ಅಷ್ಟು ಮಟ್ಟಿಗೆ ಅವರಿಗೆ ಅಭಿನಂದನೆ ಸಲ್ಲಬೇಕು.

ಈ ದುರವಸ್ಥೆ ಚೀನಕ್ಕೆ ಪ್ರಾಪ್ತವಾದದ್ದು ಹೇಗೆ? ಕಮ್ಯುನಿಸ್ಟ್ ಅಧಿಕಾರಿಗಳು ಬಹಿರಂಗವಾಗಿ ನೈಸರ್ಗಿಕ ಪ್ರಕೋಪಗಳ ಮೇಲೆ ದೂರು ಹೊರಿಸುತ್ತಾರೆ; ಖಾಸಗಿಯಾಗಿ ರಶಿಯದವರು ಸಾಕಷ್ಟು ನೆರವಾಗದೆ ಕೊರಳು ಕೊಯ್ದರೆನ್ನುತ್ತಾರೆ. ಎರಡೂ ಕೆಲ ಮಟ್ಟಿಗೆ ನಿಜ. ಚೀನದಲ್ಲಿ ಮಳೆ ಹೋಗಿ ನೆಲ ಒಣಗಿದ್ದೂ ನಿಜ; ರಶಿಯದೊಡನೆ ಮತಭೇದ ಹೆಚ್ಚಿದ್ದರಿಂದ ಅದು ಸಹಾಯ ಕೊಡುವುದರಲ್ಲಿ ಕೈಬಿಗಿಹಿಡಿದದ್ದೂ ಸತ್ಯ.

ಆದರೆ ಇವು ಆನುಷಂಗಿಕ ಕಾರಣಗಳಷ್ಟೇ. ಪ್ರಧಾನ ಕಾರಣವೆಂದರೆ, ಚೀನದ ಮಹತ್ವಾಕಾಂಕ್ಷಿ ಯೋಜನೆಗಳು. ಚೀನವು ಜಗತ್ತಿನ ಪ್ರಮುಖ ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿ ಸೇರುವ ಹುಮ್ಮಸದಲ್ಲಿ ನುಂಗಲಾರದ ತುತ್ತನ್ನು ಗಂಟಲಲ್ಲಿ ತುರುಕಿ ಈ ಪಾಡು ಪಡುತ್ತಿದೆ.

೧೯೫೮ ರಲ್ಲಿ ಕಮ್ಯುನಿಸ್ಟ್ ಚೀನವು ರಾತ್ರಿ ಬೆಳಗಾಗುವುದರೊಳಗಾಗಿ ಬಡತನದಿಂದ ಬೆಂಡಾದ ದೇಶವನ್ನು ಪ್ರಮುಖ ಔದ್ಯಮಿಕ ರಾಷ್ಟ್ರವಾಗಿ ರೂಪಾಂತರ ಹೊಂದಿಸುವ ಯೋಜನೆಯನ್ನು ಜಾರಿಗೆ ತಂದಿತು. "ಮಹಾ ಪ್ರಗಮನ" ಎಂಬ ಹೆಸರಿನಿಂದ ಪ್ರಚಾರಗೊಂಡ ಈ ಯೋಜನೆಯ ಗುರಿ ಚೀನವನ್ನು ಒಡನೆ ಬ್ರಿಟನ್ನಿಗೆ ಸಮಾನವಾದ ಔದ್ಯಮಿಕ (ಕೈಗಾರಿಕೆ) ಸ್ಥಿತಿಗೆ ತರುವುದಾಗಿತ್ತು.

ಚೀನೀ ಯೋಜನಾ ಆಯೋಗದ ಅಧ್ಯಕ್ಷ ಲಿ ಫು ಚುನ್ನರ ಭವ್ಯ ಕಚೇರಿಯಿಂದ ಆಜ್ಞೆಗಳೂ ಹಂಚಿಕೆಗಳೂ ನಕ್ಷೆಗಳೂ ಯಂತ್ರದಿಂದ ಹೊರ

ಬಿದ್ದಂತೆ ಬಿದ್ದವು. "ಸದಾ ಕಾಲದ ವರೆಗೂ ನೆರೆಹಾವಳಿ ಮತ್ತು ಬರಗಾಲವನ್ನು ನಿವಾರಿಸಿ ಬಿಡುವುದಕ್ಕಾಗಿ" ಮಹಾಅಣೆಕಟ್ಟುಗಳ, ಕಾಲುವೆಗಳ ಯೋಜನೆಗಳಾದವು ಔದ್ಯೋಗಿಕ ಬೆಳವಣಿಗೆಗೆ ಕಚ್ಚಾ ಸರಕು ಒದಗಿಸುವುದಕ್ಕಾಗಿ ಕಲ್ಲಿದ್ದಲಿ ಮತ್ತು ಕಬ್ಬಿಣದ ಅದುರುಗಳನ್ನಗೆಯುವ ಗಣಿ ಹಂಚಿಕೆಗಳಾದವು. ಹಳ್ಳಿಗಳಿಂದ ಜನರನ್ನು ಲಕ್ಷಗಟ್ಟಳೆಯಲ್ಲಿ ದಂಡುದಂಡಾಗಿ ಹೊರಡಿಸಿ ಈ ಔದ್ಯೋಗಿಕ ಕ್ಷೇತ್ರಗಳಿಗೆ ಸಾಗಿಸಲಾಯಿತು. ಹಳ್ಳಿಗಳಲ್ಲಿ ಕೃಷಿ ಕರ್ಮವನ್ನು ಸಾಗಿಸಲು ೨೪ ಸಾವಿರ ಕಮ್ಯೂನುಗಳನ್ನು (ಸಂಯುಕ್ತ ಕೃಷಿ ಸಂಸ್ಥೆ) ಸ್ಥಾಪಿಸಲಾಯಿತು.

೧೯೪೯ ರಲ್ಲಿ ಚೀನವನ್ನು ಗೆದ್ದುಕೊಂಡ ಕಮ್ಯುನಿಸ್ಟರು ಎಂಟೇ ವರ್ಷಗಳಲ್ಲಿ ಸೋವಿಯಟ್ ತಾಂತ್ರಿಕ ಸಹಾಯದಿಂದಲೂ ತಮ್ಮ ಸಾಹಸದಿಂದಲೂ ಉಕ್ಕಿನ ಉತ್ಪಾದನೆಯನ್ನು ಆರು ಪಟ್ಟು ಹೆಚ್ಚಿಸಿ ೫೪ ಲಕ್ಷ ಟನ್ನಿಗೇರಿಸಿದ್ದರು; ಲಾರಿಗಳು, ಟ್ರಾಕ್ಟರುಗಳು, ರೇಲ್ವೆ ಎಂಜಿನುಗಳು ಇದಂ ಪ್ರಥಮವಾಗಿ ಚೀನದಲ್ಲಿ ತಯಾರಾಗತೊಡಗಿದ್ದವು. ಕೋಟಿಗಟ್ಟಳೆ ಎಕರೆಗಳು ಭಾರಿ ಅಣೆಕಟ್ಟುಗಳಿಂದ ನೀರುಣ್ಣತೊಡಗಿದ್ದವು. ಚೀನೀ ಸರಕುಗಳು ವಿದೇಶಗಳಲ್ಲಿ ಭಾರತೀಯ ಪೇಟೆಗಳನ್ನು ಆಕ್ರಮಿಸತೊಡಗಿದ್ದವು.

ಈ ಯಶಸ್ಸಿನಿಂದ ಉಬ್ಬಿದ ಕಮ್ಯುನಿಸ್ಟರು ತಮ "ಮಹಾಪ್ರಗಮನ" ಯೋಜನೆ ಪ್ರಾರಂಭಿಸಿದರು. ಯೋಜನಾ ಆಯೋಗದ ಅಧ್ಯಕ್ಷ ಲಿ ಫು ಚುನ್ ಈ ಅತಿ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಪ್ರಾರಂಭದಲ್ಲಿ ವಿರೋಧಿಯಾಗಿದ್ದರೆಂದು ಹೇಳಲಾಗಿದೆ. ಹಳ್ಳಿಗಾಡಿನಿಂದ ಹೀಗೆ ಲೆಕ್ಕ ಮೀರಿ ಜನರನ್ನು ಉದ್ದಿಮೆಗಳ ಕಡೆ ಹೊರಳಿಸಿದರೆ ಕೃಷಿ ಹಾಳಾಗಿಹೋದೀತು, ಉದ್ದಿಮೆಗಳೂ ಬೆಳೆಯಲಿಕ್ಕಿಲ್ಲ ಎಂದವರಿಗೆ ಭಯವಿತ್ತು. ಆದರೆ ಮಾವ್ ತ್ಸೆ ತುಂಗರ ಮುಂದೆ ಅವರ ಆಟ ನಡೆಯಲಿಲ್ಲ.

ಯೋಜನೆಯನ್ನು ಜಾರಿಗೆ ತರಲಾಯಿತು. ಎಲ್ಲವನ್ನೂ ಮಿಲಿಟರಿ ಪದ್ಧತಿಯಿಂದ ಆಚರಣೆಗೆ ತರುವುದು ಚೀನಿ ಕಮ್ಯುನಿಸ್ಟರ ನೀತಿ. ಕಾರಖಾನೆ ಮತ್ತು ಹೊಲ ಎರಡರಲ್ಲೂ ಏಕಕಾಲದಲ್ಲಿ "ದಾಳಿ" ಪ್ರಾರಂಭವಾಯಿತು. ಲಕ್ಷಾಂತರ ಗ್ರಾಮೀಣ ಯುವಕರನ್ನು "ಇಪ್ಪತ್ತು ವರ್ಷದ ಪ್ರಗತಿ ಒಂದೇ ದಿವಸದಲ್ಲಿ" ಎಂಬ ಘೋಷಣೆಯೊಡನೆ ಕಾರಖಾನೆಗಳಿಗೆ ಸಾಗಿಸಿದರು.

ಸಾವಿರಗಟ್ಟಳೆ ಕಮ್ಯುನಿಸ್ಟ್ ಕಾರ್ಯಕರ್ತರು ಹಳ್ಳಿಗಳಿಗೆ ಬಂದು ರೈತರನ್ನು ಹುರಿದುಂಬಿಸಿ, ಹೆದರಿಸಿ ಪುಸಲಾಯಿಸಿ ಕೆಲಸಕ್ಕೆ ಹಚ್ಚಿದರು. "ಕಮ್ಯೂನು"ಗಳ ಸ್ಥಾಪನೆಯಾಯಿತು. ಗ್ರಾಮದ ಕೃಷಿಭೂಮಿಯಲ್ಲೆಲ್ಲ ಕಮ್ಯೂನುಗಳು ಆಳಿಕೆಗೆ ಬಂದವು. ಹೊಲಗಳು ಮಾತ್ರವಲ್ಲ, ಅಖಂಡ ಜೀವನವೇ ಸೈನ್ಯದಲ್ಲಿ ಹೇಗೋ ಹಾಗೆ ಒಕ್ಕೂಟಕ್ಕೆ ಸೇರಿತು. ಊಟಕ್ಕೆ ಸ್ನಾನಕ್ಕೆ ಸಾರ್ವಜನಿಕ ಅಡುಗೆಮನೆ ಸ್ನಾನದ ಮನೆಗಳಾದವು. ತರುಣಿಯರನ್ನು ಮನೆಗೆಲಸದಿಂದ ಮುಕ್ತಗೊಳಿಸಿ ಹೊಲಗಳಿಗೆ ಕಳಿಸಲಾಯಿತು. ಅವರ ಮಕ್ಕಳನ್ನು ನೋಡಿಕೊಳ್ಳಲು ಸಾರ್ವಜನಿಕ ಮಕ್ಕಳ ಮನೆಗಳಾದವು ಮುಪ್ಪಿನವರನ್ನು "ಆಶ್ರಮ"ಗಳಲ್ಲಿ ತುಂಬಿ ಅವರಿಂದಾಗುವ ದುಡಿತಕ್ಕೆ ಹಚ್ಚಿದರು.

ಗ್ರಾಮಗಳಲ್ಲಿಯೂ ಕೃಷಿ, ಉದ್ಯೋಗ ಎರಡೂ ದಿಶೆಗಳಲ್ಲಿ ಪ್ರಗತಿಯಾಗಬೇಕೆಂದು ಕಾರ್ಯಕರ್ತರು ಘೋಷಿಸಿದರು. ನಸುಕಿನಲ್ಲಿ ಭೋಂಗಾನಾದವಾದೊಡನೆ ಗಂಡಸರೂ ಹೆಂಗಸರೂ ಮಿಲಿಟರಿ ಶಿಸ್ತಿನಲ್ಲಿ ಘೋಷಣೆ ಹಾಡುತ್ತ ಹೊಲಗಳಿಗೆ ಕೂಚು ಮಾಡಬೇಕಾಯಿತು. ಮತ್ತೊಂದು ಭೋಂಗಾ ಆದೊಡನೆ ಕೆಲಸ ನಿಲ್ಲಿಸಿ ಬಂದೂಕಿನ ಡ್ರಿಲ್ ಆಯಿತು. ಅದು ಮುಗಿದೊಡನೆ ಗ್ರಾಮೋದ್ಯೋಗಗಳಿಗೆ ಅವರನ್ನು ಎಳೆದೊಯ್ದರು.

ಲಕ್ಷಾಂತರ ಎಕರೆ ಹೊಲಗಳಿಗೆ ಟ್ರಾಕ್ಟರು ಕೊರತೆ ಇದೆ ತಾನೆ? ನಿಮ್ಮಲ್ಲಿಯೇ ಕಮ್ಮಾರಸಾಲೆ ಮಾಡಿ ಬೇಕಾದ್ದನ್ನು ತಯಾರಿಸಿಕೊಳ್ಳಿ,

ಕಬ್ಬಿಣ ಕಡಿಮೆಯಾಯಿತೆ? ನಿಮ್ಮ ಹಿತ್ತಲಲ್ಲೇ ಕಬ್ಬಿಣದ ಕುಲುಮೆ ಸ್ಥಾಪಿಸಿಕೊಳ್ಳಿ. ಹಳ್ಳಿಹಳ್ಳಿಗಳಲ್ಲಿ ಒಟ್ಟು ಇಪ್ಪತ್ತು ಲಕ್ಷ ಹಿತ್ತಿಲ ಕುಲುಮೆಗಳು ಸ್ಥಾಪಿತವಾದವು. ಹನಿ ಕೂಡಿ ಹಳ್ಳವಾದರೆ ಕೋಟಿಗಟ್ಟಳೆ ಟನ್ ಕಬ್ಬಿಣ ತಯಾರಾಗುವುದು. ಈ ಹಳ್ಳಿಯ ಕಬ್ಬಿಣದ ಕುಲುಮೆಗಳು ಇಡೀ ಜಗತ್ತಿನಲ್ಲಿ "ಸುದ್ದಿ"ಯಾದವು. ಭಾರತದ ಸಂಸತ್ತಿನಲ್ಲಿ ಪ್ರಶ್ನೆಗಳು ಕೇಳಲ್ಪಟ್ಟವು ನಾವೂ ಹೀಗೆ ಏಕೆ ಹಳ್ಳಿಹಳ್ಳಿಯಲ್ಲಿ ಬಿದಿರಿನಿಂದ ಕಬ್ಬಿಣ ತಯಾರಿಸುವ ಕುಲುಮೆಗಳನ್ನು ಸ್ಥಾಪಿಸಬಾರದು ?—ಎಂದು.

ಹೊಲದ ಕೆಲಸ, ಡ್ರಿಲ್ ಮುಗಿದ ನಂತರ ಹಳ್ಳಿಗರು ಈ ಕುಲುಮೆಗಳಲ್ಲಿ ಕಾರಖಾನೆಗಳಲ್ಲಿ ದುಡಿಯಬೇಕಾಯಿತು. ಸ್ಥಳೀಯ ಕೀಳ್ಮಟ್ಟದ ಬಿದಿರು ಕುಲುಮೆಗಳನ್ನು ಕಂಡಿತು. ಯಾವುದರ ಕೊರತೆಯೂ "ಮಹಾಪ್ರಗಮನ"ವನ್ನು ತಡೆಯುವಂತಿರಲಿಲ್ಲ. ಹಳೇ ಹಲಗೆಗಳಿಂದ ಹತ್ತಿ ಹಿಂಜುವ ಯಂತ್ರಗಳಾದವು. ಕಬ್ಬಿಣದ ಕೊಳವೆ ಸಿಗದಲ್ಲಿ ಬಿದಿರು ಕೊಳವೆಗಳನ್ನು ಹಾಕಿದರು. ಕುಲುಮೆಗಳಿಗೆ ಬೇಕಾದ ಲೋಹಗಳನ್ನೊದಗಿಸಲು ಮನೆಗಳಲ್ಲಿದ್ದ ಪಾತ್ರೆ ಪಗಡಿ ಸರಂಜಾಮುಗಳು ಹೋದವು. ಕ್ಯಾಂಟನ್ ನಗರದ ಅನೇಕ ಬೀದಿಗಳಲ್ಲಿ ಮನೆಬಾಗಿಲುಗಳಿಗೆ ಕೊಂಡಿ, ಚಿಲುಕುಗಳು ಕೂಡ ಉಳಿದಿಲ್ಲವೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಅವೆಲ್ಲ ಕುಲುಮೆಗಳಿಗೆ ಆಹುತಿಯಾಗಿವೆ.

ಕೋಟಿಗಟ್ಟಳೆ ಜನ ಹೊಲಗಳಲ್ಲಿಯೂ ಕಾರಖಾನೆಗಳಲ್ಲಿಯೂ ದಿನಕ್ಕೆ ಹದಿನೆಂಟು, ಇಪ್ಪತ್ತು ಗಂಟೆ ತೆರಪಿಲ್ಲದೆ ದುಡಿಯುತ್ತಿರುವಾಗ ಕಮ್ಯುನಿಸ್ಟ್ ಪಕ್ಷದ ಪ್ರಚಾರ ಯಂತ್ರ ಭಾರಿ ಯಶಸ್ಸಿನ ಸುದ್ದಿಗಳನ್ನು ರೇಡಿಯೊ, ಧ್ವನಿವರ್ಧಕ, ಪತ್ರಿಕೆ, ಘೋಷಣೆಗಳಿಂದ ಪ್ರಸಾರ ಮಾಡುತ್ತಿತ್ತು. ಎಲ್ಲ ಕಡೆ ಉತ್ಪಾದನೆ ಅದ್ಭುತವಾಗಿ ಹೆಚ್ಚಾಗಿದೆ. ೩.೭೫ ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆಯಾಗಿದೆ. ೧.೧ ಕೋಟಿ ಟನ್ ಉಕ್ಕು ತಯಾರಾಗಿದೆ........

ಕೆಲ ಕಾಲ ಎಲ್ಲವೂ ಸರಿಯಾಗಿ ಸಾಗಿತು. ಲೆಕ್ಕ ಇಡುವುದು ವ್ಯರ್ಥ ಕಾಲಹರಣವೆಂದು ಕಮ್ಯುನಿಸ್ಟರು ಬಗೆದದ್ದರಿಂದ ಅಂಕೆಗಳನ್ನು ಎಷ್ಟು ಬೇಕಾದರೂ ಬೆಳೆಸಿ ಹೇಳಬಹುದಾಗಿತ್ತು. ಆದರೆ ಬೇಗನೆ ಅನಿವಾರ್ಯವಾದ ಫಲ ಪ್ರಕಟಕೆ ಬರತೊಡಗಿತು.

ನೂರಾರು ದಿನಗಳ ವರೆಗೆ ಹೆಚ್ಚಿನ ತಾಸುಗಳ ದುಡಿತದಿಂದ ತಯಾರಾದ ಹಿತ್ತಿಲ ಕುಲುಮೆಗಳ ಕಬ್ಬಿಣದ ಗಟ್ಟಿಗಳಿಂದ ಕತ್ತಿ, ಕೊಡಲಿ, ನೊಗ, ನೇಗಿಲುಗಳನ್ನು ಮಾಡಿದರೆ ಅವು ಮುರಿದು ಹೋದುದನ್ನು ಕಂಡು ರೈತರ ಎದೆ ಝಲ್ಲೆಂದಿತು. ಉಕ್ಕಿನ ಕಾರ್ಖಾನೆಗಳಿಗೆ ಅವುಗಳನ್ನು ಕಳಿಸಿದರೆ ಅಲ್ಲಿ ಉಪಯೋಗಿಸಲಾರದಷ್ಟು ಅವು ಚಿಕ್ಕವಾಗಿವೆಯೆಂದು ಕಂಡಿತು. ಕಾರಖಾನೆಗಳನ್ನು ಅವಸರದಿಂದ ಕಟ್ಟಿದ ಮೇಲೆ ಅವುಗಳನ್ನು ನಡೆಸಲು ಬೇಕಾದ ಕಚ್ಚಾ ಸರಕು ಸಾಲದೆಂದು ಗೊತ್ತಾಗಿ ಅವು ಹಾಳುಬಿದ್ದವು. ಅವಸರದಿಂದ ತಯಾರಿಸಿದ ಯಂತ್ರಗಳು ಮುರಿದವು. ಅಗತ್ಯವನ್ನು ಗಮನಿಸದೆ ತಯಾರಿಸಿದ್ದರಿಂದ ಯಂತ್ರಗಳ ಬಿಡಿಭಾಗಗಳು ಮೂಲೆಗಳಲ್ಲಿ ರಾಶಿಬಿದ್ದವು.

ಉತ್ಪಾದನೆಯ ಅಂಕೆಗಳು ಮೊದಲು ಪ್ರಕಟಿಸಿದ್ದಕ್ಕಿಂತ ಕಡಿಮೆಯಾಗಿದ್ದವೆಂದೂ ಕಾರ್ಯಕರ್ತರು ತಮ್ಮ ಹಿರಿಮೆ ತೋರಿಸಲು ಸುಳ್ಳು ಅಂಕೆಗಳನ್ನು ಕೊಟ್ಟಿದ್ದರೆಂದೂ ಹೊರಪಟ್ಟಿತು. ಆಹಾರ ಉತ್ಪಾದನೆ ನಿಜವಾಗಿ ೩.೭೫ ಅಲ್ಲ ೨.೧೦ ಲಕ್ಷ ಟನ್ ಮಾತ್ರವೆಂದೂ ತಯಾರಾದ ಉಕ್ಕಿನಲ್ಲಿ ೩೦ ಲಕ್ಷ ಟನ್ ಯಾತಕ್ಕೂ ಬಾರದೆಂದೂ ತಿಳಿಯಿತು.

ಕೆಲಮಟ್ಟಿಗೆ ಈ ಘೋಟಾಳೆಗೆ ಸ್ವತಃ ಮಾವ್ತ್ಸೆ ತುಂಗರೇ ಕಾರಣರಾಗಿದ್ದರು ಉದ್ದಿಮೆಗಳಿಗೆ ಹೆಚ್ಚು ಜನರು ಬೇಕೆಂದೂ ನೂರಕ್ಕೆ ಹತ್ತರಷ್ಟು ಕೃಷಿ ಭೂಮಿಯನ್ನು ಖಾಲಿ ಬಿಡಬೇಕೆಂದೂ ಅದರ ಬದಲಿಗೆ ಆಳವಾಗಿ ಹೂಡಿ, ಒತ್ತಾಗಿ ನೆಟ್ಟು ಉತ್ಪಾದನೆ ಹೆಚ್ಚಿಸಬಹುದೆಂದೂ

ಗುಬ್ಬಿಗಳು ಬಹಳ ಧಾನ್ಯ ತಿನ್ನುವುದರಿಂದ ಅವುಗಳನ್ನೆಲ್ಲ ಧ್ವಂಸ ಮಾಡಬೇಕೆಂದೂ ಅವರು ಅಪ್ಪಣೆ ಕೊಡಿಸಿದ್ದರು. ರೈತರು ಅದನ್ನು ಪಾಲಿಸಿದರು, ಆದರೆ ನಿಸರ್ಗ ಪಾಲಿಸಲಿಲ್ಲ. ಒತ್ತಾಗಿ ನೆಟ್ಟದ್ದರಿಂದ ಬೇರೆ ರೋಗಗಳು ಹಬ್ಬಲು ಅನುಕೂಲವಾಯಿತು, ಗುಬ್ಬಿಗಳನ್ನು ಕೊಂದದ್ದರಿಂದ ಬೆಳೆಗಳಿಗೆ ಮತ್ತಾವ ಕೀಟಗಳ ಶತ್ರು ಇಲ್ಲದಂತಾಗಿ ಪೈರು ಕೀಟಗಳ ಪಾಲಾಯಿತು.

ಕೊನೆಯ ಹೊಡೆತವನ್ನು ಮಳೆರಾಯ ಕೊಟ್ಟ. ಮಧ್ಯ ಮತ್ತು ಉತ್ತರ ಚೀನದಲ್ಲಿ ಏಳು ತಿಂಗಳು ಮಳೆ ಹೋಗಿ ನದಿಗಳು ಬತ್ತಿದವು. ಮಂಚೂರಿಯದಲ್ಲಿ ನೆರೆ ಹಾವಳಿಯಾಯಿತು. ಕಾರಖಾನೆಗಳೂ ಗಣಿಗಳೂ ಮುಳುಗಿದವು. "ಸದಾ ಕಾಲವೂ ನೆರೆ ಮತ್ತು ಬರಗಾಲವನ್ನು ಸೋಲಿಸಿದ್ದು" ಬರಿ ಬೂಟಾಟಿಕೆಯೆಂದು ನಿಸರ್ಗ ತೋರಿಸಿ ಕೊಟ್ಟಿತು. ಕೊನೆಗೀಗ ಚೀನವು ತನ್ನ ಅನಿವಾರ್ಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಇದ್ದ ಬಿದ್ದ ಬಂಗಾರ, ಬೆಳ್ಳಿ, ವಿದೇಶಿ ವಿನಿಮಯಗಳನ್ನೆಲ್ಲ ವಿದೇಶಗಳಿಗೆ ಕಳಿಸಿ ಆಹಾರಕೊಳ್ಳಲು ವ್ಯಾಪಾರಿ ಪ್ರತಿನಿಧಿಗಳನ್ನು ಕಳಿಸುತ್ತಿದೆ.

ಚೀನದಲ್ಲಿ ಕಮ್ಯುನಿಸ್ಟರ ಸೋಲು ಕೇವಲ ಆರ್ಥಿಕ ರಂಗಕ್ಕೇ ಮಿತವಾಗಿಲ್ಲ. ಹನ್ನೆರಡು ವರ್ಷಗಳ ಕ್ರೂರ ದಬ್ಬಾಳಿಕೆ, ಮಾನಸಿಕ "ಚಿಕಿತ್ಸೆ"ಯ ನಂತರವೂ ಚೀನಿ ಜನತೆಯ ಮನಸ್ಸನ್ನು ಕಮ್ಯುನಿಸ್ಟ್ ಪಕ್ಷದ ಇಚ್ಛೆಗೆ ಓಗುಡುವಂತೆ ಮಾಡಲು ಅವರಿಂದಾಗಿಲ್ಲ. ೧೯೫೭–೫೮ರಲ್ಲಿ "ಮಹಾ ಪ್ರಗಮನ"ದ ಯೋಜನೆಯನ್ನು ಸಾರಿದಾಗ ಜನ ಸ್ಫೂರ್ತಿಯಿಂದ ಅದಕ್ಕೆ ಓಗೊಟ್ಟಿದ್ದರು. ಆದರೆ ಅರೆಹೊಟ್ಟೆಯ ಮೇಲೆ ದಿನಕ್ಕೆ ೧೬ ತಾಸು ದುಡಿದ ಮೇಲೆ ಆದ ಹಗರಣವು ಈಗ ಅವರನ್ನು ಕಮ್ಯುನಿಸ್ಟ್ ಪಕ್ಷದ ಯಾವ ಘೋಷಣೆಯಲ್ಲೂ ವಿಶ್ವಾಸವಿರಿಸದಂತೆ ಮಾಡಿದೆ. ಹಳ್ಳಿ ಮತ್ತು ಪೇಟೆಗಳಲ್ಲಿ ಸ್ಥಾಪಿಸಿದ "ಕಮ್ಯೂನು"ಗಳ ಬಗ್ಗೆ ಜನರಲ್ಲಿ ಈಗ ದ್ವೇಷವೇ ಮೂಡಿದೆ.

ಚೀನದ ಬುದ್ಧಿ ಜೀವಿಗಳನ್ನು ಕಮ್ಯುನಿಸ್ಟರು ಮೊದಲೆ ಎದುರು ಹಾಕಿಕೊಂಡಿದ್ದರು. ೧೯೫೭ರಲ್ಲಿ "ನೂರು ಹೂಗಳು ಅರಳಲಿ" ಎಂದು ಮಾವ್ ಸರಕಾರದ ಧೋರಣೆಗಳನ್ನು ಟೀಕಿಸಲು ಸ್ವಾತಂತ್ರ್ಯವಿತ್ತರು. ಬುದ್ಧಿ ಜೀವಿಗಳು ಅದನ್ನು ನಂಬಿ ಬಹಿರಂಗವಾಗಿ ತಮ್ಮ ಭಿನ್ನಾಭಿಪ್ರಾಯಗಳನ್ನು ಪ್ರಕಟಿಸಿದರು. ಆಟ ಸಾಕಷ್ಟು ದೂರ ಸಾಗಿದ ಮೇಲೆ ಗದೆ ಅವರ ತಲೆಗಳ ಮೇಲೆರಗಿತು. ಟೀಕಿಸಿದವರನ್ನೆಲ್ಲ ಹಿಡಿದು ಕ್ರೂರವಾಗಿ ದಂಡಿಸಲಾಯಿತು. ಬುದ್ಧಿ ಜೀವಿಗಳು ಇದನ್ನು ಸುಲಭವಾಗಿ ಮರೆಯಲಾರರು.

"ಮಹಾ ಪ್ರಗಮನ"ದ ಸಂಪೂರ್ಣ ಸೋಲನ್ನು ಮನಗಂಡು ಈಗ ಕಮ್ಯುನಿಸ್ಟ್ ಆಳರಸರು ಸಾವಕಾಶವಾಗಿ ಹೆಜ್ಜೆ ಹಿಂದಿಕ್ಕುತ್ತಿದ್ದಾರೆ. ಬಿಗುವಿನ ಅನೇಕ ನಿಯಮಗಳನ್ನು ಸಡಿಲಿಸಲಾಗಿದೆ. ಭಾರೀ ಔದ್ಯಮೀಕರಣದ ಮಹತ್ವಾಕಾಂಕ್ಷೆಯನ್ನು ಬಿಟ್ಟುಕೊಡಲಾಗುತ್ತಿದೆ. ಆಹಾರವಿಲ್ಲದೆ ಯಾರೂ ದುಡಿಯಲಾರರೆಂದರಿತು ಕಾರಖಾನೆಗಳಿಂದ ಹಳ್ಳಿಗಳಿಗೆ ಜನರನ್ನು ಮರಳಿ ಕಳಿಸುತ್ತಿದ್ದಾರೆ. ಈ ವರೆಗೆ ಕಾರಖಾನೆಗಳಿಂದ ಹೊಲಗಳಿಗೆ ಮರಳಿದ ಜನರ ಸಂಖ್ಯೆ ಮೂರು–ನಾಲ್ಕು ಕೋಟಿಯೆಂದು ಅಂದಾಜಿದೆ. ಕಾರಖಾನೆಗಳು ಅರೆ ಹೊತ್ತು ನಡೆಯುತ್ತವೆ

ಚೀನದ "ಮಹಾ ಪ್ರಗಮನ"ದ ಸೋಲಿನ ಹಿನ್ನೆಲೆಯಲ್ಲೇ ನಾವು ಚೀನದ ಈಚಿನ ನಡೆವಳಿಕೆಗಳನ್ನು ಅರ್ಥಮಾಡಿಕೊಳ್ಳಬಹುದು. ತಮ್ಮ ಮೇಲಿನ ಜನರ ಅಸಂತೋಷವನ್ನು ಬೇರೆಡೆ ತಿರುಗಿಸಲು ಅವರು ಎರಡು ರೀತಿಗಳನ್ನು ಪ್ರಯೋಗಿಸುತ್ತಿದ್ದಾರೆ. ಈ ಸೋಲಿನ ಹೊಣೆಯನ್ನು ಅವರು ಚಿಕ್ಕಪುಟ್ಟ ಕಮ್ಯುನಿಸ್ಟ್ ಮತ್ತು ಸರಕಾರಿ ಅಧಿಕಾರಿಗಳ ಮೇಲೆ ಹೊರಳಿಸಿ ಅವರನ್ನು ಶಿಕ್ಷಿಸುತ್ತಿದ್ದಾರೆ· ಇನ್ನೊಂದೆಡೆ ಅವರು ವಿದೇಶಗಳೊಡನೆ ಜಗಳ ಕಾಯುತ್ತಿದ್ದಾರೆ. ಭಾರತದೊಡನೆ ಅವರ ಗಡಿಕಲಹ ಈ ಗತ್ತುಗಳಲ್ಲಿ ಒಂದು. ರಶಿಯದೊಡನೆ ಸ್ಟಾಲಿನ್‌ವಾದದ

ವಿಷಯದಲ್ಲಿ ಅದರ ಬಹಿರಂಗ ಕಚ್ಚಾಟ ಕೂಡ ಇದೇ ಸಾಲಿಗೆ ಸೇರಿದ್ದು. ಕಮ್ಯುನಿಜಂ ಕ್ರಾಂತಿಕಾರಿ ಉತ್ಸಾಹದಿಂದ ಮುಂದೆ ಸಾಗಿ ಜಗತ್ತನ್ನು ಕಮ್ಯುನಿಸ್ಟಾಗಿ ಪರಿವರ್ತಿಸಬೇಕು. ಇದಕ್ಕಾಗಿ ಯುದ್ಧವಾದರೆ ಒಳಿತೇ ಆಯಿತು ಎಂಬ ಅದರ ಘಟಾಟೋಪವು ಅರೆಹೊಟ್ಟೆಯಿಂದ ಬಳಲುವ ತನ್ನ ಜನರ ಚಿತ್ತವನ್ನು ಬಾಹ್ಯ ವೈಭವದ ಕನಸುಗಳಿಂದ ತಣಿಸುವ ಯತ್ನವಾಗಿದೆ.

ಆದರೆ ಚೀನ ಏನೇ ಮಾಡಲಿ ಒಂದು ಸಂಗತಿ ಸ್ಪಷ್ಟವಾಗಿದೆ. ಹಿಂದುಳಿದ ಒಂದು ದೇಶವನ್ನು ವಿದೇಶಿ ಸಹಾಯವಿಲ್ಲದೆ ರಾತ್ರಿ ಬೆಳಗಾಗುವುದರೊಳಗೆ ಪ್ರಬಲ ರಾಷ್ಟ್ರವಾಗಿ ಮಾಡುವುದು ಅಸಾಧ್ಯ. ಅದಕ್ಕಾಗಿ ಜನರನ್ನು ಸೈನಿಕ ಶಿ[ಕ್ಷಣ]ದಿಂದ ಸಂಘಟಿಸಿದರೂ ಫಲವಿಲ್ಲ. ಒತ್ತಾಯ[ದ] ಸಾಮೂಹಿಕ ಒಕ್ಕಲುತನವು ಅನರ್ಥಕ್ಕೆ ಮೂ[ಲ]ವಾದೀತು.

ಚೀನೀ ಕಮ್ಯುನಿಸ್ಟರು ಎಷ್ಟೇ ಹಾರಾಡಲಿ ಜನರ ಪ್ರೀತಿಯನ್ನು ಮತ್ತೊಮ್ಮೆ ಸಂಪಾದಿಸಲ[ು] ಅವರಿಗೆ ಇನ್ನು ೨೦ ವರ್ಷವಾದರೂ ಬೇಕ[ು]. ಒಬ್ಬಾನೊಬ್ಬ ರಾಜತಂತ್ರಜ್ಞ ಹೇಳಿದ ಹಾಗೆ "ಚೀನೀ ಕ್ರಾಂತಿಯ ಎಂಜನ್ನಿನ ಹವೆ ಹೋ[ಗಿ] ಬಿಟ್ಟಿದೆ. ಭಾರವಾದ ಡಬ್ಬಿಗಳನ್ನು ಕಡಿದಾ[ದ] ಗುಡ್ಡದ ಮೇಲಿಳೆದೊಯ್ಯಲು ಯತ್ನಿಸುವ ಎಂ[ಜ]ನ್ನಿನಂತೆ ಅದು ಈಗ ಹಿಂದೆ ಸರಿಯುತ್ತಿದೆ."



ದೃಷ್ಟಿ ವೈವಿಧ್ಯ!

ಇಬ್ಬರು ಸಹೋದರರಿದ್ದರು; ಅವರಲ್ಲೊಬ್ಬ ವಿಜ್ಞಾನಿ, ಮತ್ತೊಬ್ಬ ಭಾವನಾಜೀವಿ. ಅವರ ತಾಯಿ ಗತಿಸಿದ ಬಳಿಕ ಅವರಿಬ್ಬರೂ ತಮ್ಮ ತಾಯಿಯ ಸಮಾಧಿಯ ಮೇಲೊಂದು ಗುಲಾಬಿಯ ಗಿಡವನ್ನು ನೆಟ್ಟರು. ವರುಷ ಕಳೆದ ಬಳಿಕ ಆ ಗಿಡ ಸೊಂಪಾಗಿ ಬೆಳೆದು ನೈ ತುಂಬ ರಸಭರಿತ ಗುಲಾಬಿ ಹೂಗಳನ್ನು ತಳೆದಿತ್ತು.

ಸಮಾಧಿ ದರ್ಶನಕ್ಕಾಗಿ ಬಂದ ವಿಜ್ಞಾನಿಯಾದ ಮಗ "ಈ ಗುಲಾಬಿ ಗಿಡನನ್ನ ತಾಯಿಯ ದೇಹದಲ್ಲಿದ್ದ ರಂಜಕ, ಲವಣ ಮೊದಲಾದವುಗಳನ್ನು ರಸಾಯನಿಕ ಗೊಬ್ಬರದಂತೆ ಉಪಯೋಗಿಸಿಕೊಂಡು ಇಷ್ಟು ಸೊಂಪಾಗಿ ಬೆಳೆದಿರಬೇಕು! ಹಾಗಾದರೆ ಆಕೆಯಲ್ಲಿದ್ದ ಸಸ್ಯ ಪೌಷ್ಟಿಕ ಆಹಾರಾಂಶಗಳೆಷ್ಟು?" ಎಂದು ಚಿಂತಿಸತೊಡಗಿದ!

ಅದಕ್ಕಾಗಿಯೇ ಬಂದ ಭಾವನಾಜೀವಿ ಮಗ ಭಕ್ತಿ ಪರವಶತೆಯಿಂದ ಸಮಾಧಿಗೆ ಕೈಮುಗಿದು ಹೇಳಿದ, "ತಾಯೆ, ನೀನು ಬದುಕಿದ್ದಾಗ ನಿನ್ನೆದೆಯ ಮಮತೆವಾಲನ್ನೆರೆದು ನಮ್ಮನ್ನು ಸಲಹಿದೆ; ಈಗ ನೀನು ಮರಣವನ್ನಪ್ಪಿದ್ದರೂ ನಿನ್ನ ಮರ[ಣ] ಪ್ರೇಮಸುಧೆಯನ್ನೆರೆದು ಈ ಗುಲಾಬಿ ಗಿಡವನ್ನು ಸಲಹುತ್ತಿರುವೆ! ನಿನ್ನ ಪ್ರೇಮವಾಹಿನಿಯು ಅನಂತವಾದುದು!"

— ಸಂಗ್ರಹ : ರಾಮದಾಸ್ ಮೈಸೂರ[ು]

* * *

ಮಹಾತ್ಮರಾಗುವ ಭಾಗ್ಯ ಎಲ್ಲರಿಗೂ ಇಲ್ಲ. — ಡ್ರೈಡನ್

ನಿರೋಗ ಜೀವನದ ಪಂಚಶೀಲ

ವಿವಿಧ ಮೂಲಗಳಿಂದ

ಆರೋಗ್ಯ ಭಾಗ್ಯವನ್ನು ಪಡೆಯುವುದಕ್ಕೆ ಅನಾರೋಗ್ಯವನ್ನು ದೂರದಿಂದಲೇ ತಡೆಯುವುದಕ್ಕಿಂತ ಒಳ್ಳೇ ಉಪಾಯವಿಲ್ಲ. ಆಧುನಿಕ ಯುಗದಲ್ಲಿ ಸಾಂಕ್ರಾಮಿಕ ಅಥವಾ ರೋಗಾಣು ಜನ್ಯ ರೋಗಗಳನ್ನು ಹೆಚ್ಚು ಕಡಿಮೆ ಗೆದ್ದಂತೆಯೆ ಆಗಿದ್ದರೂ ಇತರ ತರಹದ ರೋಗಗಳು ಪ್ರಾಬಲ್ಯ ಹೊಂದುತ್ತಿವೆ. ಹೀಗಿರುವಲ್ಲಿ ಶರೀರವನ್ನೂ ಮನವನ್ನೂ ನಿರಂತರ ಸುಸ್ಥಿತಿಯಲ್ಲಿರಿಸಿಕೊಳ್ಳುವ ಉಪಾಯಗಳನ್ನು ಹುಡುಕಲು ವೈದ್ಯಕೀಯ ಸಂಶೋಧಕರು ಸುದೀರ್ಘ ಪರಿಶೀಲನೆ ಮಾಡಿದ್ದಾರೆ. ಅವರು ನಿರ್ಣಯಿಸಿದ ಆರೋಗ್ಯ ಸೂತ್ರಗಳು ಇವು:

ಸರಿಯಾದ ಕಾಲದಲ್ಲಿ ಸರಿಯಾದ ಆಹಾರ. ಆರೋಗ್ಯಕ್ಕೆ ಪೋಷಣೆ ಅತ್ಯಗತ್ಯ. ಆರೋಗ ದೃಢಕಾಯರಾಗಬಯಸುವವರು ಅಧಿಕ ಸಸಾರಜನಕ (ಪ್ರೋಟೀನ್) ಪದಾರ್ಥಗಳನ್ನು ಸೇವಿಸಬೇಕು. ಮಾಂಸಾಹಾರಿಗಳು ಮೀನು, ಮಾಂಸ ಇತ್ಯಾದಿಗಳನ್ನೂ ಶಾಕಾಹಾರಿಗಳು ಹಾಲು, ಬೇಳೆಕಾಳು ಮೊದಲಾದವನ್ನೂ ಹೆಚ್ಚು ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಪೆನ್ಸಿಲ್ವೇನಿಯಾ ಕಾಲೇಜಿನವರು ಸಾವಿರಾರು ಸ್ತ್ರೀಪುರುಷರ ಆರೋಗ್ಯ ಪರೀಕ್ಷೆ ಮಾಡಿದಾಗ ಅಧಿಕ ಸಸಾರಜನಕ ಆಹಾರವನ್ನು ಸೇವಿಸಿದವರ ಆರೋಗ್ಯ ಸರ್ವಾಂಗೀಣ ಸುಸ್ಥಿತಿಯಲ್ಲಿರುವುದು ಸಿದ್ಧವಾಯಿತು.

ಆಹಾರದ ಸ್ವರೂಪದಷ್ಟೇ ಅದನ್ನು ತೆಗೆದುಕೊಳ್ಳುವ ಸಮಯವೂ ಮಹತ್ವದ್ದು. ಬೆಳಗ್ಗೆ ಎದ್ದಮೇಲೆ ಚೆನ್ನಾಗಿ ಆಹಾರ ಸೇವಿಸುವುದು ಆರೋಗ್ಯದಾಯಕವಾದದ್ದು. ಬೆಳಗಿನ ಆಹಾರವನ್ನು ಲಘುವಾಗಿ ತೆಗೆದುಕೊಳ್ಳುವುದು ಈಚೆಗೆ ಫ್ಯಾಶನ್ ಆಗುತ್ತಿದೆ. ಆದರೆ ಬರಿ ಹೊಟ್ಟೆಯಲ್ಲಿ ದುಡಿಯುವುದು ನಿಮ್ಮ ಶರೀರದ ರೋಗಪ್ರತಿರೋಧಶಕ್ತಿಯನ್ನು ಕೆಡಿಸುವುದಲ್ಲದೆ ಪೋಷಣಾಭಾವದಿಂದ ಬರುವ ರೋಗಕ್ಕೂ ಈಡುಮಾಡಿ ಇಮ್ಮಡಿ ತ್ರಾಸಕ್ಕೆ ಕಾರಣವಾಗುತ್ತದೆ. ಬೆಳಗಿನ ಆಹಾರದ ಕೊರತೆಯಿಂದಾದ ನಿತ್ರಾಣವನ್ನು ಮಧ್ಯಾಹ್ನದ ಸಮೀಚೀನ ಭೋಜನದಿಂದ ತುಂಬಿಕೊಳ್ಳಲು ಸಾಧ್ಯವಿಲ್ಲೆಂದು ಜಗತ್ಪ್ರಸಿದ್ಧ ಮೇಯೋ ಕ್ಲಿನಿಕ್ಕಿನ ಸಂಶೋಧನೆಗಳು ತೋರಿಸಿವೆ. ಬದಲಿಗೆ ಮಧ್ಯಾಹ್ನದ ಊಟ ಲಘುವಾಗಿರಬೇಕು. ರಾತ್ರಿ ಸಾವಕಾಶವಾಗಿ ಭೋಜನ ಮಾಡುವುದು ಹಿತ. ಅನೇಕ ಅಜೀರ್ಣ ರೋಗಗಳಿಗೆ ಅವಸರ ಮತ್ತು ಉತ್ತೇಜಿತ ಸ್ಥಿತಿಯಲ್ಲಿ ಉಂಡ ಊಟ ಕಾರಣವಾಗುತ್ತದೆಂದು ಎಲ್ಲ ಡಾಕ್ಟರರೂ ಒಪ್ಪುತ್ತಾರೆ.

ಬುದ್ಧಿ ಜೀವಿಗಳಿಗೆ ಹೆಚ್ಚು ನಿದ್ರೆ ಬೇಕು: ದೀರ್ಘ ಕಾಲ ಆರೋಗ್ಯದಲ್ಲಿರುವ ಅಸಂಖ್ಯ ಜನರ ಜೀವನ ಕ್ರಮದ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ಅವರೆಲ್ಲರಲ್ಲೂ ಹೆಚ್ಚು ಸಾಮಾನ್ಯವಾದ ಅಂಶವೆಂದರೆ ಅವರೆಲ್ಲರೂ ಸಾಕಷ್ಟು

ನಿದ್ರೆಯನ್ನು ಹೊಂದುತ್ತಿರುವರೆಂಬುದಾಗಿತ್ತು. ಕುಡಿದೂ 'ಹೊಗೆಬತ್ತಿ ಸೇದಿಯೂ ಮಿತಿಮೀರಿ ದುಡಿದೂ ಆಲಸಿಗಳಾಗಿದ್ದೂ ಆರೋಗ್ಯದಲ್ಲಿದ್ದ ವರೆಷ್ಟೋ ಇದ್ದರೂ ನಿದ್ದೆಗೆಟ್ಟು ಆರೋಗ್ಯ ಕಾಪಾಡಿಕೊಂಡವರು ತೀರ ವಿರಳವೆಂದು ಕಂಡುಬಂತು. ಕೆಲವರು ಸ್ವಲ್ಪ ಕಡಿಮೆ ಮತ್ತು ಕೆಲವರು ಸ್ವಲ್ಪ ಹೆಚ್ಚು ಕಾಲ ನಿದ್ರಿಸು ವವರಿದ್ದರೂ ಆರೋಗ್ಯ ಕಾಪಾಡಿಕೊಂಡವರಲ್ಲಿ ಹೆಚ್ಚಿನವರ ಪಾಲಿಗೆ "ಸಾಕಷ್ಟು ನಿದ್ದೆ" ಎಂದರೆ ದಿನಕ್ಕೆ ಎಂಟು ತಾಸು ನಿದ್ದೆ ಎಂಬುದೂ ವಿದಿತ ವಾಯಿತು.

ಶಾರೀರಿಕ ಶ್ರಮ ಮಾಡುವವರಿಗೆ ಹೆಚ್ಚು ನಿದ್ದೆ ಬೇಕು, ಬೌದ್ಧಿಕ ಶ್ರಮ ಮಾಡುವವರಿಗೆ ಕಡಿಮೆ ಸಾಕು ಎಂಬುದು ಸುಳ್ಳು ಕಲ್ಪನೆ ಯೆಂದು ಸಿದ್ಧವಾಗಿದೆ. ತದ್ವಿರುದ್ಧವಾಗಿ ನಮ್ಮ ಸ್ನಾಯುಗಳಿಗಾದ ಶ್ರಮ ಬಲು ಬೇಗನೆ ವಿಶ್ರಾಂ ತಿಯಿಂದ ಸರಿ ಹೋಗುವುದು ಮತ್ತು ಬೌದ್ಧಿಕ ಶ್ರಮದಿಂದ ನರಗಳಿಗಾದ ಶ್ರಮವನ್ನು ಸುಧಾರಿಸಿ ಕೊಳ್ಳಲು ಹೆಚ್ಚು ಕಾಲ ಬೇಕಾಗುವುದು.

ವ್ಯಾಯಾಮದ ಸರಳ ಮಾರ್ಗ. ಆರೋ ಗ್ಯಕ್ಕೆ ವ್ಯಾಯಾಮ ಅನಿವಾರ್ಯವೆಂದು ಹೇಳು ವುದೇ ಬೇಡ. ಆದರೆ ಅತಿ ವ್ಯಾಯಾಮವೂ ವರ್ಜ್ಯವಾದದ್ದೇ. ವಿಶೇಷವಾಗಿ ಇಂದಿನ ಕಾಲದ ವಿದ್ಯಾವಂತರಲ್ಲಿ ಅಧಿಕಾಂಶರಾದ ಆಫೀಸು ಕಾರ್ಯಕರ್ತರು ವ್ಯಾಯಾಮದ ಬಗ್ಗೆ ಜಾಗರೂಕರಾಗಿರಬೇಕು. ವಾರಕ್ಕಾರು ದಿವಸ ಆಫೀಸಿನ ಮೇಜಿನ ಮೇಲೆ ಬೆನ್ನು ಬಾಗಿಸಿ ಕುಳಿತೋ ಪತ್ರಿಕೆ ಪುಸ್ತಕಗಳನ್ನೋದುವುದ ರಲ್ಲೋ ಕಾಲ ವ್ಯಯಿಸುವವರು ವಾರದ ರಜಾ ದಿನ ಶ್ರಮದಾಯಕವಾದ ವ್ಯಾಯಾಮ ಮಾಡಿ ದರೆ ಅವರ ಶ್ರಮವು ವಾರವಾರವೂ ಬೆಳೆಯುತ್ತ ಶರೀರ ಸ್ವಾಸ್ಥ್ಯವನ್ನು ಕೆಡಿಸಬಲ್ಲದು.

ಕೂತು ದುಡಿಯುವವರಿಗೆ ಪ್ರೊ. ಲಾರೆನ್ಸ್ ಮೋರ್‌ಹೌಸರು ತುಂಬ ಪ್ರಯೋಗಗಳ ನಂತರ ಒಂದು ವ್ಯಾಯಾಮಸೂತ್ರವನ್ನು ಅನುಮೋದಿಸಿ ದ್ದಾರೆ. ಇಂಥವರು ವಾರಕ್ಕೆರಡು ಸಲ ಹತ್ತು- ಹತ್ತು ನಿಮಿಷಗಳ ಮಿತ ವ್ಯಾಯಾಮ ಮಾಡಿ ದರೂ ಸಾಕು. ಅವರು ಆರೋಗ್ಯವನ್ನು ಕಾಪಾಡಿ ಕೊಳ್ಳಬಲ್ಲರೆಂದು ಅವರ ಅಭಿಪ್ರಾಯ.

ಆ ಹತ್ತು ಮಿನಿಟಿನ ವ್ಯಾಯಾಮವಾದರೂ ಸೂರ್ಯನಮಸ್ಕಾರದಂಥ ಬೆನ್ನು ಬಾಗಿಸು[illegible] ವ್ಯಾಯಾಮವಾಗಿರಬಾರದು. ಅವರು ಆಗಲೆ ಬೆನ್ನು ಬಾಗಿಸಿ ಕುಳಿತು ಬೆನ್ನಿನ ಸ್ನಾಯುಗಳನ್ನು ಅವರು ಸಾಕಷ್ಟು ಎಳೆದಿರುತ್ತಾರೆ. ಇಂಥವರಿ[illegible] ನಾಲ್ಕು ಬಗೆಯ ಸುಲಭ ವ್ಯಾಯಾಮ ವಿಧಿಸಲ್ಪ ಟ್ಟಿದೆ.

೧. ಹಲವು ನಿಮಿಷ ಪರ್ಯಂತ ಓಡುವುದೇ ಮೊದಲಾದ ಶರೀರದ ಕಾವೇರಿಸು[illegible] ವ್ಯಾಯಾಮ. ಇದರಿಂದ ಸಹನಾಶಕ್ತಿ ಕುದು[illegible] ರುತ್ತದೆ.

೨. ಕುತ್ತಿಗೆ ಮತ್ತು ಕುತ್ತಿಗೆಯ ಹಿಂದಿ[illegible] ಸ್ನಾಯುಗಳನ್ನು ಆಕುಂಚನಗೊಳಿಸು[illegible] ವ್ಯಾಯಾಮ.

೩. ಅಂಗಾತ ಮಲಗಿ ಕಾಲುಗಳನ್ನು ಸಾ[illegible] ಕಾಶವಾಗಿ ಮೇಲೆತ್ತುವುದು. (ಉದಾ:— ಸರ್ವಾಂಗಾಸನ. ಇದರಿಂದ ಹೊಟ್ಟೆಯ ಸ್ನಾಯು[illegible] ಗಳಿಗೆ ತ್ರಾಣ ಬರುತ್ತದೆ.)

೪. ತೋಳು ಮತ್ತು ಭುಜಗಳ ವ್ಯಾಯಾಮ[illegible]

ಚಿಂತೆಯೇ ಮುಪ್ಪು: ಕೆನಡಾದ ಡಾ[illegible] ಸೆಲಿ, ಮುನ್ರೊ ಕ್ಲಿನಿಕ್ಕಿನ ಸಂಶೋಧಕರ[illegible] ಮೊದಲಾದವರು ನಡೆಸಿದ ಪರಿಶೀಲನೆಗಳಿಂ[illegible] ನಮ್ಮ ದೈಹಿಕ ಉಪದ್ರವಗಳಲ್ಲಿ ನೂರಕ್ಕೈವತ್ತ[illegible] ರಷ್ಟಕ್ಕೆ ಮನಸ್ಸೇ ಪ್ರಚೋದಕವಾಗಿದೆಯೆಂ ಬುದು ಖಂಡಿತವಾಗಿದೆ. ಗ್ಯಾಸ್ (ವಾಯು[illegible] ಮತ್ತು ಆಯಾಸದ ಪೀಡೆಗಳಲ್ಲಿ ಸೇಕಡಾ ೯೦[illegible] ತಲೆನೋವು, ತಲೆತಿರುಗುವಿಕೆಗಳಲ್ಲಿ ಸೇಕಡಾ[illegible] ೮೦, ಕೊರಳ ಹಿಂಬದಿಯ ನೋವಿನಲ್ಲಿ ಸೇಕಡಾ ೭೫, ಮಲಬದ್ಧತೆಯಲ್ಲಿ ಸೇಕಡಾ ೭೦, ಹೊ[illegible]

ನೋವಿನಲ್ಲಿ ಸೇಕಡಾ ೫೦, ಕಜ್ಜಿಗಳಲ್ಲಿ ಸೇಕಡಾ ೩೦ ಮಾನಸಿಕ ಆವೇಗದಿಂದ ಉದ್ಭೂತವಾಗುತ್ತವೆ.

ಕೆಲವರಿಗೆ ತಮ್ಮ ಆರೋಗ್ಯಕ್ಕೇನೋ ಆಗಿದೆಯೆಂಬುದೇ ದೊಡ್ಡ ಚಿಂತೆಯಾಗಿರುತ್ತದೆ. ಇದನ್ನು ಮುಗಿಸಲು ನೇರವಾಗಿ ಡಾಕ್ಟರರ ಕಡೆ ಹೋಗುವುದು ಸುಲಭೋಪಾಯ. ಚಿಂತೆ ನಿಜವಾಗಿದ್ದರೆ ಅದಕ್ಕೆ ಪರಿಹಾರ ದೊರೆಯುತ್ತದೆ; ಇಲ್ಲದಿದ್ದರೆ ಪ್ರಶ್ನೆಯೇ ಉಳಿಯುವುದಿಲ್ಲ.

ಅಸಂಖ್ಯ ಜನರ ಚಿಂತೆಗಳ ಕಾರಣಗಳನ್ನು ಪರೀಕ್ಷಿಸಿದ ತಜ್ಞರು ಅವುಗಳನ್ನು ಈ ಕೆಳಗಿನಂತೆ ಹಂಚಿದ್ದಾರೆ:

ಎಂದೂ ಸಂಭವಿಸದ ಸಂಗತಿಗಳಿಗಾಗಿ ಸೇಕಡಾ ೪೦, ಆಗಿ ಹೋದ ಸಂಗತಿಗಳಿಗಾಗಿ ಸೇಕಡಾ ೩೦, ಕ್ಷುಲ್ಲಕ ವಿಷಯಗಳಿಗಾಗಿ ಸೇಕಡಾ ೨೨, ನಿಜವಾದ ಸಂಗತಿಗಳಿಗಾಗಿ ಸೇಕಡಾ ೮.

ಚಿಂತೆಯ ಬಲಿಯನ್ನು ಹರಿಯಲು ಒಂದು ಉಪಾಯವೆಂದರೆ ಅವುಗಳನ್ನೆಲ್ಲ ಬರಹಕ್ಕಿಳಿಸುವುದು. ಆಗ ಅವುಗಳಲ್ಲಿ ಬಹಳ ಮಟ್ಟಿಗೆ ಎಲ್ಲವೂ ನಿರಾಧಾರವೆಂದು ನಿಮಗೇ ತಿಳಿಯುವುದು.

ಮಾನಸಿಕ ಪ್ರಚೋದನೆಯಿಂದುಂಟಾಗುವ ದೈಹಿಕ ಉಪದ್ರವಗಳಿಗೆ ಮೇಯೋ ಕ್ಲಿನಿಕ್ಕಿನ ಡಾ. ಕೆಪ್ಲರರು ಒಂದೇ ಒಂದು ಪರಿಹಾರೋಪಾಯವಿದೆಯೆನ್ನುತ್ತಾರೆ. ಅದೆಂದರೆ ಜೀವನದಲ್ಲಿ ಸಮತೋಲವನ್ನು ಸಾಧಿಸುವುದು. ಪ್ರತಿಯೊಬ್ಬನೂ ತನ್ನ ವೈಯಕ್ತಿಕ ಜೀವನವನ್ನು ೧. ಕೆಲಸ, ೨. ಆಟ, ೩. ಪ್ರೀತಿ ಮತ್ತು ೪. ಪೂಜೆ (ತನಗಿಂತ ಶ್ರೇಷ್ಠವಾದ ಯಾವುದಾದರೂ ಶಕ್ತಿಯ ಮೇಲೆ ಭಕ್ತಿ) ಇವುಗಳ ಪ್ರಭಾವ ಸಮಪ್ರಮಾಣದಲ್ಲಿ ಬೀಳುವಂತೆ ಯೋಜಿಸಿಕೊಳ್ಳಬೇಕು. ಮಾನಸಿಕ ಸಂತಾಪದಿಂದ ಬಳಲುವವರಲ್ಲಿ ಪ್ರತಿಯೊಬ್ಬರೂ ಜೀವನದಲ್ಲಿ ಸಮತೋಲವಿಲ್ಲದವರೇ ಆಗಿರುತ್ತಾರೆ. ಮೇಲಿನ ನಾಲ್ಕು ವಿಷಯಗಳಲ್ಲಿ ಒಂದರ ಅಭಾವವಾದರೂ ಅವರ ಜೀವನದಲ್ಲಿರುತ್ತದೆ. ಮೇಲಿನ ಕ್ರಮವನ್ನು ಮನಃಪೂರ್ವಕ ಅನುಸರಿಸಿದವರೆಲ್ಲರೂ ತಮ್ಮ ಪೀಡೆಯಿಂದ ಮುಕ್ತಿ ಪಡೆದಿದ್ದಾರೆಂದು ಡಾ. ಕೆಪ್ಲರ್ ಹೇಳಿದ್ದಾರೆ.

ಕಾರ್ಯತತ್ಪರರಾಗಿರಿ : ಸದಾ ಕಾರ್ಯತತ್ಪರರಾಗಿರುವವರೇ ಎಲ್ಲರಿಗಿಂತ ಆರೋಗ್ಯವಂತರಾಗಿರುತ್ತಾರೆಂಬುದು ಶಿಕಾಗೋ ವಿಶ್ವವಿದ್ಯಾಲಯವು ನಡೆಸಿದ ಗಣನೆಯಿಂದ ವ್ಯಕ್ತವಾಗಿದೆ. ಕಾರ್ಯತತ್ಪರತೆ ಕಡಿಮೆಯಿರುವವರು, ಕೆಲಸವಿಲ್ಲದವರು ಬಲು ಬೇಗನೆ ಶರೀರ ಮನಸ್ಸುಗಳೆರಡರಲ್ಲೂ ಜೀರ್ಣಹೊಂದುವರೆಂದು ಬೇರೆ ಪರಿಶೀಲನೆಗಳಲ್ಲಿಯೂ ಸಿದ್ಧವಾಗಿದೆ. "ಅಲಸಗಾರನ ತಲೆಯು ಗೂಡೊಳು" ಮಾತ್ರವಲ್ಲ, ಮೈಯ ಗೂಡಿನಲ್ಲೂ "ಕಲಿಪುರುಷನೆಂದೆಂಬ ಜೇಡನು ಬಲೆಯ ಕಟ್ಟುತಲಿರುವುದು."

ಇದಕ್ಕೆ ಕಾರಣವಿಷ್ಟೇ : ಸೋಮಾರಿತನವೂ ನಿರರ್ಥಕ ಕೃತಿಗಳೂ ನಮ್ಮ ಮಾನಸಿಕ ಧೀರತ್ವವನ್ನು ಬಲು ಬೇಗ ಕುಂದಿಸಿಬಿಡುತ್ತವೆ. ಧೀರತ್ವವೇ ಆರೋಗ್ಯದ ಅಡಿಗಲ್ಲು. ಸೋಮಾರಿಗಳ ರೋಗನಿರೋಧಕ ಶಕ್ತಿ ಸಕ್ರಿಯ ಜನರಿಗಿಂತ ಎಷ್ಟೋ ಕಡಿಮೆಯಾಗಿರುತ್ತದೆ. ರೋಗವಿಲ್ಲದಿದ್ದರೂ ತಮಗೇನೋ ಆಗಿದೆಯೆಂಬ ಭ್ರಮೆಯಿಂದ ಅವರು ನೋಯುತ್ತಿರುತ್ತಾರೆ.

ಯಂತ್ರಗಳು ತುಕ್ಕು ಹಿಡಿಯುವುದರಿಂದ ಕೆಡುವಷ್ಟು ಸವೆಯುವ ಮೂಲಕ ಕೆಡುವುದಿಲ್ಲವಂತೆ. ಮಾನವ ಯಂತ್ರವು ಇದಕ್ಕೆ ಹೊರತಾದುದಲ್ಲ. *



ನ್ಯೂಯಾರ್ಕಿನ ಎಂಪಾಯರ್ ಸ್ಟೇಟ್
ಕಟ್ಟಡದ ಮೇಲೆ ನೀವು ಅದ್ಭುತ
ಅನುಭವಗಳನ್ನು ಪಡೆಯುವಿರಿ.

ಪ್ರಪಂಚದ ಅತ್ಯುನ್ನತ ಕಟ್ಟಡ

ಕ್ಯಾಪ್ಟನ್ ಎಂ. ಜಿ. ಕೆ. ಮೂರ್ತಿ

ನ್ಯೂಯಾರ್ಕ್ ನಗರದ ಮನ್‌ಹಟ್ಟಾನ್ ಿದ್ವೀಪದಲ್ಲಿ, ಭೂಲೋಕದಲ್ಲಿ ಮತ್ತೆ-ಲ್ಲಿಯೂ ಇಲ್ಲದ ಒಂದು ಅದ್ಭುತ ನೋಟವು ದೃಷ್ಟಿಯನ್ನು ಸೆಳೆಯುತ್ತದೆ. ಅಸಂಖ್ಯಾತ ಕಟ್ಟಡ ಶ್ರೇಣಿಗಳು ವೈಭವ, ದರ್ಪವನ್ನು ಬೀರುತ್ತಾ, ಮೇಘಮಂಡಲವನ್ನು ತೂರಿಹೋಗಿ, ಅಂತ ರಿಕ್ಷಕ್ಕೆ ಹಾರುವಂತೆ ಎತ್ತರವಾಗಿರುವುದರಿಂದ ಅವಕ್ಕೆ "ಗಗನ ಚುಂಬಿತ ಸೌಧ" (Sky-scraper) ಗಳೆಂಬ ಹೆಸರು ಬಂದಿದೆ.

ಆ ಶಿಲ್ಪಗಳಲ್ಲಿ ೫೦ ಅಂತಸ್ತಿನ ಮೆಟ್ರೋಪಾಲಿಟನ್ ಲೈಫ್ ಕಟ್ಟಡ ೭೦೦ ಅಡಿ ಎತ್ತರ; ೫೭ ಮಹಡಿಗಳ ವುಲ್‌ವರ್ತ್ ಭವನ ೭೯೨ ಅಡಿ ಎತ್ತರ; ೭೦ ಮಳಿಗೆಗಳ ರಾಕ್‌ಫೆಲರ್ ಕಟ್ಟಡ ೮೫೦ ಅಡಿ ಎತ್ತರ; ೬೫ ಉಪ್ಪರಿಗೆಯ ಮನ್‌ಹಟ್ಟಾನ್ ಬ್ಯಾಂಕು ೯೨೫ ಅಡಿ ಎತ್ತರ; ೬೭ ಅಂತಸ್ತುಳ್ಳ ವಾಲ್ ಗೋಪುರ ೯೫೦ ಅಡಿ ಎತ್ತರ; ೭೭ ಮಹಡಿಗಳುಳ್ಳ ಕ್ರೈಸ್ಲರ್ ಕಟ್ಟಡ ೧೦೪೬ ಅಡಿ ಎತ್ತರ. ಮುಗಿಲೆತ್ತರದ ಈ ಮಹಾ ಕಟ್ಟಡಗಳನ್ನೂ ಕೆಳಗೆ ತಳ್ಳಿ ಇನ್ನೂ ಅಗಾಧವಾದ ಎತ್ತರಕ್ಕೆ ನುಗ್ಗಿ ಹೋಗಿ, ಪ್ರತಾಪದಿಂದ ಗಗನಕ್ಕೇರುವ ಒಂದು "ರಾಕ್ಷಸ" ಶಿಲ್ಪವಿದೆ. ಅದೇ ಲೋಕಪ್ರಸಿದ್ಧವಾದ "ಎಂಪೈರ್ ಸ್ಟೇಟ್ ಕಟ್ಟಡ"— ಇಡೀ ಜಗತ್ತಿನಲ್ಲೇ ಅದು ಅತ್ಯುನ್ನತ ಕಟ್ಟಡ— ೧೪೭೨ ಅಡಿ (೪೪೮ ಮೀಟರ್) ಎತ್ತರದ ಶಿಲ್ಪ.

ಈ ಭವನಕ್ಕೆ ಭೂಮಟ್ಟದ ಕೆಳಗೆ ಎರಡು ಮಹಡಿಗಳೂ ಮೇಲೆ ೧೦೨ ಅಂತಸ್ತುಗಳೂ ಇವೆ. ಅವುಗಳ ಎತ್ತರ ೧೨೫೦ ಅಡಿ, ಕೊನೆ ಮಹಡಿಯ ಮೇಲೆ ೨೨೨ ಅಡಿ ಎತರದ ಟೆಲಿವಿಷನ್ ಗೋಪುರವಿದೆ. ಕಟ್ಟಡದೊಳಗಿನ ಟೆಲಿಫೋನ್, ಟೆಲಿಗ್ರಾಫ್ ತಂತಿಗಳ ಉದ್ದ ೩,೫೦೦ ಮೈಲು. ನೀರಿನ ನಳಿಗೆಗಳ ಉದ್ದ ೬೦ ಮೈಲು. ಕಟ್ಟಡದ ತೂಕ ೩,೬೫,೦೦೦ ಟನ್. ಇದಕ್ಕೆ ಉಪಯೋಗಿಸಿದ ಉಕ್ಕು, ಪ್ಯಾರಿಸ್‌ನಿಂದ ಆಂಟ್‌ವರ್ಪ್‌ವರೆಗೆ ಎರಡು ಕಂಬಿಗಳ ರೈಲು ದಾರಿಯನ್ನು ಎರಡೆರಡಾಗಿ ಹಾಕಿದರೂ ಇನ್ನೂ ಮಿಗುತ್ತದೆ. ಕಿಟಕಿಗಳ ಸಂಖ್ಯೆ ೬,೫೦೦ ; ದ್ವಾರಮಂಟಪ, ಹಾಲ್‌ಗಳಲ್ಲಿನ ಅಮೃತಶಿಲೆಯ ಪರಿಮಾಣ ಎಷ್ಟೆಂದರೆ, ಫ್ರಾನ್ಸ್, ಇಟಲಿ, ಬೆಲ್ಜಿಯಂ ಮತ್ತು ಜರ್ಮನಿ ದೇಶಗಳ ಅನೇಕ ಕಲ್ಲುಗಣಿಗಳಲ್ಲಿ ಒಂದು ವರ್ಷ ಕಾಲ ಕಲ್ಲು ತೆಗೆದು ಆ ಗಣಿಗಳೆಲ್ಲಾ ಬರಿದಾದವು.

ಇಲ್ಲಿನ ಅಸಂಖ್ಯಾತ ದೀಪಗಳು ಪ್ರತಿ ತಿಂಗಳೂ ೨೦,೦೦,೦೦೦ "ಕಿಲೋವಾಟ್ ಅವರ್" ವಿದ್ಯುಚ್ಛಕ್ತಿಯನ್ನು ಸುಡುತ್ತವೆ. ಸೋಪಾನ ಮಾರ್ಗದ ಮೆಟ್ಟಿಲುಗಳ ಸಂಖ್ಯೆ ೧೮೬೦. ಚಲಿಸುವ ವಿದ್ಯುತ್ ಲಿಫ್ಟ್‌ಗಳ ಸಂಖ್ಯೆ [illegible]೪. ಅವು ಓಡಾಡಲು ಮಾಡಿರುವ ಮಾರ್ಗದ ಉದ್ದ ಏಳು ಮೈಲಿ. ಅವುಗಳ ವೇಗ ಒಂದು ನಿಮಿಷಕ್ಕೆ ೪,೦೦೦ ಗಜ. ಲಿಫ್ಟ್‌ಗಳು ಒಂದು ಗಂಟೆಯಲ್ಲಿ ೧೫,೦೦೦ ಜನರನ್ನು ಬೀದಿಗೆ ಒಯ್ಯಬಲ್ಲವು. ಪ್ರತಿ ದಿನವೂ ೧,೩೦೦ ಜನರು ಕಟ್ಟಡ ನೋಡಲು ಬರುತ್ತಾರೆ. ವೀಕ್ಷಣಾಲಯದ ಸಿಬ್ಬಂದಿಯವರು ಎಂಟು ಭಾಷೆಗಳನ್ನು ಮಾತನಾಡುತ್ತಾರೆ.

ಭವನ[illegible] ಬಿಡುವಿಲ್ಲದೆ ಕೆಲಸ ಮಾಡುವ ಜೇನುಗಳ ಗೂಡಿನಂತಿದೆ. ಅದೇ ಒಂದು ಊರು. ಅದರೊಳಗಿನ ೨೦ ಲಕ್ಷ ಚದರಡಿ ನೆಲೆಯಲ್ಲಿ ೨೫,೦೦೦ ಬಾಡಿಗೆದಾರರಿದ್ದಾರೆ. ಟೆನಿಸ್ ಆಟಕ್ಕೆ ಪ್ರಾಂಗಣಗಳು, ಉಪಾಹಾರಗೃಹಗಳು, ಕ್ಲಬ್, ವರ್ತಕಮಂಡಲಿಗಳು, ಮಳಿಗೆಗಳು, ತೋಟ, ನಾಟಕ ಶಾಲೆ, ವಿಜ್ಞಾನಿಗಳ ಸಂಸ್ಥೆಯ ಮಂದಿರಗಳು, ಚಿತ್ರಶಾಲೆಗಳು, ಅಗ್ನಿಶಾಮಕದಲ, ವಿಹಾರ ವಾಟಿಕೆಗಳು, ವಾರ್ತಾಗ್ರಾಹಕ ಮತ್ತು ವಾರ್ತಾಪ್ರಸಾರ ಮಂದಿರ ಮುಂತಾದವುಗಳನ್ನೆಲ್ಲಾ ಈ ಭವನವು ಒಳಕೊಂಡಿದೆ. ಪ್ರತಿ ರಾತ್ರಿ ಕಸ ಹೊಡೆಯುವುದೇ ಕೆಲಸವಾದ ೨೦೦ ಜನರನ್ನೊಳಗೊಂಡು ೬,೦೦೦ ಜನ ಇಲ್ಲಿ ಕೆಲಸ ಮಾಡುತ್ತಾರೆ. ಏಳು ಟೆಲಿವಿಷನ್ ಕಂಪೆನಿಯವರು ಒಟ್ಟುಗೂಡಿರುವ ಈ ಕೇಂದ್ರವು ಪೃಥ್ವಿಯಲ್ಲೆಲ್ಲಾ ಅತ್ಯಂತ ಪ್ರಬಲವಾದದ್ದು ; ಅದು ೫೨,೦೦,೦೦೦ ಟೆಲಿವಿಷನ್ ಸೆಟ್‌ಗಳನ್ನು ನಿಯಂತ್ರಿಸುತ್ತದೆ. ಶಿಖರದಲ್ಲಿ "ಫ್ರೀಡಂ ಲೈಟ್" ಎಂಬ ಹೆಸರಿನ ನಾಲ್ಕು ದೀಪಗಳು ಪ್ರಪಂಚದ ದೀಪಗಳಲ್ಲೆಲ್ಲಾ ಅತ್ಯಂತ ಪ್ರಬಲವಾದ ಶಕ್ತಿಯಿಂದ ಪ್ರಜ್ವಲಿಸುತ್ತಾ, ಸಮುದ್ರ ಮತ್ತು ವಿಮಾನ ಪಥಿಕರಿಗೆ ದಾರಿ ತೋರಿಸುತ್ತವೆ.

ಎಂಪೈರ್ ಸ್ಟೇಟ್ ಕಟ್ಟಡದ ರಚನೆಗೆ ೪೩,೦೦೦,೦೦೦ ಡಾಲರ್ ಖರ್ಚಾಯಿತು. ಜೆ. ಜೆ. ರಾಸ್ಕೋಬ್ ಎಂಬ ನ್ಯೂಯಾರ್ಕಿನ ಕೋಟ್ಯಧೀಶ ಇದರ ಮಾನಸಿಕ ಕಲ್ಪನೆಯನ್ನು ನೆನಸಿ, ೧೯೩೦–೩೧ ರಲ್ಲಿ ಕಟ್ಟಿದನು. ಅವನು ೧೯೫೦ ರಲ್ಲಿ ಕಾಲವಾಗುವ ವರೆಗೂ ಅವನೊಬ್ಬನೇ ಆ ಕಟ್ಟಡದ ಮಾಲಿಕನಾಗಿದ್ದನು. ೧೯೫೪ ರಲ್ಲಿ ಹೆನ್ರಿ ಕ್ರೌನ್ ಎಂಬುವನು ಅದರ ಮಾಲಿಕನಾದನು.

ಅದನ್ನು ರಚಿಸಿ ನಿರ್ಮಾಣ ಮಾಡಿದವರು ಶ್ರೀವ್ಸ್, ಲ್ಯಾಂಬ್ ಮತ್ತು ಹಾರ್ಮನ್ ಎಂಬ ಶಿಲ್ಪಶಾಸ್ತ್ರಜ್ಞರು. ಇಂಥ ರಚನೆ ಅಮೇರಿಕದ ವಿಶೇಷ ಗುಣಲಕ್ಷಣ ; ಸ್ಥಳದ ಅಭಾವ ಮತ್ತು ನ್ಯೂಯಾರ್ಕಿನ ಮಿತಿಮೀರಿದ ಜನಸಾಂದ್ರತೆಯಿಂದ, ಭೂಮಿಯ ಬೆಲೆ ವಿಪರೀತ ಏರಿ, ಕಟ್ಟಡಗಳು ಅಂತರಿಕ್ಷಕ್ಕೆ ಹಬ್ಬುವುದು ಅವಶ್ಯವಾಯಿತು. ಎಂಪೈರ್ ಸ್ಟೇಟ್ ಕಟ್ಟಡದ ಅಡಿಮಟ್ಟದ ಚದರ ಎರಡು ಎಕರೆ ಭೂಮಿಯ ಬೆಲೆ

ಒಂದು ಚದರಡಿಗೆ ೯೦ ಪೌಂಡು ಎಂದರೆ ಒಂದು ಚದರ ಗಜಕ್ಕೆ ೧೨,೧೫೦ ರೂಪಾಯಿ. ವಾಸ್ತುವಿದ್ಯಾವಿಶಾರದರು ಬಹುಕಾಲ ಸಂಶೋಧಿಸಿ, ಕಟ್ಟಡ ಕಲಾ ಕೌಶಲ್ಯದಲ್ಲಿ ಹೊಸ ಭಾವನೆಗಳೂ ಕ್ರಮವೂ ಬಂದಿವೆ. ಉಕ್ಕಿನ ತೊಲೆಗಳನ್ನು ಉಕ್ಕಿನ ಕಂಬಗಳಿಗೆ ಕೀಲು ಮೊಳೆಗಳಿಂದ ಭದ್ರವಾಗಿ ಬೆಸೆದು, ಅವಿಚ್ಛಿನ್ನವಾದ ಚೌಕಟ್ಟುಗಳನ್ನು ನಿರ್ಮಿಸಿ, ಉಕ್ಕಿನ ಕಂಬಗಳು ಏರುತ್ತಾ ಹೋದಂತೆ, ಅಡ್ಡ ತೊಲೆಗಳು ಆಯಾ ಅಂತಸ್ತಿನ ಮಟ್ಟಗಳಲ್ಲಿಡಲ್ಪಟ್ಟು, ಗೋಡೆ, ನೆಲ, ಅಂತಸ್ತುಗಳು ಉಕ್ಕಿನ ಅಸ್ಥಿಪಂಜರದ ಆಧಾರದ ಮೇಲೆ ನಿಂತು, ರಚನೆಯು ಬೆಳೆಯುತ್ತಾ ಅಂತರಿಕ್ಷಕ್ಕೆ ಹಬ್ಬುತ್ತದೆ. ಗೋಡೆಯ ಮೇಲೆ ಭಾರವೇ ಬೀಳುವುದಿಲ್ಲ; ಅದು ಪರದೆ ಅಥವಾ ಚರ್ಮದಂತೆ ತೆಳ್ಳಗಿದ್ದರೆ ಸಾಕು. ಗೋಡೆಗಳು ಅಲ್ಯುಮಿನಿಯಂ ತಗಡುಗಳು, ಟೆರಾಕೊಟ್ಟ ಪಟ್ಟಿಗಳು, ಪ್ಲೈವುಡ್ ಮುಂತಾದ ಹಗುರ ವಸ್ತುಗಳಿಂದ ನಿರ್ಮಿಸಲ್ಪಟ್ಟಿವೆ. ಕಟ್ಟಡದ ಭಾರವು ಬಹು ಕಡಿಮೆಯಾಗಿ, ತಳಹದಿಗೆ ಸೌಕರ್ಯವಾಗುತ್ತದೆ. ಗೋಡೆಯ ಕೆಲಸವನ್ನು ಯಾವ ಅಂತಸ್ತಿನಲ್ಲಾದರೂ ಆರಂಭಿಸಿ, ಕಟ್ಟಣೆಯನ್ನು ಅಲ್ಲಿಂದ ಕೆಳಕ್ಕೂ ಮೇಲಕ್ಕೂ ಒಂದೇ ಕಾಲದಲ್ಲಿ ಮುಂದುವರಿಸಲು ಸಾಧ್ಯ. ಕೆಲಸಗಾರರ ಸಂಖ್ಯೆ ದ್ವಿಗುಣವಾದರೆ, ಕೆಲಸವು ಅರ್ಧ ಕಾಲದಲ್ಲೇ ಮುಗಿಯುವುದು. ಬಿರುಗಾಳಿಯ ಹೊಡೆತದಿಂದ ಕಟ್ಟಡವು ಕಳಚಿ ಬೀಳದಂತೆ ಇದೂ ಎಣಿಕೆಯಾಗಿ ಲೆಕ್ಕಾಚಾರಮಾಡಲ್ಪಟ್ಟಿದೆ. ಅಸ್ಥಿಪಂಜರವು ಸುಂಟರಗಾಳಿಗೆ ಬಗ್ಗದಂತೆ ಗಡುಸಾಗಿ ಮಾಡಲ್ಪಟ್ಟಿದೆ. ಉಕ್ಕಿನ ಭಾಗಗಳು ತುಕ್ಕು ಹಿಡಿಯದಂತೆಯೂ ಬೆಂಕಿಯಿಂದ ನಷ್ಟವಾಗದಂತೆಯೂ ಕಾಂಕ್ರೀಟ್, ಟೆರಾಕೊಟ ಮುಂತಾದವುಗಳಿಂದ ಮುಚ್ಚಲ್ಪಟ್ಟಿವೆ. ಅಸ್ತಿವಾರಕ್ಕೆ ಭೂಮಿಯನ್ನು ೫೫ ಅಡಿ ಆಳ ತೋಡಿ, ಸಿಮೆಂಟ್ ಕಾಂಕ್ರೀಟ್ ಕಂಬಗಳನ್ನು ಬಂಡೆಯ ಗಟ್ಟಿನೆಲ ಮುಟ್ಟುವವರಿಗೂ ಯಂತ್ರಗಳಿಂದ ದಬ್ಬಿ ಪ್ರತಿಯೊಂದು ಕಂಬವೂ ಕಟ್ಟಡದ ಎತ್ತರಕ್ಕೆಲ್ಲಾ ಹಬ್ಬಿರುವ ಉಕ್ಕಿನ ಒಂದು ಕಂಬಕ್ಕೆ ತಳಹದಿಯಾಗಿದೆ. ಒಂದೊಂದು ಕಂಬದ ಮೇಲೆ ಬೀಳುವ ಭಾರ ೫,೦೦೦ ಟನ್ನಿಗಿಂತಲೂ ಹೆಚ್ಚು.

ಈ ಕಟ್ಟಡದ ಒಂದು ಮಹಾ ವೈಚಿತ್ರ್ಯವೇನೆಂದರೆ, ಅದರ ಕಟ್ಟಣೆಯು ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಮುಗಿಸಲ್ಪಟ್ಟಿತು. ಚೌಕಟ್ಟಿನ ೬೦,೦೦೦ ಟನ್ ಉಕ್ಕಿನ ರಚನೆಗೆ ೨೩ ವಾರಗಳು ಮಾತ್ರ ಹಿಡಿದವು. ಸಾಧಾರಣ ಕಟ್ಟಣೆಯಲ್ಲಿ ಅನೇಕ ವಾರಗಳಲ್ಲಿ ಮಾಡುವಷ್ಟು ಕೆಲಸವನ್ನು, ಎಂಪೈರ್ ಸ್ಟೇಟ್ ಕಟ್ಟಡದ ರಚನೆಯಲ್ಲಿ ರಾಕ್ಷಸ ಶಕ್ತಿಯ ಯಂತ್ರಗಳು ಕೆಲವು ನಿಮಿಷಗಳಲ್ಲೇ ಮುಗಿಸಿದವು. ಭಾರಿ ಭಾರಿ ಉಕ್ಕಿನ ತೊಲೆಗಳು, ಒತ್ತುಕೋಲನ್ನು ಬೆಟ್ಟಿನಿಂದ ಒಂದು ಸಾರಿ ಮುಟ್ಟಿದ ಮಾತ್ರಕ್ಕೆ, ತೂಗಾಡುತ್ತಾ ಬಹು ಮೇಲಕ್ಕೇರಿ, ಉಕ್ಕಿನ ಕಂಬಗಳ ಮೇಲೆ ಇಳಿದು, ಮೊಳೆತಟ್ಟೆಯಿಂದ ಬಿಗಿಯಲ್ಪಟ್ಟವು. ಈ ಕಟ್ಟಡದ ಭೂಮಿಯು ನ್ಯೂಯಾರ್ಕ್ ನಗರದ ಅತ್ಯಂತ ಅವಿಶ್ರಾಂತ ಜಾಗದಲ್ಲಿದ್ದು, ಅದರ ಬಳಿ ಪ್ರತಿ ದಿನವೂ ೮೦,೦೦೦ ವಾಹನಗಳೂ, ಎರಡು ಲಕ್ಷ ಪಾದಚಾರಿಗಳೂ ಹೋಗುತ್ತಿದ್ದರೂ ಓಡಾಟಕ್ಕೆ ಅಡಚಣೆ ಮಾಡದಂತೆ ಕಟ್ಟಣೆಯು ಲೀಲಾಜಾಲವಾಗಿ ಮುಗಿಲಿಗೇರಿತು. ಬೀದಿಯಲ್ಲಿ ಸಾಮಾನುಗಳನ್ನು ಕೂಡಿಡಲು ಸ್ಥಳವಿಲ್ಲದೆ, ದೂರದಿಂದ ಅವುಗಳನ್ನು ಒಯ್ದು ತಂದು, ಸ್ವಲ್ಪವೂ ತಡಮಾಡದೆ ಅವುಗಳನ್ನು ಕಟ್ಟಣೆಗೇರಿಸಬೇಕಾಯಿತು. ದೂರದ ಪಿಟ್ಸ್‌ಬರ್ಗ್ ಕಾರ್ಖಾನೆಯಲ್ಲಿ ತಯಾರಾದ ಉಕ್ಕಿನ ಸಾಮಗ್ರಿಗಳು ಕಾರ್ಖಾನೆಯಿಂದ ಹೊರಟ ೮೦ ಗಂಟೆಯೊಳಗಾಗಿ ಉಕ್ಕಿನ ಚೌಕಟ್ಟನ್ನು ಸೇರಿದವು. ನಾಲ್ಕು ತಿಂಗಳೊಳ ಅಸ್ಥಿಪಂಜರವು ಮುಗಿಯಿತು, ಎಂಟು ತಿಂಗಳೊಳಗೆ ಕಲ್ಲು ಕೆಲಸವೆಲ್ಲಾ ಮುಗಿಯಿತು. ಶೀಘ್ರ ಬಹು ಮುಖ್ಯವಾಗಿತ್ತು. ಇದಕ್ಕಾಗಿ ಎಷ್ಟು ಖ

ಮಾಡುವುದಕ್ಕೂ ಮಾಲಕರು ತಯಾರಿದ್ದರು; ಏಕೆಂದರೆ, ಒಂದು ದಿನ ವಿಳಂಬವಾದರೂ ಮನೆ ಬಾಡಿಗೆಯಲ್ಲೂ, ಭೂಮಿಯ ಬಾಡಿಗೆಯಲ್ಲೂ ಬಹು ನಷ್ಟವಾಗುತ್ತಿತ್ತು. ಮೇ ೧, ೧೯೩೧ರಲ್ಲಿ ಕಟ್ಟಡದ ಸಮಾರೋಹಣೋತ್ಸವ ಅಧ್ಯಕ್ಷ ಹೂವರರಿಂದ ಜರುಗಿತು.

೧೦೫೦ ಅಡಿ (೩೨೦ ಮೀಟರ್) ಎತ್ತರದ ೮೬ ನೇ ಅಂತಸ್ತಿನಲ್ಲೂ, ೧೨೫೦ ಅಡಿ (೩೮೧ ಮೀಟರ್) ಎತ್ತರದ ೧೦೨ ನೇ ಅಂತಸ್ತಿನಲ್ಲೂ, ನೋಟಪಾಟಕ್ಕೆ ವೀಕ್ಷಣಾಲಯ ಮತ್ತು ವೇಧ ಶಾಲೆಗಳಿವೆ. ಈ ಎತ್ತರಗಳಲ್ಲಿ ವಿಚಿತ್ರ ಅನುಭವಗಳಾಗುತ್ತವೆ. ಮೋಡವಿಲ್ಲದ ದಿನ ಧೂಳಿನ ರೇಣುಗಳು ಕಿವಿಗಳಲ್ಲಿ ಝೇಂಕಾರ ಮಾಡುತ್ತವೆ; ಈ ತೋರಿಕೆಗೆ "Dust–static" ಎಂದು ಹೆಸರು. ಅನೇಕ ವೇಳೆ ಕೆಂಪು ಮಳೆ ಬೀಳುತ್ತದೆ. ಗರಗರನೆ ತಿರುಗುವ ಗಾಳಿಯು ಕೆಂಪು ಜೇಡಿಮಣ್ಣಿನ ಅಣುಗಳನ್ನು ಸೆಳೆದಿಟ್ಟಿರುವುದು ಕೆಂಪು ಮಳೆಗೆ ಕಾರಣ. ಮಂಜು ಕೆಳಗಿನಿಂದ ಮೇಲಕ್ಕೆ ಬೀಳುವಂತೆ ಕಾಣುತ್ತದೆ; ಇದಕ್ಕೆ ಕಾರಣ ಗಾಳಿಯ ಸುಳಿ. ಆಗಾಗ್ಗೆ ಬಿಳಿ ಮಳೆ ಗೋಪುರದ ಮೇಲೆ ಬಿದ್ದು, ಕಲ್ಲಿಗೆ ಕಲೆಮಾಡುತ್ತದೆ. ಒಂದು ಸಾರಿ ಹಿಮದ ಚಳಿಗಾಳಿ ಬೀಸಿ, ಕಟ್ಟಡದ ಶಿಖರವನ್ನು ಕರಕರ ಶಬ್ದ ಮಾಡುವ ಬಿಳಿ ಉಂಡೆಗಳಿಂದ ಮುಚ್ಚಿತು. ಇವುಗಳ ಕಾರಣ ಯಾರಿಗೂ ಗೊತ್ತಿಲ್ಲ. ವೈಜ್ಞಾನಿಕ ಪ್ರಯೋಗಶಾಲೆಯಲ್ಲಿ ಅವನ್ನು ವಿಚ್ಛೇದಿಸಲು, ಅವುಗಳಲ್ಲಿ ಮದ್ಯವನ್ನು ತಯಾರಿಸಲುಪಯೋಗಿಸುವ ಜವೆ ಗೋಧಿಯಿದೆಯೆಂದು ತಿಳಿಯಿತು. ಅನೇಕ "ಹಾವುಗಳು" ದೃಷ್ಟಿಗೆ ಬೀಳುತ್ತವೆ. ಹವಾಗುಣದ ಕೆಲವು ವಿಶೇಷ ಪರಿಸ್ಥಿತಿಗಳಲ್ಲಿ ಬಲವಾದ ಗಾಳಿ ಬೀಸಿದರೆ, "ಬಿಸಿಲು ಕುದುರೆ" ಯಂಥ ಮಾಯೆಯ ಆಕೃತಿಗಳು ಕಣ್ಣಿಗೆ ಬೀಳುತ್ತವೆ. ಭಾರಿ ಹೆಬ್ಬಾವು ಅಥವಾ ಕಾಳಿಂಗ ಸರ್ಪವು ಓಲಾಡುತ್ತ, ಗಾಳಿಯಿಂದ ಹೊರಟು ಪ್ರೇಕ್ಷಕನನ್ನು ಮುಟ್ಟಲು ಬರುವಂತೆ ದೃಶ್ಯವಾಗುತ್ತದೆ. ಕಟ್ಟಡದ ಯಾವ ಪಾರ್ಶ್ವಕ್ಕೆ ಹೋದರೂ ಅದೇ ನೋಟ.

ಬಹು ಮೋಡ ಕವಿದಿರುವ ದಿನ ವೀಕ್ಷಣಾಲಯದ ಮಾಳಿಗೆಯಿಂದ ಆಕಾಶದ ಕಡೆ ನೋಡಿದರೆ, ಸುಮಾರು ಅರ್ಧ ಮೈಲು ಎತ್ತರದಲ್ಲಿ ನೋಟಕನ ಪ್ರತಿಬಿಂಬವು ಛಾಯೆಯಂತೆ ಕಾಣುತ್ತಾ, ಅವನು ಯಾವ ಸಂಚಲನೆ, ಅಭಿನಯಗಳನ್ನು ಮಾಡಿದರೂ ಪ್ರತಿಬಿಂಬವೂ ಹಾಗೆಯೇ ಅನುವರ್ತಿಸುತ್ತದೆ. ರಬ್ಬರ್ ತಳ ಹದಿಯ ಜೋಡುಗಳನ್ನು ಹಾಕಿಕೊಂಡು, ಯಾರನ್ನಾದರೂ ಚುಂಬಿಸಿದರೆ ಅವರಿಗೆ ವಿದ್ಯುತ್ತಿನ ಆಘಾತ ಹೊಡೆಯುತ್ತದೆ. ಕೆಲವು ರಾತ್ರಿ ವಿದ್ಯುತಿನ ಬಿರುಗಾಳಿ (Electric storm) ಬೀಸುವಾಗ, ವೀಕ್ಷಣಾಲಯದ ದಿಡ್ಡೀ ಗೋಡೆಯ ಆಚೆ ಕೈಚಾಚಿದರೆ ತಣ್ಣಗಿರುವ, ನೀಲಿ ಬಣ್ಣದ "St. Elm's fire" ಎಂಬ ಹೆಸರಿನ ಜ್ವಾಲೆಯನ್ನು ಕೈಯಲ್ಲಿ ಹಿಡಿದುಕೊಳ್ಳಬಹುದು. ಕೈಬಟ್ಟುಗಳನ್ನು ಚಾಚಿದರೆ ಬಟ್ಟುಗಳ ತುದಿಯಲ್ಲಿ "ಫಾಸ್ಫರೆಸೆನ್ಸ್" ಬೆಳಕು ಹೊರಡುತ್ತದೆ. ಹಗಲುಹೊತ್ತು ಇದು ಕಣ್ಣಿಗೆ ಕಾಣಿಸುವುದಿಲ್ಲ; ಆದರೆ, ಸಾವಿರ ಮೊಟ್ಟೆಗಳನ್ನು ಒಂದೇ ಸಾರಿ ಎಣ್ಣೆಯಲ್ಲಿ ಕರಿದರೆ ಆಗುವಷ್ಟು ಗಟ್ಟಿ ಶಬ್ದ ಕೇಳಿಸುತ್ತದೆ.

ಸಿಡಿಲು ಈ ಕಟ್ಟಡವನ್ನು ೬೦೦ಕ್ಕಿಂತ ಹೆಚ್ಚು ಸಾರಿ ಹೊಡೆಯಿತು; ಒಂದು ಬಿರುಗಾಳಿಯಲ್ಲೇ ೧೯ ಸಾರೆ ಹೊಡೆಯಿತು. ಆದರೆ ಕಟ್ಟಡದ ಅಗಾಧವಾದ ಉಕ್ಕಿನ ಚೌಕಟ್ಟು ವಿದ್ಯುತ್‌ವಾಹಕದಂತೆ ಕೆಲಸ ಮಾಡಿ, ಕಟ್ಟಡಕ್ಕೆ ಏನೂ ಕೆಡುಕಾಗಗೊಡಲಿಲ್ಲ. ಈ ಕಟ್ಟಡದ ಸುತ್ತಲೂ ಕಾಲು ಮೈಲು ದೂರದೊಳಗಿನ ಮನೆಗಳನ್ನೆಲ್ಲಾ ಆ ಉಕ್ಕಿನ ಪ್ರಭಾವವು ಸಿಡಿಲಿನ ಅನಾಹುತದಿಂದ ರಕ್ಷಿಸಿದೆ. ಇಲ್ಲಿ ಮಿಂಚು ಸಿಡಿಲುಗಳ ಸೌಂದರ್ಯವನ್ನು ಯಾವ ಅಪಾಯವೂ ಇಲ್ಲದಂತೆ ಆಸ್ವಾದಿಸಬಹುದು. ಬಿರುಗಾಳಿಯ ರಭಸದಿಂದಲೂ ಕಟ್ಟಡಕ್ಕೆ ನಷ್ಟವಾಗಿಲ್ಲ. ಗಾಳಿಯಿಂದ ಕಟ್ಟಡವು

ಜೋಲಾಡುವುದೆಂಬ ಲೋಕ ಭಾವನೆಯು ಅಸತ್ಯ. ಪ್ರಚಂಡ ಗಾಳಿ ಬೀಸಿದಾಗ, ಶಿಖರದ ಭಾಗವು ಆ ಗಾಳಿ ಬೀಸುವ ದಿಕ್ಕಿನಲ್ಲಿ ಸ್ವಲ್ಪ ಬಾಗುತ್ತದೆ. ಸಂಶೋಧಕರು ಕಟ್ಟಡವು ಕಾಲಂಗುಲಕ್ಕಿಂತ ಜಾಸ್ತಿ ಎಂದೂ ಎತ್ತ ಕಡೆಯೂ ಬಾಗಲಿಲ್ಲವೆಂದು ಹೇಳುತ್ತಾರೆ. ಗಂಟೆಗೆ ೬೦ ಮೈಲು ವೇಗದ ಗಾಳಿಯು ಎಡೆಬಿಡದೆ ೯ ಗಂಟೆ ಕಾಲ ಹೊಡೆದರೆ, ಕಟ್ಟಡವು ೧॥ ಅಂಗುಲ ವಾಲುತ್ತದೆ.

ಗೋಪುರ ಎಷ್ಟು ಎತ್ತರವೆಂದರೆ, ಅದರ ಮೇಲು ಭಾಗದಲ್ಲಿ ಉಷ್ಣತಾಮಾನವು ಬೀದಿಯದಕ್ಕಿಂತ ಏಳೆಂಟು ಡಿಗ್ರಿ ಕಡಿಮೆ. ವೀಕ್ಷಣಾಲಯದ ಮಾಳಿಗೆಯಲ್ಲಿ ಚಂಡಮಾರುತವು ಬಾವಲಿ, ಜಿಟ್ಟೆಗಳನ್ನು ಸೆಳೆದು ತರುತ್ತದೆ. ಹಾರುವ ಪಕ್ಷಿಗಳ ಗುಂಪುಗಳು ಈ ಕಟ್ಟಡಕ್ಕೆ ಹೊಡೆದು, ಒಮ್ಮೆ ೫೦೦ ಮೃತ ಪಕ್ಷಿಗಳೂ ನೋವು ತಿಂದ ಅನೇಕ ಪಕ್ಷಿಗಳೂ ಬೀದಿಯಲ್ಲಿ ಆಯಲ್ಪಟ್ಟವು. ೧೯೪೫ ರಲ್ಲಿ ಒಂದು ಬೆಳಿಗ್ಗೆ "ಬಿ— ೨೫ ಬಾಂಬರ್" ವಿಮಾನವು ಮಂಜಿನಲ್ಲಡಗಿ, ೭೮, ೭೯ನೇ ಅಂತಸ್ತುಗಳ ಮಧ್ಯೆ ಭೀಕರವಾದ ಅಬ್ಬರದಿಂದ ಕಟ್ಟಡಕ್ಕೆ ಹೊಡೆದು ಅಪಘಾತವಾಗಿ, ಗ್ಯಾಸೊಲಿನ್ ಜ್ವಾಲೆಯು ಭುಗಿಲಿಟ್ಟು, ಅನೇಕರು ಮಡಿದರು. ಆ ಹೊಡೆತವು ಭೂಕಂಪದಂತಾಗಿ, ಕಟ್ಟಡವು ಎರಡು ಬಾರಿ ಜೋರಾಗಿ ಅಲುಗಾಡಿ ನಂತರ ಶಾಂತವಾಯಿತು. ಒಂದು ಎಂಜಿನ್ ೭೮ನೇ ಅಂತಸ್ತಿನಲ್ಲಿ ಕಟ್ಟಡದ ಒಂದು ಕಡೆ ಒಳದೂರಿ, ಎದುರು ಕಡೆಯಿಂದ ಹೊರ ಹೊರಟಿತು. ಇನ್ನೊಂದು ಲಿಫ್ಟಿನ ಸುರಂಗ ಮಾರ್ಗದೊಳಗೆ ಬಿತ್ತು. ಇಷ್ಟಾದರೂ ಅಲ್ಲಿಂದ ಏಳು ಅಂತಸ್ತಿನ ಮೇಲೆ ಓದುತ್ತಿದ್ದವನೊಬ್ಬನಿಗೆ ಈ ಪ್ರಮಾದವಾದದ್ದೇ ಗೊತ್ತಾಗಲಿಲ್ಲ. ಕಟ್ಟಡದ ಶಕ್ತಿ ಅಷ್ಟು!

ಈ ಕಟ್ಟಡವು ಅನೇಕ ಯೋಜನೆಗಳಿಗೆ ಉಪಯೋಗಿಸಲ್ಪಟ್ಟಿದೆ. ಬೀಸುವ ಗಾಳಿ, ಕಾಸ್ಮಿಕ್ ಕಿರಣಗಳ ಸಂಶೋಧನೆಗೆ ಆನೇಕರು ಬರುತ್ತಾರೆ.

ಒಂದು ಎಲೆಕ್ಟ್ರಾನಿಕ್ ಕಂಪನಿಯವರು ಶ
ವನ್ನು ವರ್ಧಿಸುವ ಒಂದು ಭಾರಿ ಯಂತ್ರವ
೮೬ ನೇ ಅಂತಸ್ತಿನಲ್ಲಿ ಸ್ಥಾಪಿಸಿ, ಕ್ರಿಸ್‌ಮಸ್
ಹಬ್ಬದ ಕೀರ್ತನೆಗಳು ನಗರದಲ್ಲೆಲ್ಲಾ ಉಚ್ಚ ಸ್ವ
ದಲ್ಲಿ ಕೇಳುವಂತೆ ಮಾಡಲು ಪ್ರಯತ್ನಿಸಿದರು.
ಕೀರ್ತನೆಗಳು ನ್ಯೂಯಾರ್ಕಿನ ಅತಿ ದೂರದ
ಕೇಳಿಸಿದರೂ ಕಟ್ಟಡದ ಕೆಳಗಿನ ಬೀದಿಯ
ಕೇಳಿಸಲೇ ಇಲ್ಲವಂತೆ! ಒಮ್ಮೆ ಪೋಲೆಂಡಿ
ಒಲಿಂಪಿಕ್ ಸ್ಕೈಗುಂಪಿನ ಕೆಲವರು ಪಾವಟಿಗೆ
ಮೆಟ್ಟಲುಗಳ ಮೇಲೆ ಐದನೆ ಅಂತಸ್ತಿನಿಂ
೧೦೨ ನೆ ಅಂತಸ್ತಿಗೆ ಪಂದ್ಯಾಟದ ಓಟ ಹೂ
೨೧ ನಿಮಿಷಗಳಲ್ಲಿ ಹೋಗಿ ಸೇರಿದರು. ಅದೊ
ದು ಸಾಹಸ ಕಾರ್ಯ. ಅದೇ ಕಾಲದಲ್ಲಿ ನ್ಯೂ
ಯಾರ್ಕಿನಲ್ಲಿದ ಝೆಕೋಸ್ಲೊವೇಕಿಯಾ ಸ
ಪಂಗಡದವರು ಮೇಲಾಟದ ಪೋಟಾಪೋಟಿ
ಹೊರಟು ನಿಂತರು. ಅಂದಿನಿಂದ ಮೆಟ್ಟಲುಗ
ಮೇಲೆ ಪೈಪೋಟಿಯಿಂದೋಡುವ ಸ್ಪರ್ಧೆ ನಿ
ಧಿಸಲ್ಪಟ್ಟಿದೆ.

ವೀಕ್ಷಣಾಲಯಗಳಿಂದ ಕೆಳಗೆ ನೋಡಿದ
ದೊರಕುವ ದೃಶ್ಯದ ಸೊಬಗು, ಚೆಲುವು ವರ್ಣನಾ
ತೀತವಾಗಿ ನೋಟಕರನ್ನು ಮಂತ್ರಮುಗ್ಧ
ನ್ನಾಗಿ ಮಾಡುತ್ತವೆ. ನಿಚ್ಚಳ ದಿನದಲ್ಲಿ ವಿಹ
ಗಮ ನೋಟವು ೫೦ ಮೈಲುಗಳ ವರೆಗ
ಚಾಚುತ್ತದೆ. ಬರಿ ಕಣ್ಣಿನಿಂದ ೨೫ ಮೈ
ದೂರ ನೋಡಲು ಸಾಧ್ಯ. ದೂರದರ್ಶಕ ಯಂ
ದಿಂದ ೫೦–೮೦ ಮೈಲುಗಳ ವರೆಗೂ ನೋ
ಬಹುದು; ೪೦ ಮೈಲಿಗಳ ಆಚೆ ಸಮುದ್ರದಲ್ಲಿ
ಹಡಗು ಕಾಣಿಸುತ್ತದೆ. ಇದನ್ನು ನೋಡ
ಈಗಾಗಲೇ ೨೧೫ ಲಕ್ಷ ಜನರು ಪ್ರಪಂಚ
ಎಲ್ಲಾ ಕಡೆಗಳಿಂದಲೂ ಬಂದಿದ್ದಾರೆ.

ಈ ಸೌಧದ ಕೀರ್ತಿ, ಮಹಿಮೆಯನ್ನು ಅ
ಕರು ಶ್ಲಾಘಿಸಿದ್ದಾರೆ. ಅದು ಜನಾಂಗ ಜೀವ
ದಲ್ಲಿ ಬೆರೆತು, ನ್ಯೂಯಾರ್ಕ್ ನಗರದ ಮ
ಶ್ರೇಷ್ಠತ್ವದ ಕುರುಹಾಗಿದೆ. ಕಟ್ಟಡಗಳ
ಹಾಸದಲ್ಲಿ ಅಗ್ರಸ್ಥಾನವನ್ನು ಪಡೆದಿದೆ.

ನಗೆಮಲ್ಲಿಗೆ

ಒಬ್ಬ ಸೈಕಲ್ ಸವಾರನನ್ನು ಪೋಲೀಸನೊಬ್ಬನು ತಡೆದು ನಿಲ್ಲಿಸಿ, "ನೀವು ಎಲ್ಲಿ ಹೊರಟಿರುವಿರಿ?" ಎಂದು ಅಧಿಕಾರವಾಣಿಯಿಂದ ಕೇಳಿದನು.

"ಸಮೀಪದ ಹಳ್ಳಿಗೆ ಹೋಗುತ್ತಲಿರುವೆ."

"ಆ ಹಳ್ಳಿ ಎಷ್ಟು ದೂರವಿದೆ?"

"ಬಹುಶಃ ಐದು ಮೈಲಾಗಬಹುದು."

"ನಿಮಗೆ ಬರಲು ಎಷ್ಟು ವೇಳೆ ಹಿಡಿಯುವುದು?"

"ಸುಮಾರು ರಾತ್ರಿ ೮ ಗಂಟೆಗೆ ಬರುವೆನು."

"ಹಾಗಾದರೆ ನಿಮ್ಮ ವಿಳಾಸ ಮತ್ತು ನಿಮ್ಮ ಸಹಿಯನ್ನು ಈ ಪುಸ್ತಕದಲ್ಲಿ ಬರೆಯಿರಿ" ಪೋಲೀಸ್ ಪುಸ್ತಕ ತೆರೆದು ಆವನ ಮುಂದೆ ಚಾಚಿದನು.

"ಯಾಕೆ?" ಸೈಕಲ್ ಸವಾರ ಮರು ಪ್ರಶ್ನಿಸಿದನು.

"ಅರೆ, ಯಾಕೆ ಎನ್ನುವಿರಲ್ಲ! ನಿಮ್ಮ ಸೈಕಲ್ಲಿಗೆ ಲೈಟು ಇಲ್ಲ. ಅದಕ್ಕೆ."

"ಈಗ ಹಗಲಿದೆಯಷ್ಟೆ!"

"ಈಗ ಹಗಲಿದ್ದರೇನಾಯಿತು? ನೀವು ಬರುವುದು ರಾತ್ರಿಯಲ್ಲಿ. ಆಗ ಲೈಟು ಇಲ್ಲದೆ ಬರುವಿರಿ. ಅಂದ ಮೇಲೆ ೮ ಗಂಟೆಯ ವರೆಗೆ ಕುಳಿತು ನಿಮಗಾಗಿ ಕಾಯಲು ನನಗೇನು ಉದ್ಯೋಗವಿಲ್ಲವೆ?"

—"ಅಂಬಿಕಾ" ಹರ್ಡೀಕರ

ಕ್ರಿಕೆಟ್‌ನಲ್ಲಿ ಬಹಳ ಕ್ಯಾಚ್ ಬಿಟ್ಟ ಒಬ್ಬ ಫೀಲ್ಡರ್ ಆಟ ಮುಗಿಯುವ ಹೊತ್ತಿಗೆ ಕ್ಯಾಪ್ಟನ್ನನ ಹತ್ತಿರ ಬಂದು ಹೇಳಿದ: "ಸಾರ್, ನಾನು ಬಸ್ ಕ್ಯಾಚ್ ಮಾಡಬೇಕಾಗಿದೆ. ಬೇಗ ಹೋಗತೀನಿ ಸಾರ್" ಎಂದ.

ಕ್ಯಾಪ್ಟನ್ ಉತ್ತರಿಸಿದ: "ಬೇಗ ಹೋಗು. ಅದನ್ನೂ ಬಿಟ್ಟುಬಿಟ್ಟೀಯೆ."

—ಡಿ. ಆರ್ ಕೃಷ್ಣಮೂರ್ತಿ

ಆತ: ಏನೇ ಕಾಫೀ ಮಾಡ್ಕೊಡ್ತೀಯಾ ಇಲ್ಲಾ ಹೋಟ್ಲಿಗೇ ಹೋಗ್ಲೋ?

ಆಕೆ: ಒಂದು ಐದು ನಿಮಿಷ ಇರೋದಿಕ್ಕಾಗೋದಿಲ್ವೇ?

ಆತ: ಸರಿ! ಹಾಗಾದೆ ಮಾಡ್ಕೊಡ್ತೀಯಾ ಅನ್ನು.

ಆಕೆ: ಅಲ್ಲ, ನಾನೂ ನಿಮ್ಮ ಸಂಗಡ ಬರೋಣಾ ಅಂತ.

—ಡಿ. ಪಿ. ಶ್ರೀನಿವಾಸ್

ಚಿತ್ರಕಾರ: ಹಾಂ! ವಂಡರ್‌ಫುಲ್ ಪೋಸ್! ಇನ್ನೊಂದ್ನಿಮಿಷ ಹಾಗೇ ಇರಿ. ಸ್ಕೆಚ್ ಮಾಡ್ಕೊಂಡ್ಬಿಡ್ತೀನಿ.

"ಸಂಪಾದಕರ ಕಸದ ಬುಟ್ಟಿಯಿಂದ" ಯೆಂಬ ಲೇಖನವೊಂದು, ಯಾವುದೋ ಪತ್ರಿಕೆಯ ಸಂಪಾದಕರಿಗೆ ಬಂದಿತ್ತಂತೆ. ಘಾಟಿ ಸಂಪಾದಕರು ಅವರು; 'ಯಿಂದಾ' ಎಂಬುದನ್ನು 'ಗೆ–' ಎಂದು ತಿದ್ದಿ, ಸಲೀಸಾಗಿ, ಕಸದ ಬುಟ್ಟಿಗೊಗೆದರಂತೆ!

— ಜಿ. ಕೆ. ನಾಡಿಗ್

ಗಂಡ ಮಲಗಿದ್ದ ಪಕ್ಕದ ಕೋಣೆಯಿಂದ ಏನೋ 'ದಪ್' ಎಂದು ಬಿದ್ದ ಹಾಗೆ ಸದ್ದಾಯಿತು. ಈಚೆ ಕಡೆ ಕೋಣೆಯಲ್ಲಿದ್ದ ಆತನ ಹೆಂಡತಿ ಗುರುಗುಟ್ಟಿದಳು :

"ಏನ್ರಿ ಅದು, ಬಿದ್ದದ್ದು?"

"ಏನಿಲ್ಲ ಕಣೆ, ನಾನು ಹೊದ್ದುಕೊಂಡಿದ್ದ ದುಪ್ಪಟ ಕೆಳಗೆ ಬಿತ್ತು ಅಷ್ಟೆ," ಎಂದು ಗಂಡ ಉತ್ತರಿಸಿದ.

"ನಿಮ್ಮ ತಲೆ! ದುಪ್ಪಟ ಕೆಳಗೆ ಬಿದ್ದರೆ ಅಷ್ಟು ಸದ್ದಾಗುತ್ತದೆಯೆ?"

"ಸರಿ, ನೋಡು, ಅದರೊಳಗೆ ನಾನೂ ಇದ್ದೆ!"

— ಜಿ. ಕೆ. ನಾಡಿಗ್



ಮರ್ಕಟ ಚಮತ್ಕಾರ

ಇಬ್ಬರು ಮಿತ್ರರೊಳಗೆ ದಾನದ ಮಹಿಮೆಯ ಕುರಿತು ಸಂಭಾಷಣೆ ಸಾಗಿತ್ತು. ಓರ್ವ ಮಿತ್ರನೆಂದ: "ನನಗೆ ಪರಮಾತ್ಮನಲ್ಲಿ ಅಪಾರ ವಿಶ್ವಾಸವಿದೆ. ನಾನು ಒಂದು ವಸ್ತುವನ್ನಿತ್ತರೆ ಆತ ನನಗೆ ಎರಡು ವಸ್ತುಗಳನ್ನೀಯುತ್ತಾನೆ.

"ಅದು ಹೇಗೆ?" ಮತ್ತೋರ್ವ ಮಿತ್ರ ಕೇಳಿದ.

"ಕೆಲವು ದಿನಗಳ ಹಿಂದೆ ನಾನೊಂದು ಖೋಟಾ ನಾಣ್ಯವನ್ನು ದಾನವಾಗಿತ್ತೆ. ಮರುದಿನ ನನ್ನ ಅಂಗಡಿಗೆ ಮೊತ್ತಮೊದಲಾಗಿ ಬಂದ ಗ್ರಾಹಕನು ಎರಡು ಖೋಟಾ ನಾಣ್ಯಗಳನ್ನಿತ್ತು ಹೋದ.... ನನ್ನ ಮಗಳಿಗೆ ಮದುವೆ ಮಾಡಿದೆ. ಮದುವೆಯಾದ ಎರಡು ತಿಂಗಳುಗಳೊಳಗೇ ನನ್ನ ಮಗಳು ಮತ್ತು ಅಳಿಯ ನನ್ನ ಮನೆಗೆ ವಾಪಾಸು ಬಂದು, ಖಾಯಂ ಆಗಿ ನೆಲಸಿದ್ದಾರೆ. ಈ ರೀತಿ ನನಗೆ ಯಾವಾಗಲೂ ಒಂದಕ್ಕೆ ಎರಡು ಸಿಗುತ್ತಿರುತ್ತದೆ."

— ಎಸ್. ಎಸ್. ಬಲ್ಲಾಳ

ಹೆಂಡದ ವಾಸನೆ ಇಡುಗುವ ರೈತನೊಬ್ಬ ಬಸ್ ಹತ್ತಿ ಪಾದ್ರಿಯ ಹತ್ತಿರ ಕುಳಿತ. ಪಾದ್ರಿ ಸೊಳ್ಳೆ ಅರಳಿಸಿ ಹೇಳಿದ: "ನೋಡಯ್ಯ ನೀನು ಖಂಡಿತ ನೆಟ್ಟಗೆ ನರಕಕ್ಕೆ ಹೋಗುವಿ."

ಕುಡುಕ ಗಡಿಬಿಡಿಯಿಂದೇಳುತ್ತ ಹೇಳಿದ: "ಉಪಕಾರವಾಯಿತು ನೀವು ಹೇಳಿದ್ದು. ನಾನು ತಪ್ಪು ಬಸ್ಸು ಹತ್ತಿದ್ದೇನೆಂತ ಕಾಣುತ್ತೆ."

ಫ್ರಾನ್ಸಿನ ಸ್ಕಾಟ್ಲೆಂಡ್ ಯಾರ್ಡೆನಿಸಿದ "ಶುರಿಟೆ"ಯ
ಪ್ರಥಮ ಪ್ರಮುಖನ ಅಪೂರ್ವ ಕಥೆ

ಪತ್ತೇದಾರ ಸರದಾರನಾದ ಕಳ್ಳ

ಮುರಲೀಧರ

ಪ್ರ[illegible] ಗುಪ್ತ ಪೋಲೀಸ್ ದಳದ ಅಧಿಕಾರಿಯಾಗಿ ಸೇರುವಲ್ಲಿರುವ ಸಂಭವವಿದೆಯೇ? [illegible] ಕಲ್ಪನೆಯಾಗಿ ಕಾಣಿಸುವುದು. ನಾವೀಗ ಜಗತ್ತಿನ ಅತಿ ಸಮರ್ಥ ಗುಪ್ತ ಪೋಲೀಸ್ ದಳದ ಪ್ರಪ್ರಥಮ ಅಧಿಪತಿಯೇ ಒಬ್ಬ ಖದೀಮ ಕಳ್ಳನಾಗಿದ್ದ. ಆತನ ಹೆಸರು ಫ್ರಾನ್ಸಿಸ್ ಯೂಜಿನ್ ವಿಡೋಕ್. ಫ್ರಾನ್ಸಿನ ಗುಪ್ತ ಪೋಲೀಸ್ ದಳವಾದ "ಶುರಿಟೆ"ಯ ಅಧಿಕಾರಿಯಾಗಿ ಹದಿನೆಂಟು ವರ್ಷ ಕೆಲಸ ಮಾಡಿದ ಅವನು ಕಳ್ಳತನದಲ್ಲಿ ತೋರಿದಷ್ಟೇ ಜಾಣ್ಮೆ ಪತ್ತೇದಾರಿಕೆಯಲ್ಲೂ [illegible] ಪ್ರಾವೀಣ್ಯವನ್ನು ತೋರಿಸಿದ. [illegible] ಆತ್ಮಚರಿತ್ರೆ ಬರೆದ ಪ್ರಪ್ರಥಮ ಕಳ್ಳನೂ ಅವನೇ ಇರಬೇಕು.

ಫ್ರೆಂಚ್ ಇತಿಹಾಸದ ಕೋಲಾಹಲಮಯ ಸಂಧಿಯಲ್ಲಿ, ವಿಡೋಕ್ ೧೭೭೫ ರಲ್ಲಿ ಹುಟ್ಟಿದ. ಅರಾಸ್ ಎಂಬ ಪಟ್ಟಣದಲ್ಲಿ ಅವನ ತಾಯಿ ಒಂದು ಬ್ರೆಡ್ ಅಂಗಡಿ ಇಟ್ಟಿದ್ದಳು. ತನ್ನ ಜನ್ಮ ಸಿದ್ಧ ಕೈಚಳಕವನ್ನಾತ ತನ್ನ ತಾಯಿಯ ಮೇಲೆಯೇ ಪ್ರಥಮತಃ ಪ್ರಯೋಗಿಸಿದ. ಅಂಗಡಿಯ ಬೀಗ ಹಾಕಿದ ಗಲ್ಲೆಯೊಳಗಿನ ನಾಣ್ಯಗಳನ್ನು ಅಪಹರಿಸಲು ಮಾಡಿದ್ದ [illegible] ಮೇಣ ಹಚ್ಚಿದ ಗರಿಗಳನ್ನು [illegible]

ವನ್ನು ಹೊರತೆಗೆಯುತ್ತಿದ್ದ. ಸಾಣ್ಯಹರಣದ ಕಲೆಯಲ್ಲಿ ಸಾಕಷ್ಟು ಪಾರಂಗತನಾದ ಮೇಲೆ ತನ್ನ ಪ್ರತಿಭೆಗೆ ಅರಾಸ್ ಪಟ ಣ ತೀರ ಚಿಕ್ಕದೆನಿಸಿ ವಿದೋಕ್ ಒಂದು ದಿನ ಅವಕಾಶಗಳ ನಾಡಾದ ಅಮೇರಿಕಕ್ಕೆ ಹೋಗಲೆಂದು ಮನೆಯಿಂದ ಓಡಿ ಹೋದ. ಅದಕ್ಕೆ ಅಗತ್ಯವಾದ ಹಣಕ್ಕಾಗಿ ತನ್ನ ತಾಯಿಯ ಪೆಟಿಗೆಯ ಮೇಲೆಯೆ ತನ್ನ ಪ್ರಥಮ ದೊಡ್ಡ ದರೋಡೆಯ ಪ್ರಯೋಗವನ್ನು ಮಾಡಿದ.

ಆದರೆ ಅಮೇರಿಕಕ್ಕೆ ಹೋಗುವುದು ಅವನ ಹಣೆಯಲ್ಲಿ ಬರೆದಿರಲಿಲ್ಲ. ಈ ಎಳೆಯ ಕಳ್ಳನಿಗೆ ಅವನಿಗಿಂತಲೂ ಜಾಣರಾದ ಕಳ್ಳರು ಲೋಕದಲ್ಲಿ ಸಾಕಷ್ಟು ಇದ್ದಾರೆಂದು ಕಲಿಯುವ ಪ್ರಸಂಗ ಬಂತು. ಆಸ್ಟೆಂಡಿನಲ್ಲಿ ಅಮೇರಿಕಕ್ಕೆ ಹೋಗುವ ಹಡಗು ಹಿಡಿಯಲು ತನ್ನಲ್ಲಿದ್ದ ಹಣ ಸಾಲದಾಗಿ ಚಡಪಡಿಸುತ್ತಿದ್ದ ವಿದೋಕನನ್ನು ಉಪಕಾರಿಯಾದ ಅಪರಿಚಿತನೊಬ್ಬ ಅಮೇರಿಕಕ್ಕೆ ಹೋಗುವ ಸುಲಭೋಪಾಯವನ್ನು ರಹಸ್ಯವಾಗಿ ತಿಳಿಸಲು ಒಂದು ಹೆಂಡದಂಗಡಿಗೆ ಕರೆದೊಯ್ದ. ವಿದೋಕನಿಗೆ ತಿರುಗಿ ಪ್ರಜ್ಞೆ ಬಂದಾಗ ಆತ ಒಂದು ಹಗ್ಗದ ರಾಶಿಯ ಮೇಲೆ ಬಿದ್ದಿದ್ದ. ಅವನ ಜೇಬಿನ ಭಾರ ಸಂಪೂರ್ಣವಾಗಿ ಇಳಿದುಹೋಗಿತ್ತು.

ವಿದೋಕನ ಸಾಹಸಿ ಜೀವ ಇದರಿಂದೇನೂ ನಿಶ್ಚೇಷ್ಟವಾಗಲಿಲ್ಲ. ಆತ ಸರ್ಕಸ್ ಸೇರಿದ. ಅವನನ್ನು ಡೊಂಬನಾಗಿ ತರಬೇತು ಮಾಡುವುದು ಪಾಲಕನಿಗೆ ಸಾಧ್ಯವಾಗಲಿಲ್ಲ. ಅನಂತರ ಇಡೀ ಹಕ್ಕಿಗಳನ್ನೂ ಕಲ್ಲುಗಳನ್ನೂ ನುಂಗುವ "ಕಾಡುಮನುಷ್ಯ" ನಾಗಿ ದುಡಿಯುವ ಅವನ ಯತ್ನವೂ ವ್ಯರ್ಥವಾಯಿತು.

ಅನಂತರ ಆತ ಒಬ್ಬ ಮೋಸಗಾರ ಕುಂಟ ವೈದ್ಯನೊಡನೆ ಊರೂರು ಅಲೆಯುತ್ತ ಸ್ವಗ್ರಾಮಕ್ಕೆ ಬಂದ. ಬೇಗನೆ ಊರಲ್ಲಿ ಅವನಿಗೆ ಪ್ರಿಯತಮೆಯರು ಸಿಕ್ಕಿದರು. ಅವರಿಗೋಸ್ಕರ ಬಡಿದಾಟಗಳಾದವು. ಕೊನೆಗೆ ಅವನಿಗೆ ಸೆರೆಮನೆವಾಸ ಪ್ರಾಪ್ತವಾಯಿತು. ಅಂದಿನಿಂದ ಹೆಂಗಸರು ಅವನ ಜೀವನದಲ್ಲಿ ನಿರಂತರವಾಗಿ ಬಂದು ಹೋಗುತ್ತಾರೆ. ಅವನು ಫ್ರಾನ್ಸಿನ ಅಸಂಖ್ಯ ಸೆರೆಮನೆಗಳನ್ನು ಹೊಕ್ಕು ಹೊರಡುತ್ತಾನೆ.

ಒಬ್ಬಳ ದೆಸೆಯಿಂದ ಸೆರೆಮನೆ ಸೇರಿದ ಅವನು ಇನ್ನೊಬ್ಬಳ ಸಹಾಯದಿಂದ ಪಾರಾಗಿ ಅವಳನ್ನು ಮದುವೆಯಾಗುತ್ತಾನೆ. ಅವಳ ಮತ್ಸರ ತಾಳಲಾರದೆ ಪೋಲೀಸರ ಬದಲು ಅವಳಿಂದ ಕಣ್ಮರೆಯಾಗಬೇಕಾಗುತ್ತದೆ. ಅವನು ಈ ನಡುವೆ ಸೈನ್ಯ ಸೇರುವುದನ್ನು ಕಾಣುತ್ತೇವೆ. ಫ್ರಾನ್ಸಿನ ಬದಲಾಗುತ್ತಿರುವ ರಾಜಕಾರಣದೊಡನೆ ಪಕ್ಷ ಬದಲಿಸುತ್ತ ಲೆಫ್ಟಿನಂಟ್ ಪದವಿಯವರೆಗೇರಿದ ವಿದೋಕ್ ತನ್ನ ಸಾಹಸಜೀವನಕ್ಕೆ ಹೊಸ ಹೊಸ ಅನುಭವಗಳನ್ನು ಸೇರಿಸುತ್ತ ಯುರೋಪಿನೆಲ್ಲೆಲ್ಲ ಅಲೆದಾಡಿದ. ಬ್ರುಸೆಲ್ಸಿನಲ್ಲಿ ತಾನು ದೊಡ್ಡ ಸೈನ್ಯಾಧಿಕಾರಿಯೆಂದು ನಟಿಸುತ್ತ ಶ್ರೀಮಂತ ಮಹಿಳೆಯೊಬ್ಬಳನ್ನು ಮೋಹಪಾಶದಲ್ಲಿ ಕೆಡವಿ ಅವಳನ್ನು ಮದುವೆಯಾಗುವ ಹಂಚಿಕೆ ಹೂಡಿದ. ಆದರೆ ಅವನಲ್ಲಿ ಯಾವುದೋ ಒಂದು ಸಜ್ಜನಿಕೆಯ ರೇಖೆ ಇತ್ತು. ಕೊನೆಯ ಗಳಿಗೆಯಲ್ಲಿ ತನ್ನ ಧೈರ್ಯ ಕುಂದಿ ಹೋಗಿ ಅವಳ ಮುಂದೆ ತಾನು ಮೊದಲೇ ಮದುವೆಯಾದವನೆಂದು ತಪ್ಪೊಪ್ಪಿಕೊಂಡ ಸನ್ನಿವೇಶವನ್ನಾತ ತನ್ನ ಆತ್ಮಕಥೆಯಲ್ಲಿ ಮನೋರಂಜಕವಾಗಿ ವರ್ಣಿಸಿದ್ದಾನೆ.

ಸೈನ್ಯದಿಂದ ಹೊರಬಿದ್ದ ಮೇಲೆ ಮರಳಿ ಅವನ ಹೆಣ್ಣು–ಸೆರೆಮನೆಗಳ ಆವರ್ತ ಪ್ರಾರಂಭವಾಗುತ್ತದೆ. ಆದರೆ ಯಾವ ಹೆಣ್ಣಿಗೂ ಅವನನ್ನು ಹಿಡಿದಿಟ್ಟುಕೊಳ್ಳುವುದು ಸಾಧ್ಯವಾಗಲಿಲ್ಲ. ಫ್ರಾಂಸ್ಯೆನ್ ಎಂಬ ತರುಣಿಯೊಬ್ಬಳು ಅವನನ್ನೊಮ್ಮೆ ಸೆರೆಮನೆಯಿಂದ ಪಾರು ಮಾಡಿದಳು. ಆದರೆ ಹೊರಬಂದವನೇ ಆತ ತನ್ನ ಹಳೆಯ ಪ್ರೇಯಸಿಯೊಬ್ಬಳ ಮನೆಗೆ ಹೋದ. ಉರಿದೆದ್ದ ಆ ತರುಣಿ ಅವನನ್ನು ಪೋಲೀಸರಿಗೊಪ್ಪಿಸಿ ಸೇಡು ತೀರಿಸಿಕೊಂಡಳು.

ವಿದೋಕನ ಧೈರ್ಯ ಅಸಾಧಾರಣವಾಗಿತ್ತು

ಒಂದು ದೊಡ್ಡ ಪ್ರಕರಣದಲ್ಲಿ ಅವನಿಗೆ ಲಿಲ್ ನಗರದಲ್ಲಿ ಹನ್ನೆರಡು ವರ್ಷ ಶಿಕ್ಷೆಯಾಯಿತು. ಆದರೆ ಈ ಅವಧಿಯಲ್ಲಾತ ಒಳಗಿದ್ದುದಕ್ಕಿಂತ ಹೊರಗಿದ್ದುದೇ ಹೆಚ್ಚು. ಅವನ ಮಾಯಾವಿತನ ಕಥೆಯಾಗಿ ಹೋಗಿತ್ತು. ಅರಾಸಿನಲ್ಲಿ ಪೋಲೀಸರು ಎಳೆದೊಯ್ಯುತ್ತಿದ್ದಾಗ ತೋಳದ ರೂಪ ಧರಿಸಿ ಓಡಿಹೋದನೆಂದು ವಾರ್ತೆ ಹಬ್ಬಿತ್ತು. ಇನ್ನೊಮ್ಮೆ ಹಿಡಿದಾಗ ವಿದೋಕ್ ಹುಲ್ಲಿನ ಮೂಟೆಯ ರೂಪ ತಾಳಿದನೆಂದು ಒಬ್ಬ ಪೋಲೀಸನೇ ನ್ಯಾಯಾಲಯದೆದುರು ಪ್ರತಿಜ್ಞೆ ಮಾಡಿ ಹೇಳಿದ.

ಓಡುವ ಬಂಡಿಯಿಂದ ಹಾರಿ ಪಾರಾಗುವುದು, ಹಗ್ಗದ ಮೂಲಕ, ಸರಳು ಕತ್ತರಿಸಿ, ಸುರಂಗ ಮಾರ್ಗವನ್ನು ತೋಡಿ, ಕಾವಲುಗಾರರಿಗೆ ಹೆಂಡ ಕುಡಿಸಿ ಸೆರೆಮನೆಯಿಂದ ಕಣ್ಮರೆಯಾಗುವುದು ಅವನ ನಿತ್ಯ ವ್ಯವಸಾಯವಾಗಿತ್ತು. ಒಂದು ಸಲವಂತೂ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಕಾಯುತ್ತಿದ್ದಾಗ ನಿರ್ಭಯವಾಗಿ ಆತ ಕಾವಲುಗಾರ ತೆಗೆದಿಟ್ಟಿದ್ದ ಕೋಟನ್ನೂ ಟೊಪ್ಪಿಯನ್ನೂ ಧರಿಸಿ ಸಾವಕಾಶವಾಗಿ ಹೊರಟುಹೋಗಿಬಿಟ್ಟ. ಅರಾಸಿನ ಪೋಲೀಸರು ಅವನಿಗಾಗಿ ಆಕಾಶಪಾತಳವನ್ನರಸುತ್ತಿದ್ದಾಗ ಅದೇ ಊರಲ್ಲಿ ಒಂದು ಆಸ್ಟ್ರಿಯನ್ ಕುಟುಂಬದ ಸಂಗಡ ಡಾಣಾಡಂಗುರವಾಗಿ ಒಂದು ವರ್ಷ ಕಾಲ ವಾಸಿಸುತ್ತಿದ್ದ. ಅವನನ್ನು ಪೋಲೀಸರಾಗಲಿ ಅವನ ಅಸಂಖ್ಯ ಪ್ರೇಯಸಿಯರಲ್ಲಿ ಯಾರೊಬ್ಬರಾಗಲಿ ಗುರುತಿಸಲಿಲ್ಲ. ಒಮ್ಮೆ ಸಂನ್ಯಾಸಿಯ ವೇಷದಲ್ಲಿ ಹಳ್ಳಿಗಾಡಿನಲ್ಲಿ ತಲೆಮರೆಸಿಕೊಂಡಿದ್ದಾಗ ವಿದೋಕನಿಗೆ ಆಶ್ರಯವಿತ್ತ ಒಬ್ಬ ರೈತ ರಾತ್ರಿ ಈ ಕಪಟ ಸಂನ್ಯಾಸಿಯನ್ನು ತನ್ನಿಬ್ಬರು ತರುಣಿಯರಾದ ಮಕ್ಕಳ ಸಂಗಡ ಮಲಗಿಸಿದ. "ಅಯ್ಯೋ! ಎಂಥ ಅಗ್ನಿಪರೀಕ್ಷೆ!" ಎಂದಿದ್ದಾನೆ ವಿದೋಕ್ ಆ ಸನ್ನಿವೇಶವನ್ನು ಸ್ಮರಿಸುತ್ತ.

ಕೊನೆಗೆ ವಿದೋಕನಂಥ ದುಃಸಾಹಸಿಗೂ ಈ ಕಣ್ಣುಮುಚ್ಚಾಲೆ ಸಾಕಾಗಿಹೋಯಿತು. ಅವನಿಗೀಗ ೩೫ ಮೀರಿತ್ತು. ಪ್ಯಾರಿಸಿನ ಕಳ್ಳಕಾಕರ ನಡುವೆ ಭೂಗತನಾಗಿ ಜೀವಿಸುತ್ತಿದ್ದ ಅವನು ಹಲವು ಹೆಂಗಸರ ಎಳೆದಾಟಕ್ಕೆ ಸಿಕ್ಕಿ ತೊಳಲಾಡಬೇಕಾಗಿತ್ತು. ಅವನ ಹಿಂದಿನ ಹೆಂಡತಿ ಅವನನ್ನು ಗುರುತಿಸಿದ್ದರಿಂದ ಅವಳ ಬಾಯಿ ಮುಚ್ಚಿಸಲು ಅವಳ ಮತ್ತು ಅವಳ ಬಂಧುಬಾಂಧವರ ಹೊಟ್ಟೆಹೊರೆಯುವ ಪ್ರಸಂಗ ಅವನಿಗೆದುರಾಯಿತು. ಅವನ ಹಳೆಯ ಗೆಳೆಯರೂ ಅವನನ್ನು ಪೀಡಿಸುತ್ತಿದ್ದರು. ಈಗ ಅವನಿಗೆ ಶಾಂತಿ ಬೇಕಾಗಿತ್ತು. ಅದು ಸಿಕ್ಕಿದರೆ ಅವನು ಸಂಭಾವಿತನಾಗಿ ಒಂದು ಅರಿವೆ ಅಂಗಡಿ ತೆರೆದು ಬದುಕಬೇಕೆಂದು ಬಯಸಿದ್ದ. ಅದೀಗ ಸಾಧ್ಯವಿರಲಿಲ್ಲ.

ಅವನು ಒಂದು ಗಟ್ಟಿಯಾದ ನಿರ್ಣಯಕ್ಕೆ ಬಂದ. ಪ್ಯಾರೀಸಿನ ಪೋಲೀಸ್ ವರಿಷ್ಠನ ಕಡೆ ಹೋಗಿ ಅವನು ತನ್ನ "ತುರುಪು"ಗಳನ್ನೆಲ್ಲ ತೋರಿಸಿದ. ತನ್ನನ್ನು ಕ್ಷಮಿಸಿ, ಶಿಕ್ಷೆಯನ್ನೆಲ್ಲ ರದ್ದುಪಡಿಸಿದ್ದಾದರೆ ಫ್ರಾನ್ಸಿನ ಕಳ್ಳಕಾಕರನ್ನೆಲ್ಲ ಹಿಡಿದು ಕೊಡುವೆನೆಂದು ಮಾತು ಕೊಟ್ಟ. ಪೋಲೀಸ್ ಅಧಿಕಾರಿಗಳು ಒಪ್ಪಿದರು.

ಹೀಗೆ ೧೮೦೯ರಲ್ಲಿ ಈ ತಸ್ಕರಾಗ್ರಣಿ ಪೋಲೀಸ್ ಅಧಿಕಾರಿಯಾಗಿ ಮಾರ್ಪಟ್ಟ. ಅವನ ಕೈಕೆಳಗೆ "ನಿವೃತ್ತ" ಕಳ್ಳಕಾಕರ ಒಂದು ತಂಡವೇ ಸಂಘಟಿತವಾಯಿತು. ಇಂದು ಬ್ರಿಟಿಶ್ ಗುಪ್ತ ಪೋಲೀಸ್ ದಳವಾದ ಸ್ಕಾಟ್ಲೆಂಡ್ ಯಾರ್ಡಿಗೆ ಸರಿಮಿಗಿಲೆನಿಸಿರುವ ಪ್ಯಾರಿಸಿನ "ಶುರಿಟೆ" ದಳ ಹೀಗೆ ತಲೆಯೆತ್ತಿತು. ಕಾಲಾಂತರದಲ್ಲಿ ವಿದೋಕ್ ಅದರ ವರಿಷ್ಠನಾದ. ೧೮ ವರ್ಷ ಕಾಲ ಆತ ಈ ಪತ್ತೇದಾರ ದಳದಲ್ಲಿ ಮಾಡಿದ ಕಾರ್ಯಗಳು ಅವನ ಅಪರಾಧ ಜೀವನದಲ್ಲಿ ಮಾಡಿದ ಸಾಹಸಗಳಷ್ಟೇ ಅದ್ಭುತವಾಗಿದ್ದವು. ಕಳ ಕಾಕ ಧೂರ್ತರ ಮನೋವೃತ್ತಿಯನ್ನಾತ ಅಂಗೈ ನೆಲ್ಲಿಯಷ್ಟು ಚೆನ್ನಾಗಿ ಬಲ್ಲವನಾಗಿದ್ದ. ಪ್ಯಾರಿಸಿನ ರಾತ್ರಿಂಚರರ ಗೊತ್ತುಗುರಿಗಳೆಲ್ಲ ಅವನಿಗೆ ಪರಿಚಿತವಾಗಿದ್ದವು. ಹೆಂಡದಂಗಡಿಗಳಲ್ಲಿ

ವೇಷಾಂತರದಲ್ಲಿ ಅಪರಾಧಿಗಳೊಡನೆ ಕುಳಿತು ರಂಗಾಗಿ ಮಾತಾಡಿ, ಇಲ್ಲವೆ ಅವರನ್ನು ಕೆರಳಿಸಿ ಅವರ ಬಾಯಿಂದ ಗುಟ್ಟುಗಳನ್ನು ಹೊರಪಡಿಸುತ್ತಿದ್ದ. ಇಂಥವನು ಪೋಲೀಸರಿಗೆ ಬೇಕಾಗಿದ್ದಾನೆಂದರೆ, ಈತ ಅವನ ಪ್ರೇಯಸಿಯ ಮನೆಗೆ ಹೋಗಿ ಅವಳ ಪ್ರೇಮಿಕನನ್ನು ಪೋಲೀಸರು ಹಿಡಿದಿದ್ದಾರೆಂದು ಹೇಳಿ, ತಾನೇ ಅವಳ ಪ್ರೇಮಿಕನಾಗಿ ಅವಳ ಹಿಂದಿನ ಪ್ರೇಮಿಕ ಮತ್ತು ಅವನ ಸಂಗಡಿಗರ ಸಂಗತಿಗಳನ್ನೆಲ್ಲ ತಿಳಿದುಕೊಂಡು ಇಡೀ ಗೊಂಚಲನ್ನೇ ಕೊಯ್ದು ತರುತ್ತಿದ್ದ.

ಒಂದು ಸಲ ಒಂದಾನೊಂದು ಪಾಪಪೂರಿತ ಓಣಿಯಲ್ಲಿ ನಡೆಯುವ ದುಷ್ಕರ್ಮಗಳನ್ನು ಪತ್ತೆ ಹಚ್ಚುವ ಹೊಣೆ ಅವನಿಗೊಪ್ಪಿಸಲ್ಪಟ್ಟಿತು. ಆ ಓಣಿಯಲೊಬ್ಬಾಕೆ ಗೂನಿ ವಾಸಿಸುತ್ತಾಳೆಂದು ವಿದೋಕನಿಗೆ ತಿಳಿಯಿತು. "ತುಂಬ ಅನುಕೂಲ!" ಎಂದುಕೊಂಡನಾತ. ಅಂಗವಿಕಲರಿಗೆಲ್ಲ ಮಂದಿಯ ಉಸಾಬರಿ, ಅದರಲ್ಲೂ ಇತರರ ಪ್ರೇಮ ಪ್ರಕರಣಗಳ ಮೇಲಿನ ಆಸ್ಥೆ ಜಾಸ್ತಿ ಎಂಬುದು ಅವನ ಅಭಿಪ್ರಾಯವಾಗಿತ್ತು. ಅವರು ಹರಟೆಮಲ್ಲಿಯರೆಂದೂ ಅವನಿಗೆ ಗೊತ್ತಿತ್ತು. ಒಂದು ದಿನ ಮುದುಕನ ವೇಷ ಧರಿಸಿ ಒಂದು ಹಾಲಿಂನಗಡಿಯಲ್ಲಿ ಕುಳಿತ. ಹರಟೆಗೆ ಅದಕ್ಕಿಂತ ಒಳ್ಳೇ ಜಾಗ ಬೇರಿಲ್ಲೆಂದು ಅವನ ತರ್ಕ. ಅವನೆಣಿಸಿದಂತೆಯೆ ಆ ಗೂನಿ ಅಲ್ಲಿ ಬಂದಳು. ಅವಳನ್ನು ಉಪಾಯವಾಗಿ ಮಾತಾಡಿಸಿ ಅವಳ ಓಣಿಯಲ್ಲಿ ಯಾರು ಯಾವ ಪಾಪ ವ್ಯಾಪಾರಗಳಲ್ಲಿ ಮಗ್ನರಾಗಿದ್ದಾರೆಂದು ಅರಿತುಕೊಂಡ. ಎಲ್ಲರನ್ನೂ ಹಿಡಿದ.

ವಿದೋಕನ ಪದ್ಧತಿಗಳು ತುಂಬಾ ಒರಟಾಗಿದ್ದವು ನಿಜ. ಕೆಲವೊಮ್ಮೆ ಅವನ ಕ್ರಮಗಳಿಂದ ಸರಕಾರಕ್ಕೇ ಉಭಯಸಂಕಟವೊದಗುತ್ತಿತ್ತು. ಆದರೆ ಅಂದಿನ ದಿನಗಳೇ ಹಾಗಿದ್ದವು. ಕ್ರಾಂತಿಯ ನಂತರದ ಅಶಾಂತಿಯ ದಿನಗಳಲ್ಲಿ ಫ್ರಾನ್ಸ್ ದುರ್ಜನರಿಂದ ತುಂಬಿತುಳುಕುತ್ತಿತ್ತು. ಆದರೆ ಬರಬರುತ್ತ ಸುಧಾರಿಸಿದ ವಿಧಾನಗಳು ಬೇಕಾದವು. ಸಂಗಡಲೇ ವಿದೋಕನ ಅ[illegible]ನತಿಯೂ ಪ್ರಾರಂಭವಾಯಿತು. ಇನ್ನೊ[illegible] ಸುಧಾರಿಸಿದ ಅಪರಾಧಿಯಾದ ಕೋಕೊ[illegible] ಲಾಕರ್ ಗುಪ್ತ ಪೋಲೀಸ್ ದಳದಲ್ಲಿ ಸೇ[illegible] ಉಚ್ಛ್ರಾಯಕ್ಕೇರತೊಡಗಿದ. ಅವನಿಗ[illegible] ವಿದೋಕನಿಗೂ ಬಹಳ ಮಾತ್ಸರ್ಯ. ಮಾತಿ[illegible] ವೈಖರಿ, ಬುದ್ಧಿಯ ಚುರುಕು ಕೋಕೋ[illegible] ಕಡಮೆ ಎಂದು ವಿದೋಕ್ ಅವನನ್ನು ಎದುರ[illegible] ಎದುರು ತಿರಸ್ಕರಿಸುತ್ತಿದ್ದ. ಆದರೆ ಕೋಕೊ[illegible] ವಿದೋಕನಂತೆ ಪಾಪವನ್ನು ಬಿಡದೆನೇ ಪಾಟಿಗ[illegible] ಬೇಟೆಗೆ ಕೈಹಾಕಿದವನಾಗಿರದೆ, ನಿಜವಾ[illegible] ಹೃದಯ ಪರಿವರ್ತನೆ ಹೊಂದಿದ ಅಪರಾ[illegible]ಯಾಗಿದ್ದ. ಹೊಸ ಕಾಲಕ್ಕೆ ಅವನೇ ಸರಿಯಾ[illegible]ವನಿದ್ದುದರಿಂದ ಅವನು ಗುಪ್ತಪೋಲೀಸ್ ದಳ[illegible] ಚತುರ್ಮೂರ್ತಿಗಳಲ್ಲೊಬ್ಬನಾಗುವುದನ್ನು ತ[illegible]ಯುವುದು ವಿದೋಕನಿಂದಾಗಲಿಲ್ಲ. ವಿದೋ[illegible] ೧೮೨೭ರಲ್ಲಿ ರಾಜೀನಾಮೆ ಕೊಟ್ಟು ಹೊರಬಂ[illegible]

ವಿದೋಕನ ತಾರೆ ಇಳಿಮುಖವಾಗಿತ[illegible] ಪೋಲೀಸ್ ದಳವನ್ನು ಬಿಟ್ಟಮೇಲೆ ಒಂ[illegible] ಕಾಗದ ಕಾರಖಾನೆ ತೆರೆದ. ಅದರ ಕೆಲಸಗಾ[illegible]ರೆಲ್ಲ ಹಳೇ ಅಪರಾಧಿಗಳಾಗಿದ್ದರು. ಆ[illegible] ವ್ಯಾಪಾರ ವಿದೋಕನ ರಂಗವಾಗಿರಲಿಲ್ಲ. ಕಾ[illegible]ಖಾನೆ ದಿವಾಳಿಯೆದ್ದಿತು. ೧೮೩೨ ರಲ್ಲಿ ಅ[illegible] ತಿರುಗಿ ಶುರಿಟೆಯನ್ನು ಸೇರಿದ. ಆದರೆ ತ[illegible] ಕಳೆದುಹೋದ ಪ್ರತಿಷ್ಠೆಯನ್ನು ಪುನಃ ಸಂಪಾ[illegible]ದಿಸುವ ಸಲುವಾಗಿ ಒಂದು ಸುಳ್ಳು ದರೋ[illegible]ಯನ್ನು ಮಾಡಿಸಿ ಆಮೇಲೆ ಅದನ್ನು ಪ[illegible] ಹಚ್ಚಿದ ಅವನ ಕಪಟ ಹೊರಪಟ್ಟದ್ದರಿಂದ ಅ[illegible]ನನ್ನು ಕೆಲಸದಿಂದ ತೆಗೆದು ಹಾಕಿದರು.

ಹೀಗೆ ಮುಕ್ತಾಯವಾಯಿತು, ಕಳ್ಳ ಪತ್ತೇ[illegible]ರನ ಅಸಾಧಾರಣ ಜೀವನ. ಬಡತನದ[illegible] ಜೀವನಯಾಪನೆ ಮಾಡುತ್ತ ೧೮೫೭ [illegible] ವಿದೋಕ ಸತ್ತ. ಅವನ ಆತ್ಮಚರಿತ್ರೆಯ[illegible] ಬೇರಾರೋ ಅವನಿಗಾಗಿ ಬರೆದರೆಂದು ನಂಬಲ[illegible]ಗಿದ್ದರೂ ಅದು ಅತ್ಯಂತ ಸ್ವಾರಸ್ಯವಾಗಿದೆ.

ಇದುವೆ ಜೀವ, ಇದು ಜೀವನ

ನನ್ನ ನೆಚ್ಚಿನ ಸಹಪಾಠಿ ಉಷಾ. ಒಂದು ದಿನ ಮುಂಜಾನೆ ಆಕೆ ನಮ್ಮ ಮನೆಗೆ ಬಂದು ಸ್ವಹಸ್ತ ನಿರ್ಮಿತ ಸುಂದರ ಬುಟ್ಟಿಯೊಂದನ್ನು ನನ್ನ ಕೈಗಿತ್ತು "ನಿನಗೆ ನನ್ನ ಕೃತಜ್ಞತೆಯ ಕಾಣಿಕೆ" ಎಂದು ಹೇಳಿ ನಕ್ಕಳು. ಈ ಆಕಾಲಿಕ ಬಹುಮಾನವನ್ನು ಕಂಡು ನನಗೆ ಅಪರಿಮಿತ ಆಶ್ಚರ್ಯವಾಗಿ "ಏನಪ್ಪಾ ಇದು?" ಎಂದು ಕೇಳಿದೆ.

"ಅದು ನನ್ನ ಆತ್ಮಕತೆಯೇ ಸರಿ. ರಾತ್ರಿ ಹೊತ್ತು ಮೀರಿ ಮನೆಗೆ ಬರುವುದು ಮೊದಲು ಆಕಸ್ಮಿಕವಾಗಿದ್ದುದು ಬರಬರುತ್ತಾ 'ನಮ್ಮವರ' ನಿತ್ಯದ ಪರಿಪಾಠವಾಯಿತು. ಜವಾಬ್ದಾರಿಯುತ ಬಹುಮುಖ ಕೆಲಸದ ಒತ್ತಡವೇ ಇದಕ್ಕೆ ಕಾರಣವೆಂದು ನಾನು ತಿಳಿದಿದ್ದೆ. ಆದರೆ ಒಮ್ಮೆ ಅವರ ಬಾಯಿಯ ಅಸಹ್ಯ ವಾಸನೆ, ವರ್ತನೆಯನ್ನು ಪ್ರತ್ಯಕ್ಷ ಅನುಭವಿಸಿದಾಗ ಅವರ ಕಾರ್ಯದ ನಿಜ ಸ್ವರೂಪದ ದರ್ಶನ ನನಗಾಯಿತು. ಆಗಲೇ ನನ್ನ ಮೇಲೆ ಕಳಚಿಬಿದ್ದಂತಾಯಿತು. ಇಷ್ಟು ವಿದ್ಯಾವಂತ, ಸದ್ಯದಲ್ಲೇ ಡಿ. ಎಸ್. ಪಿ. ಹುದ್ದೆಗೇರಲಿರುವ ಪ್ರತಿಭಾನ್ವಿತ ವ್ಯಕ್ತಿ, ಮಿಗಿಲಾಗಿ ಸಂಸಾರಿಗ ಈ ದುಶ್ಚಟಕ್ಕೆ ಬಲಿಯಾದುದು ನಮ್ಮ ಭವ್ಯ ಭವಿಷ್ಯದ ಬಗ್ಗೆ ಇದ್ದ ಆಶಾಭಾವನೆಗಳನ್ನು ನುಚ್ಚು ನೂರಾಗಿಸಿತು. ನಿತ್ಯ ಕಣ್ಣೀರಿನ ಅರ್ಪಣೆ. ನಗುವೆಂಬುದು ನನ್ನನ್ನು ತ್ಯಜಿಸಿ ಬಲು ದೂರ ಸಾಗಿತ್ತು.

"ಈ ರೀತಿಯ ಜುಗುಪ್ಸೆಯಲ್ಲಿಯೇ ಕೆಲವು ತಿಂಗಳು ಕಳೆದವು. ಹಿಂದಿನ ದಿನಗಳ ನೆನಕೆಯಿಂದಲಾದರೂ ತುಸು ನೆಮ್ಮದಿ ಬರಬಹುದೆಂದು ಭ್ರಾಂತಿಯಿಂದ ಒಂದು ಮಧ್ಯಾಹ್ನ ನನ್ನ 'ಡಯರಿ'ಗಾಗಿ ಹುಡುಕುತ್ತಿದ್ದೆ. ಆಗ ಅಮೃತದಂತೆ ನನ್ನ ಕಣ್ಣಿಗೆ ಬಿತ್ತು: ನಮ್ಮ ವಿವಾಹ ಸಂದರ್ಭದಲ್ಲಿ ಉಡುಗೊರೆಯಾಗಿ ನೀನಿತ್ತ ರವೀಂದ್ರರ 'ಗೀತಾಂಜಲಿ'. ಅದರಲ್ಲಿನ ಗೀತೆಗಳನ್ನು ಹಾಡುತ್ತಿದ್ದಂತೆಲ್ಲಾ ಅನೇಕ ದಿನಗಳಿಂದ ಮನಶ್ಶಾಂತಿಯನ್ನು ಕಳೆದುಕೊಂಡು ನಿರಾಶೆಯಿಂದ ಕಂಗಾಲಾಗಿದ್ದ ನನ್ನ ಮನಸ್ಸಿಗೆ ನೆಮ್ಮದಿ ಬರತೊಡಗಿತು.

"ಕಳೆದ ವರುಷ ಇದೇ ದಿನ ನಮ್ಮವರ ಎದುರಿನಲ್ಲಿ ಒಂದು ಗೀತೆಯನ್ನು ಹಾಡಿದೆ. ನನ್ನ ಪುಣ್ಯಕ್ಕೆ ಆ ಕ್ಷಣದಲ್ಲಿ ಅದು ಅವರನ್ನು ಬಹುವಾಗಿ ಆಕರ್ಷಿಸಿತು. ಅದೇ ತಡ, ಅವರು ರವೀಂದ್ರರ ಭಕ್ತರಾದರು. ಮಿಕ್ಕ ಗೀತಗಳನ್ನೂ ಅಭ್ಯಾಸ ಮಾಡಹತ್ತಿದರು.

"ಅಂತೂ ಇಷ್ಟು ಮಾತ್ರ ಮುಖ್ಯ. ಅಂದಿನಿಂದ ಅವರು ಮದ್ಯವನ್ನು ಮುಟ್ಟಿಲ್ಲ! ನನ್ನ ಮಾಂಗಲ್ಯಕ್ಕೆ ಅಂಟಿದ್ದ ಕಳಂಕವನ್ನು ನಿರ್ಮೂಲನ ಮಾಡಲು ರವೀಂದ್ರರ ಗೀತದಲ್ಲಿನ ಅಮರ ಜೀವಂತ ಶಕ್ತಿಯೇ ಕಾರಣ. ಆ ಕವಿಯ ಭವ್ಯ ಪ್ರಪಂಚದ ಕಲ್ಪನೆ ಅವರ ದುರಭ್ಯಾಸವನ್ನು ಕೊನೆಗಾಣಿಸಿದ್ದೇ ಅಲ್ಲದೆ, ನಮ್ಮ ಜೀವನದಲ್ಲಿ ನವಚೈತನ್ಯವನ್ನು ತಂದಿದೆ. 'ಗೀತಾಂಜಲಿ' ನಮ್ಮ ನಡುವೆ ಮೂಡಿಬಂದ ವಿರಸ-ಶೋಕಕ್ಕೆ ತಿಲಾಂಜಲಿಯಿತ್ತಿದೆ. ನಿನ್ನ ವಾತ್ಸಲ್ಯಪೂರಿತ ಉಡುಗೊರೆಯಿಂದಾದ ಮಹದುಪಕಾರದ ಕೇವಲ ಸ್ಮರಣೆಗಾಗಿ ಈ ನನ್ನ ಕಾಣಿಕೆ" ಎನ್ನುತ್ತಾ ತನ್ನ ಮನೆಯತ್ತ ನಡೆದಳು.

—ನಿವರ್ತಿ "ಗುನ್ನಾಪಟ್ಟ"

ಆಗ ತಾನೆ ಕಛೇರಿಯಿಂದ ಬಂದು ಮುಂಬಾಗಿಲಿನಲ್ಲಿ ನಿಂತಿದ್ದೆ. ಎದುರುಮನೆ ರಾಜೈಯಂಗಾರರು ಇನ್ನೂ ಬಂದಿರಲಿಲ್ಲ. ಅವರ ಮಗ ಶೇಷು ಚೆಂಡಾಡುತ್ತಿದ್ದ. ಮಗಳು ವೈದೇಹಿ ನಾಲ್ಕು ವರ್ಷದ ಜಯಂತಿಯೊಂದಿಗೆ ಬಾಗಿಲಲ್ಲಿ ಕುಳಿತಿದ್ದಳು.

ಇದ್ದಕ್ಕಿದ್ದ ಹಾಗೆ ರಾಜೈಯಂಗಾರರ ಹೆಂಡತಿ ಸುಂದರಮ್ಮನವರು, ಒಳಗಿನಿಂದ ಗಾಬರಿಯಾಗಿ ಕೂಗಿಕೊಂಡರು. ಶೇಷ ಒಳಗೆ ಓಡಿದ. ವೈದೇಹಿ ಅವನ ಹಿಂದೆ ಓಡಿದಳು. ನನಗೂ ಅನುಮಾನವಾಗಿ ಅಲ್ಲಿಗೆ ಓಡಿದೆ. ವಿದ್ಯುದ್ದೀಪವನ್ನು ಹತ್ತಿಸಲು ಹೋಗಿ ಸುಂದರಮ್ಮನವರಿಗೆ ವಿದ್ಯುತ್ತು ತಾಗಿ ಕೂಗಿದ್ದರು. ಅವರನ್ನು ಬಿಡಿಸಲು ಬಂದ ಶೇಷ, ವೈದೇಹಿ ಇವರಿಗೂ ವಿದ್ಯುತ್ತು ತಾಗಿತ್ತು. ಸದ್ಯ ಹತ್ತಿರದಲ್ಲಿಯೇ ಇದ್ದ ಮೇನ್‌ಸ್ವಿಚ್ಚನ್ನು ಆರಿಸಿದೆ.

ಸಂಭ್ರಮದ ನಡುವೆ ರೈಲಿನ ಸಿಳ್ಳಿನಂತೆ ಧ್ವನಿಯಾಯಿತು. ನೋಡಲಾಗಿ ವಿದ್ಯುತ್ತು ತಾಗಿ ಸಾಲಾಗಿ ನಿಂತಿದ್ದ ಸುಂದರಮ್ಮ, ವೈದೇಹಿ, ಶೇಷರ ಹಿಂದೆ ಜಯಂತಿ ನಿಂತು "ಕೂ, ಜುಗ್-ಜುಗ್" ಎನ್ನುತ್ತಿದ್ದಳು.

— ಮಾಗೋಪಿ

ನಾನು ನನ್ನ ಖಾಯಂ ಕ್ಷೌರಿಕನಿಗೆ ಭೇಟಿಕೊಡುವಾಗ ಸೂಟು ಬೂಟು ಧರಿಸದೆ ಬರಿಯ ಪಂಜೆ ಉಟ್ಟು, ಮೇಲೆ ಶರಟು ತೊಟ್ಟು, ಚಪ್ಪಲಿ ಮೆಟ್ಟಿ ಹೊರಡುವುದು ವಾಡಿಕೆ. ಅಂತಹ ಸನ್ನಿವೇಶಗಳಲ್ಲಿ ವಸ್ತ್ರ ಬದಲಾವಣೆಯೂ ಸೇರಿ ಬರುವುದರಿಂದ ಹಾಕಿದ್ದ ಬಟ್ಟೆಗಳು ಸ್ವಲ್ಪ ಮಾಸಿರುತ್ತವೆ.

ಒಮ್ಮೆ ಕೆಲಸದ ಪ್ರಯುಕ್ತ ಪರ ಊ
ನಲ್ಲಿದ್ದಾಗ ನಡೆದ ಪ್ರಸಂಗವಿದು. ವಾಡಿ
ಯಂತೆ ಬೆಳಗಿನ ಆರು ಗಂಟೆಗೇ ಅಲ್ಲಿಂ
ಒಂದು ಸಲೂನಿಗೆ ಭೇಟಿಯಿತ್ತೆ. ಸಲೂ
ನಿನ ಬಾಗಿಲು ತೆರೆದಿತ್ತಾದರೂ ಕ್ಷೌರಿಕನಿ
ಲ್ಲಿಲ್ಲ. ಬಹುಶಃ ಬೆಳಗಿನ ಉಪಾಹಾರ ಸೇ
ನೆಗೆಂದು ಹೊರಹೋಗಿದ್ದನೆಂದು ಕಾ
ತ್ತದೆ. ಅವನಿಗಾಗಿ ಕಾಯುತ್ತ ಕು
ಸ್ವಲ್ಪ ಹೊತ್ತಿನಲ್ಲಿಯೇ ನನ್ನಂತೆಯೇ ಪಂ
ಷರಟುಗಳನ್ನು ಧರಿಸಿದ್ದಾತ ಒಳಬಂ

ಬಂದಾತ ನನ್ನ ಕಡೆ ನೋಡಿ 'ಶೇವ
ಎಂದ. ಅವನ ಈ 'ಶೇವ್' ಶಬ್ದದ ಮುಂ
ಪ್ರಶ್ನಾರ್ಥ ಚಿಹ್ನೆಯನ್ನು ಊಹಿಸಿಕೊ
ನಾನು 'ಇಲ್ಲ, ಹೇರ್‌ಕಟ್', ಎಂದು
ರಿಸಿದೆ. ಇಬ್ಬರಿಗೂ ಒಮ್ಮೆಲೇ ಪ್ರಸಂ
ಅರಿವಾಗಿ ಆತ 'ದಯವಿಟ್ಟು ಕ್ಷಮಿ
ಎಂದ. ನಾನೂ ಅದೇ ರೀತಿ ಉತ್ತರವಿ

ಮತ್ತೆ ಸ್ವಲ್ಪ ಹೊತ್ತಿನಲ್ಲಿ ಪ್ಯಾಂ
ಶರಟು, ಚಪ್ಪಲಿಗಳನ್ನು ಧರಿಸಿ ಒಳಬ
ವ್ಯಕ್ತಿಯನ್ನು ನೋಡಿಯೂ ನಾ
ಸುಮ್ಮನೆ ಕುಳಿತೆ. ಆ ವ್ಯಕ್ತಿಯೇ ಕು
ಯುತ್ತ ಕೈಮಾಡಿ 'ಬನ್ನಿ', ಎಂದಾಗ
ನಾನು 'ನನಗೆ ಹೇರ್‌ಕಟ್', ಎನ
ಧೈರ್ಯ ಮಾಡಿದೆ.

ಈ ವಿನೋದಾಭಾಸವು ನಮಗೆ
ಯನ್ನು ತಂದಿತಾದಾರೂ ವೃತ್ತಿಗೆ
ಚಿಹ್ನೆಗಳನ್ನು ಕಲ್ಪಿಸಿದರೆ ವ್ಯಕ್ತಿ
ಬಟ್ಟೆಗೂ ಸಮಾಜದಲ್ಲಿನ ಆತನ ಸ್ಥಾನ
ಇಲ್ಲದ ಸಂಬಂಧ ಕಲ್ಪನೆ ತಪ್ಪೀತೆ
ಭಾವನೆ ನನ್ನ ಮನಸ್ಸಿನಲ್ಲಿ ಸುಳಿಯ
ಹೋಗಲಿಲ್ಲ.

— ಸಿ. ಎನ್. ಭಾಸ್ಕರರಾ



ದೇಶಪ್ರೇಮಕ್ಕೆ ಈ ಭಾರತೀಯ
ತೆರಬೇಕಾದ ಬೆಲೆ ಭಯಂಕರವಾಗಿತ್ತು

ಸೆಲಾಮ ರಫೀಕಿಯ ದುರಂತ ಜೀವನ

ರೇನಾ ಲುಂಯಿಸ್



ಮಹಾರಾಜಾ ಪ್ರತಾಪಸಿಂಗ ಕಾಶ್ಮೀರವನ್ನು ಆಳುತ್ತಿದ್ದ ಕಾಲದಲ್ಲಿ ಸೆಲಾಮ ರಫೀಕಿ ತನ್ನ ತಾರುಣ್ಯವನ್ನು ಕಾಶ್ಮೀರದಲ್ಲಿ ಕಳೆದ. ೧೮೪೬ರಲ್ಲಿ ಕಾಶ್ಮೀರವು ಬ್ರಿಟಿಶರ ಅಧೀನಕ್ಕೊಳಪಟ್ಟಾಗಿನಿಂದ ಅಲ್ಲಿಯ ಪರಿಸ್ಥಿತಿ ಹದಗೆಟ್ಟಿತ್ತು. ಮೊದಲನೆಯ ಮಹಾರಾಜನಾದ ಗುಲಾಬಸಿಂಗನ ಆಳಿಕೆ ದಬ್ಬಾಳಿಕೆಯಾಗಿತ್ತು. ಆತ ಕಾಶ್ಮೀರಿ ಶಾಲುಗಳನ್ನು ನೇಯುತ್ತಿದ್ದವರ ಮೇಲೆ ವಿಪರೀತ ಕರವನ್ನು ಹೇರಿದ್ದರ ಜೊತೆಗೆ ಎಂಥ ಪರಿಸ್ಥಿತಿಯಲ್ಲೂ ನೇಕಾರರು ತಮ್ಮ ನೇಯ್ಗೆ ಕಾರ್ಯವನ್ನು ನಿಲ್ಲಿಸಲಾಗದು ಎಂಬ ಕಟ್ಟಾಜ್ಞೆ ವಿಧಿಸಿದ್ದ. ಈ ಪರಿಸ್ಥಿತಿ ಎಷ್ಟು ಅಸಹ್ಯವಾಯಿತೆಂದರೆ ಸಹಸ್ರಾರು ಕಾಶ್ಮೀರಿಗಳು ಕಾಶ್ಮೀರವನ್ನು ಬಿಟ್ಟೋಡಿದರು. ತಾವು ಓಡಿಹೋದರೆ ತಮ್ಮ ಕುಟುಂಬದವರು ರಾಜಛಲನೆಗೆ ಗುರಿಯಾಗುತ್ತಾರೆ, ಭಾರತಕ್ಕೆ ಹೋಗುವ ಹಾದಿಯಲ್ಲಿ ಪ್ರಾಣಭಯ ಬಿಟ್ಟದ್ದಲ್ಲ ಎಂದು ಗೊತ್ತಿದ್ದರೂ ಈ ಜನ ಓಡಿಹೋದರು. ಕಾಶ್ಮೀರದಲ್ಲಿ ಜೀವನ ಅವರಿಗೆ ಅಷ್ಟೊಂದು ಪೀಡಾದಾಯಕವಾಗಿತ್ತು.

ಗುಲಾಬಸಿಂಗನ ನಂತರದ ರಾಜರು ಅಪ

ನಷ್ಟು ಕ್ರೂರರಾಗಿರಲಿಲ್ಲ. ಆದರೆ ನೈಸರ್ಗಿಕ ಆಪತ್ತುಗಳು ಬಂದೆರಗಿದವು. ೧೮೭೦ ರಲ್ಲಿ ಬಂದ ದುರ್ಭಿಕ್ಷೆ ಎರಡು ವರ್ಷಗಳ ವರೆಗೆ ಹಾಹಾಕಾರವನ್ನು ಉಂಟಾಗಿಸಿತು. ೧೮೮೦ ರಲ್ಲಿ ಕಾಲರಾ ಬೇನೆ ಹಳ್ಳಿಹಳ್ಳಿಗಳಲ್ಲಿ ತಾಂಡವವನ್ನೆಸಗಿತು. ಪ್ರತಾಪಸಿಂಗ ಸಿಂಹಾಸನವನ್ನೇರುವ ಹೊತ್ತಿಗೆ ಪ್ರಜೆಗಳು ದುರಾಡಳಿತ, ನಿಸರ್ಗ ಕೋಪ, ಬಲಾತ್ಕಾರ, ದಾರಿದ್ರ್ಯ ಮುಂತಾದವುಗಳಿಂದ ಜರ್ಜರಿತರಾಗಿಹೋಗಿದ್ದರು. ರೋಸಿ ರೊಚ್ಚಿಗೆದ್ದಿದ್ದರು.

ಹೀಗೆ ರೊಚ್ಚಿಗೆದ್ದಿದ್ದವರಲ್ಲಿ ರಫೀಕಿಯೂ ಒಬ್ಬನಾಗಿದ್ದ. ಅವನ ಸುತ್ತಲೆಲ್ಲ ನೈಸರ್ಗಿಕ ಸೌಂದರ್ಯ ತಾನೇ ತಾನಾಗಿ ಮೆರೆಯುತ್ತಿತ್ತು. ಅದೆಷ್ಟು ಮೋಹಕವಾಗಿತ್ತೊ ಅಷ್ಟೇ ಜನರ ಕಷ್ಟ-ನಷ್ಟ-ತಾಪಗಳು ರುದ್ರವಾಗಿದ್ದವು. ಆ ಕಾಲದ ಹಿರಿಯ ಲೇಖಕರಾದ ಮಕಬುಲ್ ಶಾಹ ಕ್ರಹವಾರಿ, ಅಬ್ದುಲ್ ಅಹದ ನಜೀಮ್ ಮತ್ತು ರಸೂಲ ಮೀರ್ ಶಹಬಾದಿಯವರು ಈ ಪರಿಸ್ಥಿತಿಯ ಬಗ್ಗೆ ಪ್ರತಿಭಟನೆ ವ್ಯಕ್ತಮಾಡಿದರು. ಕೆಲ ಕಾಲ ಪ್ರಯತ್ನಪಟ್ಟು ರಫೀಕಿ ಈ ಎಲ್ಲ ಗದ್ದಲದಿಂದ ದೂರ ಉಳಿದುಕೊಂಡನು. ಆದರೆ ಆತ ಕೊನೆಗೂ ರಾಜಕೀಯದ ಸುಳಿಯಲ್ಲಿ ಸಿಲುಕಿಕೊಂಡ. ರಫೀಕಿ ಮೊದಲು ಮಾಡಿದ ಕಾರ್ಯವೆಂದರೆ ಒಂದು ಉರ್ದು ಪತ್ರಿಕೆಯನ್ನು ಹೊರಡಿಸಿದ್ದು. ಅದಕ್ಕೆ "ಎಲ್ ರಫೀಕ್-(ಮಿತ್ರ)" ಎಂಬ ಪರ್ಶಿಯನ್ ಹೆಸರನ್ನಿಟ್ಟ.

ಪತ್ರಿಕೆ ಹೊರಡಿಸಿ ಆತ ತನ್ನ ವ್ಯವಹಾರವನ್ನು ಕಳಕೊಂಡ. ರಫೀಕಿಯ ಮನೆತನ ಒಂದಿಷ್ಟು ಶ್ರೀಮಂತ ಮನೆತನವೇ ಆಗಿದ್ದು ಅದರ ವ್ಯಾಪಾರ- ವ್ಯವಹಾರವೂ ಚೆನ್ನಾಗಿಯೆ ಇದ್ದಿತು. "ಎಲ್ ರಫೀಕ್" ಪತ್ರಿಕೆ ಜನಪ್ರಿಯವಾಗತೊಡಗಿ ಉರ್ದು ಭಾಷೆಯ ಜನರಲ್ಲಿ ಒಂದು ಪ್ರಭಾವಿ ಶಕ್ತಿಯಾಗಿ ಬಿಟ್ಟಿತು. ಅಧಿಕಾರಿಗಳ ಗಮನಕ್ಕೆ ಈ ಮಾತು ಬರಲು ತಡವಾಗಲಿಲ್ಲ. ಅವರು ರಫೀಕಿಯನ್ನು ಸೆರೆಮನೆಗಟ್ಟದಿದ್ದರೂ ಅವನ ಮುದ್ರಣಾಲಯವನ್ನು ನಾಶಗೊಳಿಸಿ ಆಸ್ತಿಯನ್ನು ಜಪ್ತಿ ಮಾಡಿದರು. ಇದು ಬಲವಾದ ಆಘಾತವೇ ಆಗಿದ್ದರೂ ರಫೀಕಿಗೆ ಮುಂದೊದಗಲಿದ್ದ ಅಸಾಹುತಗಳಿಗೆ ನಾಂದಿ ಮಾತ್ರವಾಗಿತ್ತು. ಕೆಲ ದಿನಗಳಲ್ಲಿಯೆ ಅವನಿಗೆ ಕಾಶ್ಮೀರವನ್ನು ಬಿಟ್ಟುಹೋಗಲು ಆಜ್ಞೆಯಾಯಿತು. ಅವನನ್ನು ಬ್ರಿಟಿಶ್ ಭಾರತಕ್ಕೆ ಗಡೀಪಾರು ಮಾಡಿದರು. ರಫೀಕಿ ಕೈಯಲ್ಲಿ ಕಾಸಿಲ್ಲದೆ ಗೊತ್ತುಗುರಿ ನೆಲೆಯಿಲ್ಲದೆ ಅಲೆಯುವ ಪ್ರಸಂಗ ಬಂತು.

ಎಲ್ಲಿ ಹೋಗಬೇಕು, ಏನು ಮಾಡಬೇಕು ಎಂಬ ಪ್ರಶ್ನೆಗಳು ಮುಂದೆ ಅವನ ಜೀವನದಲ್ಲಿ ಕಾಡಲಿದ್ದರೂ ಈಗ ಮಾತ್ರ ಅವು ಅವನನ್ನು ಪೀಡಿಸಲಿಲ್ಲ. ಇನ್ನೂ ತರುಣನಾಗಿದ್ದ ರಫೀಕಿಯಲ್ಲಿ ಅದಮ್ಯ ಆಶೆ ಉತ್ಸಾಹಗಳಿದ್ದವು ಹೊಸ ಜೀವನ ನಡೆಸುವುದೇನೂ ತನಗೆ ಕಠಿಣವಲ್ಲವೆಂದು ಬಗೆದ ಆತ ತನ್ನ ವಾಸಕ್ಕಾಗಿ ತನ್ನ ನಿಸರ್ಗ ಸೌಂದರ್ಯ ಸಂಪತ್ತಿನಿಂದ ಕಾಶ್ಮೀರವನ್ನು ನೆನಪಿಗೆ ತಂದುಕೊಡುವ ಸಿಮ್ಲಾವನ್ನು ಆರಿಸಿಕೊಂಡ.

ಸಿಮ್ಲಾದಲ್ಲಿ ಬೇಗನೆ ಜೀವನೋಪಾಯವನ್ನು ಕಲ್ಪಿಸಿಕೊಂಡ ರಫೀಕಿ ತನ್ನ ಸ್ನೇಹಮಯ ನಡತೆಯಿಂದ ಅನೇಕ ಮಿತ್ರರನ್ನು ಸಂಪಾದಿಸಿಕೊಂಡ. ಅಲ್ಲಿ ಆತ ಸುಖವಾಗಿ ಜೀವನ ಸಾಗಿಸಬಹುದಾಗಿತ್ತು. ಆದರೆ ಅವನಲ್ಲಿಯ ರಾಷ್ಟ್ರೀಯ ಭಾವನೆ ಅವನನ್ನು ತಣ್ಣಗೆ ಕೂಡ್ರಗೊಡಲಿಲ್ಲ. ಆತ ಮತ್ತೆ 'ಎಲ್ ರಫೀಕ್' ವನ್ನು ಹೊರಡಿಸತೊಡಗಿದ.

೧೮೯೦ ರಿಂದ ೧೯೦೦ ರ ವರೆಗಿನ ವರ್ಷಗಳು ಪ್ರಕ್ಷುಬ್ಧವಾಗಿದ್ದವು. ರಾಜಕೀಯ ಆಂದೋಲನದಲ್ಲಿ ಇತರ ಸಹಸ್ರಾರು ಜನರಂತೆ ರಫೀಕಿಯೂ ಸೇರಿಕೊಂಡ. ೧೮೮೫ ರಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿಸಲ್ಪಟ್ಟಿದ್ದಿತು. ೧೮೫೭ ರಿಂದ ಇತ್ತೀಚಿನ ೩೫ ವರ್ಷಗಳಲ್ಲಿ ಇಷ್ಟೊಂದು ಅಶಾಂತಿ ತಲೆಯೆತ್ತಿರಲಿಲ್ಲ. ಬೇ

ಬೇರೆ ಭಾಷೆಗಳಲ್ಲಿ ಒಂದೇ ಒಂದು ಧ್ಯೇಯದಿಂದ ಇಷ್ಟೊಂದು ಪತ್ರಿಕೆಗಳು ಹೊರಟಿರಲಿಲ್ಲ. ರಫೀಕಿಯ ಪತ್ರಿಕೆಯು ತನ್ನ ಕಾಲದ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತಿತ್ತು. ಆಡಳಿತದಲ್ಲಿ ಭಾರತೀಯರಿಗೆ ಹೆಚ್ಚಿನ ಪ್ರಾತಿನಿಧ್ಯವಿರಬೇಕು, ಹಿಂದು ಮುಸ್ಲಿಮರಲ್ಲಿ ಸಂಪೂರ್ಣ ಐಕ್ಯವಿರಬೇಕು ಎಂದಾತ ಪ್ರತಿಪಾದಿಸುತ್ತಿದ್ದ. ರಾಷ್ಟ್ರೀಯ ಕಾಂಗ್ರೆಸ್ಸಿನ ಧುರೀಣರು ಕೇಳುವುದಕ್ಕಿಂತ ಹೆಚ್ಚಿಗೆ ಏನನ್ನೂ ಆತ ಕೇಳಲಿಲ್ಲ, ಅಥವಾ ಅವರ ಬೇಡಿಕೆಗಿಂತಲೂ ಕಡಿಮೆಯಾದ ಬೇಡಿಕೆಯನ್ನು ಮಂಡಿಸಲಿಲ್ಲ. ಆದರೆ ಅವೇ ಮಾತನ್ನು ಆತ ಹೇಳುತ್ತಿದ್ದ ಕಾವ್ಯಮಯ ರೀತಿ ಕಾಂಗ್ರೆಸ್ಸಿನ ಅಧ್ವರ್ಯುಗಳಾದ ಮಧ್ಯಮ ವರ್ಗದವರ ಮೇಲೆ ಹೆಚ್ಚೆಚ್ಚು ಪ್ರಭಾವಿಯಾಗತೊಡಗಿತು.

ಪತ್ರಿಕೆಯ ಈ ಜನಪ್ರಿಯತೆ ಮತ್ತು ಪ್ರಭಾವ ಸರಕಾರದ ಗಮನಕ್ಕೆ ಬಾರದೆ ಉಳಿಯಲಿಲ್ಲ. ಅಧಿಕಾರಿಗಳು ಪುನಃ ರಫೀಕಿಯ ಮೇಲೆರಗಿದರು. ಇದು ಎರಡನೆಯ ಅಪರಾಧವಾಗಿದ್ದುದರಿಂದ ಈ ಸಲದ ಶಿಕ್ಷೆ ಇನ್ನಷ್ಟು ಕಠೋರವಾಯಿತು. ರಫೀಕಿ ಭಾರತದಿಂದ ಬ್ರಹ್ಮದೇಶಕ್ಕೆ ಗಡೀಪಾರು ಮಾಡಲ್ಪಟ್ಟ.

೧೯೦೩ ರ ಅಕ್ಟೋಬರ ತಿಂಗಳಲ್ಲಿ ಮೊಟ್ಟಮೊದಲ ಬಾರಿ ರಂಗೂನನ್ನು ಕಂಡ ರಫೀಕಿ, ಆಗ ಅದು ಆಗ್ನೇಯ ಏಶಿಯದಲ್ಲಿ ಅತ್ಯಂತ ಸುಂದರವಾದ ನಗರಗಳಲ್ಲೊಂದಾಗಿತ್ತು ಎಂದು ಬರೆದಿಟ್ಟಿದ್ದಾನೆ. ಬ್ರಹ್ಮದೇಶದಲ್ಲಿ ಹೊಸ ಜೀವನವನ್ನಾರಂಭಿಸಲು ಆತ ನಿಶ್ಚಯಿಸಿದ.

ಆತ ಒಂದು ವ್ಯಾಪಾರವನ್ನಾರಂಭಿಸಿದ. ರಂಗೂನಿನಲ್ಲಿ ಸುಖವಸ್ತು ಸ್ಥಿತಿಯಲ್ಲಿದ್ದ ಅನೇಕ ಮುಸಲ್ಮಾನರಿದ್ದರು ಅವರಲ್ಲನೇಕರ ಸ್ನೇಹ ಸಂಪಾದಿಸಿದರೂ ರಫೀಕಿಗೆ ನಿರಾಶ್ರಿತರ ಭಾಗ್ಯವಾದ ಏಕಾಂತಭಾವ ಬೆನ್ನು ಬಿಡಲಿಲ್ಲ. ತನ್ನ ಈ ಅಸಮಾಧಾನಕರ ಸ್ಥಿತಿಯಲ್ಲಿ ಆತನಿಗೆ ರಂಗೂನಿಗೆ ಗಡೀಪಾರು ಮಾಡಲ್ಪಟ್ಟ ಉರ್ದು ಕವಿ 'ಜಾಫರ'ನ ನೆನಪಾಯಿತು. ರಂಗೂನಿಗೆ ಬಂದ ಕೆಲವೇ ಸಮಯದಲ್ಲಿ 'ಜಾಫರ' ಸತ್ತಿದ್ದ. ರಫೀಕಿ ಆತನ ಗೋರಿಯನ್ನು ಹುಡುಕತೊಡಗಿದ.

ಮೊದಮೊದಲು ಅವನಿಗೆ ಅದರ ಪತ್ತೆ ಹತ್ತದಿದ್ದರೂ ಆ ರಾಜಕವಿ ಮತ್ತು ಅವನ ಪತ್ನಿಯ ಗೋರಿಯ ಪತ್ತೆ ಅವನಿಗೆ ಒಬ್ಬ ಪರಿಚಿತನಿಂದ ತಿಳಿಯಿತು. ಕವಿ ಮಾತ್ರವೇ ಅಲ್ಲ, ಮೊಗಲ ಚಕ್ರವರ್ತಿಗಳಲ್ಲಿ ಕೊನೆಯವನಾಗಿದ್ದ 'ಜಾಫರ' ಮತ್ತು ಅವನ ಹೆಂಡತಿ ನಿರ್ಗತಿಕರಂತೆ ಯಾವುದೊ ಒಂದು ಕಂಪೌಂಡಿನ ಮೂಲೆಯಲ್ಲಿ ಹೂಳಲ್ಪಟ್ಟಿದ್ದರು. ೧೮೫೭ ರ ಅಯಶಸ್ವಿ ಬಂಡಾಯದಲ್ಲಿ ಜಾಫರ—ಅಬು ಜಾಫರ ಸಿರಾಜುದ್ದೀನ ಮಹಮ್ಮದ ಬಹಾದ್ದೂರ ಶಾಹ—ಮಹತ್ವದ ಪಾತ್ರ ವಹಿಸಿದ್ದ. ಬಂಡಾಯ ಹತ್ತಿಕ್ಕಲ್ಪಟ್ಟ ಮೇಲೆ ಬ್ರಿಟಿಶರು ಅವನನ್ನು ರಂಗೂನಿಗೆ ಗಡೀಪಾರು ಮಾಡಿದ್ದರು. ಬ್ರಹ್ಮದೇಶದ ರಾಜನಾದ ಥೀಬಾನನ್ನು ರತ್ನಾಗಿರಿಗೆ ಗಡೀಪಾರು ಮಾಡಿದ್ದರು.

ಬಹಾದ್ದೂರ ಶಾಹನ ಅಜ್ಞಾತ ಗೋರಿಯನ್ನು ಕಂಡಾಗ ಮೊಗಲ ಚಕ್ರವರ್ತಿಯ ಘನತೆಗೆ ಇದು ಹೇಳಿದ್ದಲ್ಲ ಎಂದು ರಫೀಕಿಗೆ ಅನಿಸಿತು. ಆತನಿಗೆ ಜಾಫರನ ಒಂದು ಕವಿತೆಯ ವಾಕ್ಯಗಳು ನೆನಪಿಗೆ ಬಂದವು. ತನಗೊದಗಲಿದ್ದ ಅವಹೇಳನೆಯ ವಿಚಾರವನ್ನು ಜಾಫರ ಭವಿಷ್ಯ ನುಡಿದಂತಿತ್ತು ಆ ಕವಿತೆಯಲ್ಲಿ.

"ಸಾವಿರಾರು ಜನರ ಹೆಜ್ಜೆಗಳು ಗೋರಿಯ ಮೇಲಿನ ಸಂಕೇತಗಳನ್ನು ಅಳಿಸಿದಾಗ ತನ್ನ ನೆನಪಾದರೂ ಉಳಿದೀತೇ? ಅಲ್ಲಿ ಯಾರಾದರೂ ಪ್ರಾರ್ಥನೆಗಳನ್ನಂದಾರೆ?" ಎಂದು ಜಾಫರ ಪ್ರಶ್ನಿಸಿದ್ದ.

ಬಹಾದ್ದೂರ ಶಾಹ ಮತ್ತು ಅವನ ಬೇಗಂ ಝೀನತ್ ಮಹಲಳ ಸ್ಮಾರಕಾರ್ಥವಾಗಿ ಒಂದು ಯೋಗ್ಯ ಗೋರಿಯನ್ನು ಕಟ್ಟಲು ಸರಕಾರವನ್ನು ಆಗ್ರಹಪಡಿಸಬೇಕು ಎಂದು ರಫೀಕಿ ನಿರ್ಧರಿಸಿದ. ಆತನ ಈ ಪ್ರಯತ್ನ ಸತತ ಏಳು ವರ್ಷ

ಗಳ ವರೆಗೆ ನಡೆಯಿತು. ಅವನಿಗೆ ಕೊನೆಯಿಲ್ಲದ ಅಪಾರ ದುಃಖವನ್ನೂ ಅದು ತಂದಿತು.

ಸರಕಾರದಲ್ಲಿ ಈ ವಿಚಾರವನ್ನು ಹೇಗೆ ಪ್ರಸ್ತಾಪಿಸಬೇಕು ಎಂಬುದು ಆತನಿಗೆ ಮುಖ್ಯ ಪ್ರಶ್ನೆಯಾಗಿತ್ತು. ಇತರರ ಒತ್ತಾಯದಿಂದ ಆತ ಬಂಡಾಯದ ಪ್ರಮುಖನಾಗಬೇಕಾಯಿತು ಎಂದರೆ? ಆದರೆ ಬಹಾದ್ದೂರಶಹ ಜಯಪುರ, ಜೋಧಪುರ, ಬಿಕಾನೇರ ಮೊದಲಾದ ರಾಜರಿಗೆ "ಇಂಗ್ಲಿಷರನ್ನು ಹಿಂದುಸ್ತಾನದಿಂದ ಹೇಗಾದರೂ ಹೊರಗಟ್ಟಬೇಕೆಂಬುದೇ ನನ್ನ ಪ್ರಬಲ ಇಚ್ಛೆ" ಎಂದು ಬರೆದಿದ್ದ ಪತ್ರವೊಂದು ಬ್ರಿಟಿಶರ ಕೈಲಿತ್ತು. ವಿಚಾರಣೆಯ ಕಾಲಕ್ಕೆ ಈ ಪತ್ರವೇ ಅವನ ವಿರುದ್ಧ ಮುಖ್ಯ ಸಾಕ್ಷಿಯಾಗಿತ್ತು. ಆದ್ದರಿಂದ ಸೋತ ಶತ್ರುವಿನ ಮೇಲೆ ಕರುಣೆ ತೋರುವ ಔದಾರ್ಯಗದ್ದವನಲ್ಲಿರುವುದು ಒಂದು ಸದ್ಗುಣವೆಂಬ ತತ್ವದ ಮೇಲೆ ಪ್ರಸ್ತಾಪವೆತ್ತಬೇಕೆಂದು ನಿರ್ಧರಿಸಿ ರಫೀಕಿ ೧೯೦೪ ರಲ್ಲಿ ಬ್ರಹ್ಮದೇಶದ ಆಗಿನ ಲೆಫ್ಟನೆಂಟ್ ಗವರ್ನರ್ ಸರ್ ಹ್ಯು ಶೇಕ್ಸ್ ಪಿಯರ್ ಬಾರ್ನ್ಸ್‌ರನ್ನು ಕಂಡು ಮಾತಾಡಿದ. ಬಾರ್ನ್ಸ್ ಅಸಾಮಾನ್ಯ ವ್ಯಕ್ತಿಯಾಗಿದ್ದ. ಅನೇಕಾನೇಕ ಭಾಷೆಗಳನ್ನುಬಲ್ಲವನಾಗಿದ್ದ. ಅವನಿಗೂ ರಫೀಕಿಗೂ ಸಂಭಾಷಣೆ ಪರ್ಶಿಯನ್ ಭಾಷೆಯಲ್ಲಿಯೇ ನಡೆಯಿತು. ಬಹದ್ದೂರಶಾಹನ ವಂಶಜರೇ ಗೋರಿಯ ದುರಸ್ತಿ ಮಾಡಬಹುದಲ್ಲ ಎಂದು ಬಾರ್ನ್ಸ್ ಹೇಳಲು "ಅವರಿಗದು ಸಾಧ್ಯವಿದ್ದಿದ್ದರೆ ಅವರು ಸುಮ್ಮನಿರುತ್ತಿದ್ದರೆ?" ಎಂದು ರಫೀಕಿ ಕೇಳಿದ.

ಇದಾಗಿ ಕೆಲ ದಿನಗಳಲ್ಲಿ ಬಹಾದ್ದೂರ ಶಾಹ ಮತ್ತು ಬೇಗಂ ಝೀಮತ್‌ಮಹಲಳ ಗೋರಿಗಳನ್ನು ದುರಸ್ತಿ ಮಾಡಿಸುವ ವೆಚ್ಚವನ್ನು ಕೊಡಲು ರಫೀಕಿಯ ಮಿತ್ರನೊಬ್ಬ ಸಿದ್ಧನಾದ. ಈ ಸಂಗತಿಯನ್ನು ಗವರ್ನರನ ಖಾಸಗಿ ಕಾರ್ಯ



ಪರ್ಶಿಗೆ ರಫೀಕಿ ತಿಳಿಸಿದಾಗ ಅವನಿಂದ ಈ ಕೆಳಗಿನ ಉತ್ತರ ಬಂತು:

ಗವರ್ನ್‌ಮೆಂಟ ಹೌಸ್
ಮೆಮ್ಯಾಂಜೊ
ಮೇ ೩೧, ೧೯೦೪

ಮಾನ್ಯರೇ,

ದಿಲ್ಲಿಯ ಕೊನೆಯ ಅರಸನಾದ ಬಹಾದ್ದೂರ ಶಾಹನ ಗೋರಿಯ ದುರಸ್ತಿ ಮತ್ತು ರಕ್ಷಣೆಯ ಪ್ರಶ್ನೆಯನ್ನು ಸರಕಾರವು ವಿಚಾರ ಮಾಡುತ್ತಿದೆ. ಆ ಗೋರಿಯಿರುವ ಕಂಪೌಂಡಿನ ಒಡೆಯರಾರು? ಎಂದು ವಿಚಾರಿಸುತ್ತಿದ್ದೇವೆ. ಅವರ ಪತ್ತೆಯಾದ ಬಳಿಕ ಪುನಃ ನಿಮಗೆ ಈ ವಿಚಾರವಾಗಿ ಬರೆಯುತ್ತೇನೆ.

ನಿಮ್ಮ
ಜಿ. ಫೆಲ್.

ಆದರೆ ಒಂದು ವರ್ಷ ಕಳೆದರೂ ಏನೂ ಆಗಲಿಲ್ಲ. ಅಷ್ಟರಲ್ಲಿ ಸರ್ ಹ್ಯೂ ಬಾರ್ನ್ಸ್‌ರ ಬದಲು ಸರ್ ಥಿರ್ಕೆಲ್ ವ್ಯಾಟ್ ಎಂಬವರು ಲೆಫ್ಟನಂಟ ಗವರ್ನರರಾಗಿ ಬಂದರು. ಸರ್ ಥಿರ್ಕೆಲ್ ವ್ಯಾಟರನ್ನು ಭೆಟ್ಟಿಯಾದ ಬಳಿಕ ರಫೀಕಿ ತುಂಬ ನಿರಾಶೆಗೊಂಡ. ಇಂಗ್ಲಿಷರ ವಚನಗಳೊಂದೂ ನಂಬಲರ್ಹವಲ್ಲ ಎಂದು ಕಾಬೂಲಿನ ಅಬ್ದುರ್ ರಹಮಾನ್ ಹೇಳಿದ್ದು ನಿಜ ಎಂದು ಆತ ತನ್ನ ದಿನಚರಿಯಲ್ಲಿ ಬರೆದಿಟ್ಟ. ಆದರೂ ಮತ್ತೊಮ್ಮೆ ಆತ ಲೆಫ್ಟನಂಟ ಗವರ್ನರರನ್ನು ಕಂಡು "ಹೋಗಲಿಬಿಡಿ. ಚಕ್ರವರ್ತಿ ಎಂದು ಆತನ ಸ್ಮಾರಕವನ್ನು ನಿಲ್ಲಿಸುವುದು ಬೇಡವೆಂದಾದರೆ ಆತನೊಬ್ಬ ಒಳ್ಳೆಯ ಕವಿಯಾಗಿದ್ದ ಎಂದಾದರೂ ಸ್ಮಾರಕ ನಿಲ್ಲಿಸಿ" ಎಂದು ಕೇಳಿಕೊಂಡ.

ಇದೂ ಪ್ರಯೋಜನವಾಗಲಿಲ್ಲ. ಬಹಾದ್ದೂರ ಶಾಹನ ಗೋರಿಯ ವಿಷಯದಲ್ಲಿ ಸರಕಾರ ಏನನ್ನೂ ಮಾಡಬಯಸುವುದಿಲ್ಲ ಎಂದು ಆತನಿಗೆ ತಿಳಿಸಲಾಯಿತು. ನಿರಾಶೆಯ ಭರದಲ್ಲಿ ರಫೀಕಿ ಸರಕಾರಕ್ಕೆ ಒಂದು ಪತ್ರ ಬರೆದು "ಇಪ್ಪತ್ತು ರೂಪಾಯಿಗಳ ವೆಚ್ಚದಲ್ಲಿ ನಾನು ಆ ಗೋರಿಯ ಸುತ್ತ ಒಂದು ಬೇಲಿಯನ್ನು ಕಟ್ಟಬೇಕೆಂದಿದ್ದೇನೆ. ಅಪ್ಪಣೆಯಾಗಬೇಕು" ಎಂದು ಕೇಳಿಕೊಂಡ. ಅದಕ್ಕೆ "ಬಹಾದ್ದೂರ ಶಹಾನ ಗೋರಿಯ ವಿಷಯದಲ್ಲಿ ಯಾವ ಬಗೆಯ ಚಳವಳಿ, ಚಟುವಟಿಕೆಗೂ ಆಸ್ಪದವೀಯಲು ಸರಕಾರಕ್ಕೆ ಮನಸ್ಸಿಲ್ಲ" ಎಂದು ಉತ್ತರ ಬಂತು.

ಆಗ ಮದ್ರಾಸಿನ 'ಮುಸ್ಲಿಂ ಪೇಟ್ರಿಯಟ್' ಎಂಬ ಪತ್ರಿಕೆಯಲ್ಲಿ ತನ್ನೆಲ್ಲ ಪತ್ರವ್ಯವಹಾರದ ವಿಚಾರವನ್ನು ಹೇಳಿ ರಫೀಕಿ ಒಂದು ಲೇಖವನ್ನು ಪ್ರಸಿದ್ಧಿಸಿದ. ಇಡೀ ಭಾರತದಲ್ಲಿ ಒಂದು ಪುಟ್ಟ ಕೋಲಾಹಲವೇ ಎದ್ದಿತು. ಕಲಕತ್ತೆಯ 'ದಿ ಬೆಂಗಾಲಿ' ಎಂಬ ಪತ್ರಿಕೆ "ಇದೆಂಥ ನಾಚಿಕೆಗೇಡಿತನ! ಬಹಾದ್ದೂರ ಶಾಹನ ಗೋರಿಯ ಸುತ್ತ ೧೦-೧೫ ರೂಪಾಯಿಗಳ ವೆಚ್ಚದಿಂದ ಒಂದು ಬೇಲಿಕಟ್ಟುವ ವಿಚಾರ ಮಾತ್ರದಿಂದಲೇ ಸರ್ವಶಕ್ತ ಬ್ರಿಟಿಶ್ ಸರಕಾರ ನಡುಗುತ್ತಿದೆಯೆಂದರೆ ಎಂಥ ವಿಪರೀತ! ಎಂದು ಬರೆಯಿತು. ಇತರ ಪತ್ರಿಕೆಗಳೂ ದನಿಗೂಡಿಸಿದವು. ಡಾಕ್ಕಾದಲ್ಲಿ ಸೇರಿದ ವೈಸರಾಯರ ಲೆಜಿಸ್ಲೇಟಿವ್ ಕೌನ್ಸಿಲಿನ ಸಭೆಯಲ್ಲಿ ನವಾಬ ಸರ್ ಸಾಲಿಮುಲ್ಲಾ ಮದ್ರಾಸಿನ ಪತ್ರಿಕೆಯಲ್ಲಿ ಬಂದ ಎ. ಎಸ್ ರಫೀಕಿಯವರ ಲೇಖದ ವಿಚಾರ ಸರಕಾರಕ್ಕೆ ತಿಳಿದಿದೆಯೆ ಎಂದು ಕೇಳಿದರು. ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ಭಾರತ ಸರಕಾರವು ಬ್ರಹ್ಮೀ ಸರಕಾರಕ್ಕೆ ಬರೆಯಲಾರದೇ ಎಂದೂ ಕೇಳಿದರು.

ಅದಕ್ಕೆ ಗೃಹಮಂತ್ರಿಗಳು ಲೇಖದ ವಿಷಯ ಸರಕಾರಕ್ಕೆ ತಿಳಿದಿಲ್ಲವೆಂದೂ ಆದರೆ ಬಹದ್ದೂರ ಶಾಹನ ಗೋರಿಯ ಸುಧಾರಣೆ ಸಂಬಂಧದಲ್ಲಿ ಐತಿಹಾಸಿಕ ದೃಷ್ಟಿಯಿಂದ ಏನಾದರೂ ಮಾಡಬೇಕೆಂಬ ವಿಚಾರ ಸರಕಾರಕ್ಕಿದ್ದು ಆ ಬಗ್ಗೆ ಬ್ರಹ್ಮೀ ಸರಕಾರಕ್ಕೆ ಸೂಚನೆ ಕಳಿಸಲ್ಪಟ್ಟಿದೆ ಎಂದೂ ತಿಳಿಸಿದರು.

ಅಂತೂ ಚಕ್ರ ತಿರುಗತೊಡಗಿತು. ಬಹಾ

ದ್ದೂರ ಶಾಹನ ಗೋರಿಯ ಸುಧಾರಣೆ ಆಯಿತು. ಒಬ್ಬ ಸಾಮಾನ್ಯ ಬ್ರಿಟಿಶ್ ಅಂಗಡಿಕಾರನ ಗೋರಿಯಾದರೂ ಇದಕ್ಕಿಂತಲೂ ಹೆಚ್ಚು ಭವ್ಯ ವಾಗಿದ್ದೀತು ಎಂದು ಆಗ ರಫೀಕಿ ಹೇಳಿದರೂ ರಂಗೂನಿನ ಮುಸ್ಲಿಮರು ಸಭೆ ಸೇರಿ ಬಹಾದ್ದೂರ ಶಾಹನ ಗೋರಿಯ ಮೇಲೆ ಶಾಶ್ವತ ಸ್ಮಾರಕ ನಿಲ್ಲಿಸಿದ್ದಕ್ಕಾಗಿ ಸರಕಾರವನ್ನು ಅಭಿನಂದಿಸಿ ಝೀಮತ ಮಹಲಳ ಗೋರಿಯ ಮೇಲೂ ಸ್ಮಾರಕ ನಿಲ್ಲಿಸಲು ಬಿನ್ನವಿಸಿಕೊಂಡರು. ಅವಳ ಗೋರಿ ಅಲ್ಲಿಯೇ ಸಮೀಪದಲ್ಲಿದ್ದರೂ ಅಧಿಕಾರಿಗಳು ಬಹಾದ್ದೂರ ಶಾಹನ ಗೋರಿಯ ಸ್ಮಾರಕದ ಮೇಲೆಯೇ "ಇಲ್ಲಿಯೇ ಸಮೀಪದಲ್ಲಿ ೧೮೮೬ ಜುಲೈ ೧೭ ರಂದು ಸತ್ತ ಬಹಾದ್ದೂರ ಶಾಹನ ಪತ್ನಿ ಝೀಮತ ಮಹಲಳು ಹುಗಿಯಲ್ಪಟ್ಟಳು" ಎಂದು ಬರೆದರು.

ಝೀಮತ ಮಹಲಳ ಗೋರಿಯ ಮೇಲೆ ಪ್ರತ್ಯೇಕ ಸ್ಮಾರಕ ನಿಲ್ಲಿಸಬೇಕೆಂದು ಮುಂದೆ ಮೂರು ವರ್ಷಗಳ ವರೆಗೆ ರಫೀಕಿ ಪ್ರಯತ್ನಿಸಿದ. ಆದರೆ ಉಪಯೋಗವಾಗಲಿಲ್ಲ. ೧೯೧೦ ರಲ್ಲಿ ಕೊನೆಯದಾಗಿ ಅವನಿಗೆ "ಸರಕಾರ ಈ ವಿಷಯವನ್ನು ಮುಗಿಸಿ ಬಿಟ್ಟಿದೆ" ಎಂಬ ಪತ್ರ ಬಂತು.

ಆದರೆ ಗೋರಿಯ ಪ್ರಕರಣ ಮುಗಿದರೂ ರಫೀಕಿಯ ಪ್ರಕರಣ ಮುಗಿಯಲಿಲ್ಲ. ಕಾಶ್ಮೀರದಿಂದ ಭಾರತಕ್ಕೆ ಅಲ್ಲಿಂದ ಬ್ರಹ್ಮದೇಶಕ್ಕೆ ಗಡೀಪಾರು ಮಾಡಲ್ಪಟ ಈ ಮನುಷ್ಯ ಉಪದ್ವ್ಯಾಪಿ ಎಂದು ಸರಕಾರ ರಫೀಕಿಗೆ ಬ್ರಹ್ಮದೇಶದಲ್ಲಿ ಇರುವುದೇ ಅಸಾಧ್ಯವಾಗುವಂತೆ ಮಾಡಿತು. ೧೯೧೪ ರ ಅಕ್ಟೋಬರ್ ತಿಂಗಳಲ್ಲಿ ಮೊದಲನೆಯ ಜಾಗತಿಕ ಮಹಾಯುದ್ಧ ಆರಂಭವಾಗಿ ಕೇವಲ ಹನ್ನೊಂದು ವಾರಗಳು ಆಗಿದ್ದಾಗ ರಫೀಕಿ ಬ್ರಹ್ಮದೇಶವನ್ನು ತೊರೆದು ಜಾವಾ ದ್ವೀಪಕ್ಕೆ ಬಂದ. ಅದನ್ನು ಗೆದ್ದಿದ್ದ ಡಚ್ಚರು ಅದರ ರಾಜಧಾನಿಯಾದ ಜಕಾರ್ತಾದ ಹೆಸರು ಬದಲಿಸಿ ಅದಕ್ಕೆ ಬಟಾವಿಯಾ ಎಂಬ ಹೊಸ ಹೆಸರಿಟ್ಟಿದ್ದರು.

೧೯೧೪ ರಲ್ಲಿ ಬಟಾವಿಯಾ ಒಂದು ಸಮೃದ್ ವ್ಯಾಪಾರ ಕೇಂದ್ರವಾಗಿತ್ತು. ರಫೀಕಿ ಬಟಾ ಯಕ್ಕೆ ಬರುವ ಹೊತ್ತಿಗೆ ವಿದೇಶೀಯರೆಲ್ಲ ಊ ಹೊರಗಿನ ಸುಖವಸತಿಗಳಲ್ಲಿ ಇರತೊಡಗಿದ್ದರು ಪೋಲೀಸರು ರಫೀಕಿಯನ್ನು ಹುಡುಕುವಾ ಮೊದಲು ಚೀನಿಯರು ಇಂಡೋನೇಶಿಯನ್ನರ ವಾಸವಾಗಿದ್ದ ಹೊಲಸು ಕೇರಿಯಲ್ಲೇ ಹುಡು ದರು. ಆದರೆ ರಫೀಕಿ ಯುರೋಪಿಯನ ಹೊಟೆಲ್ ಒಂದರಲ್ಲಿ ಇರುವುದನ್ನು ಕಂಡಾ ಅವರಿಗೆ ಅತ್ಯಾಶ್ಚರ್ಯವಾಗಿಬಿಟ್ಟಿತು.

ಜಗತ್ತಿನ ರಾಜಕೀಯ ಪರಿಸ್ಥಿತಿ ರಫೀ ಯನ್ನು ಇಲ್ಲಿಯೂ ಸುಮ್ಮನಿರಗೊಡಲಿಲ್ಲ. ಅ ತನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದಾನೆ "ಹಿಂದುಸ್ತಾನಿಯಲ್ಲಿ ಕೆಲ ಹಸ್ತಪತ್ರಿಕೆಗಳನ್ ಮುದ್ರಿಸಿ ಹಂಚಿದೆ. ಜರ್ಮನಿಯೊಡನೆ ಬ್ರಿಟನ್ ಯುದ್ಧ ಮಾಡುತ್ತಿರುವ ಈ ಸಂದರ್ಭ ಪೂರ್ತಿ ಉಪಯೋಗವನ್ನು ಬ್ರಿಟಿಶ್ ಭಾರ ಮಾಡಿಕೊಳ್ಳಬೇಕು. ಸ್ವಾಯತ್ತತೆಯನ್ನು ಪ ಯಲು ಪ್ರಯತ್ನಿಸಬೇಕು. ಹಾಗಾದಲ್ಲಿ ಉಭ ಯತರಿಗೂ ಲಾಭವಿದೆ. ಬ್ರಿಟಿಶ್ ಸರಕಾ ಸ್ವಾಯತ್ತ ಸರಕಾರವನ್ನು ದಯಪಾಲಿಸಿದ ಭಾರತೀಯರು ಈ ಯುದ್ಧದಲ್ಲಿ ಬ್ರಿಟಿಶರಿ ಸಕಲ ಸಹಾಯ ಮಾಡಬೇಕು. ತನ್ನ ಶತ್ರು ಜರ್ಮನಿ, ಭಾರತವಲ್ಲ ಎಂಬುದನ್ನು ಬ್ರಿಟಿಶ ಸರಕಾರ ತಿಳಿದುಕೊಳ್ಳಬೇಕು ಎಂದು ನಾನ ಬರೆದಿದ್ದೆ."

ಈ ಹಸ್ತ ಪತ್ರಿಕೆಗಳನ್ನು ಮುದ್ರಿಸುತ್ತಿದ್ ಮುದ್ರಣಾಲಯಕ್ಕೆ ೧೯೧೫, ಮಾರ್ಚ್ ರಂದು ರಫೀಕಿ ಹೋದಾಗ "ಪೋಲೀಸರ ಬಂದು ಪ್ರೆಸ್ಸಿನ ಝಡತಿ ಮಾಡಿ ನಿಮ್ಮ ಕೆ ಹಸ್ತಪ್ರತಿಗಳನ್ನೂ ಮುದ್ರಿತ ಪತ್ರಿಕೆಗಳನ್ನೂ ಕೊಂಡು ಹೋದರು" ಎಂದು ಮುದ್ರಣಾಲಯ ದವರು ಹೇಳಿದರು. ಪೋಲೀಸರು ತನ್ನ ಶೋಧ ದಲ್ಲಿದ್ದಾರೆಂದು ಕೇಳಿ ರಫೀಕಿ ಮರುದಿನ ಬಟಾ

ವಿಯದ ಅಸಿಸ್ಟಂಟ್ ರೆಸಿಡೆಂಟ್ ಐ. ಸಿ. ಕ್ಯಾನೆ ಇವರ ಎದುರು ಹಾಜರಾದ. ಚೀಫ್ ಮ್ಯಾಜಿಸ್ಟ್ರೇಟರ ಎದುರು ರಫೀಕಿಯನ್ನು ಕೋರ್ಟಿನಲ್ಲಿ ಹಾಜರು ಮಾಡಿದಾಗ ಅವನನ್ನು ಪೋಲೀಸ ವಿಚಾರಣೆ ಮುಗಿಯುವ ವರೆಗೆ ಜೇಲಿನಲ್ಲಿಡಲಾಗುವುದೆಂದೂ ಅನುಗ್ರಹವೆಂದು ಯುರೋಪಿಯನ್ನರ ಜೇಲಿನಲ್ಲಿಡಲಾಗುವುದೆಂದೂ ತಿಳಿಸಲಾಯಿತು. ಆತ ಒಂದು ತಿಂಗಳ ಕಾಲ ಜೇಲಿನಲ್ಲಿ ಉಳಿದ.

ಒಂದು ತಿಂಗಳ ನಂತರ ರಫೀಕಿಯನ್ನು ಮತ್ತೆ ಅಸಿಸ್ಟಂಟ್ ರೆಸಿಡೆಂಟನ ಎದುರು ನಿಲ್ಲಿಸಿದರು. ಇನ್ನು ಮುಂದೆ ವಾರಕ್ಕೊಮ್ಮೆ ಚೀಫ್ ಡಿಟೆಕ್ಟಿವ್ಹರ ಮುಂದೆ ಹಾಜರಿ ಕೊಡಬೇಕು, ಅಸಿಸ್ಟಂಟ್ ರೆಸಿಡೆಂಟರಿಗೆ ತಿಳಿಸದೆ ಬಟಾವಿಯವನ್ನು ಬಿಟ್ಟುಹೋಗಕೂಡದು, ಯಾವುದೇ ರಾಜಕೀಯ ಹಸ್ತಪತ್ರಿಕೆಗಳನ್ನು ಮುದ್ರಿಸಲಾಗದು ಎಂಬ ಕರಾರುಗಳಿಗೆ ಒಪ್ಪಿದರೆ ಬಿಡುಗಡೆ ಮಾಡಲಾಗುವುದು ಎಂದು ಅಲ್ಲಿ ತಿಳಿಸಿದರು. ಒಪ್ಪಿ ರಫೀಕಿ ಬಿಡುಗಡೆಹೊಂದಿದ.

ತಾನು ಡಚ್ ಕಾಯದೆಯನ್ವಯ ಯಾವ ಅಪರಾಧವನ್ನೂ ಮಾಡಿಲ್ಲವೆಂದೂ ಗವರ್ನರ್ ಜನರಲ್ಲರಿಗೆ ಅವರ ಕಾಯದೆ ಸಲಹೆಗಾರರು ತನ್ನನ್ನು ಬಿಡಲು ಹೇಳಿದ್ದರಿಂದ ಗವರ್ನರ್ ಜನರಲ್ಲರ ಆದೇಶದ ಮೇರೆಗೆ ತನ್ನನ್ನು ಬಿಡುಗಡೆ ಮಾಡಿದರೆಂದೂ ರಫೀಕಿಗೆ ಆ ಮೇಲೆ ತಿಳಿಯಿತು. ಆದರೆ ಅಸಿಸ್ಟಂಟ್ ರೆಸಿಡೆಂಟ್ ಕ್ಯಾನೆ "ಕಾಯದೆ ಏನೇ ಹೇಳಲಿ, ಒಂದಿಲ್ಲೊಂದು ನೆಪದಿಂದ ನಿನ್ನನ್ನು ನಾನು ಬೇಕಾದಾಗ ಜೇಲಿನಲ್ಲಿಡಬಲ್ಲೆ" ಎಂದು ರಫೀಕಿಗೆ ಬೆದರಿಕೆ ಹಾಕಿದ್ದ.

ಮುಂದೆ ಕೆಲ ಸಮಯದ ವರೆಗೆ ರಫೀಕಿಗೆ ಯಾವ ತೊಂದರೆಯೂ ಬರಲಿಲ್ಲ. ಆತ ಮಧ್ಯ ಜಾವಾದಲ್ಲೆಲ್ಲ ಸಂಚಾರ ಮಾಡಿದ. ಪ್ರತಿಯೊಂದು ಊರಿನಲ್ಲೂ ಆತ ಅಸಿಸ್ಟಂಟ್ ರೆಸಿಡೆಂಟನಿಗೆ ತನ್ನ ಹಾಜರಿ ಒಪ್ಪಿಸಬೇಕೆಂದು ವಿಧಿಸಿದ್ದರೂ ಅವರಿಗೆ ಈ ವಿಷಯ ವಿಸ್ಮಯವನ್ನುಂಟುಮಾಡುತ್ತಿತ್ತು. ಸಂಚಾರ ಕಾಲದಲ್ಲಿ ಬಂದೂಕು ಧರಿಸಲು ಮಾತ್ರ ರಫೀಕಿಗೆ ಅಪ್ಪಣೆ ಇರಲಿಲ್ಲ.

ರಫೀಕಿ ಬಟಾವಿಯಕ್ಕೆ ಮರಳಿದ ಮೇಲೆ ಅಸಿಸ್ಟಂಟ್ ರೆಸಿಡೆಂಟ್ ಕ್ಯಾನೆ ಅವನನ್ನು ಕರೆಸಿ "ನೀನು ಇಲ್ಲಿರುವ ವರೆಗೂ ಬ್ರಿಟಿಶ್ ಮತ್ತು ಡಚ್ ಸರಕಾರಗಳ ಸಂಬಂಧ ಒಳ್ಳೆಯದಾಗಿರುವುದು ಸಾಧ್ಯವಿಲ್ಲ" ಎಂದು ಹೇಳಿದ. ಆದರೆ ರೆಸಿಡೆಂಟನ ಬಳಿಗೆ ಹೋದಾಗ "ಇದೆಲ್ಲ ಹುರುಳಿಲ್ಲದ ಮಾತು. ರಾಜಕೀಯ ಹಸ್ತಪತ್ರಿಕೆಗಳನ್ನು ಮುದ್ರಿಸದಿದ್ದರೆ ನೀನು ಬೇಕಾದಷ್ಟು ಕಾಲ ಜಾವಾದಲ್ಲಿರಬಹುದು" ಎಂದು ಆತ ಹೇಳಿದ.

ಆದರೆ ಇದು ಕ್ಷಣಕಾಲದ ಸಂತಸವಾಯಿತು. ಮುಂದೆ ಒಂದು ವಾರದೊಳಗಾಗಿಯೆ ರಫೀಕಿಗೆ "ಇನ್ನೊಂದು ತಿಂಗಳಲ್ಲಿ ಜಪಾನಕ್ಕೆ ಹೋಗುವ ಹಡಗನ್ನೇರಲು ಸಿದ್ಧನಾಗಿರಬೇಕು" ಎಂಬ ನೋಟೀಸು ಬಂತು. ರಫೀಕಿ ಗವರ್ನರ ಜನರಲ್ಲರನ್ನು ಕಾಣಬಯಸಿದ. ಸಾಧ್ಯವಾಗಲಿಲ್ಲ. ಬ್ರಿಟಿಶರು ಮತ್ತು ಡಚ್ಚರಲ್ಲಿ ರಫೀಕಿಯ ಇರುವಿಕೆ ಭಿನ್ನಾಭಿಪ್ರಾಯವನ್ನುಂಟುಮಾಡುತ್ತಿರುವುದೆಂದು ಗವರ್ನರ್ ಜನರಲ್ ಕೂಡ ರಫೀಕಿಯ ಮೇಲೆ ಕೋಪಗೊಂಡಿದ್ದ. ಆದರೆ ತಾನು ಹೇಳಿದ ನಡುಗಡ್ಡೆಗೆ ಹೋಗಿ ಇರುವುದಾದರೆ ಯುದ್ಧ ಮುಕ್ತಾಯದ ವರೆಗೂ ಜಾವಾದಲ್ಲಿರಲು ಅಪ್ಪಣೆ ಕೊಡುವುದಾಗಿ ಗವರ್ನರ್ ಜನರಲ್ ಹೇಳಿದ. ಮತ್ತೆ ರಫೀಕಿಯ ಪತ್ರವ್ಯವಹಾರದ ಮೇಲೆ ತನ್ನ ನಿಯಂತ್ರಣವಿರತಕ್ಕದ್ದು ಎಂದೂ ಆತ ತಿಳಿಸಿದ. ರಫೀಕಿ ಒಪ್ಪಿದ. ಆತ ಮತ್ತೇನೂ ಮಾಡುವಂತಿರಲಿಲ್ಲ.

೧೯೧೫, ಅಗಸ್ಟ ೧೪ ರಂದು ರಫೀಕಿಗೆ ೨೪ ತಾಸುಗಳಲ್ಲಿ ಅಸಹಾನ್ ಎಂಬ ಯುದ್ಧ ಹಡಗವನ್ನೇರಲು ಸಿದ್ಧವಾಗಬೇಕೆಂದು ಹೇಳಿದರು. ಆ ಹಡಗು ಏಳು ದಿನಗಳಲ್ಲಿ ಅವನನ್ನು ತಿಮೋರ್ ಎಂಬ ನಡುಗಡ್ಡೆಗೆ ಒಯ್ದುಬಿಟ್ಟಿತು.

ಆ ಊರು ಸ್ಮಶಾನದಂತಿತ್ತು. ಸುಂದರವಾದದ್ದೇನೂ ಅಲ್ಲಿ ರಫೀಕಿಗೆ ಕಾಣಿಸಲಿಲ್ಲ. ಅಲ್ಲಿ ಜೀವನ ಅಸಹ್ಯವಾಯಿತು ರಫೀಕಿಗೆ. ಅಷ್ಟರಲ್ಲಿ ಕೂಪಾಂಗದ ಅಸಿಸ್ಟೆಂಟ್ ರೆಸಿಡೆಂಟ್ ಅವನಿಗೆ, "ಡಚ್ ಅಧಿಕಾರಿಗಳಿಗೆ ತಿಳಿಯದ ಹಿಂದುಸ್ತಾನಿ, ಉರ್ದು, ಪರ್ಶಿಯನ್ ಅಥವಾ ಇನ್ನಾವುದೆ ಭಾಷೆಯಲ್ಲಿ ಪತ್ರಗಳನ್ನು ಬರೆಯಲಾಗದು. ವ್ಯವಹಾರ ಉದ್ದಿಮೆಯ ಮಾತನ್ನೂ ಪತ್ರಗಳಲ್ಲಿ ಬರೆಯಲಾಗದು" ಎಂದು ತಿಳಿಸಿದ. ಹೀಗಾಗಿ ರಫೀಕಿ ತನ್ನ ಮಿತ್ರರು, ಉದ್ದಿಮೆಯ ಸಹಕಾರಿಗಳು ಎಲ್ಲರಿಂದಲೂ ದೂರವಾಗುವಂತಾಯಿತು.

ಈ ಮೂಲೆಯ ಊರಿನಲ್ಲಿ ಆತ ಯಾರ ಸಹಾಯ ಕೇಳಬಹುದು? ಆತ ಪೂರ್ಣ ನಿರಾಶನಾಗುತ್ತಿದ್ದಾಗ ಡಚ್ ಮಿಲಿಟರಿ ಆಫೀಸರ್ ಕ್ಯಾಪ್ಟನ್ ವರ್ಮೀರ್ ಎಂಬಾತನ ಪರಿಚಯವಾಯಿತು. ರಫೀಕಿ ಇಂಡೀಸ್ ದ್ವೀಪಗಳಿಗೆ ಗಡೀಪಾರು ಮಾಡಲ್ಪಟ್ಟಿದ್ದರೆ ಕ್ಯಾಪ್ಟನ್ ವರ್ಮೀರನು ಅಲ್ಲಿಂದ ಗಡೀಪಾರು ಮಾಡಲ್ಪಟ್ಟು ಕೂಪಾಂಗ್‌ನಲ್ಲಿ ಬಂದು ಇದ್ದ. ಈತ ರಫೀಕಿಗೆ ಸಹಾಯ ಮಾಡತೊಡಗಿದ. ಆತನ ಪತ್ರಗಳನ್ನೆಲ್ಲ ಡಚ್ ಭಾಷೆಯಲ್ಲಿ ಬರೆದು ಕೊಡತೊಡಗಿದ. ತನಗೆ ಉರ್ದುವಿನಲ್ಲಿ ಬರೆಯಲು ಅವಕಾಶ ಕೊಡದಿದ್ದರೆ, ವ್ಯವಹಾರದ ಮಾತು ಎತ್ತಲು ಕೊಡದಿದ್ದರೆ ತಾನು ಉಪಜೀವನಕ್ಕಾಗಿ ಸಂಪಾದಿಸಲಾರೆ, ಅಂಥ ಸಂದರ್ಭದಲ್ಲಿ ತನ್ನ ಉಪಜೀವನಕ್ಕಾಗಿ ಸರಕಾರ ಸಹಾಯ ಮಾಡಬೇಕು ಎಂದು ರಫೀಕಿ ಗವರ್ನರ್ ಜನರಲ್‌ಗೆ ಪುನಃ ಪುನಃ ಬರೆದು ತಿಳಿಸಿದ.

ಆದರೆ ಅವನ ಬೇಡಿಕೆಯೊಂದೂ ಮಾನ್ಯವಾಗಲಿಲ್ಲ. ಅಷ್ಟೇ ಅಲ್ಲ, ಇಂಥ ಉದ್ಧಟತನದ ಪತ್ರ ಬರೆದದ್ದಕ್ಕಾಗಿ ಕ್ಷಮೆ ಕೇಳಿಕೊಳ್ಳಬೇಕು ಎಂದು ಗವರ್ನರ್ ಜನರಲ್ ಕೇಳಿದ. ರಫೀಕಿ ಕ್ಷಮ
ಪತ್ರ ಬರೆದು ಅದರ ಜೊತೆಗೆ, "ನನ್ನ ಅವಸ
ಹುಲಿಗೆ ಹೆದರಿ ಒಬ್ಬಾತನ ಮನೆ ಸೇರಿದವ
ಅವಸ್ಥೆಯಂತಿದೆ. ಅವನಿಗೆ ತನ್ನ ಮನೆಯಲ್ಲ
ಇರಲು ಅವಕಾಶಕೊಟ್ಟರೂ ಆ ಗೃಹಸ್ಥ ತಿನ್ನಲ
ಮಾತ್ರ ಏನೂ ಕೊಡಲಿಲ್ಲ. ನೀನು ಬೇಕಾದಾ
ಮನೆ ಬಿಟ್ಟು ಹೋಗಬಹುದು ಎಂದು ಆ ಗೃಹಸ
ಹೇಳಿದ. ಆ ಹಾದಿಹೋಕನ ಎದುರು ಎರಡ
ಮಾರ್ಗಗಳಿದ್ದವು; ಹೊರಗೆ ಹೋಗಿ ಹುಲಿಯ
ಬಾಯಿಗೆ ಬೀಳುವುದು ಅಥವಾ ಮನೆಯಲ್ಲಿಯ
ಇದ್ದುಕೊಂಡು ಉಪವಾಸದಿಂದ ಸಾಯುವುದು
ಎಂದು ಬರೆದ.

ಕೈಲಿದ್ದ ಹಣವೆಲ್ಲ ತೀರುತ್ತ ಬಂದಾಗ ತಾ
ನಿನ್ನು ಬೀದಿಯ ಭಿಕಾರಿಯಾಗುವ ಹೊತ್ತ
ಬಂತು ಎಂದು ರಫೀಕಿ ಪರಿತಪಿಸುತ್ತಿದ್ದಾ
ಅವನ ಸ್ಥಿತಿ ಸುಧಾರಿಸಿತು. ಎಲ್ಲ ಯುದ್ಧಗಳಂ
ಮಹಾಯುದ್ಧವೂ ಮುಗಿಯಿತು. ಒಪ್ಪಂ
ವಾಯಿತು.

ರಫೀಕಿ ಟಿಮೋರಿನಲ್ಲೆ ಉಳಿದ. ವರ್ಷಗಳ
ಕಳೆದವು. ತನಗಿನ್ನು ಇಲ್ಲಿಯೇ ಮುಕ್ತಿ ಎಂದಾ
ಖಂಡಿತ ಮಾಡಿಕೊಂಡ.

ವಿಮಾನೋಡ್ಡಾಣಕ್ಕೆ ಅದು ಅತ್ಯಂತ ಅನ
ಕೂಲವಾದ ದಿನವಾಗಿತ್ತು. ಆರ್. ಎ. ಎಫ
ವೈಮಾನಿಕನೊಬ್ಬ ಟಿಮೋರಿನ ಮೇಲೆ ಬಾಂಬ
ಸೆದು ಹೋದ. ನಡುಗಡ್ಡೆಯಲ್ಲಿ ಹಾಹಾಕಾ
ವೆದ್ದಿತು. ಬ್ರಿಟಿಶ್ ವಿಮಾನಗಳು ಜಪಾನಿಗ
ಮಿಲಿಟರಿ ಠಾಣ್ಯಗಳ ಮೇಲೆ ಬಾಂಬೆಸೆಯಲ
ಶುರು ಮಾಡಿದಾಗ ಅವರ ಬಾಂಬಿನಿಂದ ಮೊ
ಮೊದಲು ಧ್ವಂಸವಾದದ್ದೆಂದರೆ ಟಿಮೋರಿನಲ್ಲಿ
ಎ. ಸೆಲಾಮ ರಫೀಕಿಯ ಮನೆಯೆ ಆಗಿದ್ದಿತು.

"ಅವನ ಶಬ್ದ ಭಾಂಡಾರ ವಿಪುಲವಾಗಿದೆ."

"ಹೌದು, ಅವನು ಮದುವೆಯಾದದ್ದೇ ಶಬ್ದ ಭಾಂಡಾರವನ್ನು."

ನಕ್ಷತ್ರ ಹೇಳಿದ ಫಲ

ಯಶಪಾಲ

ನಾಲ್ಕು ವರ್ಷಗಳ ಹಿಂದೆ ನಾನು ಆಸಾಮದಲ್ಲಿದ್ದೆ. ಶರದೃತುವಿನ ಪ್ರಾರಂಭಕ್ಕೆ ಎರಡು ತಿಂಗಳ ರಜೆ ಪಡೆದು ಪ್ರಕೃತಿ ಸುಧಾರಿಸಿಕೊಳ್ಳಲೆಂದು ಅರಣ್ಯ ಪ್ರದೇಶಕ್ಕೆ ಹೋದೆ. ನನ್ನ ಹೆಂಡತಿ ಮತ್ತು ಏಳು ವರ್ಷದ ಮಗಳೂ ನನ್ನ ಜೊತೆಯಲ್ಲಿದ್ದರು. ಈ ಪ್ರದೇಶದಲ್ಲಿ ಎಷ್ಟೋ ಶಿಬಿರಗಳಿವೆ. ಒಂದು ಹೇಸರಗತ್ತೆಯನ್ನು ತೆಗೆದುಕೊಂಡು ನಾವು ಮೂವರೂ ಶಿಬಿರದಿಂದ ಶಿಬಿರಕ್ಕೆ ಕಾಲು ನಡಿಗೆಯಿಂದ ನಡೆದೆವು. ಶಿಬಿರದ ಯಾವುದಾದರೂ ಅಂಗಡಿಯಲ್ಲಿ ಅಥವಾ ಪ್ರವಾಸಿಗಳ ಬಂಗಲೆಯಲ್ಲಿ ರಾತ್ರಿ ಕಳೆಯುತ್ತಿದ್ದೆವು. ಒಂದು ಸ್ಥಳ ವಿಶೇಷ ರಮಣೀಯವೆನಿಸಿದರೆ ಅಲ್ಲಿ ಎರಡೆರಡು ದಿನ ಕಳೆಯುತ್ತಿದ್ದೆವು.

ಒಂದು ಕ್ಯಾಂಪಿನಲ್ಲಿ ಗುಡ್ಡದ ಪೂರ್ವದಿಕ್ಕಿನ ತುದಿಗಿರುವ ಡಾಕ್ ಬಂಗಲೆಯಲ್ಲಿ ನಾವು ಇಳಿದುಕೊಂಡಿದ್ದೆವು. ಚೌಕೀದಾರನು ಗುಡ್ಡದ ಪಶ್ಚಿಮ ತುದಿಯಲ್ಲಿ ಸೂರ್ಯಾಸ್ತವಾಗುವುದನ್ನು ನೋಡಲೇಬೇಕೆಂದು ಹೇಳಿದ. ಬಂಗಲೆಯಿಂದಲೇ ಅತ್ತ ಒಂದು ಹಾದಿ ಹೋಗಿತ್ತು.

ಆದರೆ ನನ್ನ ಪತ್ನಿ ಅಂದೇ ಮುಂಜಾನೆ ಎಂಟು ಮೈಲು ನಡೆದಿದ್ದಳಾದ್ದರಿಂದ ಈಗ ಮತ್ತೆ ಮೂರು ಮೈಲು ನಡೆದು ಗುಡ್ಡ ಹತ್ತಿ ಇಳಿದು ಮರಳಿ ಬರಲು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಮಗಳು ಕೂಡಲೇ ಒಪ್ಪಿದಳು. ಒಂದೂವರೆ



ಮೈಲಿನ ವರೆಗೆ ಸರಿಯಾದ ದಾರಿ ಇದೆಯೆಂದೂ ಮುಂದೆ ಕಾಲು ಹಾದಿ ಹಿಡಿಯಬೇಕೆಂದೂ ಚೌಕೀದಾರ ಹೇಳಿದನು. ಕಾಡುಪ್ರಾಣಿಗಳ ಭಯವಿಲ್ಲ. ಕತ್ತಲಾದ ಮೇಲೆ ಯಾವಾಗಾದರೊಮ್ಮೆ ತೋಳಗಳು ಬಯಲಿಗೆ ಬರುತ್ತವಷ್ಟೇ. ಇವು ಕುರಿಮರಿಗಳನ್ನೋ ಕೋಳಿಗಳನ್ನೋ ಹಿಡಿದುಕೊಂಡು ಹೋಗುವವೇ ಹೊರತು ಮನುಷ್ಯರಿಗೇನೂ ಅಪಾಯ ಮಾಡುವುದಿಲ್ಲ.

ನಾನು ಮತ್ತು ನನ್ನ ಮಗಳು ಸೂರ್ಯಾಸ್ತಕ್ಕೆ ಇನ್ನೂ ಮೂರು ಗಂಟೆ ಇರುವಾಗಲೇ ಗುಡ್ಡದ ದಾರಿ ಹಿಡಿದೆವು. ಕೈಯಲ್ಲಿ ಬ್ಯಾಟರಿ ಇತ್ತು. ಗುಡ್ಡದ ವರೆಗಿನ ಹಾದಿಯಂತೂ ಸರಿಯಾಗಿಯೆ ಇತ್ತು. ಏರೂ ಬಹಳವಾಗಿರಲಿಲ್ಲ. ಕಾಲುಹಾದಿಯಿಂದ ಶಿಖರಕ್ಕೆ ಹೋಗುವುದು ಅಷ್ಟೇನೂ ಕಷ್ಟದಾಯಕವಾಗಿರಲಿಲ್ಲ.

ತುದಿಗೆ ಹೋದಾಗ ಪಶ್ಚಿಮಕ್ಕೆ ಬರ್ಫದ ಪರ್ವತಗಳ ಸರಪಳಿಯೇ ಪಸರಿಸಿರುವಂತೆ ತೋರಿತು. ಪಶ್ಚಿಮದ ಬರ್ಫವನ್ನು ಮುಳುಗುವ ಸೂರ್ಯನು ಮುಟ್ಟುವುದೇ ತಡ. ಅವುಗಳ ನಡುವೆ ಅನೇಕ ಕಾಮನಬಿಲ್ಲುಗಳು ಒಡಮೂಡಿ ದೃಶ್ಯ ನಯನಾಭಿರಾಮವಾಯಿತು. ಹಿಮ ಕಣಗಳ ಮೇಲಿನ ಬಣ್ಣದ ಚಮತ್ಕಾರವನ್ನು ನೋಡಿ ಮನಸ್ಸು ಕುಣಿಯಲಾರಂಭಿಸಿತು. ಆ ದೃಶ್ಯವನ್ನು ನೋಡಿ ನನ್ನ ಮಗಳ ಉಲ್ಲಾಸ ಹೇಳಲಾಸಲ್ಲ.

ಸೂರ್ಯಾಸ್ತ ರಮ್ಯವಾಗಿತ್ತು ನಿಜ; ಆದರೆ ರಾತ್ರಿಯ ಮೊದಲೇ ಮರಳುವುದು ಅಗತ್ಯವಾಗಿತ್ತು.

ಸೂರ್ಯ ಕೆಂಡದ ದೊಡ್ಡ ತಟ್ಟೆಯಂತೆ ಕಾಣುತ್ತಿದ್ದ. ಈ ತಟ್ಟೆ ಬರ್ಫದ ಮೇಲೆ ಊರಿ ನಿಂತು ಚಕ್ರದಂತೆ ಗರಗರನೆ ತಿರುಗುತ್ತಿತ್ತು. ಈ ತಟ್ಟೆ ಸಾವಕಾಶವಾಗಿ ಬರ್ಫದಲ್ಲಿ ಸೇರಿಕೊಳ್ಳುತ್ತಿರುವುದು ಬಲು ಮನೋಹರವಾಗಿ ತೋರುತ್ತಿತ್ತು. ನನ್ನ ಮಗಳು ಈ ದೃಶ್ಯವನ್ನು ಎವೆ ಇಕ್ಕದೆ ನೋಡುತ್ತಿದ್ದಳು. ಎಷ್ಟು ಪರಿ-ಯಾಗಿ ಹೇಳಿದರೂ ಸೂರ್ಯ ಪೂರ್ಣವಾ ಮುಳುಗುವ ವರೆಗೆ ಆಕೆ ಅಲ್ಲಿಂದ ಏಳಲೇ ಇ

ಸೂರ್ಯಾಸ್ತವಾದೊಡನೆ ಬರ್ಫದ ಮೇ ನೀಲೀ ಛಾಯೆ ಹಬ್ಬಿತು. ಶಿಖರದ ಮೇಲೆ ಇನ ಬೆಳಕಿತ್ತು. ಆದರೆ ನಾವು ಕೆಳಗಿಳಿದಂತೆ ಕತ್ತ ಹೆಚ್ಚಾಗತೊಡಗಿತು. ಗುಡ್ಡಗಳಲ್ಲಿ ಸಂಧಿಪ್ರ ಶವು ಬಹಳ ಹೊತ್ತು ಇರುವುದಿಲ್ಲೆಂದು ನಿಮಗ ಗೊತ್ತಿರಬಹುದು.

ಕಾಲು ಹಾದಿಯಲ್ಲಿ ಮಗಳನ್ನು ಮುಂ ಮಾಡಿ ನಾನು ಸಾಗಿದ್ದೆ. ನಸುಗತ್ತಲೆಯಲ್ಲಿ ಎಷ್ಟೋ ಕಾಲು ಹಾದಿಗಳು ಕಾಣತೊಡಗಿದ ನಾವು ಇಳಿದ ರಸ್ತೆ ಡಾಕ್ ಬಂಗಲೆಗೆ ಹೋ ವುದಾಗಿರಲಿಲ್ಲ. ಮತ್ತೆ ಹಾದಿ ಹುಡುಕಲು ಹಿ ಏರಿಹೋಗಬೇಕೆಂದರೆ ಕತ್ತಲೆ ಇನ್ನೂ ಹೆ ಹಾದಿ ಸಿಗುವುದು ಇನ್ನೂ ಕಷ್ಟವಾದೀತೆನಿಸಿ ಅಂತೂ ಪೂರ್ವ ದಿಕ್ಕಿಗೆ ಹೋಗುವ ಕಾಲುದ ಯನ್ನೇ ಹಿಡಿಯಬೇಕೆಂದು ನಿರ್ಧರಿಸಿ ಹೊರಟೆ

ಕತ್ತಲೆ ಎಷ್ಟು ಘನವಾಗಿತ್ತೆಂದರೆ ಬ್ಯಾಟರಿ ಬೆಳಕಿನಿಂದ ಕಾಲೆಡುರಿಗಿನ ಮುಳ್ಳು ಕಲ್ಲ ಳನ್ನು ನೋಡಿ ಎಡವುವುದನ್ನು ತಡೆಯಬಹುದಿ ಲ್ಲದೇ ಸರಿಯಾದ ಹಾದಿ ಹುಡುಕುವುದು ಸಾ ವಿರಲಿಲ್ಲ. ಸುತ್ತಮುತ್ತ ಅಲ್ಲಲ್ಲಿ ಸಾಕ ಜನವಸತಿಗಳು ಇವೆ ಎಂದು ಚೌಕೀದಾರನಿ ತಿಳಿದಿದ್ದೆವು. ಅಂತೂ ಸಮೀಪವೇ ಯಾ ದರೂ ಸಿಗಬಹುದು. ಅವರನ್ನೇ ಕೇಳಿದ ಯಿತು ಎಂದುಕೊಂಡೆವು.

ಬ್ಯಾಟರಿಯ ಬೆಳಕಿನಿಂದ ಮುಳ್ಳು ಗಳನ್ನು ತಪ್ಪಿಸುತ್ತ ನಾವು ಮಾರ್ಗಕ್ರಮಿಸ ದ್ದೆವು. ೨೦-೨೫ ನಿಮಿಷ ನಡೆಯುವಷ್ಟರಲ್ಲಿ ನ ಹಾದಿಯನ್ನು ಅಡ್ಡಾಗಿ ಕತ್ತರಿಸುವ ಇನ್ನೊ ದೊಡ್ಡ ಹಾದಿ ಸಿಕ್ಕಿತು. ಒಂದರ ಬದಲು ಮ ದಾರಿಗಳನ್ನು ನೋಡಿ ದಿಗ್ಭ್ರಾಂತರಾ ರಾತ್ರಿಯಲ್ಲಿ ದಿಕ್ಕು ಗುರುತಿಸುವುದೂ ಅಸ ವಾಗಿತ್ತು. ಚುಕ್ಕೆಗಳೇನೋ ಮೂಡಿದ್ದವು. ಅ ಚುಕ್ಕೆಗಳ ಮೇಲಿಂದ ದಿಕ್ಕು ಗುರುತಿಸುವುದ

ನಾನು ಅರಿತಿರಲಿಲ್ಲ. ಪೂರ್ವ ದಿಕ್ಕು ಬಲಗಡೆ ಇರಬೇಕೆನಿಸಿದ್ದರಿಂದ ದೊಡ್ಡ ಹಾದಿಯುಗುಂಟ ಬಲಗಡೆಗೆ ಹೊರಟೆ. ಅರ್ಧ ಗಂಟೆಯಲ್ಲಿ ಮತ್ತೊಂದು ಅಡ್ಡ ಹಾದಿ ಸಿಕ್ಕಿತು. ಎಲ್ಲಿಯೋ ಬಹಳ ದೂರ ಹೋಗಿದ್ದೆವೆಂದುಕೊಂಡೆ. ಏನೇ ಆಗಲಿ, ನಾವು ನೆಟ್ಟಗೆ ಬಂದಂತೇ ಮುಂದೆ ಸಾಗಿದೆವು.

ದಟ್ಟ ಅಂಧಕಾರ. ಉತ್ತರದಿಂದ ಗಾಳಿ ಬೀಸಿ ಚಳಿ ಹೆಚ್ಚಾಗಿತ್ತು. ನನ್ನ ಹೆದರಿಕೆಯನ್ನು ನಾನು ನನ್ನ ಮಗಳಿಗೆ ತಿಳಿಯಗೊಡಲಿಲ್ಲ. ಮಗಳು ಹೆದರಬಾರದೆಂದೂ ದಣಿದು ಬೇಸರಗೊಳ್ಳಬಾರದೆಂದೂ ಅವಳಿಗೆ ಕತೆ ಹೇಳಲಾರಂಭಿಸಿದೆ. ಆದರೆ ಎಷ್ಟು ಹೊತ್ತು ಈ ರೀತಿ ಅವಳ ಮನೋರಂಜನೆ ಮಾಡಬಹುದಿತ್ತು! ಆಕೆ ಸೋತು ಹೋಗಿದ್ದಳು. ಇಕೋ! ಈಗಲೆ ನಾವು ಬಂಗಲೆ ತಲುಪುವೆವೆಂದು ಹೇಳಿ ಅವಳನ್ನು ಪುನಃ ಉತ್ಸಾಹಿತಗೊಳಿಸಿ ಹೆಗಲ ಮೇಲೆ ಹೊತ್ತುಕೊಂಡೆ. ಹೆಗಲ ಮೇಲೆ ಕೂತು ಅವಳು ಬ್ಯಾಟರಿಯ ಬೆಳಕು ಬಿಡುತ್ತಿದ್ದಳು. ಅವಳು ಥಂಡಿಯಿಂದ ಗಡಗಡ ನಡುಗುತ್ತಿದ್ದಳು. ಇತ್ತ ನಾನು ತೇಕಿ ತೇಕಿ ಬೆವತುಹೋಗಿದ್ದೆ. ಆಗಾಗ ಅವಳನ್ನು ಕೆಳಗಿಳಿಸಿ ಕೈಗಡಿಯಾರ ನೋಡಿಕೊಳ್ಳುತ್ತಿದ್ದೆ. ಇನ್ನೂ ಅಷ್ಟೇನು ರಾತ್ರಿಯಾಗಿಲ್ಲವೆಂದು ಧೈರ್ಯ ತಂದುಕೊಳ್ಳುತ್ತಿದ್ದೆ.

ಎರಡೂವರೆ ತಾಸು ಕಾಡಿನಲ್ಲಿ ನಡೆದೆವು. ಒಂಬತ್ತೂವರೆಯಾಯಿತು. ಮನಸ್ಸು ವ್ಯಾಕುಲವಾಯಿತು. ಮಗಳಿಗೆ ಕತೆ ಹೇಳುತ್ತಾ ಇರುವುದು ಅಸಾಧ್ಯವಾಯಿತು. ಇಷ್ಟು ಹೊತ್ತಾದರೂ ಕಾಡು ದಾರಿ ಮುಗಿಯದ್ದರಿಂದ ಮಗಳು ತಾಯಿಯನ್ನು ನೆನೆದು ಟುಸುಟುಸು ಅಳಲಾರಂಭಿಸಿದಳು. ಅಲ್ಲಿ ಬಂಗಲೆಯಲ್ಲಿ ಪತ್ನಿಯೂ ಚಿಂತಿಸುತ್ತಿರಬಹುದಲ್ಲ ಎಂದುಕೊಂಡು ನನ್ನ ಎದೆ ನಡುಗಿತು. ಸೋತ ಕಾಲುಗಳು ಕಂಪಿಸುತ್ತಿದ್ದವು. ರಾತ್ರಿಯೆಲ್ಲ ಗಿಡದ ಬುಡದಲ್ಲಿ ಅಂಥ ಚಳಿಯಲ್ಲಿ ಕೂಗಿ ಕಳೆಯುವುದೂ ಅಸಾಧ್ಯವಾಗಿತ್ತು. ಈ ಕಾಡಿನ ತೋಳಗಳು ಎಷ್ಟೇ ಚಿಕ್ಕವಿದ್ದರೇನಾಯಿತು, ಅಲ್ಲಿಯ ಜನ ಅವಕ್ಕೆ ಹೆದರದಿದ್ದರೇನಾಯಿತು? ಮಗಳು ಜೊತೆಯಲ್ಲಿರುವಾಗ ನಾನು ಹೆದರದಿರುವುದು ಸಾಧ್ಯವಿರಲಿಲ್ಲ.

ಕಾಡನ್ನು ದಾಟಿ ಗದ್ದೆಗೆ ಬಂದಾಗ ಗಂಟೆ ಹತ್ತಾಗಿತ್ತು. ಕೆಲ ಹೊಲಗಳನ್ನು ದಾಟುವಷ್ಟರಲ್ಲಿ ದೂರದಲ್ಲಿ ಒಂದು ಗುಡಿಸಲು ಕಾಣಿಸಿತು. ಒಳಗೆ ಬೆಳಕಿದ್ದಂತಿರಲಿಲ್ಲ. ಮಗಳನ್ನು ಬೆನ್ನ ಮೇಲೆ ಕೂರಿಸಿಕೊಂಡು ಬೆಳೆದ ಹೊಲಗಳಲ್ಲಿ ಹಾಯ್ದು ಗುಡಿಸಲಿನತ್ತ ಸಾಗಿದೆ. ನಮ್ಮನ್ನು ಕಂಡು ನಾಯಿ ಬೊಗಳಲಾರಂಭಿಸಿತು. ಅದರಿಂದ ಇಲ್ಲಿ ಯಾರೋ ಇದ್ದಾರೆ ಎಂದು ಒಮ್ಮೆ ನೆಮ್ಮದಿ ಎನಿಸಿತು. ಕಾಡು ನಿವಾಸಿಗಳು ಗುಡ್ಡದ ಇಳಿಜಾರಿನಲ್ಲಿ ಮಾಡಿಕೊಳ್ಳುವ ನೆಲಮನೆಯಂತಿತ್ತು ಗುಡಿಸಲು. ಮಣ್ಣಿನ ಗೋಡೆಗಳು, ಒಣ ಹುಲ್ಲಿನ ಚಪ್ಪರ; ಕೆಳಮನೆಯಲ್ಲಿ ದನಗಳನ್ನು ಕಟ್ಟಿ ತಾವು ಮೇಲ್ಮನೆಯಲ್ಲಿ ಇದ್ದರು ಇಲ್ಲಿಯ ಜನರು.

ನಾವು ಅಂಗಳದ ಹತ್ತಿರ ಹೋಗುತ್ತಲೆ ನಾಯಿ ಮಾಲಿಕನನ್ನು ಎಚ್ಚರಿಸಲು ಜೋರಾಗಿ ಬೊಗಳಲಾರಂಭಿಸಿತು. ನಾನೂ ಒದರಿದೆ. ಮೇಲ್ಭಾಗದ ಕಿಟಿಕಿ ತೆರೆಯಿತು. ಒಳಗಿನಿಂದ ಕೂಗೊಂದು ಕೇಳಿಸಿತು. "ಯಾರು, ಇಷ್ಟು ರಾತ್ರಿಯಲ್ಲಿ ಬಂದವರು?"

ನಾನು ಉತ್ತರಿಸಿದೆ: "ಪ್ರವಾಸಿ. ದಾರಿ ತಪ್ಪಿ ಬಂದಿದ್ದೇನೆ. ಜೊತೆಯಲ್ಲಿ ಚಿಕ್ಕ ಹುಡುಗಿ ಇದ್ದಾಳೆ. ಶಿಬಿರದ ಡಾಕ್ ಬಂಗಲೆಗೆ ಹೋಗಬೇಕಾಗಿದೆ."

ಒಬ್ಬ ರೈತ ಕಿಡಿಕಿಯಿಂದ ತಲೆ ಹೊರತೆಗೆದು, "ನೀವು ಶಹರಿನ ಜನ ಅಲ್ಲವೆ? ಇಲ್ಲಿ ಹಳ್ಳಿಗಳಲ್ಲಿ ನಿಮ್ಮಂಥ ಉಂಡಾಡಿಗಳಿಗೇನು ಕೆಲಸ? ಕಳವು ಮಾಡಬಂದಿದ್ದೀರಾ? ಹೋಗಿರಿ. ಇಲ್ಲವಾದರೆ ನಾವು ನಿಮ್ಮನ್ನು ಕಡಿದು ನಾಯಿಗಳಿಗೆ ತಿನ್ನಲಿಕ್ಕೆ ಹಾಕುವೆವು."

ನಾನು ನಮ್ಮ ದಯನೀಯ ಸ್ಥಿತಿಯನ್ನು ರೈತ

ನಿಗೆ ತೋರಿಸಲೆಂದು ನಮ್ಮ ಮೇಲೇ ಬ್ಯಾಟರಿಯ ಬೆಳಕನ್ನು ಬಿಟ್ಟುಕೊಂಡು ವಿಜ್ಞಾಪಿಸಿದೆ "ಮಕ್ಕಳೊಂದಿಗ ಆಸಾಮಿ ನಾನು. ಶಿಖರದ ಮೇಲೆ ಸೂರ್ಯಾಸ್ತ ನೋಡಲಿಕ್ಕೆ ಹೋಗಿದ್ದೆ. ದಾರಿ ತಪ್ಪಿದೆ. ಬಂಗಲೆಯಲ್ಲಿ ಪತ್ನಿ ನಮ್ಮ ದಾರಿ ಕಾಯುತ್ತಿದ್ದಾಳೆ. ಅಲ್ಲಿಗೆ ನಮ್ಮನ್ನು ಮುಟ್ಟಿಸುವಿರಾದರೆ ಯಥಾಶಕ್ತಿ ನಾನು ಈ ನಿಮ್ಮ ಉಪಕಾರವನ್ನು ತೀರಿಸುವೆನು."

ಆತ ಮತ್ತಿಷ್ಟು ಜೋರಾಗಿ ಕೂಗಿದ. "ಕ್ಯಾಂಪು ಇಲ್ಲಿಂದ ಏಳು ಮೈಲು ದೂರವಿದೆ. ಇಂಥ ರಾತ್ರಿ ನಿಮಗೆ ಹಾದಿ ತೋರಿಸಲಿಕ್ಕೆ ಇಲ್ಲೇನು ನಿಮ್ಮಪ್ಪನ ಆಳುಮಕ್ಕಳಿದ್ದಾರೇನು? ನಡೆ ಇಲ್ಲಿಂದ. ಇಲ್ಲವಾದರೆ ನಿನ್ನ ಮೈಮೇಲೆ ನಾಯಿ ಬಿಡುವೆನು."

ಅಷ್ಟೊತ್ತಿಗೆ ಒಂದು ದೀಪ ಹೊತ್ತಿ ಕಿಡಿಕಿಯಲ್ಲಿ ಕಾಣಿಸಿಕೊಂಡಿತು. ಅದರ ಬೆಳಕಿನಲ್ಲಿ ರೈತನ ಗಡ್ಡ, ಉದ್ದಮೀಸೆ ಬೆಳೆದ ಮುಖ ಭಯಾನಕವಾಗಿ ಕಾಣಿಸಿತು. ಕಿಡಿಕಿಯತ್ತ ದೀಪ ತಂದ ವ್ಯಕ್ತಿ ಸ್ತ್ರೀಯಾಗಿದ್ದಳು.

ಅವನ ಮಾತು ಕೇಳಿ ನನ್ನ ಎದೆ ಝಲ್ಲೆಂದಿತು. ಆ ಕತ್ತಲೆ ಮತ್ತು ಚಳಿಯಲ್ಲಿ ಮಗಳನ್ನು ಹೊತ್ತುಕೊಂಡು ಏಳು ಮೈಲು ನಡೆಯುವುದು ಸಾಧ್ಯವಿರಲಿಲ್ಲ.

ನಾನು ರೈತನನ್ನು ಪರಿಪರಿಯಾಗಿ ಬೇಡಿಕೊಂಡೆ. "ಅಯ್ಯಾ, ದಯೆ ತೋರು. ಒಬ್ಬನೇ ಆಗಿದ್ದರೆ ಹೇಗೋ ಎಲ್ಲಿಯೋ ಗಿಡದ ಬುಡದಲ್ಲಿ ರಾತ್ರಿ ಕಳೆಯಬಹುದಿತ್ತು. ದಯಮಾಡಿ ಒಳಗೆ ನಮಗೆ ಕೂತುಕೊಳ್ಳುವಷ್ಟು ಸ್ಥಳ ಕೊಡು. ಬೆಳಗಾಗುತ್ತಲೇ ನಾವು ಹೋಗಿಬಿಡುತ್ತೇವೆ."

ಕಿಡಿಕಿಯಲ್ಲಿ ಕಾಣಿಸಿಕೊಂಡ ಸ್ತ್ರೀಯ ಮಾತಿನಿಂದ ಸ್ವಲ್ಪ ಆಶ್ವಾಸನೆ ದೊರಕಿತು. ಆಕೆ ಅಂದಳು: "ರಾತ್ರಿ ಮಗಳನ್ನು ಕರೆದುಕೊಂಡು ಅಷ್ಟು ದೂರ ಹೇಗೆ ಹೋದಾನು ಪಾಪ! ಪಟ್ಟಣದವರು ಅಷ್ಟು ನಡೆಯಲಾರರು. ಆಗಲಾಗಲಿ. ಆತ ಒಳಗೆ ಬರಲಿ."

"ಎಲ್ಲಿ ಕೂಡಿಸುವಿ ಅವರನ್ನು? ಇವ
ಪಟ್ಟಣದವರು. ಅವರಿಗೆ ತಕ್ಕ ವ್ಯವಸ್ಥೆ ಮಾ
ವುದು ನಮ್ಮಿಂದಾಗದ ಮಾತು."

ಆಕೆ "ನೀನು ಹೋಗಿ ನಾಯಿ ಹಿಡಿದುಕೆ
ಅವರು ಒಳಗಾದರೂ ಬರಲಿ." ಎಂದಳು

ಆತ ಕೆಳಗಿಳಿದು ಬಾಗಿಲು ತೆರೆದ. ನಾ
ಯನ್ನು ಬೆದರಿಸಿ ಸುಮ್ಮನಿರಿಸಿದ. ಬಾಗಿಲ
ತೆರೆದ. ಮತ್ತು, "ದೊಡ್ಡ ಬಾಜೀರಾಯ
ಪ್ರವಾಸ ಮಾಡಲಿಕ್ಕೆ ಬಂದಿದ್ದಾರೆ. ರಾ
ಹಾದಿ ತಪ್ಪಿ ಇಲ್ಲಿ ಬಂದಿದ್ದಾರೆ. ಎಲ್ಲಿ ಕ
ಸುವೆ ಇವರನ್ನು?" ಎಂದನಾತ.

ಆಕೆ: ಏನೋ ಸಂಕಟಕ್ಕೆ ಸಿಕ್ಕಿದ್ದರೆಂ
ಬಂದಿದ್ದಾರೆ. ಬರಲಿ. ಅವರು ಮೇಲೆ ಮ
ಗಲಿ. ನಾವು ಇಲ್ಲೇ ಹುಲ್ಲು ಹಾಸಿಕೊಂ
ಮಲಗೋಣ!

"ಕೆಳಗೆ ಎಲ್ಲಿ ಮಲಗಬೇಕು? ಒಂದೆ
ನನ್ನನ್ನಾದರೂ ಹೊರಗೆ ಹಾಕಬೇಕು ಇಲ
ಆಕಳನ್ನಾದರೂ ಓಡಿಸಿಬಿಡಬೇಕು."

ಒಳಗೆ ಕಾಲಿಡುವಾಗ ನಾನು ಬ್ಯಾಟರಿ ಬಿ
ಬೆಳಕು ಮಾಡಿಕೊಂಡೆ. ಮಲಗಿದ್ದ ಆಕ
ಅದರಿಂದ ಕಷ್ಟವಾಯಿತೇನೊ ಜೋರಿನಿ
ಉಸಿರು ಬಿಟ್ಟಿತು. ಮತ್ತೊಂದು ಗೋಡ
ಹತ್ತಿರ ಬುಟ್ಟಿಯ ಕೆಳಗೆ ಮುಚ್ಚಿಟ್ಟ ಕೋ
ಗಳಿಗೂ ನಿದ್ದೆ ಕೆಟ್ಟಿತೇನೊ! ಅವೂ ತಮ್ಮ ಅ
ತೋಷವನ್ನು ತೋರಿಸಿದವು. ರೈತನ ಹೆಂ
ಗೋಡೆಯ ಗುಂಟ ಇದ್ದ ಪಾವಟಿಗೆಗಳತ್ತ ದ
ಹಿಡಿದು ಹೇಳಿದಳು. "ಬಡವರ ಮನೆಗಳು ಹಿ
ಇರುತ್ತವೆ. ಮಗಳನ್ನು ಕೈಹಿಡಿದು ಮೇಲೆ ಕ
ಕೊಂಡು ಬನ್ನಿರಿ."

ರೈತ ಅಸಂತೋಷದಿಂದ ಏನೇನೊ
ತ್ತಲೇ ಇದ್ದ. ಅಟ್ಟದ ಮೇಲೆ ಚಪ್ಪರ ಬ
ತಗ್ಗಾಗಿತ್ತು, ನೆಟಗೆ ನಿಲ್ಲಲಿಕ್ಕೂ ಬ
ದ್ದಿಲ್ಲ. ಒಂದು ಹೊರಸಲಿನ ಮೇಲೆ ಹೊಲ
ಒಂದು ಹಾಸಿಗೆಯಿತ್ತು. "ಇಲ್ಲಿ ನೀವು ಮಲ
ನಾವು ಕೆಳಗೆ ಏನಾದರೂ ಹಾಸಿಕೊಳ್ಳು

ಎಂದಳು ರೈತನ ಮಡದಿ. ಡಬ್ಬಿಯಿಂದ ಬೆಲ್ಲದ ಹರಳನ್ನು ತೆಗೆದು ನನ್ನ ಕೈಗಿಡುತ್ತ ಆಕೆ "ಮಗಳು ತಿಂದು ನೀರು ಕುಡಿಯಲಿ" ಎಂದಳು. ಮೂಲೆಯೊಳಗಿನ ಕೊಡದಿಂದ ಒಂದು ಲೋಟದಲ್ಲಿ ನೀರನ್ನು ಸುರುವಿಕೊಂಡು ಅದನ್ನು ಹೊರಸಲಿನ ಬಳಿ ಇಟ್ಟಳು.

ಮತ್ತು ದೀಪ ಎತ್ತಿಕೊಂಡು ಪಾವಟಿಗೆಗಳ ಕಡೆಗೆ ಹೊರಳುತ್ತಾ, "ಏನು ಮಾಡಲಿ? ಮನೆಯಲ್ಲಿ ಹಿಟ್ಟು ಇಲ್ಲ. ಸಂಜೆಗೆ ಸಾಲುವಷ್ಟೇ ಇತ್ತು. ನಾಳೆ ಬೆಳಿಗ್ಗೆ ಗಿರಣಿಗೆ ಹೋಗಬೇಕು" ಎಂದಳು.

ಪಾವಟಿಗೆಯತ್ತ ಸಾಗಿ ವಿಸ್ಮಯದಿಂದ ಹುಬ್ಬೇರಿಸಿ, "ಇಷ್ಟು ಚಿಕ್ಕ ಹುಡುಗಿಯ ಕೊರಳಲ್ಲಿ ಮುತ್ತಿನ ಹಾರವೆ?" ಎಂದು ಆರ್ದ್ರ ಸ್ವರದಲ್ಲಿ ಮುಂದುವರಿಸಿದಳು. "ಆದರೆ ಈಗ ತೆಗೆದುಕೊಂಡು ಏನು ಮಾಡುವುದು? ಮಗ-ಮಗಳು ಮನೆಯಲ್ಲಿದ್ದರು. ಆಗ ಒಂದು ಉಲ್ಲಾಸವಿತ್ತು. ಮಗಳು ದೊಡ್ಡವಳಾಗಿ ಗಂಡನ ಮನೆಗೆ ಹೋದಳು. ಮಗನಿಗೆ ಪೇಟೆಯ ರುಚಿ ಹತ್ತಿತು. ಎರಡು ವರ್ಷಗಳಿಂದ ಪತ್ತೆನೇ ಇಲ್ಲ. ಎಲ್ಲಿ-ದ್ದಾನೋ! ದೇವಿ ಅವನನ್ನು ರಕ್ಷಿಸಲಿ."

ಅವಳು ಕೆಳಗಿಳಿದಳು. ಆಗಲೂ ರೈತ ವಟ-ಗುಡುತ್ತಲೇ ಇದ್ದ. ಏನೋ ಕಿತ್ತಾಡುತ್ತಿದ್ದದ್ದೂ ಕೇಳಿಬರುತ್ತಿತ್ತು.

ಬೆಲ್ಲ ತಿಂದು ನೀರು ಕುಡಿದು ಮಗಳು ಮಲಗಿಕೊಂಡಳು. ಹೊಲಸು ಹಾಸಿಗೆಯಲ್ಲಿ ಮಲಗಲು ನನಗಾಗುತ್ತಿದ್ದಿಲ್ಲ. ಆದರೂ ಇದಕ್ಕಿಂತ ಹೆಚ್ಚಿನ ಚಿಂತೆಯೆಂದರೆ ಬಂಗಲೆಯಲ್ಲಿ ಚಿಂತಾಕ್ರಾಂತಳಾಗಿರುವ ಪತ್ನಿಯ ವಿಚಾರ. ನಾವು ಬಾರದ್ದರಿಂದ ಆಕೆ ಏನೇನು ಯೋಚನೆ ಮಾಡುತ್ತಿರುವಳೊ? ತೋಳನ ಬಾಯಿಗೆ ತುತ್ತಾದರೊ, ಕಳ್ಳರ ಕೈಗೆ ಸಿಕ್ಕರೊ ಎಂದು ಚಿಂತಿಸುತ್ತಿರಬಹುದು. ಅಥವಾ ನಮ್ಮನ್ನು ಹುಡುಕಲೆಂದು ಜೊತೆಯಲ್ಲಿ ಸಿಪಾಯಿಯನ್ನು ಕರೆದುಕೊಂಡು ಶಿಬಿರದ ಕಡೆಗೇನಾದರೂ ಹೊರಟುಬಿಟ್ಟಳೊ ಎಂಬ ವಿಚಾರವೂ ನನ ತಲೆಯಲ್ಲಿ ಸುಳಿಯಿತು.

ತಲೆಯಲ್ಲಿ ವಿಚಾರದ ಬೆಂಕಿ, ಬೆನ್ನಲ್ಲಿ ದಣಿವಿನ ನೋವು. ಮಗ್ಗಲು ಹೊರಳಿಸಿದರೂ ಕಷ್ಟವಾಗುತಿತ್ತು. ಹಾಗೇ ಸ್ವಲ್ಪ ಜಂಪು ಬಂದಂತಾಗುತ್ತಿತ್ತು. ಆದರೆ ಅಸ್ವಚ್ಛ ಹಾಸಿಗೆಯಿಂದ ಪುನಃ ಎಚ್ಚರಾಗುತ್ತಿತ್ತು. ಬೇಗ ಬೆಳಗಾಗಲಿ, ಎದ್ದು ಹೊರಟುಬಿಟ್ಟರಾಯಿತು ಎಂದುಕೊಂಡೆ.

ಕಿಟಕಿಯ ಸಂದಿನೊಳಗಿಂದ ಪ್ರಕಾಶದ ಕಿರಣ ಕಾಣಿಸಿತು. ಇನ್ನಷ್ಟು ಬೆಳಕು ಬೀಳಲಿ ಎಂದೆ. ಕೆಳಗೆ ಮಲಗಿದ್ದ ಉಪಕಾರಕರ್ತರ ನಿದ್ದೆ ಕೆಡಬಾರದೆಂಬ ವಿಚಾರವೂ ಇತ್ತು! ಇನ್ನೊಂದು ಜಂಪು ತೆಗೆಯೋಣ ಎಂದಿದ್ದೆ. ಅಷ್ಟರಲ್ಲಿ ಕೆಳಗಿನಿಂದ ಪಿಸುಮಾತುಗಳು ಕೇಳಿಸಿದವು.

ಆತ: "ಸೂರ್ಯ ಮಾರೆತ್ತರಕ್ಕೆ ಬಂದರೂ ಅವರ ನಿದ್ದೆ ಮುಗಿಯಲಾರದು. ತುಂಬ ದಣಿದಿದ್ದಾರೆ."

ಆಕೆ: "ಅವರ ನಿದ್ದೆಯಿಂದ ನಿನಗೇನಾಗಬೇಕಾಗಿದೆ? ನೀನು ಏಳದಿದ್ದರೆ ನಾನೇ ಏಳುವೆ."

ಆತ: "ಆಗಲಿ ಏಳುತ್ತೇನೆ."

ಆಕೆ: "ಸ್ವಲ್ಪ ಜೋಕೆ, ಸಪ್ಪಳ ಮಾಡಬೇಡ. ಕುತ್ತಿಗೇನೇ ಕೊಯ್ದುಬಿಡು. ಕೂಗಲಿಕ್ಕೂ ಕೊಡಬೇಡ. ಚೂರಿ ಶಲ್ಫಿನಲ್ಲಿದೆ."

ಆಶ್ರಯ ಕೇಳಿ ಇದೇನು ಸಿಕ್ಕಿಹಾಕಿಕೊಂಡೆ ಎಂದು ನಾನು ಮೈಯೆಲ್ಲ ಬೆವತು ಹೋದೆ. ನಮ್ಮ ಬಳಿಯಿದ್ದುದೆಲ್ಲವನ್ನೂ ಕೊಡುವೆವು, ಆದರೆ ನಮಗೆ ಪ್ರಾಣದಾನ ಮಾಡಿರೆಂದು ಕೇಳಿಕೊಳ್ಳಬೇಕೆನಿಸಿತು.

ಆಗ ಆತ "ಕೊಲ್ಲುವುದು ಬೇಡ. ಯಾಕೋ ಮನಸ್ಸು ಕೊಲ್ಲಲಿಕ್ಕೆ ಒಪ್ಪುವುದಿಲ್ಲ."

ಆಕೆ "ಒಪ್ಪದಿರಲಿಕ್ಕೇನಾಗಿದೆ? ಉಳಿಸಿ ಏನು ಮಾಡುವೆ? ಎಲ್ಲಿ ಮುಚ್ಚಿಡುವೆ? ಹೇಗೆ ಕಾಪಾಡುವೆ?" ಎಂದಳು.

ಭಯಗೊಂಡು ನಾನು ನಿದ್ದೆಯಲ್ಲಿದ್ದ ಮಗಳನ್ನು ಎದೆಗವಚಿ ಹಿಡಿದೆ. ನಾನೇ ಕೂಗಿ ಅವರನ್ನು ಕರೆದು ಪ್ರಾಣಭಿಕ್ಷೆ ಬೇಡಬೇಕೆಂದು

ಕೊಂಡೆ. ಆದರೆ ಬಾಯಿಯಿಂದ ಮಾತೇ ಹೊರಡ ಲಿಲ್ಲ. ನಾನು ಅವರ ಮಾತನ್ನು ಕೇಳಿದ್ದೇನೆಂದು ತಿಳಿದರೆ ಅವರು ನಮ್ಮನ್ನು ಜೀವದಿಂದ ಬಿಟ್ಟಾರೆ ಎಂಬೊಂದು ವಿಚಾರವೂ ಬಂತು. ಅವರಲ್ಲಿ ಕರುಣೆ ಹುಟ್ಟಿಸೆಂದು ದೇವರನ್ನು ಬೇಡಿಕೊಂಡೆ. ಮತ್ತೊಂದು ವಿಚಾರ ಬಂತು. ಆತ ಮೇಲೆ ಬರುತ್ತಲೇ ಅವನನ್ನು ದೂಡಿ ಕಿರಿಚಿಕೊಂಡರೆ ಹೇಗೆ ಎಂದು— ಆದರೆ ನನ್ನ ಕೂಗು ಕೇಳಲಿಕ್ಕೆ ಸುತ್ತುಮುತ್ತು ಯಾರೂ ಇಲ್ಲದಿದ್ದರೆ ಅವರಿಬ್ಬರ ಮುಂದೆ ನಾನೊಬ್ಬ ಏನು ಮಾಡಬಲ್ಲೆ ?

ಅಷ್ಟರಲ್ಲಿ ಕೋಳಿ ಕೂಗುವುದೂ ಪಕ್ಕ ಬಡಿಯುವುದೂ ಕೇಳಿಸಿತು. ಆಗ ರೈತನ ಹೆಂಡತಿ ಹೇಳಿದಳು. "ನಾನು ಹೇಳಿರಲಿಲ್ಲವೇ ? ಸ್ವಲ್ಪ ಜೋಕೆಯಿಂದ ಕುತ್ತಿಗೆ ಹಿಡೀ ಎಂದು."

ಹಾಗಾದರೆ ಇದು ಕೋಳೀ ಕೊಯ್ಯುವ ವಿಚಾರವಾಗಿತ್ತೇ? ನನ್ನ ಮೊದಲಿನ ವಿಚಾರಕ್ಕೆ ನಾಚಿಕೊಂಡೆ.

ಆಕೆಯ ಸ್ವರ ಮತ್ತೆ ಕೇಳಿಸಿತು. "ಒಂದು ಕೋಳಿ ಸತ್ತದ್ದಕ್ಕೆ ಇಷ್ಟೇಕೆ ಮರುಗುವಿ? ಅವರು ಪಟ್ಟಣದವರು. ಸಂತೋಷಗೊಂಡರೆ ಏನು ಬೇಕಾದರೂ ಇನಾಮು ಕೊಡಬಲ್ಲರು. ಮಗಳ ಕೊರಳ ಹಾರ ನೋಡಿದರೇನೇ ಇವರು ಸಾಮಾನ್ಯರಲ್ಲ ಎಂದು ಗೊತ್ತಾಗುತ್ತದೆ."

ಆಗ ನನ್ನ ನಿಜಸ್ಥಿತಿಗಾಗಿ ನಾನೇ ನಾಚಿಕೊಂಡೆ. ನನ್ನ ಜೇಬಿನಲ್ಲಿದ್ದುದು ಕೇವಲ ಎರಡೂವರೆ ರೂಪಾಯಿ. ಸೂರ್ಯಾಸ್ತ ನೋಡಲಿಕ್ಕೆಂದು ಹೊರಬಿದ್ದವ; ಪೇಟೆಗೆಂದು ಹೋಗಿದ್ದರೆ ಹೆಚ್ಚು ಹಣ ಇರಬಹುದಿತ್ತು. ಮಗಳ ಕೊರಳ ಹಾರ ಕಲ್ಚರ್ಡ್ ಮುತ್ತಿನದಾಗಿತ್ತು. ದೀಪದ ಬೆಳಕಿನಲ್ಲಿ ಅವರು ಅವು ಅಸಲು ಮುತ್ತುಗಳೆಂದು ತಿಳಿದಿದ್ದರು. ಇನ್ನು ಇವರಿಗೆ ಏನು ಹೇಳಬೇಕೊ ತಿಳಿಯದಂತಾಗಿತ್ತು. ಮುತ್ತಿನ ಬಗ್ಗೆ ನಿಜ ಸಂಗತಿ ಹೇಳದೇ ಹಾರವನ್ನು ಕೊಟ್ಟು ಬಿಡಲೇ ಎಂದು ಒಮ್ಮೆ ಅನಿಸಿತು. ಆಮೇಲೆ ನಾಲ್ವತ್ತೈವತ್ತು ರೂಪಾಯಿ ಮನಿ ಆರ್ಡರಿನಿಂದ ಕಳಿಸಿದರಾಯಿತು ಎಂದು ಕೊಂಡೆ.

ಚೆನ್ನಾಗಿ ಬೆಳಗಾಗಿರುವುದು ಕಿಟಕಿಯಿಂದ ಕಾಣಿಸಿತು. ಮಗಳನ್ನು ಎಬ್ಬಿಸಿ ಕೆಳಗಿಳಿಯ ಬೇಕೆನ್ನುವಷ್ಟರಲ್ಲಿ ಪಾವಟಿಗೆಗಳ ಮೇಲೆ ಕಾಲಿನ ಸದ್ದು ಕೇಳಿಸಿತು. ಮತ್ತು ರೈತನ ಮುಖ ಮೇಲೆ ಬರುವುದು ಕಾಣಿಸಿತು.

ಈಗ ಅವನ ಮುಖ ರಾತ್ರಿಯಂತೆ ಭಯಾನಕ ವಾಗಿರಲಿಲ್ಲ. ಆತ ನಗುತ್ತಾ, "ನಿದ್ದೆಯಾ ಯಿತೆ? ಎಬ್ಬಿಸಬೇಕೆಂದೇ ನಾನು ಬಂದಿದ್ದೆ. ಬಿಸಿಲು ಏರಿದರೆ ಮತ್ತೆ ಮಗಳನ್ನು ಅಷ್ಟು ದೂರ ಒಯ್ಯುವುದು ಬಹಳ ಕಷ್ಟವಾದೀತು" ಎಂದ.

ಹಳೇ ವೃತ್ತಪತ್ರದಲ್ಲಿ ಕಟ್ಟಿದ ದೊಡ್ಡ ಪೊಟ್ಟಣವೊಂದನ್ನು ಮುಂದೆ ಮಾಡಿ ಹೀಗೆಂದ. "ಇದು ನಿಮಗೇ ಕೊಡಲು ಯೊಗ್ಯವಿತ್ತು. ಮನೆ ಯಲ್ಲಿ ಹಿಟ್ಟು ರೊಟ್ಟಿ ಇರಲಿಲ್ಲ. ಅಂತೆಯೇ ರಾತ್ರಿ ನಾನು ತಮಗೆ ಹೋಗಿರೆಂದೆ. ಆದ ಮಗಳ ಮೇಲೆ ನನ್ನಾಕೆಗೆ ಮರುಕ ಹುಟ್ಟಿತು. ಒಕ್ಕಲತನಕ್ಕೆ ಸಾಕಷ್ಟು ಹೊಲ ಇಲ್ಲ. ಕೋಳಿ ಗಳನ್ನೇ ಸಾಕಿ ನಿರ್ವಾಹ ನಡೆಸುತ್ತಿದ್ದೆವು. ಮಳೆ ಗಾಲ ಮುಗಿದಾಗ ವಿಶ್ವಾಸಘಾತುಕರಾದ ನೆರೆ ಯವರಲ್ಲಿ ಕೋಳಿಗಳ ಬೇನೆ ಬಂತು. ಅವು ಗಳೊಂದಿಗೆ ನಮ್ಮ ಕೋಳಿಗಳಿಗೂ ಆ ಬೇನೆ ಬಂತು. ಅವು ಸತ್ತವು. ಅವನ್ನು ಉಳಿಸಿ ಕೊಳ್ಳಲೆಂದು ಬಹಳ ಯತ್ನಿಸಿದೆವು. ಮಠದಲ್ಲಿ ತುಪ್ಪದ ದೀಪ ಹಚ್ಚಿದೆವು. ಕೋಳಿಗಳಿಗೆ ಬೆಳ್ಳುಳ್ಳಿ ತಿನ್ನಿಸಿದೆವು. ಸರಕಾರೀ ದವಾಖಾನೆ ಯಿಂದ ಔಷಧಿ ತರಿಸಿಕೊಟ್ಟೆವು. ಆದರೆ ಅವು ಗಳು ಬದುಕಲಿಲ್ಲ. ಅವುಗಳಲ್ಲಿ ಇದೊಂದೇ ಉಳಿದಿತ್ತು. ಇದು ನಿಮಗಾಗಿಯೇ ಬದುಕಿತ್ತು. ಒಂದು ಸಣ್ಣ ಕೋಳಿ ಸಾವಿನಿಂದ ತಪ್ಪಿಸಿ ಕೊಂಡು ಉಳಿದಿತ್ತು. ಅದೀಗ ತಮ್ಮ ಮಗಳಿ ಗಾಗಿ ಸಾಕಾದೀತು. ಈಗ ಸದ್ಯ ನಿಮಗೆ ಆಗಲಿ ನಮ್ಮದನ್ನು ಆಮೇಲೆ ನೋಡಿದರಾಯಿತು ರಾತ್ರಿಯಿಂದ ಉಪವಾಸವಿದ್ದೀರಿ. ಬೇಕಾದ

ಈಗಲೇ ಕಳಗಿಳಿದು ಮುಖ ತೊಳೆದುಕೊಂಡು ತಿನ್ನಬಹುದು. ಅಥವಾ ದಾರಿಯಲ್ಲಿ ತಿಂದರೂ ಅಡ್ಡಿ ಇಲ್ಲ."

ಮಗಳನ್ನು ಎಚ್ಚರಿಸಿದೆ. ಎದ್ದೊಡನೆಯೇ ಆಕೆ "ಹಸಿವು" ಎಂದಳು. ರೈತನ ಹೆಂಡತಿ ಬಿಸಿ ನೀರು ತಂದಳು. ನಾವಿಬ್ಬರೂ ಬೆಳಗಿನ ನಾಷ್ಟಾ ಮುಗಿಸಿದೆವು.

ಹೊಟ್ಟೆತುಂಬ ತಿಂದು ನಾನು ಒಳಗೊಳಗೇ ಸಂಕೋಚದಿಂದ ಕೊರಗುತ್ತಿದ್ದೆ. ಬಹಳ ಆಸೆಯಿಂದ ತಮ್ಮ ಕೊನೆಯ ಕೋಳಿಯನ್ನು ಅವರು ಕೊಯ್ದು ನಮ್ಮೆದುರು ಇಟ್ಟಿದ್ದರು. ನಾನು ಸಂಕೋಚಭಾವದಿಂದಲೇ ಹೇಳಿದೆ, "ನನ ಹತ್ತಿರ ಇರುವುದು ಕೇವಲ ಎರಡೂವರೆ ರೂಪಾಯಿ ಮಾತ್ರ. ನಿಮ್ಮ ವಿಳಾಸ ಹೆಸರು ಕೊಡಿರಿ. ನಾನು ಆಮೇಲೆ ಮನಿಆರ್ಡರಿನಿಂದ ಕಳಿಸುವೆ." ಮಗಳ ಕೊರಳ ಹಾರ ತೆಗೆದು ರೈತನ ಮಡದಿಯ ಕೈಗಿತ್ತು, "ಬೇಕಾದರೆ ಇದನ್ನಿಟ್ಟುಕೊಳ್ಳಿ" ಎಂದೆ.

ಆಕೆ ಆ ಹಾರವನ್ನು ಪ್ರಸನ್ನ ಚಿತ್ತದಿಂದ ಸ್ವೀಕರಿಸಿ, "ಇದನ್ನು ನಾನು ಮಠದಲ್ಲಿ ದೇವರ ಹೆಸರಿನ ಅರ್ಪಿಸಿ ನಮ್ಮ ಕೋಳಿಗಳಿಗೆ ಸಾವು ಬರದಿರಲಿ ಎಂದು ಹರಕೆ ಕೇಳುವೆ" ಎಂದಳು.

ಅವಳ ಸರಳ ಸ್ವಭಾವ ಕಂಡು ಇನ್ನು ಅವಳನ್ನು ವಂಚಿಸುವುದಾಗಲಿಲ್ಲ. ನಾನಂದೆ. "ನಾನು ನಿಮ್ಮನ್ನು ವಂಚಿಸಲಾರೆ ತಾಯೀ. ಈ ಹಾರ ಸುಳ್ಳು ಮುತ್ತಿನದು."

ತಟ್ಟನೇ ಆಕೆ ನನ್ನ ಮೇಲೆ ಆ ಹಾರವನ್ನು ಒಗೆದಳು. "ಇದನ್ನು ನೀನೇ ಇಟ್ಟುಕೊ. ವಂಚನೆ ಅಲ್ಲದೆ ಮತ್ತೇನದು ನೀನು ಮಾಡಿದ್ದು? ಮೋಸವಲ್ಲದೆ ಇನ್ನೇನನ್ನು ಕೊಡಬಲ್ಲಿರಿ ನೀವು ಪಟ್ಟಣಿಗರು ?"

ಮೋಸವಾದ ರೋಷದಲ್ಲಿ ಆತ ಬಂಗಲೆಯ ದಾರಿಯನ್ನು ತೋರಿಸಲೊಪ್ಪದಾದ. ಹಾಗೇ ತನ್ನ ಹೆಸರು ವಿಳಾಸಗಳನ್ನೂ ತಿಳಿಸದಾದ. ಹಗಲು ಹೊತ್ತಾದ್ದರಿಂದ ನಾವು ಹಾಗೇ ಯಾರು ಯಾರನ್ನೋ ದಾರಿ ಕೇಳುತ್ತ ಮಧ್ಯಾಹ್ನದಷ್ಟೊತ್ತಿಗೆ ಬಂಗಲೆಗೆ ಬಂದೆವು.

ಪತ್ನಿ ಚಿಂತಾಕ್ರಾಂತಳಾಗಿ ಬಾಗಿಲಲ್ಲೆ ಕೂತಿದ್ದುದು ಕಾಣಿಸಿತು. ತರಗಲೆಯಂತೆ ಬಾಡಿ ಅರಿಸಿನ ಬಣ್ಣವಾಗಿತ್ತು ಅವಳ ಮುಖ. ಮತ್ತು ದಾಸಾಳ ಹೂವಿನಂತೆ ಕೆಂಪಾಗಿದ್ದವು ಕಣ್ಣುಗಳು. ಮಗಳನ್ನು ಕಂಡವಳೇ ತಬ್ಬಿಕೊಂಡು ಚೀತ್ಕಾರಮಾಡಿ ಅತ್ತಳು. ಆ ಮೇಲೆ ನನ್ನ ಹತ್ತಿರ ಬಂದಳು. ಅಳುತ್ತಲೇ ಇದ್ದಳು.

ಅವಳ ಆವೇಗ ಸ್ವಲ್ಪ ಇಳಿದ ಮೇಲೆ ನಾನು ರಾತ್ರಿಯ ಎರಡೂ ಅನುಭವಗಳನ್ನು ಹೇಳಿದೆ.

ಆಕೆ ಅಂದಳು. "ಮುತ್ತಿನ ಬಗ್ಗೆ ನೀವು ಹೇಳುವುದೇನು ಅಗತ್ಯವಿತ್ತು ? ಹೇಳದೇ ಹೋಗಿದ್ದರೆ ಕನಿಷ್ಠಪಕ್ಷ ಅವಳ ಅಭಿಲಾಷೆಯಾದರೂ ಪೂರ್ಣವಾಗುತ್ತಿತ್ತು ! "

ಎರಡೂ ವೇಳೆಯಲ್ಲಿ ತಪ್ಪಿದೆ. ಇನ್ನು ಏನೆಂದು ನಾಚಿಕೊಳ್ಳಲಿ ? *

ಯಾರೊಡನೆ ಹೇಗಿರಬೇಕು ?

ತನಗೆ ತಿಳಿಯುದಿದ್ದೂ ತಿಳಿಯುದೆಂದು ತಿಳಿಯುದವನೊಬ್ಬ ಮೂರ್ಖ; ಅವನಿಂದ ದೂರವಿರು !

ತನಗೆ ತಿಳಿಯುದಿದ್ದು, ತಾನು ತಿಳಿದಿಲ್ಲವೆಂದು ತಿಳಿದಿರುವವನೊಬ್ಬ ಸಾಮಾನ್ಯ; ಅವನಿಗೆ ಕಲಿಸು !

ತಾನರಿತೂ ಅರಿತವನೆಂದು ಅರಿಯುದವನು ನಿದ್ರಿಸುತ್ತಿದ್ದಾನೆ; ಅವನನ್ನು ಎಚ್ಚರಿಸು !

ನಿಜವಾಗಿ ಅರಿತಿದ್ದು, ತನಗೆ ಅರಿವಿರುವುದರ ಅರಿವಿರುವವನು ಜಾಣ; ಅವನನ್ನು ಅನುಸರಿಸು !

— ರಾಮದಾಸ್

ಪ್ರಸಂಗಾವಧಾನ

ದ. ಬಾ. ಕು.

೧೯೫೫ ರಲ್ಲಿ ಸಾಹಿತ್ಯ ಸಮ್ಮೇಳನ ಮೈಸೂರಿನಲ್ಲಿ ಸೇರಿತ್ತು. ಶ್ರೀ ಶಿವರಾಮ ಕಾರಂತರು ಅಧ್ಯಕ್ಷರಾಗಿದ್ದರು. ಪ್ರತಿನಿಧಿಗಳ ಬಿಡಾರವನ್ನು ಯುನಿವರ್ಸಿಟಿ ಹಾಸ್ಟೆಲಿನಲ್ಲಿ ಏರ್ಪಡಿಸಿತ್ತು.

ಸ್ತ್ರೀ ಪ್ರತಿನಿಧಿಗಳು ಉಳಿದುಕೊಂಡ ಕಡೆಗೆ ಒಬ್ಬ ಪುರುಷಶ್ರೇಷ್ಠ ಸುಳಿದಾಡುತ್ತಿದ್ದ. ಸ್ತ್ರೀ ಪ್ರತಿನಿಧಿಗಳು ಆ ಸುಳಿದಾಟವನ್ನು ಮೊದ ಮೊದಲು ಅಸಡ್ಡೆ ಮಾಡಿದರಾದರೂ ಅದು ಉದ್ದೇಶಪೂರ್ವಕವಾದದೆಂದು ಬಹು ಬೇಗ ಕಂಡುಕೊಂಡರು. ಆದರೂ ಸ್ತ್ರೀ ಸಹಜ ಸಂಕೋಚದಿಂದ ಈ ಸಂಗತಿಯನ್ನು ಕೂಡಲೇ ರಟ್ಟುಮಾಡಲಿಲ್ಲ.

ಬಿಡಾರದಲ್ಲಿ, ಕಕ್ಕಸದ ದಾರಿಯಲ್ಲಿ ಈ ಸುಳಿದಾಟ ನಡೆದೇ ಇತ್ತು.

ಎರಡನೆಯ ದಿನ ಸಭೆಯಲ್ಲೇ ಆ ಪುರುಷ ಶ್ರೇಷ್ಠ ಕಾಣಿಸಿಕೊಂಡ. ಸ್ತ್ರೀಯರು ಕುಳಿತ ಸ್ಥಳದ ಹಿಂದೆ ಬಂದು ಕುಳಿತ. ಮತ್ತೆ ಎದ್ದು ಇಕ್ಕೆಲಗಳಲ್ಲಿ ಸುಳಿದಾಡಿ ಮುಂದೆ ಬಂದು ಕುಳಿತ. ಅಲ್ಲೂ ಕೂಡಲಾಗದೆ ಎದ್ದು ಸ್ತ್ರೀಯರ ಮಧ್ಯದಲ್ಲೇ ಕೂಡಹೋದ. ಆಗ ಮಹಿಳಾ ವೃಂದ ಹೆದರಿತು; ಗದ್ದಲವೆದ್ದಿತು. ನಾವು ವೇದಿಕೆಯತ್ತ ನೋಡುತ್ತಿದ್ದವರು ಬದಿಗೆ ನೋಡುವಂತಾಯಿತು. "ಅಧಿಕೃತ ಪ್ರತಿನಿಧಿಯಾದ ಪುರುಷ ಶ್ರೇಷ್ಠ ತಾನು ಬೇಕಾದಲ್ಲಿ ಕೂಡಬಲ್ಲೆ" ನೆಂಬ ತನ್ನ ಹಕ್ಕುಬಾಧ್ಯತೆಗೆ ಹೆಣಗಾಡುತ್ತಿದ್ದ.

ಅಧ್ಯಕ್ಷರ ಲಕ್ಷ್ಯವನ್ನು ಈ ಗದ್ದಲ ಸೆಳೆಯಿತು. ಶಿವರಾಮ ಕಾರಂತ–'ಕಡಲ ತೀರದ ನಮ್ಮ ಭಾರ್ಗವ' ವೇದಿಕೆಯಿಂದ ಇಳಿದು ಬಂದರು. ಹೆಂಗಸರ ಗುಂಪಿನಲ್ಲಿ ಕುಳಿತಿದ್ದ ಶ್ರೀಮತಿ ಕಾರಂತರು-ನಿಜವಾಗಿ ಹೆದರಿದ್ದು ಈಗ! ಅಧ್ಯಕ್ಷ ಕಾರಂತರೇ ಏಕೆ ಇಳಿದು ಬರಬೇಕು–ಏನು ಅನಾಹುತವಾಗುವುದೋ ಎಂದವರು ಭಯಗೊಳ್ಳುವುದು ಸಹಜ.

ಕಾರಂತರು ನೇರವಾಗಿ ಹೋಗಿ ಆ ಪುರು
ಶ್ರೇಷ್ಠನ ಬೆನ್ನು ಚಪ್ಪರಿಸಿದರು. ಅವನು ಬೆ
ರಿದ್ದ. ಇವರು ಅವನ ಕೈಕುಲುಕಿ ಅವನನ
ಕರೆದುಕೊಂಡು—ಎಳೆದುಕೊಂಡೇ ಎನ್ನಬ
ಹುದು—ಹೊರಟರು.

ಕಾರಂತರು ಅವನನ್ನು ನೇರವಾಗಿ ವೇದಿಕೆ
ಕರೆದೊಯ್ದು, ತಮ್ಮ ಆಸನದ ಬದಿಗೇ ಒಂದ
ಪೀಠವನ್ನಿಡಿಸಿ ಅವನನ್ನು ಕೂಡಿಸಿದರು. ಅಲ್ಲ
ಟೇಬಲಿನ ಮೇಲೆ ರಾಶಿಯಾಗಿ ಬಿದ್ದ ಹೂಮಾ
ಗಳನ್ನೆತ್ತಿ ತಾವೇ ನಿಂತು ಅವನಿಗೆ ಹಾಕಿದರು
ಪ್ರೇಕ್ಷಕರು ಕೈತಟ್ಟಿ ಸ್ವಾಗತಿಸಿದರು.

ಈಗ ಅವನಿಗೆ ಹೆದರಿಕೆ ಕಳೆದಿತ್ತು. ತಾನೆ
ಅಧ್ಯಕ್ಷನೆಂಬ ಠೀವಿಯಲ್ಲಿ ಸೆಟೆದು ಕುಳಿತಿದ್ದ.

ಮೈಸೂರು ಸಮ್ಮೇಳನದಲ್ಲಿ ತಾಸಿಗೊಂಡ
ಮಾಲೆ— ಅಧ್ಯಕ್ಷರಿಗೆ. ಅವೆಲ್ಲ ಕಾರಂತ
ಸೂಚನೆಯಂತೆ ಹೊಸ ಅತಿಥಿಗೇ ಅರ್ಪಿತವಾ
ದವು. ಅವನು ತನ್ನ ಉನ್ನತಾಸನದಿಂದ ಮೊ
ಮೊದಲು ಸ್ತ್ರೀ ಸಮೂಹದ ಕಡೆಗೇ ನೋಡುತ್ತಿ
ದ್ದವನು ಮುಂದೆ ಮಾಲೆಗಳು ತನಗೇ ಬೀ
ಹತ್ತಿದಾಗ ತನ್ನನ್ನೇ ನೋಡಿಕೊಳ್ಳಹತ್ತಿದ.

ಮಧ್ಯಾಹ್ನದ ಸಭೆಗೆ ಎಲ್ಲರಿಗಿಂತ ಮೊದಲ
ಅವನೇ ಬಂದು ತನ್ನ ಆಸನ ಅಲಂಕರಿಸಿ ಅಧ
ಕ್ಷರು ಬಂದಾಗ ಹಸನ್ಮುಖದಿಂದ ಸ್ವಾಗತಿಸಿದ
ತಲೆಗೆ ಸೋರುವಂತೆ ಎಣ್ಣೆ ಬಡಿದುಕೊಂಡಿದ್ದ
ಮೂರಾಣೆಯದೊಂದು ಗಾಗಲ್ ಹಾಕಿಕೊಂಡ
ತಾನೆತ್ತ ನೋಡುತ್ತಿರುವುದೆಂಬುದು ಕಂಡುಬ
ದಂತೆ ವ್ಯವಸ್ಥೆ ಮಾಡಿಕೊಂಡಿದ್ದ. ಸೂಟು ಧರಿ
ಟೈ ಬಿಗಿದಿದ್ದ. ಎರಡು ದಿನ ಅಧ್ಯಕ್ಷರ ಮಾ
ಗಳನ್ನೆಲ್ಲ ತಾನೇ ಧರಿಸಿದ.

ಯಾವ ಸ್ತ್ರೀಯರನ್ನೂ ಅವನು ಮತ್ತೆ ಪೀಡಿ
ಲಿಲ್ಲ. ಅವನ 'ಕಾಮನೆ' 'ಕೀರ್ತಿ'ಗೆ ಪರಿವರ್ತಿ
ವಾಗಿ ಕೀರ್ತಿಶೇಷವಾಯಿತು.

ಆದರೆ ನಡುನಡುವೆ ಬಂದು ಹೋಗು
ಚಂಚಲ ಶ್ರೋತಾರರು, ಪ್ರೇಕ್ಷಕರು, ಪ್ರತಿನಿ
ಗಳು ಮಾತ್ರ ಅಧ್ಯಕ್ಷರ ಬದಿಗೊಂದು ಗಟ್ಟಿಯಾ
ಕುಳಿತ ಉತ್ಸವ ಮೂರ್ತಿಯನ್ನು ಕಂಡ
ಇದಾವ ಸಾಹಿತಿ ಎಂಬುದನ್ನರಿಯದೆ ಬೆರಳ
ಕಚ್ಚಿಕೊಂಡರು.

ಇಲಿಗಳಿಂದ ಮಾನವರಿ-
ಗಾಗುವ ಹಾನಿ ಅಷ್ಟಿಷ್ಟಲ್ಲ

ಮೂರ್ತಿ ಸಣ್ಣದು ಕೀರ್ತಿ ದೊಡ್ಡದು



ರ್ಯಾಟ್ ಕಿಂಗ್

"ಕಾದಂಬಿನಿ"ಯಿಂದ

"ಬೊಮ್ಮನ ಹಳ್ಳಿಯ ಕಿಂದರ ಜೋಗಿ" ಎಂಬ ಕವಿತೆಯಲ್ಲಿ ಆ ಹಳ್ಳಿಯಲ್ಲಿ ಇಲಿಗಳ ಕಾಟ ಅಸಾಧ್ಯವಾಗಿತ್ತೆಂಬ ವರ್ಣನೆ ಬರುತ್ತದೆ. ಮಲಗಿರುವ ಹೆಂಗಸರ ಹೆರಳುಗಳನ್ನೂ ಅವು ಕತ್ತರಿಸಿ ಹಾಕುತ್ತಿದ್ದವೆಂದು ಮುಂತಾಗಿ ಹೇಳಿರುವ ಮಾತುಗಳು ಉತ್ಪ್ರೇಕ್ಷೆಯೆಂದು ಅನಿಸುವಂತಿದ್ದರೂ ಮಾನವನಿಗೆ ಇಲಿಗಳಿಂದಾಗುವ ಉಪದ್ರವ ಅಷ್ಟಿಷ್ಟೇನಲ್ಲ ಎಂಬ ಮಾತು ಸಂಪೂರ್ಣ ಸತ್ಯವಾದದ್ದು. ಜಗತ್ತಿನಲ್ಲಿ ಇದುವರೆಗೆ ಯುದ್ಧಗಳು ಮತ್ತು ಕ್ರಾಂತಿಗಳಿಂದ ಆದ ಮನುಷ್ಯಹಾನಿಗಿಂತಲೂ ಇಲಿಗಳಿಂದಾದ ಮನುಷ್ಯಹಾನಿ ಹೆಚ್ಚ ಸದೆಂದು ಇಲಿಗಳ ಸಂಹಾರವನ್ನೇ ಜೀವನದ ಧ್ಯೇಯವನ್ನಾಗಿಮಾಡಿಕೊಂಡಿರುವ ಹಾಲೆಂಡಿನ ಜೇನ್ ಓಲಿಚ್ಲೈಗರ ಎಂಬಾತ ಹೇಳುತ್ತಾನೆ. ಪ್ರತಿ ವರ್ಷ ಇಲಿಗಳು ಅಬ್ಜಗಟ್ಟಲೆ ರೂಪಾಯಿಗಳ ಆಹಾರ ಪದಾರ್ಥಗಳನ್ನು ತಿಂದು ಮುಗಿಸುತ್ತವೆ. ಇಷ್ಟೇ ಅಲ್ಲ, ಇವು ಭೀಕರ ರೋಗಗಳನ್ನು ಹಬ್ಬಿಸುವ ಸಾಧನಗಳಾಗಿವೆ; ಒಡ್ಡುಗಳನ್ನು ಕೊರೆದು ಲಡು ಮಾಡಿ ಕೆಡವುತ್ತವೆ; ಕೆಲ ಸಲ ಮನುಷ್ಯರಮೇಲೆ ದಾಳಿ ಮಾಡಿ ಅವರನ್ನು ಕೊಲ್ಲುವುದುಂಟು.

ಓಲಿಚ್ಲೈಗರ್ ಇಲಿಗಳಿಂದಾಗುವ ಈ ಅನರ್ಥವನ್ನು ಕಂಡು ಅದರ ನಿವಾರಣೆಗೆಂದು ಅವುಗಳ ಸಂಹಾರ ಯಜ್ಞದ ವ್ರತವನ್ನು ಕೈಕೊಂಡಿದ್ದಾರೆ. ಇಲಿಗಳ ಜೀವನದ ರೀತಿನೀತಿಗಳ ಬಗ್ಗೆ ಜಗತ್ತಿನಲ್ಲಿ ಲಭ್ಯವಿರುವ ಎಲ್ಲ ಪುಸ್ತಕಗಳನ್ನು ಇವರು ತಿರುವಿ ಹಾಕಿದ್ದಾರೆ.

ಜಗತ್ತಿನಲ್ಲಿ ಇಲಿಗಳಿಲ್ಲದ, ಅವುಗಳ ಕಾಟವಿಲ್ಲದ ಒಂದೇ ಒಂದು ದೇಶವೂ ಇಲ್ಲ. ಇಲಿಗಳ ನಾಶಕ್ಕಾಗಿ ಕಂಕಣಬದ್ಧವಾದ ಓಲಿಚ್ಲೈಗರರಿಗೆ ಸಾಮಾನ್ಯ ಇಲಿ ಪಂಜರಗಳೂ ವಿಷವೂ ಅವುಗಳ ನಿರ್ಮೂಲನೆಗೆ ಸಮರ್ಥ ಸಾಧನಗಳಲ್ಲ ಎಂಬುದು ಬೇಗನೆ ಅನುಭವಕ್ಕೆ ಬಂತು. ಇಲಿಗಳು ಬಲು ಚುರುಕು ಪ್ರಾಣಿಗಳು. ಅವುಗಳು ಬಹುಬೇಗ ವಿಷಯಜ್ಞಾನ ಮಾಡಿಕೊಳ್ಳಬಲ್ಲವು. ಅವುಗಳ ಸ್ಮರಣಶಕ್ತಿಯು ಅದ್ಭುತವಾಗಿದೆ

ಮುದಿ, ಅನುಭವಿ ಇಲಿಗಳಂತೂ ತಮ್ಮನ್ನು ಹಿಡಿಯಲೆಂದು ಇರಿಸಿದ ಪಂಜರಗಳನ್ನು ದುರ್ಲಕ್ಷ್ಯದಿಂದ ನೂಕಿ ಹೋಗುತ್ತವೆ. ಬಹು ಶೀಘ್ರದಲ್ಲಿ ವಿಷದ ಪತ್ತೆಯನ್ನು ಹಚ್ಚಿ ಅವುಗಳಿಂದ ದೂರವಿರಲು ಕಲಿತುಕೊಳ್ಳುತ್ತವೆ.

ವಿಷಮಿಶ್ರಿತ ಖಾದ್ಯವಾದರೂ ಸರಿ, ಅದನ್ನು ತಿಂದೇ ತೀರಬೇಕೆಂಬ ಚಾಪಲ್ಯವನ್ನು ಇಲಿಗಳಲ್ಲಿ ಹುಟ್ಟಿಸುವಂಥ ಆಹಾರ ವಸ್ತುವೊಂದು ಇಲ್ಲ. ಎಂಥ ಚಾಣಾಕ್ಷ ಇಲಿಯೇ ಆಗಲಿ, ಜಿಹ್ವಾಚಾಪಲ್ಯವನ್ನು ತಡೆದುಕೊಳ್ಳಲಾಗದಂಥ ಒಂದು ಆಹಾರ ಪದಾರ್ಥವನ್ನು ಹುಡುಕಬೇಕು ಎಂದು ಓಲಿಚ್‌ಲೈಗರ್ ಅಂದುಕೊಂಡರು.

ಇಲಿಗಳಲ್ಲಿ ಕಾಮಭಾವನೆ ಆತ್ಮರಕ್ಷಣೆಯ ಭಾವನೆಗಿಂತಲೂ ಬಲವತ್ತರವಾಗಿರುತ್ತದೆ. ಆದ್ದರಿಂದ ಇಲಿಗಳ ಕಾಮಭಾವನೆಯನ್ನು ಕೆರಳಿಸುವಂಥ ಆಹಾರ ವಸ್ತುವನ್ನು ಹುಡುಕಲು ಓಲಿಚ್‌ಲೈಗರ್ ನಿರ್ಧರಿಸಿದರು. ನಾಲ್ಕು ವರ್ಷಗಳ ದೀರ್ಘ ಪರಿಶ್ರಮ ಮತ್ತು ಶೋಧಗಳಿಂದ ಅವರು ಎಂಥ ನಿಗ್ರಹಿ, ಚತುರ ಇಲಿಯಾದರೂ ಮೋಹವನ್ನು ಸಂಯಮಿಸಲಾರದಂಥ ಒಂದು ವಸ್ತುವನ್ನು ಹುಡುಕಿದರು. ಈ ವಸ್ತುವಿನ ವಾಸನೆ ಮೈಲುಗಟ್ಟಲೆ ದೂರದಲ್ಲಿರುವ ಇಲಿಗಳನ್ನೂ ಆಕರ್ಷಿಸಬಲ್ಲುದು. ಆದರೆ ಈ ವಾಸನೆ ಎಷ್ಟು ಸೂಕ್ಷ್ಮವಾಗಿರುವುದೆಂದರೆ ಮನುಷ್ಯರಿಗೆ ಅದರ ಅನುಭವವಾಗುವುದಿಲ್ಲ.

ಕಾಮಭಾವನೆ ಪ್ರಬಲವಾಗಿರುವ ಇಲಿಗಳ ಸಂತಾನ ನಿರ್ಮಾಣ ಶಕ್ತಿಯೂ ಇತರ ಪ್ರಾಣಿಗಳಿಗಿಂತ ಅಧಿಕವಾಗಿದೆ. ಇಲಿ ಹುಟ್ಟಿ ಮೂರು ತಿಂಗಳಾದೊಡನೆ ಮರಿಗಳನ್ನು ಹಾಕಲು ಯೋಗ್ಯವಾಗುತ್ತದೆ. ವರ್ಷದೊಳಗಾಗಿ ಅದರ ಮರಿಗಳು, ಮೊಮ್ಮರಿಗಳು ಕೂಡ ತಾಯಿಯಾಗುತ್ತವೆ. ಈ ಕ್ರಮದಲ್ಲಿ ಒಂದು ಹೆಣ್ಣಿಲಿ ಮೂರು ವರ್ಷಗಳಲ್ಲಿ ೨,೫೦,೦೦೦ ಮರಿ ಮೊಮ್ಮರಿಗಳನ್ನು ಪಡೆಯಬಲ್ಲದು. ಹತ್ತು ವರ್ಷಗಳಲ್ಲಿ ಅದರ ಸಂತಾನ ೩೬೦,೦೦,೦೦,೦೦,೦೦,೦೦೦ ದಷ್ಟಾಗಬಲ್ಲದು. ನಡುವೆ ವಿಘ್ನ ಬಾರದೆ ಹೀಗೆ[...] ಇಲಿಯ ಸಂತಾನ ಬೆಳೆದಲ್ಲಿ ಮನುಷ್ಯನಿಗೆ ಇರ[...] ಜಗತ್ತಿನಲ್ಲಿ ಸ್ಥಳವೇ ಇಲ್ಲದಂತಾದೀತು.

ಇಲಿಗಳ ನಾಶಕ್ಕಾಗಿ ರಾಮಬಾಣವಾ[...] ಆಹಾರವಸ್ತುವನ್ನು ಶೋಧಿಸಿದ ಬಳಿಕ ಅದ[...] ವಾಸನೆಯನ್ನು ಕೆಡಿಸದಂತೆ ಒಂದು ವಿಷವನ[...] ಶೋಧಿಸಲು ಓಲಿಚ್‌ಲೈಗರರು ಪ್ರಯತ್ನ ಮಾ[...] ತೊಡಗಿದರು. ಒಂದು ವರ್ಷ ಕಾಲ ಸಾವಿರಾ[...] ಪ್ರಯೋಗಗಳನ್ನು ನಡೆಸಿ ಅವರು ಅಂಥದೊಂ[...] ವಿಷವನ್ನೂ ಕಂಡುಹಿಡಿದರು. ಈ ವಿಷ ಅಮೆ[...] ರಿಕದಲ್ಲಿ ಮಾತ್ರ ತಯಾರಾಗುತ್ತಿದ್ದು ಅದ[...] ಹೆಸರು ಕುಮಾರೀನ್ ಎಂದಿದೆ. ಇದು ಇಲಿಗಳ[...] ಮಾತ್ರ ಘಾತುಕವಾದದ್ದಿದ್ದು ಇದನ್ನು ತಿ[...] ಮೇಲೆ ೪-೫ ದಿನಗಳಲ್ಲಿ ಆಂತರಿಕ ರಕ್ತಸ್ರಾ[...] ದಿಂದ ಇಲಿಗಳು ಸತ್ತುಹೋಗುತ್ತವೆ.

ಇಲಿಗಳ ಲೈಂಗಿಕ ವಾಸನೆಯನ್ನು ಉದ್ರೇ[...] ಸುವ ವಸ್ತುವಿನೊಡನೆ ಈ ವಿಷವನ್ನು ಒಂ[...] ಭದ್ರ ಪೆಟ್ಟಿಗೆಯಲ್ಲಿ ಓಲಿಚ್‌ಲೈಗರ್ ಇ[...] ತ್ತಾರೆ. ಸಾವಕಾಶವಾಗಿ ವಿಷವು ಆ ವಸ್ತು[...] ನಲ್ಲಿ ಬೆರೆತುಹೋಗುತ್ತದೆ. ವಿಷದ ವಾಸ[...] ಸಂಪೂರ್ಣವಾಗಿ ಅಡಗಿ ಹೋಗುವುದರಿಂ[...] ಇಲಿಗಳು ನಿರ್ಭಯದಿಂದ ಆ ವಸ್ತುವ[...] ತಿನ್ನಲು ಬರುತ್ತವೆ.

ಇಲಿಗಳೆಂಥ ತಿನಿಸುಬಾಕ ಪ್ರಾಣಿಗಳು ಎ[...] ಕಲ್ಪನೆ ಜನರಿಗೆ ಇಲ್ಲ. ಹಗಲು-ರಾತ್ರಿಯೆನ್ನ[...] ದಿನವಿಡಿ ದಾಂಧಲೆ ಹಾಕುವುದರಿಂದ ಇಲಿ[...] ಶಕ್ತಿ ಬಹುಬೇಗ ವ್ಯಯವಾಗುತ್ತದೆ. ಇದರಿಂ[...] ಅವು ಯಾವಾಗಲೂ ಹಸಿದೇ ಇರುತ್ತ[...] ಕೆಲವೇ ತಾಸುಗಳ ವರೆಗೆ ಆಹಾರ ಸಿ[...] ಹೋದರೂ ಅವು ಹುಚ್ಚೆದ್ದು ಬಿಡುತ್ತ[...] ೧೯೪೫ ರಲ್ಲಿ ಜರ್ಮನಿಯಲ್ಲಿ ಇಲಿಗಳಿಗೂ ಆ[...] ರದ ಕೊರತೆಯಾದಾಗ ಹ್ಯಾಂಬರ್ಗಿನ ಮೃಗ[...] ಲಯದಲ್ಲಿಯ ಎರಡು ಆನೆಗಳ ಕಾಲು[...] ಮಾಂಸವನ್ನೆ ಅವು ಕಿತ್ತು ತಿಂದುಬಿಟ್ಟವು.

ಇಲಿಗಳು ಮನುಷ್ಯರ ಮೇಲೆ ಆಕ್ರಮ[...]

ಮಾಡುವುದು ಉಂಟು. ಮೊದಲನೆ ಮಹಾಯುದ್ಧದ ಕಾಲದಲ್ಲಿ ಅವು ಯುದ್ಧಭೂಮಿಯಲ್ಲಿ ತೋಡಿದ್ದ ಕಂದಕಗಳಲ್ಲಿ ಸತ್ತು ಬಿದ್ದಿದ್ದ ಸೈನಿಕರನ್ನು ತಿಂದುಹಾಕಿದವು ಮಾತ್ರವಲ್ಲ, ಗಾಯಗೊಂಡು ಬಿದ್ದಿದ್ದವರನ್ನೂ ಬಹುವಾಗಿ ಘಾತಿಸಿದವು. ಹಂಗೇರಿಯದ ಬಂಡಾಯದ ನಂತರ ಇಲಿಗಳು ಆಸ್ಪತ್ರೆಗಳ ಗೋಡೆಗಳನ್ನೇರಿ ಬಂದು ಒಳಗಿದ್ದ ಗಾಯಾಳುಗಳ ರಕ್ತ ಕುಡಿಯುತ್ತಿದ್ದವು ಎಂದು ಹೇಳುತ್ತಾರೆ. ಯುದ್ಧ ಕಾಲದಲ್ಲಿ ಇಲಿಗಳ ಸಂಖ್ಯೆ ಅಸಾಧಾರಣ ರೀತಿಯಲ್ಲಿ ಹೆಚ್ಚುತ್ತದೆ.

ಪತ್ರಿಕೆಗಳಲ್ಲಿ ಬರುವ ಈ ಬಗೆಯ ಸುದ್ದಿಗಳೇನೂ ಕಲ್ಪಿತವಾದವುಗಳಲ್ಲ. ಇಲಿಗಳು ಒಂದು ಮಗುವನ್ನು ತಿಂದುಹಾಕಿದ, ಒಂದು ವೃದ್ಧ ದಂಪತಿಯ ಕೊಲೆ ಮಾಡಿದ, ಒಬ್ಬ ಹೆಳವನ ಮೇಲೆ ದಾಳಿ ಮಾಡಿ ಅವನನ್ನು ಕಂಗೆಡಿಸಿದ ಉದಾಹರಣೆಗಳಿವೆ. ಕಳೆದ ವರ್ಷ ಫ್ರಾನ್ಸಿನಲ್ಲಿ ಮಗುವನ್ನು ಮನೆಯಲ್ಲಿಟ್ಟು ಕೆಲಸಕ್ಕೆ ಹೋಗಿದ್ದ ದಂಪತಿಗಳು ತಿರುಗಿ ಬಂದು ನೋಡಿದಾಗ ಮಗುವಿದ್ದಲ್ಲಿ ಅದರ ತುಂಡು ತುಂಡಾದ ಅವಯವಗಳು ಬಿದ್ದಿರುವುದನ್ನು ಕಂಡರು.

ಇಲಿಗಳ ವಿಷಯದಲ್ಲಿ ಪ್ರಯೋಗ ಮಾಡುತ್ತಿರುವ ಓಲಿಚ್‌ಲೈಗರರ ಮೇಲೂ ಇಲಿಗಳು ಎಷ್ಟೋ ಬಾರಿ ಆಕ್ರಮಣ ಮಾಡಿವೆ. ಆದರೆ ಅವರು ಸದಾ ಅತ್ಯಂತ ಜಾಗರೂಕರಾಗಿರುವುದರಿಂದ ಅಪಾಯತಪ್ಪಿಡೆ ಉಳಿದುಕೊಂಡಿದ್ದಾರೆ. ಆದರೂ ಒಮ್ಮೆ ಅವರು ಇಲಿಗಳ ಕ್ರೂರತನದ ರುಚಿಯನ್ನು ಕಾಣಬೇಕಾಯಿತು. ಅಂದವರು ಒಂದು ಕತ್ತಲೆಯ ಕೋಣೆಯಲ್ಲಿ ಇಲಿಗಳಿಗಾಗಿ ವಿಷ ಪದಾರ್ಥವನ್ನು ಇಡಲು ಸ್ಥಳವನ್ನು ಹುಡುಕುತ್ತಿದ್ದಾಗ ಮಾಡಿನಲ್ಲಿ ಏನೋ ಚಲಿಸುತ್ತಿರುವಂತೆ ಅವರಿಗೆ ಭಾಸವಾಯಿತು. ಅವರು ಮುಖ ಎತ್ತಿ ನೋಡುತ್ತಿರುವಾಗ ಇಲಿ ಆಕ್ರಮಣ ಮಾಡಿತು. ಓಲಿಚ್‌ಲೆಗರರ ಕಣ್ಣುಗಳು ಸುದೈವದಿಂದ ಪಾರಾದರೂ ಇಲಿಯ ಹಲ್ಲುಗಳು ಅವರ ಮೂಗಿನಲ್ಲಿ ನಟ್ಟವು. ಓಲಿಚ್‌ಲೈಗರರು ಆ ಇಲಿಯನ್ನು ಹಿಡಿದೆಳೆದಾಗ ಮೂಗಿನ ಚೂರೊಂದು ಕಿತ್ತು ಬಂತು. ಆ ಕಲೆ ಇಲಿಗಳೊಡನೆ ಅವರು ನಡೆಸಿರುವ ಯುದ್ಧದ ಶಾಶ್ವತ ಗುರುತಾಗಿ ಉಳಿದುಕೊಂಡಿದೆ.

ಒಂದೇ ಇಲಿಯ ಆಕ್ರಮಣವೇ ಇಷ್ಟು ಭೀಕರವಾಗಿರುವಾಗ ಅನೇಕ ಇಲಿಗಳು ಒಮ್ಮೆಲೆ ಆಕ್ರಮಣ ಮಾಡಿದರೆ ಏನಾಗಬೇಡ? ಕೆಲ ಸಮಯದ ಹಿಂದೆ ಫ್ರಾನ್ಸಿನಲ್ಲಿ ಒಬ್ಬ ರೈತನ ಮೇಲೆ ಆಕ್ರಮಣ ಮಾಡಿ ಅವನ ರಕ್ತದ ರುಚಿ ನೋಡಿದ ಇಲಿಗಳು ಅವನನ್ನು ಎಷ್ಟೋ ದೂರದ ವರೆಗೆ ಬೆನ್ನಟ್ಟಿಕೊಂಡು ಹೋಗಿದ್ದವು. ಅವುಗಳಿಂದ ಪಾರಾಗಲು ಆತನಿಗೆ ಒಂದು ತಾಸು ಬೇಕಾಯಿತು.

ಯಾರೊಬ್ಬರಿಗೂ ತಮ್ಮ ಮನೆಯಲ್ಲಿರುವ ಇಲಿಗಳ ಸಂಖ್ಯೆ ತಿಳಿಯುವುದಿಲ್ಲ. ಅಮೇರಿಕದಂಥ ಅತ್ಯಂತ ಪ್ರಗತಿಪರ ದೇಶದಲ್ಲಿ ಕನಿಷ್ಠ ೪೦ ಕೋಟಿ ಇಲಿಗಳಿರಬೇಕೆಂದು ಅಂದಾಜಿದೆ. ಅವು ಪ್ರತಿ ವರ್ಷ ೨೦ ಕೋಟಿ ಡಾಲರುಗಳ ಆಹಾರ ಪದಾರ್ಥವನ್ನು ತಿಂದುಹಾಕುತ್ತವೆ.

ಎಂಥ ಕಠಿನ ನೆಲವನ್ನಾದರೂ ಬಗೆದು ಇಲಿ ತನ್ನ ಬಿಲವನ್ನು ಮಾಡಿಕೊಳ್ಳುತ್ತದೆ. ಇಲಿಗಳ ಹರಿತವಾದ ಮುಂದಿನ ಹಲ್ಲುಗಳು ಅವುಗಳ ಜೀವನವಿಡೀ ಬೆಳೆಯುತ್ತಲೇ ಇರುತ್ತವೆ. ಒಂದು ವರ್ಷದಲ್ಲಿ ಈ ಹಲ್ಲುಗಳು ನಾಲ್ಕು ಇಂಚುಗಳಷ್ಟು ಬೆಳೆಯುತ್ತವೆಂದು ಓಲಿಚ್‌ಲೈಗರ್ ಹೇಳುತ್ತಾರೆ. ಆದ್ದರಿಂದ ಇಲಿಗಳು ಸದಾ ಏನನ್ನಾದರೂ ಕಡಿಯುತ್ತಲೇ ಇದ್ದು ಬೆಳೆಯುವ ಹಲ್ಲುಗಳನ್ನು ಸವೆಸಿ ಅಳತೆಯಲ್ಲಿಟ್ಟುಕೊಳ್ಳಬೇ-ಕಾಗುತ್ತದೆ. ಎಚ್ಚರವಿರುವ ಕಾಲದಲ್ಲಿ ಅರ್ಧದಷ್ಟು ಸಮಯವನ್ನು ಇಲಿ ಏನನ್ನಾದರೂ ಕಡಿಯುವುದರಲ್ಲೆ ಕಳೆಯುತ್ತದೆ. ಹಾಗೆ ಮಾಡದಿದ್ದರೆ ಅವುಗಳ ಹಲ್ಲುಗಳೇ ಅವುಗಳ ಮೃತ್ಯುವಾಗಬಲ್ಲದು.

ಕಡಿಯಲು ಅದು ಇದೇ ಬೇಕು ಎಂದೇನೂ

ಇಲ್ಲ ಇಲಿಗಳಿಗೆ. ಎಂಥ ಪರಿಸ್ಥಿತಿಯನ್ನಾದರೂ ತಮಗೆ ಅನುಕೂಲ ಮಾಡಿಕೊಳ್ಳುವ ಅಸಾಧಾರಣ ಶಕ್ತಿಯೊಂದು ಇಲಿಗಳಲ್ಲಿರುತ್ತದೆ. ಇಲಿ ಎಂಥ ಹವೆಯಲ್ಲಿಯೂ ಬದುಕಬಲ್ಲುದು, ಏನನ್ನಾದರೂ ತಿಂದು ಜೀವಿಸಬಲ್ಲದು, ಇತರ ಪ್ರಾಣಿಗಳಿಗೆ ಅಂತಕಸ್ವರೂಪವಾದ ವಿಪತ್ತನ್ನು ಸಹಿಸಿಕೊಳ್ಳಬಹುದು.

ಜಗತ್ತಿನ ಇತಿಹಾಸದ ಮೇಲೆ ಯಾವ ಯೋದ್ಧನಾಗಲಿ, ರಾಜಕಾರಣಿಯಾಗಲಿ ಬೀರದಂಥ ಪ್ರಭಾವವನ್ನು ಇಲಿಗಳು ಬೀರಿವೆಯೆಂದರೆ ಕೇಳಿ ಆಶ್ಚರ್ಯವಾದೀತು. ಮಧ್ಯಯುಗದಲ್ಲಿ ಇಲಿಗಳು ಯುರೋಪಿನ ಮೇಲೆ ಆಕ್ರಮಣ ಮಾಡಿದಾಗ ತಮ್ಮೊಡನೆ ತಂದ ವಿಪತ್ತುಗಳು ಎಷ್ಟು ಭೀಕರವಾಗಿದ್ದವೆಂದರೆ ಅವುಗಳ ಮುಂದೆ ಚಂಗೀಸ್‌ಖಾನನ ಕ್ರೂರ ಸೈನ್ಯ ತಂದ ವಿಪತ್ತುಗಳು ಏನೇನೂ ಅಲ್ಲವೆಂದೆನಿಸುತ್ತದೆ. ಇಲಿಗಳು ತಂದೊಡ್ಡಿದ ಪ್ಲೇಗ್ ಬೇನೆಯಿಂದ ನಾಲ್ಕೈದು ತಲೆಮಾರುಗಳಲ್ಲಿ ಯುರೋಪಿನಲ್ಲಿ ೩,೪೦,೦೦,೦೦೦ ಜನ ಸತ್ತರು. ಇಲಿ ಪ್ಲೇಗ್ ಒಂದೇ ಅಲ್ಲ, ಇನ್ನೂ ಅನೇಕ ಬಗೆಯ ಭೀಕರ ರೋಗಗಳನ್ನು ಹಬ್ಬಿಸುತ್ತದೆ.

ರ್‍ಯಾಟ್‌ಕಿಂಗ್ ಎಂಬ ವಿಚಿತ್ರವಾದ ಇಲಿಯ ಬಗ್ಗೆ ಸಹಸಾ ಜನರಿಗೆ ಕಲ್ಪನೆಯೇ ಇರುವುದಿಲ್ಲ. ಓಲಿಚ್‌ಲೈಗರ್ ಇವುಗಳ ವಿಚಾರದಲ್ಲೂ ಹೊಸ ಶೋಧಗಳನ್ನು ಮಾಡಿದ್ದಾರೆ. ರ್‍ಯಾಟ್‌ಕಿಂಗ್ ಇಲಿಯೆಂದರೆ ಅನೇಕ ಇಲಿಗಳು ಒಂದರೊಂದರ ಬಾಲಕ್ಕೆ ಗಂಟುಹಾಕಿಕೊಂಡು ಒಂದು ಗುಂಪಾಗಿರುವುದು. ಇಲಿಗಳ ಯಾವುದೊ ಒಂದು ಬೇನೆಯ ಮೂಲಕ ಹೀಗಾಗುತದೆ ಎಂದು ಕೆಲ ವೈಜ್ಞಾನಿಕರ ಹೇಳಿಕೆಯಿದೆ. ಮೈಗೆ ಕಾವುಂಟು ಮಾಡಿಕೊಳ್ಳಲು ಇಲಿಗಳು ಒಂದಕ್ಕೊಂದು ಹತ್ತಿ ಕೂಡ್ರುತ್ತವೆಂದೂ ಆ ಕಾಲದಲ್ಲಿ ಅವುಗಳ ಬಾಲದಿಂದ ಒಸರುವ ಒಂದು ಜಿಗುಟು ಪದಾರ್ಥದಿಂದಾಗಿ ಬಾಲಗಳು ಗಂಟು ಬೀಳುತ್ತವೆಂದೂ ಅವರನ್ನುತ್ತಾರೆ. ಪಶುವಿಜ್ಞಾನಿಗಳು ಅನ್ನುವುದು ಬೇರೆ: ಒಂದು ಬಿಲದಲ್ಲಿ ಅನೇ[illegible] ಇಲಿಗಳು ಸೇರಿ ಗದ್ದಲವಾದಾಗ ಅವುಗಳ ಬಾ[illegible]ಗಳು ಗಂಟು ಬೀಳುವುದಲ್ಲದೆ ಇದರಲ್ಲಿ ವಿಶೇ[illegible]ವಾದದ್ದೇನೂ ಇಲ್ಲ.

ಇಡೀ ಜಗತ್ತಿನಲ್ಲಿಂದು ಕೇವಲ ೨೦ ರ್‍ಯಾಟ್[illegible] ಕಿಂಗ್‌ಗಳು ಸಿಕ್ಕಿದ್ದು ಅವೆಲ್ಲವೂ ವಸ್ತು ಸಂಗ್ರ[illegible] ಹಾಲಯಗಳಲ್ಲಿವೆ. ಓಲಿಚ್‌ಲೈಗರರ ಬ[illegible] ಒಂದಿದೆ. ಆದರೆ ಇವುಗಳಲ್ಲಿ ಒಂದೂ ಜೀವಂ[illegible]ವಾಗಿಲ್ಲ.

ಅತ್ಯಂತ ಸ್ವಾತಂತ್ರ್ಯ ಪ್ರೇಮಿಗಳಾಗಿರು[illegible] ಇಲಿಗಳು ತಮ್ಮ ಬಾಲ ಅಥವಾ ಕಾಲು ಯಾ[illegible]ರಲ್ಲಾದರೂ ಸಿಕ್ಕಿಬಿದ್ದಾಗ ಸ್ವಾತಂತ್ರ್ಯ ಪಡೆಯ[illegible]ವುದಕ್ಕಾಗಿ ಅವನ್ನು ಕಡಿದು ಹಾಕುವುದಕ್[illegible] ಹಿಂದೆ ಮುಂದೆ ನೋಡುವುದಿಲ್ಲ. ಆದರೆ ತಮ[illegible] ಬಾಲಗಳು ಹೀಗೆ ಒಂದಕ್ಕೊಂದು ಗಂಟ[illegible] ಬಿದ್ದಾಗ ಅವೇಕೆ ಹಾಗೆ ಮಾಡುವುದಿಲ್ಲವೊ ತಿ[illegible]ಯದು.

ರ್‍ಯಾಟ್‌ಕಿಂಗ್ ಇಲಿಗಳು ಬಿಲದಲ್ಲಿ ಇರುತ[illegible] ಈ ಬಿಲಗಳು ಯಾವ ಗಂಡಾಂತರವೂ ಒದ[illegible]ದಷ್ಟು ಸುರಕ್ಷಿತವಾಗಿರುತ್ತವೆ. ರ್‍ಯಾಟ್‌ಕಿಂಗ್[illegible] ಆಹಾರಕ್ಕಾಗಿ ಚಲಿಸಲಾರದಾದ್ದರಿಂದ ಇತ[illegible] ಇಲಿಗಳು ಅವಕ್ಕೆ ಆಹಾರ ತಂದು ಕೊಡುತ್ತ[illegible] ಏನಾದರೂ ವಿಪತ್ತು ಬಂದಾಗ ಉಳಿದ ಇಲಿಗಳ[illegible] ರ್‍ಯಾಟ್‌ಕಿಂಗ್‌ನ ಸುರಕ್ಷಿತತೆಯ ವಿಚಾರವನ್[illegible] ಮೊದಲಿಗೆ ಮಾಡುತ್ತವೆ.

ಇಲಿಗಳಲ್ಲಿ ಸ್ವಜಾತಿ ಪ್ರೇಮವಿಲ್ಲ. ಆಹಾ[illegible]ಭಾವವಾದಾಗ ಅವು ತಮ್ಮಲ್ಲಿಯ ದುರ್ಬ[illegible] ಹಾಗೂ ರೋಗಿ ಇಲಿಗಳನ್ನು ತಿಂದುಬಿಡುತ್ತ[illegible] ಆದರೆ ಎಂಥ ಪರಿಸ್ಥಿತಿಯೇ ಇರಲಿ, ಅ[illegible] ರ್‍ಯಾಟ್‌ಕಿಂಗ್‌ಗೆ ಮಾತ್ರ ಉತ್ತಮೋತ್ತ[illegible] ಆಹಾರವನ್ನೇ ಒದಗಿಸುತ್ತವೆ.

ವಾಸವದಲ್ಲಿ ರ್‍ಯಾಟ್‌ಕಿಂಗ್ ಅವುಗ[illegible] ಪ್ರಜನನ ಕೇಂದ್ರವೇ ಆಗಿದೆ. ಯಾವ ಪ್ರೇರ[illegible]ಯಿಂದಲೋ ಏನೊ ಮುದಿ ಇಲಿಗಳು ತಮ[illegible] ಮರಿಗಳಲ್ಲಿ ಅತ್ಯಂತ ಬಲಶಾಲಿಗಳಾದವುಗ[illegible]

ಬಾಲಗಳನ್ನು ಒಂದಕ್ಕೊಂದು ಗಂಟು ಹಾಕಿ ಬಿಡುತ್ತವೆ. ಇವುಗಳಲ್ಲಿ ಹೆಣ್ಣು ಮರಿಗಳ ಸಂಖ್ಯೆಯೆ ಅಧಿಕವಾಗಿರುತ್ತದೆ. ಗಂಡು ಹೆಣ್ಣು ಮರಿಗಳ ಬಾಲಗಳನ್ನು ಗಂಟು ಹಾಕುವ ರೀತಿಯಿಂದ ಅವು ಪ್ರಾಯಕ್ಕೆ ಬಂದ ಮೇಲೆ ಅವುಗಳ ಸಂಭೋಗಕ್ಕೇನೂ ತೊಂದರೆಯಾಗುವುದಿಲ್ಲ. ರ್ಯಾಟ್‌ಕಿಂಗ್ ಗುಂಪಿನಲ್ಲಿದ್ದ ಗಂಡು ಅಥವಾ ಹೆಣ್ಣಿಲಿ ಹೊರಗಿನ ಇಲಿಗಳೊಡನೆ ಕಾಮ ಸಂಬಂಧವನ್ನು ಹೊಂದುವುದಿಲ್ಲ. ಆದ್ದರಿಂದ ರ್ಯಾಟ್‌ಕಿಂಗ್ ಇಲಿಗಳ ಮರಿಗಳು ಅತ್ಯಂತ ಆರೋಗ್ಯವಂತವಾಗಿರುತ್ತವೆ.

ಮನುಷ್ಯರು ಮತ್ತು ಇಲಿಗಳ ಸಂಖ್ಯೆ ಹೆಚ್ಚುತ್ತಿರುವುದನು ಕಂಡರೆ ಪೃಥ್ವಿಯ ಮೇಲೆ ಇವೆರಡೂ ಪ್ರಾಣಿಗಳು ಇರುವುದಕ್ಕೆ ಸ್ಥಳವಿರಲಾರದು ಎನಿಸುತ್ತದೆ. ಆದರೆ ಜನರು ಇಂದು ಇಲಿಗಳ ಬಗ್ಗೆ ತಾತ್ಸಾರದಿಂದಿದ್ದರೂ ಅವುಗಳ ನಾಶವು ತಮ್ಮ ಬದುಕಿಗೆ ಅಗತ್ಯವಾಗಿದೆ ಎಂಬ ಮಾತನ್ನು ಬೇಗನೆ ಅರಿತುಕೊಳ್ಳುವರು ಎಂದು ಓಲಿಚ್‌ಲೈಗರ್ ಅಭಿಪ್ರಾಯಪಡುತ್ತಾರೆ. ಮನುಷ್ಯರಿಗೆ ಆ ಅರಿವು ಆಗದೆ ಹೋದಲ್ಲಿ ಈ ಪೃಥ್ವಿ ಇಲಿಗಳ ಸಾಮ್ರಾಜ್ಯವಾಗಿ ಪರಿಣಮಿಸಲೂಬಹುದು. *

'ಬ್ರಹ್ಮಚರ್ಯ'ದ ಶಕ್ತಿ

ಆರ್ಯ ಸಮಾಜದ ಸಂಸ್ಥಾಪಕರಾದ ಸ್ವಾಮಿ ದಯಾನಂದರು ಜಲಂದರದಲ್ಲಿ ಪ್ರವಚನದ ಕಾಲಕ್ಕೆ ನಗರದ ಗಣ್ಯ ವ್ಯಕ್ತಿಗಳು ವೇಶ್ಯಾ-ವಿಲಾಸ ಜೀವನದಲ್ಲಿ ಮಗ್ನರಾಗಿರುವದನ್ನು ಕಟುವಾಗಿ ಟೀಕಿಸಿದರು. ಆಗ ಸರದಾರ ವಿಕ್ರಮಸಿಂಗರು, (ಸ್ವಾಮೀಜಿಯವರು ಇವರಲ್ಲಿಯೇ ಅತಿಥಿಗಳಾಗಿ ಉಳಿದಿದ್ದರು— ಸ್ವಾಮೀಜಿಯವರ ಟೀಕೆಯಿಂದ ನೊಂದ ಗಣ್ಯವ್ಯಕ್ತಿಗಳಲ್ಲಿ ಇವರೊಬ್ಬರಾಗಿದ್ದರು—, "ಸ್ವಾಮೀಜಿ ಈ ದಿನ ತಾವು ನನ್ನನ್ನೂ ಸಹ! ಉಳಿಸಲಿಲ್ಲ" ಎಂದು ಅಂದರು. ಆಗ ಸ್ವಾಮೀಜಿಯವರು, "ಯಾವ ಪಕ್ಷಪಾತವಿಲ್ಲದೆ ನಾನು ಎಲ್ಲರ ಬಗ್ಗೆ ಮಾತಾಡುತ್ತೇನೆ" ಎಂದು ಉತ್ತರಿಸಿದರು. ವಿಕ್ರಮಸಿಂಗರು ಏನೂ ಮಾತಾಡಲಿಲ್ಲ.

ಮುಂದೆ ಇನ್ನೊಂದು ಪ್ರಸಂಗದಲ್ಲಿ ವಿಕ್ರಮಸಿಂಗರು ಸ್ವಾಮೀಜಿಯವರೊಡನೆ "ಬ್ರಹ್ಮಚರ್ಯದಲ್ಲಿ ಪ್ರಚಂಡ ಶಕ್ತಿಯಿರುತ್ತದೆಂದು ಕೇಳಿದ್ದೇನೆ" ಎಂದರು. "ಹೌದು. ಶಾಸ್ತ್ರಗಳೂ ಇದನ್ನೇ ಹೇಳುತ್ತವೆ" ಎಂದು ಸ್ವಾಮೀಜಿಯವರು ಉತ್ತರಿಸಿದರು.

"ಶಾಸ್ತ್ರಗಳು ಹೇಳುವದನ್ನು ಸಿದ್ಧಮಾಡಿ ತೋರಿಸುವದು ಸರಳವಲ್ಲ. ನೀವೂ ಬ್ರಹ್ಮಚಾರಿಗಳೇ, ಆದರೆ ಅಷ್ಟೊಂದು ಸಶಕ್ತರಾಗಿ ಕಾಣುವದಿಲ್ಲ" ಎಂದು ನುಡಿದು ವಿಕ್ರಮಸಿಂಗರು ಸ್ವಾಮೀಜಿಯವರ ಮೇಲೆ ಮುಯ್ಯನ್ನು ತೀರಿಸಿಕೊಂಡರು. ದಯಾನಂದರು ಯಾವ ಉತ್ತರವನ್ನೂ ಕೊಡಲಿಲ್ಲ.

ಆ ಮೇಲೆ ವಿಕ್ರಮಸಿಂಗರು, ತಮ್ಮ ಎರಡು ಕುದುರೆಗಳಿಂದ ಎಳೆಯಲ್ಪಡುವ ಬಂಡಿಯಲ್ಲಿ ಕುಳಿತು ಹೊರಡಲು ಉದ್ಯುಕ್ತರಾದರು. ಬಂಡಿಯವನು ಎಷ್ಟು ಹೊಡೆದಾಗ್ಯೂ ಕುದುರೆಗಳು ಮುಂದೆ ಹೆಜ್ಜೆಯನ್ನಿಡಲು ಒದ್ದಾಡುತ್ತಿರುವದನ್ನು ನೋಡಿ, ವಿಕ್ರಮಸಿಂಗರು ಹಿಂದೆ ಹೊರಳಿ ನೋಡಿದಾಗ ಅವರು ಆಶ್ಚರ್ಯಚಕಿತರಾದರು. ಸ್ವಾಮಿ ದಯಾನಂದರು ಬಂಡಿಯ ಗಾಲಿಯನ್ನು ಗಟ್ಟಿಯಾಗಿ ಹಿಡಿದಿದ್ದರು.

ಸಂಗ್ರಹ : ಪಿ. ಎಮ್. ಗಲಗಲಿ



ಸರ್ವಜ್ಞನ ಜೀವನರಸ

ಮನೋಹರರಾವ್ ದೇಶಪಾಂಡೆ

ದರ್ಶಕ ಕವಿಗಳ ಕಣ್ಣು ಸೂಕ್ಷ್ಮದರ್ಶಕ, ದೂರ ದರ್ಶಕ, ಪಾರದರ್ಶಕ ಅಪಾರ ದರ್ಶಕ .... ಅವರ ನಾಲಿಗೆ ಹೂವೆಂದರೆ ಹೂವು, ವಜ್ರವೆಂದರೆ ವಜ್ರ. ಜ್ಞಾನದೇವತೆಗೆ ಅದು ಪಾದಕ್ಕೇರಿಸಿದ ಹೂವು; ಅಜ್ಞಾನ ಭೂತಕ್ಕೆ ಅದು ಕೊರಳಿಗಿಟ್ಟ ವಜ್ರಾಯುಧ."

ನಮ್ಮ ರಾಷ್ಟ್ರಕವಿಗಳಾದ ಶ್ರೀಮಾನ್ ಬೇಂ
ಯವರು ದರ್ಶಕ ಕವಿಗಳನ್ನು ಕುರಿತು ಆಡಿ
ಮೇಲಿನ ಮಾತು ನಮ್ಮ ಸಂತಕವಿಯಾದ ಸರ್ವ
ನಿಗೆ ತುಂಬಾ ಅನ್ವಯಿಸುವದು. ಲೋಕೋ
ತ್ತರ ಪುರುಷನಾದ ಆತನ 'ಹೃದಯವು ವ
ಕ್ಕಿಂತ ಬಿರುಸು, ಹೂವಿಗಿಂತ ಸರಸು.' ಅ
ಅವನ ಮಾತಿನಲ್ಲಿ ಮೂಡಿ ದೌರ್ಜನ್ಯವನ
ಖಂಡಿಸಿತು. ಸೌಜನ್ಯವನ್ನು ಮಂಡಿಸಿತು.

ನಮ್ಮ ಎಲ್ಲ ಸಂತಕವಿಗಳಂತೆ ಸರ್ವಜ್ಞ
ಬಾಹ್ಯ ಜೀವನವು ಹೆಚ್ಚಾಗಿ ಕಟ್ಟುಕಥೆಗಳಿಂ
ಕೂಡಿರುವದು. ಅವುಗಳಲ್ಲಿ ಸತ್ಯ ಸಂಗತಿಗ
ಇಲ್ಲದಿಲ್ಲ, ಆದರೆ ಇದ್ದವು ಅತ್ಯಲ್ಪ. ಅವನ
ನೆಮ್ಮಿಯೆ ನಾವು ಮುಂದುವರಿಯಬೇಕ
ಧಾರವಾಡ ಜಿಲ್ಲೆಗೆ ಸೇರಿದ ಮಾಸೂರು ಹಾಗ
ಅದರ ನೆರೆಯಲ್ಲಿಯ ಅಂಬಲೂರು, ಇ
ಅದರಲ್ಲಿಯ ಭೌಗೋಲಿಕ ಸತ್ಯಗಳು. ಬಸವರಸ
ಕುಂಬಾರ ಶಾಲೆಯ ಮಾಳಿ ಇವರು ಇತಿಹಾ
ಪುರುಷರು. ಸರ್ವಜ್ಞನೇ ತನ್ನ ವಚನಗಳಲ್ಲಿ ಇ
ರನ್ನು ಉಲ್ಲೇಖಿಸಿರುವದರಿಂದ ಈ ವಿಷಯವನ
ಕುರಿತು ಸಂದೇಹಕ್ಕೆ ಎಡೆಯಿಲ್ಲ. ಸರ್ವಜ್ಞ
ಬಸವರಸನ ವರದ ಪುತ್ರ, ಮಾಳಿಯ ಮುದ
ಮಗ. ಬಾಲ್ಯದಲ್ಲಿಯ ಆತನ ಮುದ್ರೆಂ
ತೇಜಸ್ಸು, ಬುದ್ಧಿಯ ವೈಭವ, ಹಾಗೂ ಮಾತಿ
ಜಾಣ್ಮೆ ಇವನ್ನು ಕಂಡವರು ಆತನನ್ನು ವರ
ಪುತ್ರನೆಂದು ಭಾವಿಸಿರುವುದು ಸಹಜ. ಆದ
ಅದನ್ನು ಸಹಿಸದ ಕುಹಕರ ಒಡಲುರಿಯು ಆ
ನನ್ನು ಪರಿಪರಿಯಾಗಿ ನಿಂದಿಸಿದಂತೆ ಕಾ
ವದು. ವಿಜಯದಾಸರನ್ನು ನಿಂದಕರು 'ಕೂಸಿ
ಮಗ'ನೆಂದು ಹೀಯಾಳಿಸಿದಂತೆ, ಈತನನ
ಜನರು 'ಮಾಳೀ ಮಗ'ನೆಂದು 'ಹಾರೂ
ಪೋರಾ' ಎಂದು ಹೀಯಾಳಿಸಿದಂತೆ ತೋ
ವದು. ಮೇಲಿಂದ ಮೇಲೆ ಈ ನಿಂದೆಯನ್ನು ಕೇ
ನೊಂದು ಕೆರಳಿದ ಬಾಲ ಸರ್ವಜ್ಞನು:

ತಂದೆ ವಿಪ್ರನು ಅಲ್ಲ । ತಾಯಿ ಮಾಳಿಯ
ಅಲ್ಲ
ಚಂದ್ರಶೇಖರನ ವರದಿಂದ ಪುಟ್ಟಿದ ।
ಕಂದ ತಾನೆಂದ ಸರ್ವಜ್ಞ ॥

ಕಂಡುದನ್ನು ಕಂಡಕಂಡಂತೆ ಆಡಿ ಕೆಂಡವ
ಸುವ ಸರ್ವಜ್ಞನು ಬೇರೆ ಕೆಲ ಬಿರುನುಡಿಗಳನ

ಆಡಿರಬಹುದು. ಅದನ್ನು ಕೇಳಿ ಕೆಂಡದಂತಾದ
ಅವನ ತಾಯಿತಂದೆಯರು ಆತನನ್ನ
ನೂಕಿದರು ಆವನಾಗ । ಕುಹಕತನದೊಳು
ಬೇಗ ।

ಎಂದು ಸರ್ವಜ್ಞನು ಹೇಳುವ.

ಮನೆಯಿಂದ ಹೊರದೂಡಿದ ನಂತರದ ಅವನ ಜೀವನದ ವಿವರಗಳು ದೊರೆಯುವಂತಿಲ್ಲ. ಅವನ್ನು ಊಹೆಯಿಂದಲೇ ಅರಿಯಬೇಕು. ಅವನು ಮನಬಂದಂತೆ ಅತ್ತಿತ್ತ ಅಲೆದಾಡಿರಬೇಕು. ಪ್ರಕೃತಿ ಮಾತೆಯಿಂದ ಬಗೆಬಗೆಯ ಸಂಸ್ಕಾರಗಳನ್ನು ಪಡೆದಿರಬೇಕು. ವಿವಿಧ ಜನರ ಸಂಪರ್ಕದಿಂದಲೂ ಬಗೆಬಗೆಯ ಅನುಭವಗಳನ್ನು ಸಂಪಾದಿಸಿರಬೇಕು. ತನ್ನ ಜ್ಞಾನ ಭಾಂಡಾರವನ್ನು ಬೆಳೆಸಿರಬೇಕು. ಒಂದು ಮಾತು ಮಾತ್ರ ನಿಜ. ಈ ಸಂಚಾರದಲ್ಲಿ ಅವನಿಗೆ ಸದ್ಗುರುಗಳ ದರ್ಶನವಾಯಿತು. ಅವರಿಂದ ಆತನಿಗೆ ಅನುಗ್ರಹ ಲಭಿಸಿತು.

ಜೀಯ ಸದ್ಗುರುನಾಥ । ಕಾಣು
ಪುಸಿಯನೆ ತೋರಿ ।
ಮಾಯಾಪಾಶವ ಹರಿಸುತ್ತ ಶಿಷ್ಯಂಗೆ ।
ತಾಯಿಯಂತಾದೆ ಸರ್ವಜ್ಞ ॥

ಇದರಲ್ಲಿ ಒಡೆದು ಕಾಣುವ ಸದ್ಗುರುಭಕ್ತಿಯು ಅದೇತರ ಕುರುಹು? ಗುರುರಾಯನು ಸರ್ವಜ್ಞನ ಮಾಯಾಪಾಶವ ಹರಿಸಿ ಅವನಿಗೆ ತಾಯಿಯಂತಾದನಂತೆ. ತಾಯಿಗೆ ತಾಯಿಯೆನ್ನದ ಸರ್ವಜ್ಞ ಗುರುವಿಗೆ ತಾಯಿಯೆನ್ನುವ. ಇದರ ಜೊತೆಯಲ್ಲಿ ಅವನು ತನ್ನ ಸದ್ಗುರುವಿನ ಹೆಸರನ್ನು ತಾನು ಮೆಚ್ಚಿದ ನಾಮ, ದೇವ, ಭಕ್ತರನ್ನು ಮುಂದಿನ ವಚನದಲ್ಲಿ ಅರುಹಿರುವ.

ರಾಮನಾಮವೆ ನಾಮ । ಸೋಮ
ಶೇಖರ ಗುರುವು ।
ಆ ಮಹಾರುದ್ರ ಅಧಿದೈವ ಲೋಕಕ್ಕೆ ।
ಭೀಮನೆ ಭಕ್ತ ಸರ್ವಜ್ಞ ॥

ಸೋಮಶೇಖರರು ಅವನ ಹಿರಿಯ ಸದ್ಗುರುಗಳು. ಅವರಿಗೆ ರಾಮನಾಮವೇ ಹಿರಿಯ ನಾಮ. ಪರಶಿವನೇ ಹಿರಿಯ ಆರಾಧ್ಯ ದೇವರು. ಆದರೆ ಇಲ್ಲಿಯ ರಾಮನು ಬರೀ ಇತಿಹಾಸ ಪುರುಷ 'ರಾಮ'ನಿರಲರಿಯ. ನಮ್ಮ ಅನುಭಾವಿಗಳ ರಾಮನು ಆತ್ಮಾರಾಮನು-ಪರಮಾತ್ಮರಾಮನು. ಅನುಭಾವಿಗಳು ಶಿವಭಕ್ತರೂ ಅಲ್ಲ, ವಿಷ್ಣು ಭಕ್ತರೂ ಅಲ್ಲ. ಅವರು ಪರಮಾತ್ಮನ ಭಕ್ತರು. 'ಭುವನ ಪ್ರಾಣಿಗಳಿಗಾದ ದೇವರ ದೇವನ ಭಕ್ತರು.' ಅವರು ದಯಪಾಲಿಸುವ ನಾಮಗಳು ಎಂಥವಿದ್ದರೂ ಅವೆಲ್ಲ ದೇವರ ನಾಮಗಳು. ಅವು ಕನಕದಾಸರಂತೆ ಸಾಧಕರಿಗೆ 'ನಾಗಶಯನನನ್ನು' ಕಾಣಿಸಬಲ್ಲವು, 'ಭೋಗಿಭೂಷಣನನ್ನು' ತೋರಿಸಬಲ್ಲವು.

ಇಂಥ 'ಸೋಮಶೇಖರ'ರೆಂಬ ಅನುಭಾವಿ ಸದ್ಗುರುಗಳಿಂದ ಅನುಗ್ರಹವನ್ನು ಪಡೆದು, ಸರ್ವಜ್ಞನು ಅವರ ಸೇವೆಯನ್ನು ಅನನ್ಯ ಭಾವದಿಂದ ಮಾಡಿದಂತೆ ಕಾಣುವದು. 'ಎತ್ತಾಗಿ, ತೊತ್ತಾಗಿ ಮತ್ತೆ ಪಾದದ ಕೆರವಾಗಿ' ಅವನು ಸದ್ಗುರುಗಳ ದಾಸ್ಯವನ್ನು ಮಾಡಿದನು. ಇದೇ ಬಲಭೀಮನ ದಾಸ್ಯಭಕ್ತಿಯ ಮಾದರಿ. ಆದುದರಿಂದಲೇ ಅವನು ಸರ್ವಜ್ಞನಿಗೆ ಮಾದರಿಯ ಭಕ್ತನಾಗಿರಬೇಕು. ಅವನು 'ಕೋಳಿ ಕೂಗದ ಮುನ್ನ ಏಳುತ್ತಿದ್ದನು.' ನಿತ್ಯದಯಾಳು ದೇವರನ್ನು ಭಕ್ತಿಯಿಂದ ನೆನೆಯುತ್ತಿದ್ದನು. ಅವನ ಅಪಾರ ಕರುಣೆ ಪಡೆದು ಅವನನ್ನು 'ಆಳಿನಾಳಯ್ಯ'ನನ್ನಾಗಿ ಮಾಡಿದ್ದನು. ಅವನು 'ದೇಹದೇವಾಲಯದ-ಲ್ಲಿಯ ಜೀವ ಶಿವಲಿಂಗವನ್ನು ಭಾವ ಪುಷ್ಪದಿಂದ ಭಜಿಸಿ' ಶಿವ ತೋರಿದಂತೆ ಇರುತ್ತಿದ್ದನು. ಈ ಬಗೆಯ ಅನವರತ ಸಾಧನೆಯಿಂದ ಅವನಿಗೆ ಕೆಳಗೆ ಕಾಣಿಸಿದ ಅನುಭವವು ಲಭಿಸಿತೆಂದು ಅವನು ಅರಹುವ.

ಅರಿವು ಕೂಡಿತು ಪ್ರಾಣ ಕುರುಹು
ದೊರೆಯಿತು ಜಾಣ।
ಹರವಾಗಿ ಹೋಯ್ತು ಭವಮಾಲೆ
ಮುಕ್ತಿಯ।
ಇರವು ನಿರ್ಭಯವು ಸರ್ವಜ್ಞ ॥

ಅಂತರಂಗದಲ್ಲಿ ಜ್ಞಾನೋದಯವಾಯಿತು. ಎಲ್ಲೆಡೆ ಪರಮಾತ್ಮನ ಕುರುಹು ಕಾಣಲನುವಾಯಿತು. ಭವ ಭಯವಳಿಯಿತು. ಮುಕ್ತಿಯ ಅಭಯ ಹೊಳೆಯಿತು. ಈ ರೀತಿ ಆತುಮನ

ಜ್ಞಾನ, ಪರಮಾತುಮನ ದರುಶನವಾಗಿ ತನ್ನ-ತಾನರಿದ ಸರ್ವಜ್ಞನಿಗೆ ಭಿನ್ನಭಾವನೆ ಇಲ್ಲದಂತಾಯಿತು. ತನ್ನವರಿಲ್ಲ, ಪರರಿಲ್ಲದಂತಾಯಿತು.

ಊರೆಲ್ಲ ನೆಂಟರು, ಕೇರೆಲ್ಲ ಬಳಗವು।
ಧಾರುಣಿಯೆಲ್ಲ ಕುಲದೈವವಾಗಿನ್ನು
ಯಾರನ್ನು ಬಿಡಲೊ ಸರ್ವಜ್ಞ ॥

ಮುಂದೆ ದೇವ ಪ್ರೇರಣೆಯೂ ಭೂತಕರುಣೆಯೂ ಅವನಿಗೆ ಬಂದೆಡೆ ಸುಮ್ಮನಿರಗೊಡಲಿಲ್ಲ. ತನ್ನ ಅರಿವನ್ನೆಲ್ಲ ಅನ್ಯರಿಗೆ ಸಲ್ಲಿಸಲು, ಮೆಲ್ಲ-ಮೆಲ್ಲನೆ ಅವರನ್ನು ಕಲಿಸಿ ನಲಿಸಲು, ಅವನು ಎಲ್ಲೆಡೆ ಸಂಚರಿಸತೊಡಗಿದನು. ಹಿರಿದಾದ ಕನ್ನಾಡಿನಲ್ಲಿ ಹರನನ್ನು ಹೊಗಳುತ್ತ, ಸಿರಿವಂತನಾದ ತಿರುಕನಂತೆ ಸರ್ವಜ್ಞನು ಜನಮನದಲ್ಲಿ ಅಲೆದಾಡಿದ. ಸರ್ವಜ್ಞನ ಸಂಚಾರ ಹಿರಿದಾದ ಘನದ ಸಂಚಾರ. ಘನವು ಜೀವನವನ್ನು ನೀಡುವದು, ಸೃಷ್ಟಿಯಲ್ಲಿ ನವಜೀವನವನ್ನು ನಿರ್ಮಿಸುವದು. ಅದರ ಜತೆಯಲ್ಲಿ ಅದು ಮಿಂಚಿನ ಜ್ಯೋತಿಯನ್ನು ಸಿಡಿಲಿನ ಶಕ್ತಿ-ಚೈತನ್ಯವನ್ನು ಬೀರುವದು.

ಸರ್ವಜ್ಞನು ಸಲ್ಲಿಸಿದ ಜೀವನ-ಜ್ಯೋತಿಗಳ ಸ್ವರೂಪವೇನು? ಅವನು ಕಲಿಸಿದುದು ಯಾವ ಮಾತನ್ನು? ಬಳಸಿದುದು ಯಾವ ರೀತಿಯನ್ನು? ಅವನು ಕಲಿಸಿದುದು ನೀತಿ ಧರ್ಮವನ್ನು, ಭಕ್ತಿ ಧರ್ಮವನ್ನು. ಅದೇ ಅವನು ನೀಡಿದ ಶಾಶ್ವತ ಜೀವನ. ನೀತಿಯಿಂದ ಪ್ರಪಂಚದ ಸುಖ, ಭಕ್ತಿಯಿಂದ ಪರಮಾರ್ಥದ ಆನಂದ ಪಡೆಯಲು ಅವನು ಬೋಧಿಸಿದ. ನೀತಿಯು ನಡತೆಯ ರೀತಿ, ಭಕ್ತಿಯು ಭಾವದ ರೀತಿ. ನಡತೆಯ ಬಗೆಗಳು ಮೂರು: ಮತಿಯದು, ಮಾತಿನದು, ಕೃತಿಯದು. ಮತಿಯಲ್ಲಿ 'ತನ್ನಂತೆ ಪರರು' ಎಂಬುದು ಹೊಳೆಯಲಿ, ಮಾತಿನಲ್ಲಿ 'ನನ್ನಿ' ಮೂಡಲಿ, ಕೃತಿಯಲ್ಲಿ 'ದಾನ'ವು ಮೈದಳೆಯಲಿ.

ಅನ್ನವನು ನೀಡುವುದು ನನ್ನಿಯನು
ನುಡಿಯುವುದು
ತನ್ನಂತೆ ಪರರ ಬಗೆದೊಡೆ ಕೈಲಾಸ।
ಬಿನ್ನಣವಕ್ಕು ಸರ್ವಜ್ಞ॥

ದೇವರೆಡೆ ಒಯ್ಯುವದೆ ನೀತಿಯು :—ಮೇಲ್ಕಾಣಿಸಿದ ನೀತಿ, ವ್ಯಕ್ತಿಜೀವನದಲ್ಲಿ, ಸಮಾಜ ಜೀವನದಲ್ಲಿ ಶಾಂತಿ ಸಮಾಧಾನಗಳನ್ನು ನಿರ್ಮಿಸು[ವ]ದಲ್ಲದೆ ಪರಮಾತ್ಮನ ಬಗೆಗೆ ಭಕ್ತಿ ಜ್ಞಾನಗಳನ[್ನು] ಬಿನ್ನಣವನ್ನು ಸಲ್ಲಿಸುವುದು.

ನೀತಿಯು ನಡತೆಯನ್ನುನೆಮ್ಮಿದಂತೆ ಭಕ್ತಿಯು ಭಾವವನ್ನು ಆಶ್ರಯಿಸುವುದು. ಭಾವವು ಪ್ರೀತಿ[...] ಭಗವಂತನ ಪ್ರೀತಿಯೆ ಭಕ್ತಿ. ಸಾಮಾನ್ಯವಾ[...] ನಾವೆಲ್ಲ ಪ್ರೀತಿಸುವುದು ವಿಷಯವನ್ನು. ನಾ[...] ಸದೈವ ಬಯಸುವುದು ಹೆಣ್ಣನ್ನು, ಹೊನ್ನನ್ನು[...] ಮಣ್ಣನ್ನು. 'ಹೆಣ್ಣನ್ನು, ಹೊನ್ನನ್ನು ಹಣ್ಣಾ[...] ಮರಗಳನ್ನು ಕಣ್ಣೀಲಿ ಕಂಡು ಮನದಲಿ ಬಯ[...] ಸದ ಅಣ್ಣಂಗಳಾರು?' ಎಂದು ಸರ್ವಜ್ಞ ಕೇಳುವ[...] ಆದರೆ ಇವುಗಳ ಪ್ರೀತಿಯು ಅಳಿಯುವವರೆ[...] ಪರಶಿವನ ಭಕ್ತಿಯು ಬೆಳೆಯಲರಿಯದು. ಕಾಮ[...] ವಳಿದರೆ ರಾಮು ಕಾಣುವ. ಎಲ್ಲ ಆಶೆಯು ಬಿಟ್ಟ[...] ರಲ್ಲಿಯೇ ಕೈಲಾಸ. ಆದುದರಿಂದ 'ಮೆಟ್ಟಿಪುದಾ[...] ಯನು ಮುಟ್ಟಿಪುದು ಶಿವಪದವ' ಎಂದು ಸರ್ವ[...] ಜ್ಞನು ಸಾರುವ. 'ಸ್ಮರಹರನ ಕರುಣವಿರದ[...] ಜಗದೊಳಗಿರುವುದೆ ಕಷ್ಟ, 'ದೇವರನು ನೆನೆಪಂ[...] ಭಾವಿಸಿದುದು ಬಂದಿಹುದು.'

ಅಂತೂ ವ್ಯಸನದಿಂದ ಮಸಣವ ಕಾಣದಿರಿ[...] ಅಲಸಿಕೆಯಂ ತೂರೆದು ಹಸನಾಗಿ ದುಡಿಯಿರಿ[...] ನೀತಿಯಿಂದ ಗಳಿಸಿದನು ಪ್ರೀತಿಯಿಂದ ಬಳಸಿರಿ[...] ಬೇಡದೆ ನೀಡಿರಿ, ಆಡದೆ ಮಾಡಿರಿ. ಅರಿಯು[...] ನುಡಿಯಿರಿ, ಅರಿಯ್ದು ನಡೆಯಿರಿ, ಪರಶಿವನ ನೆ[...] ಯಿರಿ. ಚಿರಸುಖವ ಪಡೆಯಿರಿ ಎಂಬುದು ಸರ್ವ[...] ಜ್ಞನ ಬೋಧೆಯ ತಿರುಳು. ಈ ರೀತಿ ಸರ್ವಜ್ಞನ[...] ನೀಡುವುದು ಷಡ್ರಸ ಭೋಜನ. ಅದರಲ್ಲ ಸಿ[...] ಇದೆ, ಕಹಿ ಇದೆ; ಉಪ್ಪು ಇದೆ; ಕಾರವಿದೆ; ಹು[...] ಯಿದೆ, ಮಧುರ ಹುಳಿಯಿದೆ. ಅವೆಲ್ಲ ಅಧರಕ[...] ಒಮ್ಮೊಮ್ಮೆ ಕಹಿಯಿದ್ದರೂ ಉದರಕ್ಕೆ ಸದೈ[...] ಸಿಹಿಯಾದವುಗಳು. ಅವೆಲ್ಲ ಜೀವನ ಪೋಷಕ[...] ಮಂಗಲದಾಯಕ, ಕಲ್ಯಾಣಕಾರಕ.

ಸರ್ವಜ್ಞನ ಹೇಳಿಕೆಯ ರೀತಿಯು ಅಲೌಕಿ[...] ವಾದುದು. ಅವನ 'ಹೇಳಿಕೆಯೆ ಬೇರೆ.' ಲೋ[...] ಕಲ್ಯಾಣ ಅದರ ಗುರಿ. ಇಂಥ ವಿಶಾಲವಾ[...] ಭಾವದಾಳದಿಂದ ಆತನ ನುಡಿಯು ಹೊ[...] ಹೊಮ್ಮಿರುವುದು. ಆದುದರಿಂದ ಅದು ಸದೈ[...]

'ಸರಸ'ವಾಹುದು ಅವನದು 'ರಸಿಕನಾಡಿದ' ಮಾತು. 'ನಕ್ಕು ನಗಿಸುವಾ ನುಡಿ,' ಚುಚ್ಚು ಮಾತಲ್ಲ, ಬಿಚ್ಚುಮಾತು, ನೆಚ್ಚುಮಾತು, ಒಲವಿನ ನುಡಿ. ಅದರಲ್ಲಿ ಭಾವವಿದೆ, ರಸವಿದೆ, ನಗೆಯಿದೆ, ಕಳವಳವಿದೆ, ಕೋಪವೂ ಕೂಡ ಇದೆ.

ಸದ್ಗುರುಗಳನ್ನು ಬಣ್ಣಿಸುವಾಗ ಸರ್ವಜ್ಞನಲ್ಲಿಯ ಭಾವವು ಉಕ್ಕುವದು. ಅವನ ನುಡಿಯು ಭಾವಪೂರ್ಣವಾಗುವದು. ಸದ್ಗುರು 'ನರದೈವ', 'ಸುರಧೇನು' ಆಪತ್ತನುಳಿದು ಪೊರಮಡಲು ಗುರುಪಾದ ಸೋಪಾನವಯ್ಯ ಎಂದು ಅವನು ಹೇಳುವ. ಆದುದರಿಂದ

ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡವಾಗಿ
ಮತ್ತೆ ಪಾದದ ಕೆರವಾಗಿ ಗುರುವಿನ
ಹತ್ತಲಿರು ಎಂದ ಸರ್ವಜ್ಞ

ಎಂದು ಅವನು ಬೋಧಿಸುವ.

ಚಿತ್ರವನು ನವಿಲಿನೊಳು ವಿಚಿತ್ರವನು
ಗಗನದೊಳು
ಪತ್ರ ಪುಷ್ಪಗಳ ವಿವಿಧ ಬಣ್ಣಗಳಿಂದ
ಚಿತ್ರಿಸಿದರಾರು? ಸರ್ವಜ್ಞ

ಎಂಬಲ್ಲಿ ಪ್ರಕೃತಿ ಪ್ರೀತಿ, 'ಬೆಚ್ಚನಾ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯನರಿವ ಸತಿಯಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂದು ಹೇಳುವಲ್ಲಿ ಆತನ ರಸಿಕತೆ ಒಡೆದುಕಾಣುವದು. ಅರಸಿಕನು ಇಂತು ಬಣ್ಣಿಸಲರಿಯ. ಅದೇ ಮೇರೆಗೆ ಮೂಢ ನಂಬಿಕೆಯಿಂದ

ಕಲ್ಲುಗುಂಡಿನ ಮೇಲೆ ಮಲ್ಲಿಗೆಯ ಅರಳಿಕ್ಕಿ
ನಿಲ್ಲದೆ ಹಣೆಯ ಬಡಿವಂಗೆ ಬುಗುಟಲ್ಲ
ದಿಲ್ಲ ಕಾಣಯ್ಯ ಸರ್ವಜ್ಞ।

ಎಂಬಲ್ಲಿ ತಿಳಿಯಾದ ನಗೆಯು ಮಿನುಗುವದು.

ತೆರೆದ ಕೆಂಡವ ಮೆಟ್ಟಿ ಮರುಗುವಾ
ತೆರನಂತೆ
ಮುರುಳರ ಕೂಟ ಬರೆ ಕೂಟ, ತನ್ನ ತಾ
ನಿರಿದುಕೊಂಡಂತೆ॥

ಎಂಬಲ್ಲಿಯೂ

ಬೆಣ್ಣೆ ಬೆಂಕಿಯು ನಡುವೆ ತಣ್ಣಗಿರಬಲ್ಲದೇ
ಹೆಣ್ಣಿದ್ದ ಮನೆಗೆ ಎಡತಾಕಿ ಶಿವಯೋಗಿ।
ಮಣ್ಣು ಮಸಿಯಾದ

ಎಂಬಲ್ಲಿಯೂ

'ಅಯ್ಯೋ! ಪಾಪ! ದುರುಳಕೆಂಡದ ನಿಜವ ಕಾಣದೆ ಅದನ್ನು ಮುಟ್ಟಿ ಜನ ಮರುಗುವರಲ್ಲಾ ಹೆಣ್ಣಿನ ಸೋಂಕಿನಿಂದ ಯೋಗಿಯೂ ಮಣ್ಣಾಗುವನಲ್ಲಾ' ಎಂಬ ಕಲ್ಪನೆಯಿಂದ ಅವನ ಅಂತರಂಗವು ಅತಿಯಾಗಿ ತಲ್ಲಣಿಸುವದು.

ಖಂಡಿಸದೆ ಕರಣವನು ದಂಡಿಸದೆ
ದೇಹವನು
ಉಂಡುಂಡು ಸ್ವರ್ಗಕ್ಕೈದಲ್ಕೆ ಅದನೇನು
ರಂಡೆಯಾಳುವಳೆ?

ಇದು ಸಿಡಿಲಿನ ನೀರು ಬೆರಸಿದ ಅವನ ಸರಸ ಮಾತು. ಇದು ಹಿರಿದಾದ ಭಾವವುಳ್ಳ ಆತನ 'ಕಿರಿಗನ್ನಡ' ನುಡಿ. ಕೊನೆಗೆ ಈ ಜನತೆಯ ಸಂತಕವಿಯ ಕೆಲವೊಂದು ಮಾದರಿಯ ಮಧುರ ವಚನಗಳನ್ನು ಹೇಳಿ ವಿರಮಿಸುವೆ. ಇವು ಆತನ ಭಾಷೆಯ ಮಾಧುರ್ಯ, ಸಂಕ್ಷೇಪದ ಸೌಭಾಗ್ಯ, ಭಾವದ ಉತ್ಕಟತೆ, ಹಾಗೂ ಬೋಧೆಯ ಉಜ್ವಲತೆಯ ಅಂದವಾದ ನಿದರ್ಶನಗಳಾಗಿವೆ.

ಪರಮನಾ ರೂಪದಲಿ ನೆರವೀಯಲರಿ-
ಯದೆ।
ನರನಾಗಿ ಬಂದು ವರವೀವ ಗುರುವಿಗೆ।
ಸರಿಯಾರು ಕಾಣೆ ಸರ್ವಜ್ಞ॥
ಸತ್ಯವಂತರು ನೀನು ಸತ್ತರೆಂದೆನಬೇಡ।
ಹೆತ್ತಮ್ಮ ಮಗನ ಕರೆವಂತೆ ಅವರು। ನಿ
ನ್ನೆತ್ತಿಕೊಂಬುವರು ಸರ್ವಜ್ಞ॥
ಆದೇವ ಈದೇವ ಮಾದೇವನೆನಬೇಡ।
ಆ ದೇವರ ದೇವ ಭುವನಪ್ರಾಣಿಗಳಿ-
ಗಾದವನೆ ದೇವ ಸರ್ವಜ॥
ಕಣ್ಣು ನಾಲಿಗೆ ಮನವ ಪನ್ನಗಧರ ಕೊಟ್ಟ।
ಚನ್ನಾಗಿ ಮನವ ತೆರೆದು ಬಿಡದೆ ಶ್ರೀ
ಚೆನ್ನನ ನೆನೆಯೊ ಸರ್ವಜ್ಞ॥

ಆಕಾಶವಾಣಿ ಕೃಪೆಯಿಂದ

ಮಲೇರಿಯದ ಮೇಲೆ ವಿಶ್ವಯುದ್ಧ

"WHO" ಆಧಾರದಿಂ

ಆನೆಗಳ ಮೇಲೆ, ಕುದುರೆ ಹೇಸರ ಕತ್ತೆಗಳ ಮೇಲೆ, ಜೀಪುಗಳ ಮೇಲೆ ಮತ್ತು ಕಾಲ್ನಡಿಗೆಯಲ್ಲಿ ಅಂತರ್‌ರಾಷ್ಟ್ರೀಯ ಸೈನ್ಯಗಳು ೧೪೦ ರಾಷ್ಟ್ರಗಳಲ್ಲಿ ಪ್ರಚಂಡ ದಾಳಿಯೊಂದರಲ್ಲಿ ಮಗ್ನವಾಗಿವೆ. ಇದರ ಅಧ್ವರ್ಯು ಜಾಗತಿಕ ಆರೋಗ್ಯ ಸಂಸ್ಥೆ. ೧,೧೦೦ ಡಾಕ್ಟರರು ಅದರ ಸೇನಾನಿಗಳು; ೨,೨೦೦ ಸೂಕ್ಷ್ಮದರ್ಶಕ ತಜ್ಞರು ಶತ್ರುವಿನ ನೆಲೆಗಳನ್ನು ನಿರ್ದೇಶಿಸುತ್ತಿದಾರೆ: ೨೦೦ ಎಂಜಿನಿಯರರೂ ಅಷ್ಟೇ ಕೀಟಶಾಸ್ತ್ರಜ್ಞರೂ ಅದಕ್ಕೆ ನೆರವಾಗುತ್ತಿದ್ದಾರೆ; ಮತ್ತು ೪,೮೦೦ ಸುಪರ್ವೈಜರರ ನೇತೃತ್ವದಲ್ಲಿ ಸಿಂಪಡಿಸುವ ಪಂಪುಗಳೆಂಬ ಬಂದೂಕುಗಳಿಂದ ಸನ್ನದ್ಧರಾಗಿ ಗೊಂಡಾರಣ್ಯಗಳಲ್ಲಿ ನುಸುಳಿ, ಜವಳು ಪ್ರದೇಶಗಳನ್ನು ಉತ್ತರಿಸಿ, ಕೆರೆ ಸರೋವರಗಳನು ದಾಟಿ ೧೧,೦೦೦ ಸೈನಿಕರು ಹೋರಾಡುತ್ತಿದ್ದಾರೆ. ಅವರ ಮದ್ದು ಗುಂಡುಗಳೆಂದರೆ ಡಿ. ಡಿ. ಟಿ. ಕೀಟನಾಶಕ. ಅವರ ಶತ್ರುವೆಂದರೆ ಮಾನವ ಕುಲವನ್ನು ಪೀಡಿಸುವ ರೋಗಗಳಲ್ಲೆಲ್ಲ ಅತಿ ಪ್ರಚಲಿತವಾದ ಮಲೇರಿಯ.

ಮಲೇರಿಯವನ್ನು ಎರಡು ಸಾವಿರ ವರ್ಷಗಳಿಗಿಂತಲೂ ಹಿಂದೆ ಭಾರತದ ಆಯುರ್ವೇದಶಾಸ್ತ್ರವು ರೋಗಗಳ ರಾಜ ಎಂದು ಉಲ್ಲೇಖಿಸಿದೆ. ಅದು ಅತಿಶಯೋಕ್ತಿಯಲ್ಲ. ಅದು ಇತಿಹಾಸವನ್ನೇ ಬದಲಾಯಿಸಿದ ಜ್ವರ. ಸಾಮ್ರಾಜ್ಯಗಳು ತಮ್ಮ ಅತ್ಯುಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಮಲೇರಿಯವು ಅವುಗಳನ್ನು ಅಧಃಪಾತಗೊಳಿಸಿದ್ದುಂಟು. ಮೆಸೊಪೊಟೇಮಿಯದ ಉನ್ನತಮಟ್ಟದ ನಾಗರಿಕತೆ ಹಾಳಾಗಲು ಮಲೇರಿಯವೇ ಕಾರಣವೆಂದು ನಂಬಲಾಗಿದೆ. ಸಿಂಹಳದಲ್ಲಿ ಅಮೋಘವಾ... ಬೌದ್ಧ ಶಿಲ್ಪಕಲೆಯ ಅವಶೇಷಗಳಿಂದ ಇಂದಿಗ... ಪ್ರವಾಸಿಕರನ್ನು ಆಕರ್ಷಿಸುವ ಅನುರಾ... ಪುರದ ಸಂಸ್ಕೃತಿಯ ಜನ ಒಮ್ಮೆಂದೊಮ್ಮೆ ತಮ... ವೈಭವಪೂರ್ಣ ಪರಿಸರವನ್ನು ತೊರೆದುಹೋದರ... ಕ್ರಿ. ಶ. ಮೂರನೆಯ ಶತಮಾನದಲ್ಲಿ ಜರುಗಿ... ಈ ಘಟನೆಗೆ ಮಲೇರಿಯ ಜ್ವರದ ಆಕಸ್ಮಿ... ದಾಳಿಯೆ ಕಾರಣವಾಯಿತೆಂಬುದರಲ್ಲಿ ಸಂದೇ... ವಿಲ್ಲ.

ಈಚೆಗಿನ ಕಾಲದಲ್ಲಿಯೂ ಅದರ ಪ್ರತಾಪ... ಉದಾಹರಣೆಗಳಿಗೆ ಕೊರತೆಯಿಲ್ಲ. ಮುಂ... ಯಿಯ ಅಲೆಗ್ಸಾಂಡ್ರಾ, ಧಕ್ಕೆ, ಬಂಗಾಲ-ನಾ... ಪುರ ರೇಲ್ವೆಗಳನ್ನು ಕಟ್ಟುವುದಕ್ಕೆ ಅದು ಆತಂ... ದೊಡ್ಡ ವಿಲಂಬವನ್ನುಂಟುಮಾಡಿತು. ಪನಾಮ... ಕಾಲುವೆ ತೋಡಲು ಹೊರಟ ಫ್ರೆಂಚ್ ಕಂಪ... ಯನ್ನು ಅದು ದಿವಾಳಿಗೆಬ್ಬಿಸಿ ಲಕ್ಷಾಂತರ ಜ... ಕೆಲಸಗಾರರನ್ನು ಆಹುತಿಗೊಂಡಿತು.



ವಿವಿಧ ದೇಶಗಳಲ್ಲಿ ಇಂದಿಗೂ ೧೦೦ ಕೋಟಿ ಜನರು ಮಲೇರಿಯದ ಭಯಕ್ಕೊಳಗಾಗಿದ್ದಾರೆ. ೧೪ ಕೋಟಿ ಜನ ಅದರಿಂದ ಪೀಡಿತರಾಗಿದ್ದಾರೆ. ವರ್ಷಕ್ಕೆ ೨೦ ಲಕ್ಷ ಜನ-ವಿಶೇಷವಾಗಿ ಮಕ್ಕಳು ಮಲೇರಿಯಕ್ಕೆ ಪ್ರಾಣಾರ್ಪಣ ಮಾಡುತ್ತಾರೆ.

"ಮಲೇರಿಯ" ಶಬ್ದದ ಅರ್ಥ "ಕೊಳಕು ಹವೆ" ಎಂದು. ನೀರು ನಿಂತ ಸ್ಥಳದ ಕೊಳಕು ಹವೆಯೇ ರೋಗದ ಮೂಲವೆಂಬ ಪ್ರಾಚೀನ ತಿಳಿವಳಿಕೆಯಿಂದ ಈ ಹೆಸರು ಹುಟ್ಟಿತು. ಅದರಲ್ಲಿ ಬಹಳ ತಪ್ಪೇನೂ ಇಲ್ಲ. ಮಲೇರಿಯಕ್ಕೆ ಪ್ರತ್ಯಕ್ಷ ಕಾರಣ ಸೊಳ್ಳೆಯಿಂದ ಹಬ್ಬಿಸಲ್ಪಡುವ ಪರೋಪಜೀವಿ ಜಂತುವೆಂದು ಈಗ ವಿದಿತವಾಗಿದೆಯಾದರೂ ನೀರು ನಿಂತ ಜವುಳು ಪ್ರದೇಶಗಳಲ್ಲೇ ಈ ಸೊಳ್ಳೆಗಳು ಬೆಳೆಯುತ್ತವೆ.

ಪ್ರಾಚೀನ ವೈದ್ಯಕ ಗ್ರಂಥಗಳಲ್ಲೆಲ್ಲ ಮಲೇರಿಯ ಜ್ವರದ ಸರಿಯಾದ ವರ್ಣನೆಯಿದ್ದರೂ ಅದಕ್ಕೆ ಪ್ರಥಮತಃ ಪರಿಣಾಮಕರ ಚಿಕಿತ್ಸೆ ದೊರೆತದ್ದು ಸಿಂಕೋನಾ ಮರದ ತೊಗಟೆಯಲ್ಲಿ ಮಲೇರಿಯಹರ ಶಕ್ತಿಯಿದೆಯೆಂದು ೧೭ ನೇ ಶತಮಾನದಲ್ಲಿ ಕಂಡುಹಿಡಿದಾಗ. ಶತಮಾನಗಳವರೆಗೆ ಸಿಂಕೋನದ ಸಾರವಾದ ಕ್ವಿನೈನ್ ಒಂದೇ ಮಲೇರಿಯ ಜ್ವರಕ್ಕೆ ಚಿಕಿತ್ಸೆಯಾಗಿತು.

ಮಲೇರಿಯದ ನಿಜವಾದ ಸ್ವರೂಪವನ್ನು ಬಯಲಿಗೆಳೆದು ಅದು ಮಾನವ ರಕ್ತದಲ್ಲಿ ಬೆಳೆಯುವ ಒಂದು ಪರೋಪಜೀವಿ ಜಂತುವಿನಿಂದ ಹುಟ್ಟುತ್ತದೆಂದು ತೋರಿಸಿಕೊಟ್ಟ ಕೀರ್ತಿ ಚಾರ್ಲಸ್ ಲೆವೆರಾನ್ ಎಂಬ ಫ್ರೆಂಚ್ ಡಾಕ್ಟರನಿಗೆ ಸೇರುತ್ತದೆ. ಹತ್ತು ವರ್ಷಗಳ ನಂತರ ಭಾರತದಲ್ಲಿ ಸೈನ್ಯದ ಡಾಕ್ಟರನಾಗಿದ್ದ ರೊನಾಲ್ಡ್ ರಾಸ್ ಮತ್ತು ಇಟಲಿಯ ಗ್ರೋಲ್ಗಿ ಇವರು ಮಲೇರಿಯ ಜಂತುವನ್ನು "ಅನಾಫೆಲಿಸ್" ಎಂಬ ಸೊಳ್ಳೆಯು ಹಬ್ಬಿಸುತ್ತದೆಂದು ಕಂಡುಹಿಡಿದರು.

ಹೆಣ್ಣು ಅನಾಫೆಲಿಸ್ ಸೊಳ್ಳೆಯೆ ರೋಗವನ್ನು ಹಬ್ಬಿಸುವ ಪಾಪಿ. ಅದು ಮೊದಲು ಮಲೇರಿಯವುಳ್ಳ ಮಾನವ ರೋಗಿಯನ್ನು ಕಡಿದು ರಕ್ತ ಹೀರಿದಾಗ ಮಲೇರಿಯ ಜಂತುಗಳು ಅದರ ಹೊಟ್ಟೆ ಸೇರುತ್ತವೆ. ಅಲ್ಲಿ ಅವುಗಳ ಸಂತಾನ ವೃದ್ಧಿಯಾಗಿ ೧೨ ದಿನದೊಳಗೆ ಸೊಳ್ಳೆಯ ಕೊಂಡಿಯನ್ನು ತಲಪುತ್ತವೆ.

ಮುಂದೆ ಈ ಸೊಳ್ಳೆ ಕಡಿದವರ ರಕ್ತದಲ್ಲಿ ಅದರ ಜೊಲ್ಲಿನ ಮೂಲಕ ಮಲೇರಿಯ ಜಂತು ಸೇರಿಕೊಳ್ಳುತ್ತದೆ. ಒಂದೇ ಒಂದು ಜೋಡಿ ಜಂತುಗಳಿದ್ದರೂ ಸಾಕು, ಅವು ಎಷ್ಟು ವೇಗವಾಗಿ ಅಭಿವೃದ್ಧಿ ಹೊಂದುತ್ತವೆಂದರೆ ಮತ್ತೆ ೧೨ ದಿನಗಳಲ್ಲಿ ಅವು ಅವನ ರಕ್ತದಲ್ಲೆಲ್ಲ ತುಂಬಿ ಹೋಗುತವೆ.

ಮೊದಲು ಚಳಿ ಬರುತ್ತದೆ, ಹಲ್ಲು ಕಟಕಟಿಸುತ್ತದೆ, ವಾಂತಿಯಾಗುತ್ತದೆ. ಚರ್ಮ ತಂಪೇರಿ ಮತ್ತೆ ಒಮ್ಮೆಲೆ ಜ್ವರ ಬರುತ್ತದೆ. ಜ್ವರ ೧೦೪ ಡಿಗ್ರಿ ಅಥವಾ ಅದಕ್ಕೂ ಹೆಚ್ಚು ಏರಬಹುದು. ಚಳಿ ಹೋಗಿ ಉರಿ ಬಂದು ರೋಗಿ ಹುಚ್ಚಾಗುತ್ತಾನೆ. ತಾಳಲಾರದ ನೀರಡಿಕೆ, ತಲೆಯೊಳಗೆ ಗುಂಗುಂ ನಾದ, ಬಡಬಡಿಕೆ. ಕೊನೆಗೆ ವಿಪರೀತ ಬೆವರು ಮತ್ತು ಜ್ವರ ಇಳಿಯುವಿಕೆ. ಇದು ದಿನವೂ ಬರಬಹುದು, ಎರಡು ದಿನ, ಮೂರು ದಿನಕ್ಕೊಮ್ಮೆ ಪುನರಾವರ್ತಿಸಬಹುದು.

ಈ ಪುನರಾವರ್ತನೆಗೆ ರಕ್ತದಲ್ಲಿ ಜಂತುಗಳ ಹೊಸ ಹೊಸ ಪೀಳಿಗೆ ಹುಟ್ಟಿಕೊಳ್ಳುವುದು ಕಾರಣವೆಂದು ಗೊತ್ತಾಗಿದೆ. ಹಾಗೇ ಬಿಟ್ಟರೆ ಮೂರು ವರ್ಷ ಕಾಲ ರೋಗಿಯ ರಕ್ತದಲ್ಲಿದ್ದು ಈ ಜಂತುಗಳು ಅನಂತರ ತಾವಾಗಿ ನಷ್ಟಹೊಂದುವವು.

ದುರ್ದೈವದಿಂದ ಬೇರೆ ಕೆಲ ಜ್ವರಗಳಂತೆ ಮಲೇರಿಯ ಜ್ವರ ಒಮ್ಮೆ ಬಂದವರಿಗೆ ಮತ್ತೊಮ್ಮೆ ಬಾರದೆಂದಿಲ್ಲ. ರೋಗಿ ಮತ್ತೊಮ್ಮೆ ರೋಗವಾಹಕ ಸೊಳ್ಳೆಯ ಕಡಿತಕ್ಕೊಳಗಾದರೆ ಪುನಃ ಅದು ಉಲ್ಬಣಿಸುವುದು.

ಮಲೇರಿಯವು ಹೊರನೋಟಕ್ಕೆ ಉದ್ದಾಮ ಲಕ್ಷಣದ ರೋಗವಲ್ಲ ಜ್ವರಗ್ರಸ್ತರಲ್ಲಿ ಸರಾಸರಿ ನೂರಕ್ಕೊಬ್ಬ ಸಾಯುತ್ತಾನಷ್ಟೇ. ಆದರೆ ಅದು ಉಂಟುಮಾಡುವ ನಿಶ್ಯಕ್ತಿಯಿಂದ ರೋಗಿ ಬಹುಕಾಲ ಹೈರಾಣಾಗಿ ಹೋಗುತ್ತಾನೆ. ಅದಕ್ಕೆ ಗುರಿಯಾದ ಮನುಷ್ಯನ ಕಾರ್ಯಶಕ್ತಿ ನೂರಕ್ಕಿಪ್ಪತ್ತೈದರಷ್ಟು ಇಳಿದು ಹೋಗುತ್ತದೆಂದು ಅಂದಾಜು ಮಾಡಲಾಗಿದೆ. ಜ್ವರ ಬಂದಾಗ ಮಲಗಿ ಕಳೆದುಹೋದ ದಿನಗಳು ಬೇರೆ. ಈ ಎಲ್ಲ ಪ್ರಕಾರದ ಹಾನಿಗಳಿಂದ ನಮ್ಮ ದೇಶ

ವೊಂದರಲ್ಲೆ ವರ್ಷಕ್ಕೆ ರೂ. ೨೪೦ ಕೋಟಿ ಹಾನಿಯಾಗುತ್ತದೆಂದು ಅಂದಾಜಿದೆ.

ಈಚೆಗಿನ ವರೆಗೆ ಮಲೇರಿಯಗ್ರಸ್ತರನ್ನೂ ಅದು ಹಬ್ಬಿದ ಪ್ರದೇಶಗಳ ಜನರನ್ನೂ ಕ್ವಿನೈನ್ ನಿಂದ ಉಪಚರಿಸುವುದು, ಸೊಳ್ಳೆಗಳನ್ನು ಪ್ರತಿಬಂಧಿಸಲು ಸೊಳ್ಳೆಪರದೆಗಳನ್ನುಪಯೋಗಿಸುವುದು, ನೀರು ನಿಲ್ಲುವ ಜವುಳು ಪ್ರದೇಶಗಳ ನೀರನ್ನು ಹರಿಯಬಿಟ್ಟು ಸೊಳ್ಳೆಗಳ ಬೆಳವಣಿಗೆಗೆ ತಡೆ ಹಾಕುವುದು ಇವೇ ಮಲೇರಿಯದ ವಿರುದ್ಧ ಮಾನವನಿಗಿದ್ದ ಅಸ್ತ್ರಗಳಾಗಿದ್ದವು. ನೀರು ನಿಂತಲ್ಲಿ ಕೀಟನಾಶಕ ಪ್ಯಾರಿಸ್ ಗ್ರೀನ್ ಮೊದಲಾದ ವಿಷಗಳನ್ನು ಸಿಂಪಡಿಸಲಾಗುತ್ತಿತ್ತು. ಆದರೆ ಮಲೇರಿಯದ ವ್ಯಾಪ್ತಿ ಹೆಚ್ಚಾದ ಗ್ರಾಮಾಂತರ ಮತ್ತು ಅರಣ್ಯ ಪ್ರದೇಶಗಳಲ್ಲಿ ಇವಾವ ಕ್ರಮಗಳೂ ವಿಸ್ತಾರವಾಗಿ ಪ್ರಯೋಗಕ್ಕೆ ಬರುವುದು ಕಷ್ಟವಾಗಿತ್ತು "ಒಂದು ಸೊಳ್ಳೆ ಒಂದು ಊರಿಗೆ ರೋಗ ಹಬ್ಬಿಸಲು ಸಾಕು. ಒಂದು ಊರು ಒಂದು ದೇಶಕ್ಕೆ ರೋಗ ಹಬ್ಬಿಸಲು ಸಾಕು," ಎಂದಿರುವಾಗ ಮಲೇರಿಯವು ಜಗತ್ತಿನ ಅನೇಕ ಪ್ರದೇಶಗಳಲ್ಲಿ ತನ್ನ ರಾಜ್ಯವನ್ನು ನಿರಾಬಾಧವಾಗಿ ಸಾಗಿಸುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ.

ಎರಡನೇ ಮಹಾಯುದ್ಧ ಕಾಲದಲ್ಲಿ ಡಿ. ಡಿ. ಟಿ. ಯ ಶೋಧವಾದದ್ದು ಮಲೇರಿಯದ ವಿರುದ್ಧ ಹೋರಾಟದ ಚಿತ್ರವನ್ನೇ ಬದಲಿಸಿತು. ಅದು ಅಗ್ಗವಾಗಿತ್ತು, ಅದನ್ನು ಪ್ರಯೋಗಿಸುವುದು ಸುಲಭವಾಗಿತ್ತು, ಎಲ್ಲಕ್ಕೂ ಹೆಚ್ಚಾಗಿ ಅದನ್ನು ಗೋಡೆಗೆ ಸಿಂಪಡಿಸಿದರೆ ಕನಿಷ್ಠ ಆರು ತಿಂಗಳ ವರೆಗೆ ಅದರ ಮೇಲೆ ಕುಳಿತ ಸೊಳ್ಳೆ ಅದರ ವಿಷದಿಂದ ಸಾಯುತ್ತದೆ. ಮನುಷ್ಯವಸತಿಯ ಸಮೀಪದಿಂದ ರೋಗವಾಹಕ ಸೊಳ್ಳೆಗಳನ್ನು ನಿರ್ಮೂಲಗೊಳಿಸಲು ಇದರಷ್ಟು ಪ್ರಬಲ ಆಯುಧ ಈ ಮೊದಲು ಇರಲಿಲ್ಲ. ರೋಗಿಗಳ ಶರೀರಗಳಲ್ಲಿ ಮಲೇರಿಯ ಜಂತುಗಳು ಮೂರು ವರ್ಷ ಕಾಲ ಮಾತ್ರ ಬದುಕುವುದರಿಂದ ಅಷ್ಟು ಕಾಲ ಅವರಿಂದ ರೋಗ ಹಬ್ಬುವುದನ್ನು ತಡೆದರೆ ಮುಂದೆ ಮಲೇರಿಯವು ಆ ಪ್ರದೇಶದಲ್ಲಿ ನಿರ್ನಾಮವಾದಂತೆಯೆ ಸೈ.

ಈ ನವೀನ ಆಯುಧವನ್ನು ವಿಸ್ತಾರವಾ
ಪ್ರಯೋಗಿಸುವ ಧೈರ್ಯವನ್ನು ಮೊಟ್ಟಮೊದಲ
ಮಾಡಿದ ದೇಶ ದಕ್ಷಿಣ ಅಮೇರಿಕದ ವೆನೆಜು
ವೇಲ. ೧೯೪೫ ರಲ್ಲಿ ಅದು ಮಲೇರಿಯವನ
ತಡೆಗಟ್ಟುವುದು ಅಥವಾ ನಿಯಂತ್ರಿಸುವುದಲ್ಲ
ಪೂರ್ತಿ ನಿರ್ನಾಮಗೊಳಿಸುವುದು ತನ್ನ ಧ್ಯೇಯ
ವೆಂದು ಸಾರಿತು.

ಹತ್ತು ವರ್ಷಗಳೊಳಗೆ ಇಟಲಿ, ಸಾರ್ಡಿನಿಯ
ಸಿಸಿಲಿ, ಸೈಪ್ರಸ್, ಮೊರೀಶಿಯಸ್‌ಗಳಲ್ಲಿ ಮಲೇ
ರಿಯ ಹೇಳ ಹೆಸರಿಲ್ಲದಂತಾಯಿತು. ಚಿಲಿ
ಪೋರ್ಟೊರಿಕೋ, ಮಾರ್ಟಿನಿಕ್, ಫ್ರೆಂಚ
ಗಿಯಾನಾ ಮೊದಲಾದ ದಕ್ಷಿಣ ಅಮೇರಿಕ
ದೇಶಗಳಲ್ಲಿಯೂ ಅದನ್ನು ನಷ್ಟಪಡಿಸಲಾಯಿತ
ಇದರಿಂದ ಧೈರ್ಯಗೊಂಡು ೧೯೫೫ ರಲ್ಲಿ ಮೆಕ್ಸಿ
ಕೋ ನಗರದಲ್ಲಿ ಸೇರಿದ ಜಾಗತಿಕ ಆರೋ
ಪರಿಷತ್ತು ವಿಶ್ವವ್ಯಾಪಿಯಾದ ಒಂದು ಮಲೇ
ರಿಯ ನಿವಾರಣಾ ಯೋಜನೆಗೆ ಬೆಂಬಲವಿತ
ಆದಕ್ಕಾಗಿ ಒಂದು ನಿಧಿಯನ್ನೇ ನಿರ್ಮಿಸಿತು.

ಜಗತ್ತಿನ ಅನೇಕ ಭಾಗಗಳಿಂದ ಇಂ
ಮಲೇರಿಯಾ ಕಣ್ಮರೆಯಾಗಿದ್ದರೂ ಏಶಿಯ
ಆಫ್ರಿಕ ಮತ್ತು ದಕ್ಷಿಣ ಅಮೇರಿಕದ ಅನೇ
ಭಾಗಗಳಲ್ಲಿ ಅದಿನ್ನೂ ತನ್ನ ಜನಮೇಧವ
ಮುಂದುವರಿಸುತ್ತಲೇ ಇದೆ. ದೊರೆತ ಅನುಭ
ದಿಂದ ವ್ಯಾಪಕ ಯೋಜನೆಯಲ್ಲಿ ಹಲವು ಸುಧ
ರಣೆಗಳಾಗುತ್ತಿದ್ದರೂ ಹೊಸ ಸಮಸ್ಯೆಗಳ
ಹುಟ್ಟಿಕೊಂಡಿವೆ. ಇಟಲಿ, ಗ್ರೀಸ್ ಮೊದಲಾ
ಡೆಗಳ ಅನುಭವದಿಂದ ಸೊಳ್ಳೆಗಳು ಬರಬರು
ಡಿ. ಡಿ. ಟಿಯನ್ನು ದಕ್ಕಿಸಿಕೊಳ್ಳಲು ಕಲಿಯು
ವೆಂದು ಕಂಡುಬಂದುದರಿಂದ ಮಲೇರಿ
ನಿರ್ನಾಮ ಕಾರ್ಯವನ್ನು ಸ್ವಲ್ಪ ಸ್ವಲ್ಪವಲ್ಲ
ಪೂರ್ತಿಯಾಗಿ— ಅವಸರದಿಂದ–ಮುಗಿಸದಿದ
ಕ್ಷೇಮವಿಲ್ಲೆಂದು ಅನಿಸುತ್ತದೆ.

ಇಂದು ಜಾಗತಿಕ ಮಲೇರಿಯ ಸತ್ರ ತೀ
ವಾಗಿ, ಬಹುಮುಖವಾಗಿ ಸಾಗುತ್ತಿದೆ. ಮ
ರಿಯಗ್ರಸ್ತಪ್ರದೇಶಗಳಲ್ಲಿ ಹಳ್ಳಿ-ಪಟ್ಟಣಗಳ
ಮನೆ-ಮನೆಯ ಒಳ ಗೋಡೆಗಳಿಗೆ ಡಿ. ಡಿ.
ಇತ್ಯಾದಿ ಕೀಟನಾಶಗಳನ್ನು ಸಿಂಪಡಿಸಲಾ
ತ್ತಿದೆ. ದೂರದೂರ ಮನೆಗಳಲ್ಲಿರುವ

ವಸತಿ ಪ್ರದೇಶಗಳಲ್ಲಿ ಮಲೇರಿಯ ನಿವಾರಕ ಔಷಧಗಳನ್ನು ಉಪ್ಪಿನೊಡನೆ ಬೆರಸಿ ಜನರಿಗೆ ಹಂಚಲಾಗುತ್ತಿದೆ.

ಸಮಸ್ಯೆಯ ಗಾತ್ರ ಚಿಕ್ಕದಲ್ಲ. ಉದಾಹರಣೆಗೆ, ಮಲೇರಿಯ ಜಂತುಗಳ ಅಸ್ತಿತ್ವವನ್ನು ಕಂಡು ಹಿಡಿಯಲು ಪ್ರತಿವರ್ಷ ೮.೫ ಕೋಟಿ ಜನರ ರಕ್ತವನ್ನು ಸೂಕ್ಷ್ಮದರ್ಶಕ ಪರೀಕ್ಷೆಗೊಳಪಡಿಸ ಬೇಕಾಗುತ್ತದೆ. ಇದು ೩,೦೦೦ ಜನ ಸೂಕ್ಷ್ಮ ದರ್ಶಕಜ್ಞರಿಗೆ ಇಡೀ ವರ್ಷದ ಕೆಲಸ. ಬಹು ಮಟ್ಟಿಗೆ ಮಲೇರಿಯ ಉಪಶಮನವಾದ ಪ್ರದೇಶ ಗಳಲ್ಲಿ ಮನೆ ಮನೆಯನ್ನು ಶೋಧಿಸಿ ಜ್ವರಗ್ರಸ್ತ ರಿದ್ದಾರೆಯೇ ಎಂದು ಕಂಡುಹಿಡಿದು ಕೊನೆಯ ಸಾಂಕ್ರಾಮಿಕ ಅವಶೇಷಗಳನ್ನೂ ಮುಗಿಸಬೇ ಕಾಗುತ್ತದೆ.

ಮಲೇರಿಯಾದ ನಾಶಕ್ಕಾಗಿ ಸಂಶೋಧನಾ- ಲಯಗಳು ದುಡಿಯುತ್ತಿವೆ. ವಿಜ್ಞಾನಿಗಳೂ ಡಾಕ್ಟರರೂ ಕೀಟನಾಶಕ ಔಷಧ, ಜ್ವರ ನಿರೋ ಧಕ ಔಷಧಗಳನ್ನು ಹುಡುಕಿ ಅವುಗಳನ್ನು ಪರೀ ಕ್ಷಿಸುತ್ತಿದ್ದಾರೆ. ಸೊಳ್ಳೆಗಳು ಕೀಟನಾಶ ಗಳನ್ನು ಹೇಗೆ ದಕ್ಕಿಸಿಕೊಳ್ಳಲು ಕಲಿಯು ತ್ತವೆ? ಯಾವ ಜಾತಿಯವು ಯಾವ ಕೀಟ ನಾಶಕವನ್ನು ದಕ್ಕಿಸಿಕೊಳ್ಳುತ್ತವೆ. ಯಾವ ಔಷಧವು ಮಲೇರಿಯವನ್ನು ನಿವಾರಿಸುವುದರಲ್ಲಿ ಅತಿ ಸತ್ವಶಾಲಿ? ಈ ಎಲ್ಲ ಸಂಶೋಧನೆಗಳ ಫಲಿ ತಾಂಶಗಳನ್ನು ಕಾಲಕಾಲಕ್ಕೆ ಜಾಗತಿಕ ಆರೋಗ್ಯ ಸಂಸ್ಥೆಗೆ ವರದಿಮಾಡಲಾಗುತ್ತದೆ. ಬ್ರಿಟಿಶ್ ವಿಜ್ಞಾನಿಗಳು ಕಂಡುಹಿಡಿದ ಒಂದು ಔಷಧವು ಮಲೇರಿಯಕ್ಕೆ ರಾಮಬಾಣವೆಂದು ಜಾಗತಿಕ ಆರೋಗ್ಯ ಸಂಸ್ಥೆಯ ತಜ್ಞರು ಅಭಿ ಪ್ರಾಯ ಪಟ್ಟು ಅದನ್ನು ಹಂಚಲು ಏರ್ಪಾಡು ಮಾಡಿದ್ದಾರೆ.

ಪೂರ್ಣ ನಿವಾರಣೆ ಸಾಧಿಸಿದ ಮೇಲೂ ಕೈಯೂರಿ ಕೂಡ್ರುವಂತಿಲ್ಲ. ಕೀಟನಾಶಗಳನ್ನು ದಕ್ಕಿಸಿಕೊಳ್ಳಲು ಕಲಿತ ಸೊಳ್ಳೆಗಳು ಪುನಃ ರೋಗವನ್ನು ಹಬ್ಬಿಸಬಹುದೆ? ಮಂಗಗಳಿಗೆ ಮಲೇರಿಯ ತಗಲಬಲ್ಲದಾದ್ದರಿಂದ ಮನುಷ್ಯರ ಮಲೇರಿಯ ನಿರ್ನಾಮವಾದ ಮೇಲೆ ಪುನಃ ಮಂಗಗಳ ದೆಶೆಯಿಂದ ಅದು ತಲೆಯೆತ್ತಬಹುದೆ? ಎಂದು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯ ಬೇಕಾದೀತು.

ಜಾಗತಿಕ ಆರೋಗ್ಯ ಸಂಸ್ಥೆಯ ಮಲೇರಿಯ ನಿವಾರಣ ಸತ್ರ ಬಹಳ ವೆಚ್ಚದ್ದೂ ಆಗುವುದು. ಇಡೀ ಜಗತ್ತು ಮಲೇರಿಯ ಮುಕ್ತವಾಗಬೇಕಾ ದರೆ ರೂ. ೮೦೦ ಕೋಟಿ ವೆಚ್ಚ ಬರಬಹುದು. ಆಯಾ ದೇಶದ ನಿವಾರಣಾ ವೆಚ್ಚದ ಬಹುಭಾಗ ವನ್ನು ಆಯಾ ದೇಶವೇ ಹೊರುತ್ತದೆ.

ಆದರೆ ಈ ವೆಚ್ಚವು ದುಂದುವೆಚ್ಚವಲ್ಲ. ಅದು ಒಳ್ಳೇ ಬಂಡವಾಳ. ಮಲೇರಿಯಗ್ರಸ್ತ ಪ್ರದೇಶ ಗಳು ಜಗತ್ತಿನ ಅತಿ ಹುಲುಸಾದ ಪ್ರದೇಶಗಳಾ ಗಿವೆ. ಮಲೇರಿಯದ ಹಬ್ಬುಗೆಯಿಂದಲೇ ಅಲ್ಲಿ ಕೃಷಿಕರ್ಮ ಅಸಾಧ್ಯವಾಗಿದೆ. ಮಲೇರಿಯ ಹೋದರೆ ಆ ಪ್ರದೇಶಗಳೆಲ್ಲ ಬಂಗಾರದ ಬಟ್ಟಲುಗಳಾಗಬಲ್ಲವು. ಇದಕ್ಕೆ ಈಗಾಗಲೇ ನಿದರ್ಶನಗಳು ದೊರೆಯುತ್ತಿವೆ. ಫಿಲಿಪ್ಪೈನ್ಸಿಗೆ ಸೇರಿದ ಉಜಾನ್ ದ್ವೀಪದ ತಬೂಕಾ ಪ್ರಸ್ಥ ಭೂಮಿಯನ್ನೇ ತೆಗೆದುಕೊಳ್ಳಿ. ಈ ಫಲವತ್ತಾದ ಭೂಮಿಯಲ್ಲಿ ಕೃಷಿ ಪ್ರಾರಂಭಿಸಬೇಕೆಂಬ ಯತ್ನ ಗಳು ಈಗ ಮೂರು ಶತಮಾನಗಳಿಂದ ಮಲೇರಿ ಯದ ದೆಸೆಯಿಂದ ವ್ಯರ್ಥವಾಗುತ್ತ ಬಂದಿದ್ದವು. ಅಲ್ಲಿ ರುಂಡ ಬೇಟೆಯಾಡುವ ಅನಾಗರಿಕರಷ್ಟೇ ಕೆಲವರು ಮಾತ್ರ ಉಳಿದಿದ್ದರು. ಈಗ ೧೫ ವರ್ಷದ ಮಲೇರಿಯ ನಿವಾರಣಾ ಚಟುವಟಿಕೆ ಗಳ ನಂತರ ಅಲ್ಲಿ ೨೩ ಹಳ್ಳಿಗಳು ತಲೆಯೆತ್ತಿ ಸಮೃದ್ಧವಾಗಿ ಕೃಷಿ ನಡೆಯುತ್ತಿದೆ. ರುಂಡ ಬೇಟೆಗಾರರು ಕೂಡ ಶಾಂತ ನಾಗರಿಕರಾಗಿ ಮನೆಮಾರು ಮಾಡಿಕೊಳ್ಳತೊಡಗಿದ್ದಾರೆ.

ಮಲೇರಿಯ ನಿರ್ನಾಮವಾದರೆ ಉಷ್ಣವಲ ಯದ ಜನರಲ್ಲಿ ಹುಟ್ಟುಗುಣವೆಂದು ಭಾವಿಸ ಲಾದ ಪೌರುಷಹೀನ ದೈವವಾದವು ನಿಜವಾಗಿ ಹುಟ್ಟುಗುಣವಲ್ಲ, ಅದು ಕೇವಲ ಮಲೇರಿಯ ದಿಂದುಂಟಾದ ಮಂಕುತನ ಎಂದು ಸಿದ್ಧವಾ- ದೀತು. ಆ ದಿನ ಬೇಗ ಬರಲಿ. *




ಅವರಿದ್ದದ್ದು ೧೯೦೧ ರಲ್ಲಿ
ಕಂಡದ್ದು ೧೭೭೯ ರ ದೃಶ್ಯ

ಅವರು ಕಾಲಪ್ರವಾಹದಲ್ಲಿ ೧೧೨ ವರ್ಷ ಹಿಂದೆ ಜಾರಿದರು

ಪಾವ

೧೯೦೧ ಅಗಸ್ಟ್ ತಿಂಗಳಲ್ಲೊಂದು ದಿನ ಇಬ್ಬರು ಇಂಗ್ಲಿಷ್ ಮಹಿಳೆಯರು ಫ್ರಾನ್ಸಿನ ಯಾತ್ರೆ ಕೈಕೊಳ್ಳಬೇಕೆಂಬ ತಮ್ಮ ಬಹುದಿನದ ಬಯಕೆಯನ್ನು ಈಡೇರಿಸಿಕೊಳ್ಳಲು ನಿರ್ಧರಿಸಿದರು. ಆದರೆ ಅವರು ಹೊರಡುವಾಗ ಇತಿಹಾಸದಲ್ಲೇ ಅಸಾಧಾರಣವಾದೊಂದು ಅನುಭವವನ್ನು ಈ ಯಾತ್ರೆಯಲ್ಲಿ ತಾವು ಪಡೆಯಲಿರುವುದಾಗಿ ಊಹಿಸಿರಲಿಲ್ಲ. ಅವರ ಈ ಅನುಭವ ೬೦ ವರ್ಷಗಳ ನಂತರ ಇಂದಿಗೂ ವಿಜ್ಞಾನಿಗಳನ್ನೂ ತತ್ವಜ್ಞಾನಿಗಳನ್ನೂ ಚೋದ್ಯಕ್ಕೊ...
ಪಡಿಸಿ ದೊಡ್ಡ ವಿವಾದಗಳಿಗೆ ಕಾರಣವಾಗಿ...
ಏಕೆಂದರೆ ಅವರು ಅನಂತರ ಪ್ರಕಟಿಸಿದ ಅನು...
ಭವಗಳಿಂದ ಅವರು ಇಪ್ಪತ್ತನೆಯ ಶತಮಾ...
ದಿಂದ ಹದಿನೆಂಟನೆಯ ಶತಮಾನಕ್ಕೆ ಹಿನ್ನಡೆ...
ದ್ದರೆಂದು ವ್ಯಕ್ತವಾಯಿತು.

ಈ ಇಳಿವಯಸ್ಸಿನ ಇಂಗ್ಲೀಷ್ ಮಹಿಳೆಯ...
ಹೆಸರು ಕುಮಾರಿ ಆ್ಯನ್ ಮೋಬರ್ಲಿ ಮತ್ತು
ಕುಮಾರಿ ಇಲೀನರ್ ಜಾರ್ಡೈನ್ ಎಂದು...



ಅವರಿಬ್ಬರೂ ಅಧ್ಯಾಪಕ ವೃತ್ತಿಯ ಪಂಡಿತ ಮಹಿಳೆಯರಾಗಿದ್ದರು. ಮೋಬರ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಮಹಿಳಾ ಕಾಲೇಜಿನ ಪ್ರಿನ್ಸಿಪಾಲಳಾಗಿದ್ದಳು; ಜಾರ್ಡೈನ್ ಒಂದು ಹುಡುಗಿಯರ ಶಾಲೆಯ ಮುಖ್ಯಾಧ್ಯಾಪಿಕೆಯಾಗಿದ್ದು ಕೊನೆಗೆ ಮೋಬರ್ಲಿಯ ಸ್ಥಾನಕ್ಕೆ ನೇಮಿಸಲ್ಪಟ್ಟಳು.

ಫ್ರಾನ್ಸಿಗೆ ಹೋದ ಇವರು ಮಹತ್ವದ ಸ್ಥಳಗಳಿಗೆ ಸಂದರ್ಶನವೀಯುತ್ತ ವರ್ಸೇಲಿಸ್ ಪಟ್ಟಣಕ್ಕೆ ಭೆಟ್ಟಿಕೊಟ್ಟರು. ಪಂಡಿತರಾಗಿದ್ದ ಅವರಿಗೆ ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಫ್ರಾನ್ಸಿನ ರಾಣಿಯಾಗಿದ್ದ ಮೇರಿ ಆಂಟಿನೆಟಳ ಅರಮನೆಯನ್ನು ಕಾಣುವ ಆಸೆಯಾಯಿತು. ಟ್ರಿಯಾನನ್‌ನಲ್ಲಿರುವ ಈ ಪುರಾತನ ಅರಮನೆಯ ಸುಂದರ ಉದ್ಯಾನದಲ್ಲಿ ತಿರುಗಾಡುತ್ತ ಬೇಸಗೆಯ ಸುಖೋಷ್ಣವಾದ ಸೂರ್ಯಪ್ರಕಾಶವನ್ನೂ ಸುತ್ತಲ ನಯನಾಭಿರಾಮ ದೃಶ್ಯವನ್ನೂ ನೋಡುತ್ತ ಅವರು ಕೆಲ ಸಮಯವನ್ನು ಕಳೆದರು.

ಒಮ್ಮೆಲೇ ಅವರಿಗೆ ವಿಚಿತ್ರವಾದ ಅನುಭವವೊಂದು ಏಕಕಾಲದಲ್ಲಿ ಒದಗಿತು. ಅಕಾರಣವಾಗಿ ಅವರಿಗೇಕೋ ನಿರ್ವಿಣ್ಣಭಾವವುಂಟಾಯಿತು. ಬಾಹ್ಯ ನಿಸರ್ಗದಲ್ಲಾದ ಆಕಸ್ಮಿಕ ಬದಲಾವಣೆಯೇ ಇದಕ್ಕೆ ಕಾರಣವೆಂದವರಿಗೆ ತೋರಿತು---ಆ ಗಳಿಗೆಯಲ್ಲಿ ಸುಳಿಯುತ್ತಿದ್ದ ಮಂದಮಾರುತ ಸ್ತಬ್ಧವಾದಂತೆ ಅವರಿಗೆ ಅನಿಸಿತು. ತಮ್ಮ ಕಣ್ಮುಂದಿನ ನಿಸರ್ಗ— ಅದರ ಮರಗಿಡಗಳು ಅಸ್ವಾಭಾವಿಕವಾದ ಅವಸ್ಥೆಯನ್ನು ತಾಳಿ ನಾಟಕದ ಪರದೆಗಳ ಮೇಲೆ ಬರೆದ ಚಿತ್ರಗಳ ಹಾಗೆ ತೋರಿದವು.

ಅವರು ಮುಂದೆ ಸಾಗುತ್ತಿದಾಗ ಎದುರಿಗೆ ಇಬ್ಬರು ಗಂಡಸರು ಬಂದರು. ಅವರು ತೋಟಗಾರರಿರಬೇಕೆಂದೆಣಿಸಿ ಅಧ್ಯಾಪಿಕೆಯರು ಮೇರಿ ಆಂಟಿನೆಟಳ ಮನೆಯ ದಾರಿಯನ್ನು ವಿಚಾರಿಸಿದರು. ಅವರಿತ್ತ ಉತ್ತರ ಯಾಂತ್ರಿಕವಾಗಿದ್ದಂತೆ ಇವರಿಗೆ ಭಾಸವಾಯಿತು. ಹಾಗೆ ನೋಡಿದರೆ ಅವರ ವೇಷಭೂಷೆಗಳೂ ಸ್ವಲ್ಪ ಅಸಾಮಾನ್ಯವೆ ಆಗಿದ್ದವು. ಇಪ್ಪತ್ತನೇ ಶತಮಾನದ ಆದಿಯ ಫ್ರಾನ್ಸನಲ್ಲಿ ಯಾರೂ ಧರಿಸದಿದ್ದ ಕಂದು-ಹಸುರು ಕೋಟನ್ನೂ ಟ್ರೈಕಾರ್ನ್ ಹ್ಯಾಟುಗಳನ್ನೂ ಅವರು ಧರಿಸಿದ್ದರು.

ಮುಂದೆ ಸಾಗುತ್ತ ಅವರು ಒಂದು ವರ್ತುಲಾಕಾರದ ಮಂಟಪವನ್ನು ಕಂಡರು. ಅಲ್ಲಿ ದೊಡ್ಡ ಅಂಚಿನ ಹ್ಯಾಟು ಧರಿಸಿದ ಮನುಷ್ಯನೊಬ್ಬ ಕುಳಿತಿದ್ದ. ಅವನ ನಸುಗಪ್ಪು ಮುಖದಲ್ಲಿ ಗಾಯದ ಕಲೆಗಳು ತುಂಬಿದ್ದವು. ಅವನಲ್ಲಿಯೂ ಏನೋ ಅಸ್ವಾಭಾವಿಕ ಗುಣವಿತ್ತು..

ಅಷ್ಟರಲ್ಲಿ ಅವರ ಬೆನ್ನುಗಡೆ ಯಾರೋ ಅವಸರದಿಂದ ನಡೆದಾಡಿದಂತೆ ಅನಿಸಿತು. ಆತನ ಬೂಟುಗಳು ಬಕಲ್‌ಯುಕ್ತವಾಗಿದ್ದವು. ಹೆಗಲ ಮೇಲೊಂದು ಭಾರೀ ನಿಲುವಂಗಿ ತೂಗುತ್ತಿತ್ತು. ಅವನ ಮುಖ ಶ್ರಮದಿಂದ ಕೆಂಪಾಗಿತು. ಆತ ಇವರನ್ನು ಕರೆದು ಆಂಟಿನೆಟಳ ಮನೆಯ ದಾರಿ ತೋರಿಸಿದ. ಅವನ ಹಿಂದೆ ಮಹಿಳೆಯರು ಸಾಗಿದರು.

ಕನಸಿನಲ್ಲಿದ್ದವರಂತೆ ಅವರು ನಡೆಯುತ್ತಿದ್ದರು. ಆತ ಅವರನ್ನು ಕರೆದುಕೊಂಡು ಒಂದು ಕಚ್ಚಾ ಸೇತುವೆಯನ್ನುದಾಟಿ ಅರಮನೆಗೆ ಹೋದ. ಮನೆಯಲ್ಲಿ ಕುಮಾರಿ ಮೋಬರ್ಲಿ ಕಂಡ ದೃಶ್ಯ ಇಡೀ ಅನುಭವಕ್ಕೆ ಕಳಸವಿಟ್ಟಂತಿತ್ತು. ಮನೆಯ ಬಿಸಿಲು ಮಾಳಿಗೆಯ ಕೆಳಗೆ ಹುಲ್ಲೆಲದ ಮೇಲೆ ಸುಂದರಾಂಗಿಯೊಬ್ಬಳು ಕುಳಿತು ಚಿತ್ರ ಬರೆಯುವುದರಲ್ಲಿ ಮಗ್ನಳಾದಂತಿತ್ತು. ಏಕೆಂದರೆ ಅವಳು ಒಂದು ಕಾಗದದ ತುಂಡನ್ನು ಕೈನೀಡಿ ದೂರ ಹಿಡಿದು ನೋಡುತ್ತಿದ್ದಳು. ಅವಳು ನಸು ಹಸುರು ಬಣ್ಣದ ಫಿಚು (ಒಂದು ವಿಧದ ಕೊರಳ ಬಟ್ಟೆ), ಎದೆ ತೋರುವ ಹಾಗೆ ಹೊಲಿದ ಬಾಡಿಸ್ ಮತ್ತು ಕುಳ್ಳನ್ನ ಪರಕಾರ ತೊಟ್ಟಿದ್ದಳು. ಅವಳ ಸುಂದರ ಕೇಶರಾಶಿಯ ಮೇಲೆ ದೊಡ್ಡ ಬಿಳಿಯ ಹ್ಯಾಟು ಇತ್ತು.

ಅನಂತರ ಒಬ್ಬ ಚಿಕ್ಕ ಹುಡುಗ ಬಾಗಿಲಿಂದ ಹೊರಗೆ ಜಗಲಿಗೆ ಬಂದು ಅವರನ್ನು ಮನೆಯ ಮುಂಬಾಗಿಲಿಗೆ ಕರೆದುಕೊಂಡು ಹೋಗುವುದಾಗಿ ಹೇಳಿದ. ಅವನನ್ನು ಮಹಿಳೆಯರು ಅನುಸರಿಸಿದರು.

ಮುಂಬಾಗಿಲಿಗೆ ಬಂದಾಗ ಅವರಿಗೆ ಅವರಂತೆ ಅರಮನೆಯನ್ನು ಕಾಣಬಂದ ಅನೇಕ ಯಾತ್ರಿಕರು ಕಾಣಿಸಿದರು. ಅವರ ಮಧ್ಯದಲ್ಲಿ ಇವರು ಸೇರಿಕೊಂಡದ್ದೇ ತಡ, ಇಷ್ಟು ಹೊತ್ತು ಅವರನ್ನಾವರಿಸಿದ ಮನಃಕ್ಲೇಶ ತಟ್ಟನೆ ಮಾಯವಾಯಿತು.

ಅಪೂರ್ವ ಅನುಭವದೊಡನೆ ಅವರು ತಮ್ಮ ವಸತಿಗೆ ಮರಳಿದರೂ ಅವರಿಗೆ ತಾವು ಕಂಡದ್ದೆಲ್ಲ ಮಿಥ್ಯೆಯೆಂದೇನೂ ಅನಿಸಿರಲಿಲ್ಲ ಅದರಲ್ಲೇನೋ ಅಸ್ವಾಭಾವಿಕವಾದುದಿತ್ತೆಂದು ಅವರಿಬ್ಬರಿಗೂ ಅನಿಸಿದರೂ ಅದರ ಪ್ರಸ್ತಾಪವನ್ನು ಒಂದು ವಾರದ ವರೆಗೂ ಅವರು ತಮ್ಮ ಮಾತುಕತೆಗಳಲ್ಲಿ ಎತ್ತಲಿಲ್ಲ. ಬಹುಶಃ ಪ್ರತಿಯೊಬ್ಬಳೂ ಆ ಬಗ್ಗೆ ಮಾತಾಡಿದ್ದರೆ ಇನ್ನೊಬ್ಬಳು ಇವಳ ಮಿದುಳಿಗೇನೋ ಆಗಿದೆಯೆಂದು ಭಾವಿಸಬಹುದೆಂಬ ಶಂಕೆ ತಾಳಿದ್ದಳೇನೋ. ಆದರೆ ಕೊನೆಗೆ ಅವರು ಮನಬಿಚ್ಚಿ ಮಾತಾಡಿದ ಮೇಲೆ ಇಬ್ಬರಿಗೂ ತಾವು ಅಲೌಕಿಕವಾದದ್ದೇನನ್ನೋ ಕಂಡಿದ್ದೇವೆಂದು ಮನವರಿಕೆಯಾಯಿತು.

ಅವರು ತತ್‌ಕ್ಷಣ ಪತ್ರಿಕೆಗಳಿಗೆ ಹೇಳಿಕೆ ಕೊಡುವ ಹವ್ಯಾಸಕ್ಕಿಳಿಯಲಿಲ್ಲ. ಬದಲಿಗೆ ತಮ್ಮ ಪಾಂಡಿತ್ಯದ ಸಂಸ್ಕಾರವನ್ನನುಸರಿಸಿ ಅವರು ಸಾವಕಾಶವಾಗಿ ಮತ್ತು ವಿವರವಾಗಿ ಸಂಶೋಧನೆಗಳನ್ನು ಪ್ರಾರಂಭಿಸಿದರು. ಅದು ಮುಂದುವರಿದಂತೆಲ್ಲ ಅವರ ಸೋಜಿಗ ವಿಸ್ಮಯವಾಗಿ ಪರಿಣಮಿಸಿತು. ಅವರು ಮೇರಿ ಆಂಟಿನೆಟ್ಟಳ ಅರಮನೆಯನ್ನು ನೋಡಲು ಹೋದ ಕಾಲದಲ್ಲಿ ಅದರ ಉದ್ಯಾನದಲ್ಲಿ ವರ್ತುಲಾಕಾರದ ಮಂಟಪವೇ ನಿಜವಾಗಿ ಇದ್ದಿಲ್ಲ. ಹುಡುಗ ಯಾವ ಬಾಗಿಲಿಂದ ಹೊರಗೆ ಬಂದದ್ದನ್ನು ಅವರು ಕಂಡಿದ್ದರೋ ಆ ಬಾಗಿಲ ಎಷ್ಟೋ ವರ್ಷಗಳಿಂದ ಮುಚ್ಚಿ ಭದ್ರವಾ[illegible] ಅಗಳಿ ಜಡಿಯಲ್ಪಟ್ಟಿತ್ತು. ಶ್ರಮ ಜರ್ಜರಿ[illegible]ನಾದ ಆ ಮನುಷ್ಯನ ಬೆಂಬತ್ತಿ ಅವರು ಯಾ[illegible] ಕಚ್ಚಾ ಸೇತುವೆಯನ್ನು ದಾಟಿದ್ದರೋ [illegible] ಸೇತುವೆ ಇಪ್ಪತ್ತನೇ ಶತಮಾನದ ಆದಿಯ[illegible] ಅಲ್ಲಿ ಉಳಿದೇ ಇದ್ದಿಲ್ಲ.

ದಿಙ್ಮೂಢರಾಗಿ ಅಧ್ಯಾಪಿಕೆಯರು ಹಳೆಯ ದಾಖಲೆಗಳನ್ನು ಪರಿಶೋಧಿಸಿದರು. ಹೌದು ಫ್ರೆಂಚ್ ಕ್ರಾಂತಿಯಾದಾಗ ೧೭೮೯ ರಲ್ಲಿ [illegible] ಮಂಟಪ ಅಲ್ಲಿತ್ತು, ಆ ಸೇತುವೆಯೂ ಇತ್ತು[illegible] ಬಾಗಿಲೂ ತೆರೆದಿತ್ತು.

ಇಷ್ಟೇ ಅಲ್ಲ, ಅವರು ಕಂಡ ಮನುಷ್ಯರ[illegible] ೧೧೨ ವರ್ಷಗಳ ಹಿಂದೆ ಜೀವಂತರಾಗಿದ್ದವರ[illegible] ಎಂದು ಕಂಡುಬಂತು. ಅವರು ಕಂಡ ತೋ[illegible]ಗಾರರು ೧೯೦೧ ರವರಲ್ಲ, ೧೭೮೯ ರವರಾ[illegible]ದ್ದರು. ಹಳೆಯ ಚಿತ್ರಗಳಿಂದ ಆ ಕಾಲದ ಅ[illegible]ಮನೆ ತೋಟಗಾರರ ವೇಷಭೂಷೆ ಹಾಗೆ[illegible] ಇತ್ತೆಂದು ತಿಳಿಯಿತು.

ಮಂಟಪದಲ್ಲಿ ಅವರು ಕಂಡ ಮನುಷ[illegible] ಕೌಂಟ್ ಡಿ ವ್ಯಾಡ್ರುವಿಲ್ ಎಂಬವನಾಗಿರಬೆ[illegible]ಕೆಂದು ಅವರು ಕಂಡುಹಿಡಿದರು. ರಾಣಿಯ ಮಿತ್ರನಾಗಿದ್ದ ಈತನ ಚೆಹರೆಯ ವರ್ಣನೆಗಳ[illegible] ಹಳೆಯ ದಾಖಲೆಯಲ್ಲಿದ್ದವು. ಅವು ಅಧ್ಯಾಪಿ[illegible]ಯರು ಕಂಡಾತನ ಮುಖಲಕ್ಷಣಕ್ಕೆ ಹೊಂದಿ[illegible]ಯಾಗುತ್ತಿದ್ದವು.

ಅವರು ಕಂಡ ಚಿತ್ರಲೇಖೆ ಸಾಕ್ಷಾತ್ ರಾ[illegible] ಮೇರಿ ಆಂಟಿನೆಟ್‌ಳೇ ಆಗಿದ್ದಳು. ಅವಳ ರೂ[illegible] ಲಕ್ಷಣಗಳೆಲ್ಲ ಹೀಗೆಯೆ ಇದ್ದುವಷ್ಟೇ ಅಲ್ಲ[illegible] ಅವಳು ಅಂದು ಧರಿಸಿದಂತೆ ಕಂಡವೇಷಕ್ಕೆ ಎ[illegible] ವಿವರಗಳಲ್ಲೂ ಸರಿಹೋಗುವ ಒಂದ[illegible] ಪೋಷಾಕು ಆಂಟಿನೆಟ್ಟಳ ಹತ್ತಿರ ಇತ್ತೆಂದ[illegible] ದಾಖಲೆಗಳು ಸ್ಥಿರಪಡಿಸಿದವು.

ಈ ಮಹಿಳೆಯರು ಕಂಡ ದೃಶ್ಯ ರಾಣಿ ಆಂ[illegible]ನೆಟಳ ಕೊನೆಯ ದಿನಗಳಲ್ಲೊಂದರ ಸ[illegible]

ವೇಶದ ಯಥಾವತ್ತಾದ ಪುನರಾವಿಷ್ಕಾರವಾಗಿ
ತ್ತೆಂಬುದರಲ್ಲಿ ಸಂಶಯು ಉಳಿಯಲಿಲ್ಲ. ೧೭೮೯
ರಲ್ಲೊಂದು ದಿವಸ ಕ್ರಾಂತಿಕಾರ ಜನಜಂಗುಳಿ
ಅವಳ ಅರಮನೆಯನ್ನು ಸಮೀಪಿಸುತ್ತಿದ್ದಾಗ
ಒಬ್ಬ ದೂತನು ಓಡೋಡುತ್ತ ಬಂದು ರಾಣಿಗೆ
ಬರಲಿರುವ ವಿಪತ್ತಿನ ಎಚ್ಚರಿಕೆ ಕೊಟಿದ್ದನು
ಅವನೇ ಈ ಮಹಿಳೆಯರಿಗೆ ಹಾದಿ ತೋರಿಸಿದವ
ನಾಗಿದ್ದನು.

ಹತ್ತು ವರ್ಷಗಳ ಸಂಶೋಧನೆಯ ನಂತರ
ತಮ್ಮ ಅಲೌಕಿಕ ಅನುಭವವನ್ನು ವಿವರಿಸುವ
ಪುಸ್ತಕವೊಂದನ್ನು ಕುಮಾರಿ ಮೋಬರ್ಲಿ ಮತ್ತು
ಜಾರ್ಡೀನರು ಪ್ರಕಟಿಸಿದರು. ಕೂಡಲೇ ಈ
ಬಗ್ಗೆ ವಾದವಿವಾದಗಳು ಪ್ರಾರಂಭವಾದವು.

ಇದನ್ನು ಹುಂಬ ಹೆಂಗಸರಿಬ್ಬರ ಕಲ್ಪನಾ
ವಿಲಾಸವೆಂದು ತೆಗೆದು ಹಾಕುವಂತಿರಲಿಲ್ಲ.
ಇಬ್ಬರೂ ಪ್ರಸಿದ್ಧ ವಿದ್ಯಾಸಂಸ್ಥೆಗಳ ಮುಖ್ಯಾ
ಧ್ಯಾಪಿಕೆಯರೂ ವಿದ್ವಾಂಸರೂ ಆಗಿದ್ದರು. ಅವ
ರನ್ನು ನಂಬದಿರಲು ಏನೂ ಕಾರಣವಿರಲಿಲ್ಲ.

ಅವರ ಮಾತನ್ನೊಪ್ಪಿದರೆ ವಿಜ್ಞಾನಿ ತತ್ವ
ಜ್ಞಾನಿಗಳನ್ನು ಅಲ್ಲೋಲಕಲ್ಲೋಲಗೊಳಿಸುವ
ಪ್ರಶ್ನೆಗಳೇಳುತ್ತಿದ್ದವು. ಇಂದು ಬಾಳುತ್ತಿರುವ
ವರು ಬಹಳ ಹಿಂದಿನ ಕಾಲದ ಒಂದು
ಮುಹೂರ್ತವನ್ನು ಕ್ಷಣಕಾಲದ ಮಟ್ಟಿಗಾದರೂ
ಕಾಣುವುದು ಸಾಧ್ಯವೇ? ಹಾಗಿದ್ದರೆ ಕಾಲ
ಎಂದರೇನು? ತತ್ವಜ್ಞಾನಿಗಳು ಸಾಧಿಸುತ್ತ
ಬಂದಂತೆ ಅದು ಪ್ರವಾಹರೂಪಿಯಾಗಿರದೆ ಸ್ಥಿರ
ವಾದ "ಪದಾರ್ಥ" ವೆ?

ಬ್ರಿಟಿಶ್ ತತ್ವಜ್ಞಾನಿ ಸಿ. ಇ. ಎಂ. ಜೋ-
ಡರು ಈ ಅನುಭವ ಮತ್ತು ಅದರ ಅರ್ಥವನ್ನು
ಚರ್ಚಿಸುತ್ತ ಮೇಲಿನ ಪ್ರಶ್ನೆಗಳನ್ನು ಎತ್ತಿದ್ದಾರೆ.
ಕಾಲದಲ್ಲಿ ಘಟನೆಗಳು ಸ್ಥಿರವಾಗಿ ನಿಂತಿದ್ದು
ನಾವೇ ಹಿಮ್ಮೊಗವಾಗಿ ಅದರಲ್ಲಿ ಸರಿಯುತ್ತಿರ
ಬಹುದೆ? ಎಂದವರು ಕೇಳುತ್ತಾರೆ. ನಮ್ಮ
ಮುಂದಿರುವುದು ಭೂತ, ಹಿಂದಿರುವುದು ಭವಿ
ಷ್ಯತ್ತೆ? ನಾವು ಹಿಂದೆ ಸರಿದಂತೆ ಭವಿಷ್ಯತ್ತು
ಭೂತಕಾಲವಾಗಿ ಮಾರ್ಪಟ್ಟು ನಮಗೆ ಘಟನೆ
ಗಳ ಅನುಭವವಾಗುತ್ತ ಹೋಗುತ್ತದೆಯೆ?
ನಮ್ಮ ಹಿಂದಿರುವುದರಿಂದಲೇ ಭವಿಷ್ಯತ್ತು ನಮಗೆ
ಕಾಣುವುದಿಲ್ಲವೆ?

ಈ ಸರಣಿಯನ್ನೊಪ್ಪಿದರೆ ಪ್ರಪಂಚದ ಸಕಲ
ಘಟನೆಗಳೂ ಪೂರ್ವ ನಿರ್ಧಾರಿತವಾಗಿ ಕಾಲ
ದಲ್ಲಿ ನಿಲ್ಲಿಸಲ್ಪಟ್ಟಿವೆಯೆಂದಾಗುತ್ತದೆ. ಹಾಗಾ
ದರೆ ಮನುಷ್ಯಯತ್ನಕ್ಕೇನೂ ಬೆಲೆಯಿಲ್ಲವೆ?
ಎಂಬ ಪ್ರಶ್ನೆ ಏಳುತ್ತದೆ,

ನಮಗೆ ಅದೃಶ್ಯವಾಗಿರುವ ಸುದೂರಭೂತ
ಭವಿಷ್ಯತ್ತುಗಳು ಕೆಲವೊಮ್ಮೆ ಯಾವುದೋ
ನೈಸರ್ಗಿಕ ವೈಚಿತ್ರ್ಯದಿಂದ ಕೆಲವರಿಗೆ ನೋಡ
ಸಿಗುವುದುಂಟೆ? ಇದೇ "ಜ್ಞಾನದೃಷ್ಟಿ"ಯೆ?


ಅಥವಾ ಈ ಮಹಿಳೆಯರು ಕೇವಲ ಕೆಲ ನಿಮಿ
ಷಗಳ ವರೆಗೆ ಮೇರಿ ಆಂಟಿನೆಟ್ಟಳ "ಮನಸ್ಸ"ನ್ನು
ಪ್ರವೇಶಿಸಿರಬಹುದೆ? ಹಾಗಿದ್ದರೆ ಮರಣದ ನಂತರ
ಮನಸ್ಸು ಜೀವಂತವಾಗಿರುವುದೇ? ಸ್ವತಃ
ಕುಮಾರಿ ಮೋಬರ್ಲಿ ಈ ಅಭಿಪ್ರಾಯವುಳ್ಳವ-
ಳಾಗಿದ್ದಳು. ಜೆ. ಬಿ. ಪ್ರೀಸ್ಟ್ಲೆ ಮೊದಲಾದ
ವರೂ ಹೀಗೆಯೇ ಎಣಿಸುತ್ತಾರೆ.

ಈಗ ಮೋಬರ್ಲಿ ಮತ್ತು ಜಾರ್ಡೀನ್ ಬರೆದ
ಪುಸ್ತಕ ಐದನೇ ಬಾರಿ ಪುನಃ ಮುದ್ರಿತವಾಗಿ
ಪ್ರಕಟವಾಗಿರುವಾಗ ಮತ್ತೆ ವಿವಾದಕ್ಕೆ ಬಿಸಿ
ಯೇರಿದೆ ಕೆಲವರು ಈ ಮಹಿಳೆಯರು ಕಲ್ಪನಾ
ವಿಲಾಸವನ್ನೇ ಪ್ರದರ್ಶಿಸಿದ್ದಾರೆಂದು ಭಾವಿಸು
ತ್ತಾರೆ. ಇದೊಂದು ಕನಸಿನ ಹಾಗೆ ಅವರ ಬುದ್ಧಿ
ಯಲ್ಲಿ ಮೊಳೆತಿರಬಹುದು. ಫ್ರೆಂಚ್ ಇತಿಹಾಸವು
ಅಧ್ಯಾಪಿಕೆಯರಾದ ಅವರಿಗೆ ಸಾಕಷ್ಟು ಪರಿಚಿತ
ವಾಗಿರಬೇಕು. ಅವರ ಸುಪ್ತಮನಸ್ಸಿನಲ್ಲಿ ಹುದು
ಗಿದ್ದ ಈ ಚಿತ್ರಗಳು ಆ ಸ್ಥಳವನ್ನು ಪ್ರವೇಶಿಸಿ
ದೊಡನೆ ಮೇಲೇರಿ ಬಂದು ವಾಸ್ತವವಾಗಿ ತಮಗೆ
ಇದೆಲ್ಲ ಕಾಣುತ್ತಿವೆಯೆಂಬ ಭ್ರಮೆ ಅವರಿಗಾಗಿರ
ಬಹುದು— ಎಂದು ಪ್ರೊ. ಫ್ಲ್ಯೂ ಮೊದಲಾದ-
ವರು ವಾದಿಸುತಾ ರೆ.

ಆದರೆ ರಹಸ್ಯ ಇನ್ನೂ ಅಸ್ಫುಟವಾಗಿಯೆ ಇದೆ.

ಈ ಕೆಲಸ ನನಗೆ ತಕ್ಕದ್ದಲ್ಲ ಎಂಬವರು ಅಪಯಶಸ್ಸಿಗೆ ಬುನಾದಿ ಹಾಕುತ್ತಾರೆ

ಕೆಲಸವನ್ನು ಪ್ರೀತಿಸಿರಿ



ಜ. ಲಾ. ಶ್ರೀ ವಾಸ್ತವ

ನನ್ನ ಒಬ್ಬ ಮಿತ್ರರು ರಾಜಕಾರಣ ಶಾಸ್ತ್ರದ ಎಂ. ಎ. ಆಗಿದ್ದಾರೆ. ಅವರ ಒಲವು ಪತ್ರಿಕೋದ್ಯಮದ ಕಡೆಗಿದೆ. ಆದರೆ ವಾಸ್ತವದಲ್ಲಿ ಅವರು ಒಬ್ಬ 'ಕ್ಲಾರ್ಕ್' ಆಗಿದ್ದಾರೆ. ನನ್ನನ್ನು ಕಂಡಾಗಲೆಲ್ಲ ಅವರು "ನೀವು ಇಷ್ಟೆಲ್ಲ ಹೇಗೆ ಬರೆಯುತ್ತೀರೊ ? ಈ ನೋಕರಿಗಾಗಿ ನಾನು ಹುಟ್ಟಿದವನೇ ಅಲ್ಲ. ದುರ್ದೈವದಿಂದ ಇಲ್ಲಿ ಬಿದ್ದಿದ್ದೇನೆ. ನಾನು ಯಾವುದಾದರೂ ಪತ್ರಿಕೆಯಲ್ಲಿ ಕೆಲಸ ಮಾಡಬೇಕಾಗಿತ್ತು" ಎನ್ನುತ್ತಿರುತ್ತಾರೆ.

ಹೀಗೆ ತಿಳಿಯುವವರು ನನ್ನ ಮಿತ್ರರೊಬ್ಬರೇ ಅಲ್ಲ. ಈಗ ನೂರಕ್ಕೆ ಎಂಬತ್ತು ಜನರು ತಮಗೆ ಸಿಗಬೇಕಾಗಿದ್ದ ಕೆಲಸ ಸಿಕ್ಕಿಲ್ಲವೆಂದೇ ಹೇಳುತ್ತಾರೆ. ಇದರಿಂದ ಅವರ ಶಕ್ತಿ ಸತ್ವಗಳು ಅನ್ಯಾಯವಾಗಿ ಹಾಳಾಗುತ್ತಿವೆಯೆಂದು ಅವರು ಭಾವಿಸುತ್ತಾರೆ. ಬೇರೆ ಕೆಲಸ ಕೊಟ್ಟರೆ ತಾವು ನಿಜವಾಗಿಯೂ ಒಳ್ಳೇ ಕಾರ್ಯಮಾಡಿ ತೋರಿಸಬಹುದೆನ್ನುತ್ತಾರೆ.

ನಮಗೆ ಸೇರುವ ಕೆಲಸವಿಲ್ಲದಿದ್ದರೆ ನಾ
ಅದನ್ನು ಮನಃಪೂರ್ತಿಯಾಗಿ ಮಾಡಲು ಸಾ
ವಿಲ್ಲ. ಆಗ ನಾವು ಮಾಡಿದ ಕೆಲಸ ಅಪೂರ್ಣ
ಕೆಳ ದರ್ಜೆಯದೂ ಆಗುತ್ತದೆ. ಯಾವು
ಸಂಘ ಸಂಸ್ಥೆ, ಕಾರ್ಯಾಲಯ, ಕಾರಖ
ನೋಡಿ. ಅದರ ಬಗ್ಗೆ ಜನತೆಯಲ್ಲಿ ಒಳ್ಳೇ ಅ
ಪ್ರಾಯವಿಲ್ಲದಿದ್ದರೆ ಅದಕ್ಕೆ ಅದರಲ್ಲಿ ದುಡಿ
ವವರ ಈ ಅಸಂತೋಷದ ಭಾವನೆಯೆ ಕಾರ
ಈ ಅಸಂತೋಷ ನೌಕರವರ್ಗದಲ್ಲಷ್ಟೇ
ಯೆಂದಲ್ಲ. ಒಕ್ಕಲುತನ, ವ್ಯಾಪಾರ ಮುಂತ
ಬೇರೆ ಕ್ಷೇತ್ರದಲ್ಲಿ ತೊಡಗಿದವರಲ್ಲೂ ಇರುತ್ತ

ಇವರನ್ನುವುದು ನಿಜವಿರಲಿ, ಸುಳ್ಳಿರಲಿ –
ಅಸಂತೋಷಕ್ಕೆ ನಿಜವಾಗಿ ಕಾರಣವಾಗಿ
ವುದು ಶಿಕ್ಷಣಪ್ರಸಾರದಿಂದ ನಮ್ಮಲ್ಲಿ ಎ
ತ್ತಿರುವ ಮಹತ್ವಾಕಾಂಕ್ಷೆ. ಯಾವ ಅಡೆ
ಗಳಿಲ್ಲದೆ ಒಂದು ಕ್ಷೇತ್ರದಲ್ಲಿ ನಾವು ಮುಂದೆ
ಬೇಕೆಂದು ಬಯಸುತ್ತೇವೆ. ಆದರೆ ಸಾಮಾ
ಆರ್ಥಿಕ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳು ನ
ಕೈಮೀರಿದವು. ಇಚ್ಛಾಮಾತ್ರದಿಂದೇನೂ ನಾ
ಅವನ್ನು ಬದಲಿಸಲಾರೆವು. ಇದರ
ವಾಗಿ-ನಾವು ಅಪೇಕ್ಷಿಸುವ ಸಿದ್ಧಿ ನಮಗೆ ಸಿಗ
ದಿಲ್ಲ. ಬದಲು ಪಾಲಿಗೆ ಬಂದದ್ದರ ಬಗ್ಗೆ ಹೇಸಿ
ಹುಟ್ಟುತ್ತದೆ.

ಈ ಹೇಸಿಕೆಯಿಂದಾಗಿ ನಾವು ಮನಃಪೂ
ಯಾಗಿ ದುಡಿಯಲು ಅಸಮರ್ಥರಾಗುತ್ತೇ
ನಮ್ಮ ಕಾರ್ಯಕ್ಷಮತೆ ಹ್ರಾಸವಾಗುತ್ತದೆ.
ಬರುತ್ತ ನಮ್ಮ ಮಹತ್ವಾಕಾಂಕ್ಷೆಯೂ
ಜಳ್ಳೆಂದು ನಮಗನಿಸತೊಡಗುತ್ತದೆ. ಮ
ನಾವು ಗಾಣದ ಎತ್ತಿನಂತೆ ಹಾಗೂ ಹೀ
ಜೀವನವನ್ನು ಸಾಗಿಸುತ್ತೇವೆ. ಇಂಥವರ ಜ
ನವು ನಿರಾಶೆಯಿಂದ ತುಂಬಿರುತ್ತದೆ.

ಈ ಬಿಕ್ಕಟ್ಟಿನಿಂದ ಬಿಡುಗಡೆ ಹೊಂದ
ಒಂದೇ ಉಪಾಯವೆಂದರೆ ನಮ್ಮ ಕೆಲಸವ
ನಾವು ಪ್ರೀತಿಯಿಂದ ಮಾಡಬೇಕು. ಯ
ಬೇಕಾದ ಕೆಲಸವೇ ನಮಗೆ ಸಿಕ್ಕಿರಲಿ, ಅದ
ನಾವು ಪ್ರಾಮಾಣಿಕತನದಿಂದ ತನ್ಮಯರಾ

ಮಾಡಿದರೇನೇ ನಮಗೆ ಹಿತವಾಗುವುದು. ಆ ಕೆಲಸ ನಮ್ಮ ರುಚಿಯ ವಿರುದ್ಧವಾಗಿದ್ದರೂ ಚಿಂತೆಯಿಲ್ಲ.

ವಾಸ್ತವವಾಗಿ ನಮ್ಮ ದೂರಿನ ಹಿಂದೆ ಬಹು ಮಟ್ಟಿಗೆ ನಮ್ಮ ಅಕರ್ಮಣ್ಯ ವೃತ್ತಿಯೇ ಹುದುಗಿಕೊಂಡಿರುತ್ತದೆ. ಕೆಲಸಮಾಡಿ ಮುಗಿಸುವುದಕ್ಕಿಂತ ಅದನ್ನು ಸಾಧ್ಯವಿದ್ದ ಮಟ್ಟಿಗೆ ತಳ್ಳಿಹಾಕುವ ಯತ್ನದಲ್ಲೇ ನಾವಿರುತ್ತೇವೆ. ಮತ್ತು ಈ ಕೆಲಸವೇ ನಮ್ಮ ಯೋಗ್ಯತೆಗೆ ತಕ್ಕದ್ದಲ್ಲ ಎಂಬ ತರ್ಕದ ಸೋಗು ಧರಿಸುತ್ತೇವೆ. (ನಿಜ ಸ್ಥಿತಿ ಯೋಗ್ಯ ಕೆಲಸ ನಮ್ಮ ಮುಂದಿಲ್ಲ ಎಂಬುದಲ್ಲ. ನಾವೇ ಕೆಲಸಕ್ಕೆ ಯೋಗ್ಯರಿರುವುದಿಲ್ಲ. ಅಂತೆಯೇ ಬೇಕಾದ ಕೆಲಸ ನಮಗೆ ಸಿಕ್ಕುವುದಿಲ್ಲ.)

ನಮ್ಮ ಸುಪ್ತಚೇತನದಲ್ಲಿ ಇಂಥ ಒಂದು ಭ್ರಮೆಯನ್ನು ಉಂಟುಮಾಡಿಕೊಂಡು ನಾವು ನಮ್ಮನ್ನೇ ವಂಚಿಸುತ್ತೇವೆ. ನಮ್ಮ ಕೆಲಸವನ್ನು ಮನಸ್ಸಿಲ್ಲದ ಮನಸ್ಸಿನಿಂದ ಮಾಡಿಯೊ, ಸಾಧ್ಯವಿದ್ದ ಮಟ್ಟಿಗೆ ತಳ್ಳಿಹಾಕಿಯೋ ಕೆಲ ದಿನ ಕಳೆದೆವೆಂದರೆ ನಮ್ಮ ಕಾರ್ಯಕ್ಷಮತೆಯೆ ಅಳಿಸಿ ಹೋಗುತ್ತದೆ ಅದೇ ನಾವು ಸಿಕ್ಕ ಕೆಲಸವನ್ನೇ ಮನಸ್ಸುಗೊಟ್ಟು ಮಾಡುತ್ತ ನಮ್ಮ ಧ್ಯೇಯವನ್ನೂ ಸಾಧಿಸುವ ಯತ್ನದಲ್ಲಿ ಇದ್ದೆವಾದರೆ ಕಾಲಾಂತರದಲ್ಲಾದರೂ ನಾವು ಸಫಲರಾಗಬಲ್ಲೆವು.

ನೀವು ಮುಂಬಯಿಯಲ್ಲಿ ಇರುವಿರಾದರೆ ಅಥವಾ ಮುಂಬಯಿಗೆ ಹೋಗಿ ಬಂದಿರುವಿರಾದರೆ "ತಾಂಬೆ ಆರೋಗ್ಯ ಭವನ"ದಲ್ಲಿ ಉಪಾಹಾರ ಮಾಡಿರಬಹುದು. ಇದರ ಸಂಸ್ಥಾಪಕರ ಬಗ್ಗೆ ತಿಳಿಕೊಂಡವರು ಬಹಳ ಕಡಿಮೆ. ಶ್ರೀ ಕಾಕಾಸಾಹೇಬ ತಾಂಬೆ ತಾವು ಶಾಲೆ ಕಲಿಯುತ್ತಿದ್ದಾಗ ತಮ್ಮ ಅಬಚಿಯ ಮನೆಯಲ್ಲಿ ನೀರು ಹೊರುತ್ತಿದ್ದರು. ಮುಂದೆ ಕೆಲ ದಿನ ಟ್ಯೂಶನ್ ಹೇಳಿಕೊಟ್ಟು, ಕೆಲ ದಿನ ರೂ. ೧೯ ಸಂಬಳದ ಶಿಕ್ಷಕರಾಗಿ ದುಡಿದು ಮುಂದೆ ರೂ. ೩೫ ಸಂಬಳಕ್ಕೆ ಕಾರಕೂನಿಕೆ ಮಾಡಿ ಶಿಕ್ಷಣ ಮುಂದುವರಿಸಿದರು. ಇಂಜನಿಯರರೊ ವೈಜ್ಞಾನಿಕರೊ ಆಗಬೇಕೆಂದು ಅವರು ಆಶಿಸಿದ್ದರು. ಆದರೆ ನಾವೆಲ್ಲರೂ ದಿನನಿತ್ಯ ಯಾವ ಪರಿಸ್ಥಿಯನ್ನು ಕುರಿತು ಶಪಿಸುತ್ತೇವೆಯೊ ಆ ಪರಿಸ್ಥಿತಿಯಿಂದಾಗಿ ೧೯೨೬ ಮಾರ್ಚ ೪ ರಂದು ಅವರು ೩೩ ವರ್ಷ ವಯಸ್ಸಿನಲ್ಲಿ 'ಮಟ್ಠಾ' ಮಾರಲು ಪ್ರಾರಂಭಿಸಬೇಕಾಯಿತು. ಇಂಜನಿಯರರೊ ವಿಜ್ಞಾನಿಯೊ ಆಗಬೇಕಿದ್ದ ಯುವಕ ಫುಟ್ ಪಾತ್ ಮೇಲೆ ಮಠ್ಠಾ ಮಾರುತ್ತಾ ತಿರುಗತೊಡಗಿದ. ಅದೇ ಅವನ ಅಂಗಡಿ. ಅದೇ ಅವನ ನಿವಾಸ. ಮೊದಲನೇ ದಿನ ಅವರು ಮಾಡಿದ ವ್ಯಾಪಾರ ೮ ಆಣೆಯದು. ಮಟ್ಠಾ ತಾವೇ ಮಾಡುತ್ತಿದ್ದರು. ಗ್ರಾಹಕರ ಎಂಜಲು ಗ್ಲಾಸುಗಳನ್ನೂ ತೊಳೆಯುತ್ತಿದ್ದರು. ಆದರೆ ತಮ್ಮ ಮಿತ್ರರ ಮುಂದೆ ಅವರೆಂದೂ ತನ್ನ ತಾಪತ್ರಯ ತೋಡಿಕೊಳ್ಳಲಿಲ್ಲ. 'ನಾನು ಇಂಜನೀಯರನಾಗಬೇಕಿತ್ತು. ನನಗೆ ಯೋಗ್ಯ ಕೆಲಸಸಿಕ್ಕಿಲ್ಲ' ಎಂದು ಅನ್ನಲಿಲ್ಲ. ಇಂಜನೀಯರನಾಗಬಲ್ಲ ಯೋಗ್ಯತೆ ತನಗಿದೆ ಎಂದಮೇಲೆ ಮಟ್ಠಾ (ಮಜ್ಜಿಗೆ) ಮಾಡುವುದು ಮತ್ತು ಮಾರುವುದು ತನಗೇನು ಕಷ್ಟ ಎಂದವರು ಯೋಚಿಸಿದರು. ಇದನ್ನವರು ಮತ್ತಿಷ್ಟು ಚೊಕ್ಕಟವಾಗಿ ಮಾಡುತ್ತಿದ್ದರು. ಇದರಿಂದ ಅವರ ಉದ್ಯೋಗ ಊರ್ಜಿತವಾಯಿತು. ಏಳು ವರ್ಷಗಳಲ್ಲಿ 'ತಾಂಬೆ ಉಪಾಹಾರ ಗೃಹ'ವನ್ನವರು ಪ್ರಾರಂಭಿಸಿದರು. ಅದೇ ಉಪಾಹಾರ ಗೃಹ ಇಂದು ಬಿ. ತಾಂಬೆ ಲಿಮಿಟೆಡ್ ಎಂಬ ಹೆಸರಿನಿಂದ ಒಂದು ಕಂಪನಿಯಾಗಿ ಪರಿಣಮಿಸಿದೆ. ಪ್ರಾರಂಭದ ದಿನ ಕೇವಲ ಎಂಟಾಣೆಯ ಮಾರಾಟ ಮಾಡಿದ್ದ ತಾಂಬೆಯವರ ದೈನಿಕ ಆದಾಯ ಈಗ ಒಂದೂವರೆ ಸಾವಿರಕ್ಕೂ ಹೆಚ್ಚಿದೆ. ಅವರ ಸಾಫಲ್ಯದ ಗುಟ್ಟು ಕೆಲಸವನ್ನವರು ಮನಸಾ ಮಾಡಿದರೆಂಬುದರಲ್ಲಿದೆ.

ನಮ್ಮ ಕೆಲಸವನ್ನು ನಾವು ಮನಸ್ಸುಗೊಟ್ಟು ಮಾಡಿದರೆ ನಮ್ಮ ಸುಪ್ತಶಕ್ತಿಗಳು ಎಚ್ಚರಗೊ-

ಳ್ಳುವವು. ಈ ಸಾಮರ್ಥ್ಯದಿಂದಲೇ ನಾವು ಮುಂದೆ ಸಾಫಲ್ಯವನ್ನು ಹೊಂದುತ್ತೇವೆ.

ಯಾವ ಬಗೆಯ ಭಾವನೆಗಳನ್ನು ನಾವು ನಮ್ಮ ಮೆದುಳಿನಲ್ಲಿಡುವೆವೊ ಕೆಲ ದಿನಗಳಲ್ಲಿ ನಾವು ಅವಕ್ಕೆ ಹೊಂದಿಕೊಳ್ಳುತ್ತೇವೆಂಬುದು ನಮ್ಮ ಮೆದುಳಿನ ಒಂದು ವೈಶಿಷ್ಟ್ಯವಾಗಿದೆ.

ನಮ್ಮ ಕೆಲಸವನ್ನು ನಾವು ಮನಸ್ಸುಗೊಟ್ಟು ಮಾಡುವುದರಿಂದ ಎರಡು ಮಾತುಗಳಾಗಬಹುದು. ಒಂದು, ಮಾಡುವ ಕೆಲಸದಲ್ಲೇ ಆಸ್ಥೆ ಹುಟ್ಟಿ ನಾವು ಪ್ರಗತಿಹೊಂದುವೆವು. ಎರಡು, ಇದರ ಸಹಾಯದಿಂದ ಈಪ್ಸಿತ ಕಾರ್ಯ ದೊರಕುವಂತಾಗುವುದು.

ಶ್ರೀ ಕಾಕಾಸಾಹೇಬ ತಾಂಬೆಯವರ ಜೀವನ ಮೊದಲನೇ ಮಾದರಿಯದು. ಎರಡನೆಯ ಉದಾಹರಣೆ ಶ್ರೀ ಠಾಕುರದತ್ತ ಶರ್ಮ ವೈದ್ಯರದು.

ಅಮೃತಧಾರಾ ಎಂಬ ಪ್ರಸಿದ್ಧ ಔಷಧಿಯನ್ನು ನಿರ್ಮಿಸಿದ ಠಾಕುರದತ್ತ ಶರ್ಮ ವೈದ್ಯರು ಬಡ ಕುಟುಂಬದಲ್ಲಿ ಹುಟ್ಟಿದವರು. ಮನೆಯಿಂದ ಓಡಿ ಹೋಗಿ ಹೇಗೋ ಹೈಸ್ಕೂಲ್ ಶಿಕ್ಷಣ ಸಂಪಾದಿಸಿದರು. ಇಂಟರ್‌ನಲ್ಲೇ ಶಿಕ್ಷಣ ನಿಲ್ಲಿಸಬೇಕಾಯಿತು. ವೈದ್ಯರಾಗಬೇಕೆಂದು ಅವರ ಆಸೆಯಿತ್ತು. ಆದರೆ ಅಭಿರುಚಿಗೆ ತಕ್ಕ ಶಿಕ್ಷಣವಾಗಲಿ ಸಾಧನೆಗಳಾಗಲಿ ಅವರ ಬಳಿ ಇರಲಿಲ್ಲ. ಕಡೆಗೆ ನಿರುಪಾಯರಾಗಿ ಅವರು ರೂ. ೧೫ ಸಂಬಳದ ನೌಕರಿಗೆ ಸೇರಿದರು.

ಅವರಾದರೂ ಇದು ತನಗೆ ಯೋಗ್ಯವಾದ ಕೆಲಸವಲ್ಲೆಂದು ಯಾರೆದುರೂ ದೂರಿಕೊಂಡವರಲ್ಲ. ತಮ್ಮ ನೌಕರಿಯನ್ನವರು ಮನಃಪೂರ್ವಕವಾಗಿ ಮಾಡಿದರು. ಜೊತೆಯಲ್ಲೇ ಪುರಸತ್ತಿದ್ದಾಗ ವೈದ್ಯಶಾಸ್ತ್ರವನ್ನು ಅಭ್ಯಸಿಸಿದರು. ಕೆಲ ದಿನಗಳಲ್ಲೇ ಅವರು ಸ್ವತಃ ಔಷಧಿಗಳನ್ನು ಮಾಡಲಾರಂಭಿಸಿದರಲ್ಲದೆ ಚಿಕಿತ್ಸೆಯನ್ನೂ ಮಾಡತೊಡಗಿದರು. ಆದಾಯವು ತಕ್ಕಮಟ್ಟಿಗೆ ಬರಲಾರಂಭಿಸಿದೊಡನೆಯೆ ಅವರು ನೌಕರಿಯನ್ನು ಬಿಟ್ಟರು. ತಮ್ಮ ಅಭಿರುಚಿಯ ವಿಷಯದತ್ತ

ಪೂರ್ಣ ಗಮನ ಕೊಡಲು ಅವರಿಗೆ ಸಾಧ್ಯ
ಯಿತು. ಅವರು ೨೫ ವರ್ಷದವರಿರುವಾಗ
ಅಮೃತಧಾರಾವನ್ನು ನಿರ್ಮಿಸಿದರು. ವೈ
ಶಾಸ್ತ್ರದ ಅನೇಕ ಗ್ರಂಥಗಳನ್ನು ಬರೆದ
ಒಂದು ಪಾಕ್ಷಿಕ ಪತ್ರಿಕೆ ಹೊರಡಿಸಿದರು.

ಅವರ ಸಫಲತೆಯ ಗುಟ್ಟೇನು? ಕೆಲಸ
ಪ್ರೀತಿ. ತಮ್ಮ ನೌಕರಿಯನ್ನವರು ಮನ
ಗೊಟ್ಟು ಮಾಡದೆ ಹೋಗಿದ್ದರೆ ಅವರಿಗೆ ವೈ
ಶಾಸ್ತ್ರವನು ಅಭ್ಯಸಿಸಲೂ ಆಗುತ್ತಿರಲಿಲ್ಲ.

ನಾವು ಮಹತ್ವಾಕಾಂಕ್ಷಿಗಳಿದ್ದದ್ದು ನಿಜ
ದರೆ, ನಮ್ಮ ರುಚಿಯ ಕೆಲಸ ನಮಗೆ ಸಿಕ್ಕಿ
ವಾದರೆ, ಅದನ್ನು ತಳ್ಳಿಹಾಕುವುದಲ್ಲ ಬಿ
ಡೆಯ ಮಾರ್ಗ; ಅದನ್ನು ಪ್ರೀತಿಯಿಂದ ಮಾ
ವುದು. ಅರುಚಿಯ ಕೆಲಸ ಸಿಕ್ಕಿದರೆ ಸಿಕ್ಕ ಕೆ
ದಿಂದ ಮುಕ್ತಿ ಹಾಗೂ ಯೋಗ್ಯ ಕೆಲ
ಪ್ರಾಪ್ತಿಯಾಗಬೇಕಾದ ದ್ವಿವಿಧ ಹೊಣೆಯ
ನೀವು ಹೊರಬೇಕಾಗುವುದು. ದ್ವಿವಿಧ ಹೊ
ನಿಭಾಯಿಸಲು ನೀವು ಅಧಿಕ ಕರ್ಮಶೀಲರ
ಬೇಕಾಗುವುದು.

ಕೆಲವರು, 'ಇಷ್ಟುದಿನ ಈ ಅಯೋಗ್ಯ ಕೆ
ವನ್ನೇ ಮಾಡುತ್ತಾಬಂದಿದ್ದೇವೆ. ಇನ್ನೂ ಯ
ಅನುಕೂಲ ಪರಿಣಾಮವೂ ಆಗಿಲ್ಲ. ಇನ್ನೂ ಎ
ದಿನ ಈ ರೀತಿ ದುಡಿಯುತ್ತಾ ಬೀಳಬೇಕು
ಎಂದು ಕೇಳಬಹುದು.

ಹಾಗೆ ಕೇಳುವವರ ಮಾತು ನಿಜವಲ್ಲ. ಯ
ಕೆಂದರೆ ಅವರು ನಿಜವಾಗಿಯೂ ತಮ್ಮ ಕೆ
ವನ್ನು ಪ್ರೀತಿಯಿಂದ ಮಾಡುವವರಾದರೆ ತ
ಕೆಲಸದ ಬಗ್ಗೆ ಈ ರೀತಿ ಮಾತಾಡುತ್ತಿರಲಿ
ಪ್ರೀತಿಯಿಂದ ಕೆಲಸ ಮಾಡಿದರೆ ಹೊಸ ಉತ
ಉಂಟಾಗಿ ಕೆಲಸವನ್ನು ಸುಲಭಗೊಳಿ
ಹಲವು ಯುಕ್ತಿಗಳೂ ಹೊಳೆಯುವವು. ಕೆ
ಹೊರೆಯಾಗದೆ ಒಂದು ಆಟವೆನಿಸುವುದು.

ಕೆಲಸ ಮಾಡುವುದೂ ಒಂದು ಕಲೆ. ಕಲ
ರನು ಕಲೆಯನ್ನು ಪ್ರೀತಿಸಿ ಅದರೊಂದಿಗೆ ತ
ಯನಾಗಿ ಏಕನಿಷ್ಠೆಯಿಂದ ಸಾಧನೆ ನಡೆಸು

ನಾವಾದರೂ ನಮ್ಮ ಕೆಲಸಗಳನ್ನು ಮನಸಾ ಮಾಡಬೇಕು. ಈ ಭಾವ ನಮ್ಮಲ್ಲಿ ಎಚ್ಚತ್ತ-ರೇನೇ ನಾವು ನಮ್ಮ ಕೆಲಸದಲ್ಲಿ ಆನಂದವನ್ನು ಅನುಭವಿಸಬಲ್ಲೆವು. ಗೀತೆಯಲ್ಲಿ ಹೇಳಿರುವುದೇನಂದರೆ, "ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ!" (ಮನುಷ್ಯನು ತನ್ನ ಕರ್ಮದಿಂದಲೇ ಆ ದೇವರನ್ನು ಪೂಜಿಸಿ ಸಿದ್ಧಿಯನ್ನು ಸಂಪಾದಿಸುತ್ತಾನೆ!)

ಯಾವ ಕೆಲಸ ಎಷ್ಟು ದಿನ ಮಾಡಿದರೆ ಸಫ-ಲತೆ ದೊರಕುವುದೆಂಬುದನ್ನು ಹೇಳಲಿಕ್ಕಾಗದಾದರೂ ಪ್ರತಿ ಕೆಲಸವೂ ಒಂದು ನಿಶ್ಚಿತ ವೇಳೆಗೆ ತನ್ನ ಫಲಕೊಡುತ್ತದೆಂಬುದರಲ್ಲಿ ಸಂದೇಹವಿಲ್ಲ. ಇದೇ ಕಾರ್ಯ-ಕಾರಣ ಸಿದ್ಧಾಂತ. ಆ ನಿಶ್ಚಿತ ಸಮಯ ಯಾವಾಗ ಬರುವುದೆಂಬುದನ್ನು ತಿಂ-ಗಳು, ವರ್ಷಗಳಲ್ಲಿ ಅಳೆದು ಹೇಳಲಿಕ್ಕೆ ಸಾಧ್ಯವಿಲ್ಲ. ನಮ್ಮ ಅಭೀಪ್ಸಿತ ಸಿದ್ಧಿಯಾಗುವವರೆಗೂ ಕೆಲಸ ಮಾಡಬೇಕು.

ಸಮುದ್ರಜೀವಿ ಹಾಗು ವನಸ್ಪತಿಗಳ ಫೋಟೊ ತೆಗೆಯುವ ಪ್ರಪ್ರಥಮ ವ್ಯಕ್ತಿ ಡಾ. ಹೆಂಸ್ (ಜಾಕ್ಕಿ) ಹ್ಯಾಸ್‌ರು ಮೊಟ್ಟಮೊದಲು ಸಮುದ್ರ ಜೀವಿಗಳ ಫೋಟೊ ಪ್ರಕಟಿಸಿದಾಗ ಕೀರ್ತಿಯೂ ಹಣವೂ ದೊರಕಿತು ಇದೇ ವೇಳೆ ತನಗೊಬ್ಬ ಸಹಾಯಿಕೆ (ಪರ್ಸನಲ್ ಅಸಿಸ್ಟಂಟ್ ಬೇ-ಕೆಂದು ಇವರು ಜಾಹೀರಾತು ಮಾಡಿದರು.

ಈ ಜಾಹೀರಾತಿಗೆ ಪ್ರತಿಕ್ರಿಯೆಯಾಗಿ ಯುವತಿಯರ ದಂಡೇ ನೆರೆಯಿತು. ಆದರೆ ಹ್ಯಾಸ್‌ರು ಯಾರನ್ನೂ ನೇಮಿಸಿಕೊಳ್ಳಲಿಲ್ಲ. ಏಕೆಂದರೆ ಅವರು ಬಯಸಿದ್ದು ಕಾರ್ಯಾಲಯದ ಕಾರ್ಯಭಾರವನ್ನು ನಿರ್ವಹಿಸಬಲ್ಲ ಯುವತಿಯನ್ನು, ಯುವತಿಯರೆಲ್ಲ ಬಯಸಿದ್ದು ಇವರೊಂದಿಗೆ ಸಮುದ್ರದಲ್ಲಿ ಜೆನ್ನಾಟವಾಡುವುದನ್ನು. ಲೋತೆ ಎಂಬವಳೊಬ್ಬಳಿದ್ದಳು. ಅವಳಾದರೂ ಅಂತರಂಗದಲ್ಲಿ ಉಳಿದವರಂತೇ ಬಯಸುವವಳು. ಆದರೆ ತನ್ನ ಇಷ್ಟಸಿದ್ಧಿಗಾಗಿ ತಾನು ಬೇರೆ ಎಷ್ಟೋ ಕೆಲಸಗಳನ್ನು ಮಾಡಬೇಕಾಗುವುದೆಂಬುದನ್ನು ತಿಳಿದಿದ್ದಳು. ಆಕೆ ಹ್ಯಾಸರ ಬಳಿ ಹೋದಳು. ಸಮುದ್ರಯಾತ್ರೆಗಳ ಮಾತನ್ನೇ ಆಕೆ ಎತ್ತಲಿಲ್ಲ. ಅವಳಿಗೆ ಆ ಕೆಲಸ ದೊರೆಯಿತು.

ಅಲ್ಲಿಂದಲೇ ಅವಳ ಸಾಧನೆಗೆ ಪ್ರಾರಂಭ. ಒಮ್ಮೆಯೂ ಅವಳು ತನ್ನ ಇಚ್ಛೆಯನ್ನು ಹ್ಯಾಸರ ಮುಂದೆ ಪ್ರಕಟಪಡಿಸಲಿಲ್ಲ. ಆಕೆ ಕಾರ್ಯಾಲಯದ ಕೆಲಸವನ್ನು ಮನಃಪೂರ್ವಕವಾಗಿ ಮಾಡಲಾರಂಭಿಸಿದಳು. ಹಾಗೇ ಸ್ವಂತವಾಗಿ ಈಜನ್ನು ಅಭ್ಯಸಿಸಿದಳು. ಇನ್ನೂ ಎಷ್ಟು ದಿನ ಹೀಗೆ ಮಾಡಬೇಕೆಂದು ಅವಳೆಂದೂ ಯೋಚಿಸಲಿಲ್ಲ. ಮುಳುಗು ಹಾಕಲು ಚೆನ್ನಾಗಿ ಬಂದಮೇಲೆ ತಾನೇ ಒಮ್ಮೆ ನೀರಿನಲ್ಲಿ ಮುಳುಗಿ ಹಲವು ಪ್ರಾಣಿಗಳ ಫೋಟೋಗಳನ್ನು ತೆಗೆದಳು ಅವನ್ನು ಒಂದು ಪತ್ರಿಕೆಯಲ್ಲಿ ಪ್ರಕಟಿಸಿದಳು.

ಅನೇಕ ವರ್ಷಗಳಿಂದ ನಡೆದಿದ್ದ ಅವಳ ಸಾಧನೆ ಸಫಲವಾಯಿತು. ಆ ಚಿತ್ರಗಳನ್ನು ಕಂಡು ಡಾ. ಹ್ಯಾಸ್ ಪ್ರಸನ್ನಚಿತ್ತರಾದರು. ಅವಳನ್ನು ಆ ಮೇಲೆ ಅವರು ಸಮುದ್ರಯಾತ್ರೆಗಳಿಗೆ ಕರೆದುಕೊಂಡು ನಡೆದರಷ್ಟೇ ಅಲ್ಲ; ಕೆಲ ದಿನಗಳಲ್ಲೇ ಅವಳನ್ನು ಮದುವೆಯಾದರು.

ಸಫಲತೆ ಬಯಸುವವರು ಸದಾ ಕರ್ಮಶೀಲರಾಗಿರಬೇಕು. ಸದಾ ಜಾಗರೂಕರಾಗಿರಬೇಕು. ಅಕರ್ಮಣ್ಯತೆ ಅನೇಕ ಬಗೆಯಲ್ಲಿ ಸೋಲಿಸ-ಲೆತ್ನಿಸುವುದು. 'ಎಷ್ಟು ದಿನ ದುಡಿಯಲಿ?' 'ಸಾಕಾಯಿತು.' 'ಬಹಳ ದುಡಿದೆ' 'ಸ್ವಲ್ಪಾದರೂ ವಿಶ್ರಾಂತಿ ಬೇಕು' 'ಇಂದಿನ ಕೆಲಸವಂತೂ ಮುಗಿಯಿತು' 'ಇರಲಿ ನಾಳೆ ನೋಡುವಾ' ಇವೆಲ್ಲವುಗಳೂ ಅಕರ್ಮಣ್ಯತೆಯ ಮುಖವಾಡಗಳೇ! ನಾವು ಕೆಲಸವನ್ನು ನಿಜವಾಗಿಯೆ ಪ್ರೀತಿಸುವೆವಾದರೆ ಅಕರ್ಮಣ್ಯತೆಯ ಈ ಮುಖವಾಡಗಳಿಗೆ ಬಲಿಬೀಳಬಾರದು. ಮತ್ತು ನಮ್ಮ ಕೆಲಸವನ್ನು ನಾವು ಪ್ರೀತಿಯಿಂದ ಮಾಡದಿದ್ದರೆ ನಾವು ಸಫಲರಾಗಲು ಸಾಧ್ಯವಿಲ್ಲ. *





ಅಂತರಿಕ್ಷದಲ್ಲಿ ಹಾರಿದವರು

ಯಂತ್ರಗಳ ಸಹಾಯದಿಂದ ಮನುಷ್ಯ ಇಂದು ಅಂತರಿಕ್ಷವನ್ನು ಜಯಿಸಿದ್ದಾನೆ. ಈ ಅದ್ಭುತವಾದ ವಿಜಯವನ್ನು ಆತ ಪಡೆದದ್ದು ಇಪ್ಪತ್ತನೆಯ ಶತಮಾನದಲ್ಲಿ. ಆದರೆ ಯಂತ್ರಗಳ ಸಹಾಯವಿಲ್ಲದೆ ಮನುಷ್ಯ ಆಕಾಶದಲ್ಲಿ ಉಡ್ಡಾಣಗೈಯುವುದು ಇಂದಿಗೂ ಅಸಾಧ್ಯವಾಗಿಯೇ ಇದೆ. ಇಂಥ ಪ್ರಯತ್ನಗಳು ನಡೆದಿಲ್ಲವೆಂದಿಲ್ಲ. ಇಪ್ಪತ್ತನೆಯ ಶತಮಾನಕ್ಕಿಂತ ಹಿಂದೆಯೆ ಭಾರತದಲ್ಲಿ ಇಂಥ ಪ್ರಯೋಗಗಳು ನಡೆದವು. ಅದನ್ನು ಪ್ರತ್ಯಕ್ಷವಾಗಿ ನೂರಾರು ಜನ ನೋಡಿದ್ದರು. ಈ ಪ್ರಯೋಗಗಳನ್ನು ಮಾಡಿದ ಸಾಹಸಿಗಳಿಗೆ ಸಿಕ್ಕ ಜಹಾಗೀರು ಭೂಮಿಯನ್ನು ಅವರ ವಂಶಜರಿಂದಿಗೂ ಉಪಭೋಗಿಸುತ್ತಿರುವುದು ಈ ಅದ್ಭುತ ಘಟನೆಗೆ ಜೀವಂತ ಸಾಕ್ಷಿಯಾಗಿದೆ.

ಗುಜರಾತಿ ಸಾಪ್ತಾಹಿಕ "ಸಂಸ್ಕಾರ ಲಕ್ಷ್ಮಿ" ಎಂಬ ಪತ್ರಿಕೆಯ ಸಂಪಾದಿಕೆ ಶ್ರೀಮತಿ ಸುಮತಿ ಬೇನ್ ಮಾಳವಿ ಎಂಬವರು ತಮ್ಮ ಬಾಲ್ಯದಲ್ಲಿ ಆಕಾಶದಲ್ಲಿ ಹಾರಾಡಿದವನನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ಇಂದಿಗೆ ೪೯ ವರ್ಷಗಳ ಹಿಂದೆ ನಡೆದ ಈ ಘಟನೆಯ ಒಂದೊಂದು ಕ್ಷಣವೂ ತಮಗೆ ಅಚ್ಚಳಿಯದೆ ನೆನಪಿನಲ್ಲಿದೆಯೆನ್ನುತ್ತಾರವರು.

ಅವರು ಹೇಳುವ ಸಂಗತಿ ಇದು: ಆಗ ನಾನು ಸುಮಾರು ೫-೬ ವರ್ಷದವಳಿದ್ದೆ. ನನ್ನ ಅಪ್ಪ ರಾಜಸ್ತಾನದ ಬಿಯಾನಾ ಎಂಬ ಊರಿನಲ್ಲಿ ಡೆಪ್ಯುಟಿ ಸ್ಟೇಶನ್ ಮಾಸ್ತರರಾಗಿದ್ದರು.

ಒಂದು ದಿನ ನೆರೆಮನೆಯ ಮಕ್ಕಳೊಡನೆ ಆಡಲೆಂದು ನಾನು ಅಮ್ಮನಿಗೆ ಹೇಳಿ ಮನೆಯಿಂದ ಹೊರಬಿದ್ದೆ. ಮನೆಯಿಂದ ಹೊರಬಿದ್ದಾಗ ನನಗೆ ದೂರದಲ್ಲಿ ಜನರ ಗದ್ದಲ ಕಾಣಿಸಿತು. ಏನಿರಬೇಕು ಎಂದು ಯೋಚಿಸುತ್ತ ನಾನು ಆಡಲು ಹೋಗದೆ ಜನ ಕೂಡಿದ ಕಡೆಗೆ ಹೊರಟೆ. ಜನರ ಗದ್ದಲದ ಬಳಿಗೆ ಬಂದಾಗ ಅಲ್ಲಿದ್ದ ಒಬ್ಬನಿಗೆ ನಾನು ಸ್ಟೇಶನ್ ಮಾಸ್ತರರ ಮಗಳೆಂದು ಗುರುತು ಸಿಕ್ಕಿದ್ದರಿಂದ ಆತ ನನ್ನ ಕೈಹಿಡಿದುಕೊಂಡು ಜನರ ಗದ್ದಲದ ನಡುವೆ ಹಾದಿ ಮಾಡಿ ಎಲ್ಲರಿಗಿಂತಲೂ ಮುಂದೆ ನನ್ನನ್ನು ಒಯ್ದು ನಿಲ್ಲಿಸಿದ. ಅದರಿಂದ ನನಗೆ "ಹಾರಾಡುವ ಮನುಷ್ಯ"ನನ್ನು ಸ್ಪಷ್ಟವಾಗಿ ನೋಡಲು ಸಿಕ್ಕಿತು.

ಕಂಬಳಿಯಂತೆ ಕಾಣುತ್ತಿದ್ದ ಒಂದು ವಸ್ತು

'ಸಕಾಳ'ದ ಆಧಾರದಿಂದ

ವಿನ ತುದಿಗೆ ಮೊರಗಳಂತಿದ್ದ ರೆಕ್ಕೆಗಳನ್ನು ಕಟ್ಟಿದ್ದರು. ಅವನ್ನು ಒಬ್ಬಾತ ತನ್ನ ಬೆನ್ನಿಗೇರಿಸಿಕೊಂಡ. ಅವನ ಸಹಾಯಕರು ಅದರ ಹಗ್ಗಗಳಿಂದ ಆ ಸಾಧನವನ್ನು ಅವನ ಮೈಗೆ ವ್ಯವಸ್ಥಿತವಾಗಿ ಬಿಗಿದರು. ರೆಕ್ಕೆಗಳನ್ನು ಕಟ್ಟಿಕೊಳ್ಳುತ್ತಿದ್ದಾತ ಸುತ್ತಲಿದ್ದವರಿಗೆ ಹಾರಾಡುವ ಕತೆಯ ವಿಚಾರದಲ್ಲಿ ಏನೇನೊ ಹೇಳುತ್ತಿದ್ದ. ಅವರು ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರವೀಯುತ್ತಿದ್ದ. ಆಮೇಲೆ ಒಂದೆರಡು ಸಲ ಆ ಕೃತ್ರಿಮ ರೆಕ್ಕೆಗಳನ್ನು ಬೀಸಿ ಆತ ಮೇಲೆ ಮೇಲೆ ಹಾರತೊಡಗಿದ. ನೋಡ-ನೋಡುವಷ್ಟರಲ್ಲಿ ಮೇಲ-ಮೇಲಕ್ಕೆ ದೂರದೂರ ಹಾರಿ ಹೋದ. ಜನ ಮೇಲೆ ಬೊಟ್ಟು ತೋರಿಸುತ್ತ "ಅದೊ, ಅಲ್ಲಿ ನೋಡಿ, ಈಗಂತೂ ಒಂದು ಚುಕ್ಕೆಯಂತೆ ಕಾಣಿಸುತ್ತಾನೆ" ಎನ್ನುತ್ತಿದ್ದರು. ತುಸು ಹೊತ್ತಿನಲ್ಲಿ ಆ ಮನುಷ್ಯ ಅದೃಶ್ಯನಾಗಿಬಿಟ್ಟ.

ಮತ್ತೂ ಕೆಲ ನಿಮಿಷಗಳ ಮೇಲೆ ಆ ಮನುಷ್ಯ ತಿರುಗಿ ಬಂದು ನಮ್ಮೆಲ್ಲರ ಎದುರಿನಲ್ಲಿ ಇಳಿದ.

ಶ್ರೀಮತಿ ಸುಮತಿ ಬೇನರು ಈ ಸಂಗತಿಯನ್ನು ತಮ್ಮ ಪತ್ರಿಕೆಯಲ್ಲಿ ೧೫-೮-೬೧ ರಂದು ಪ್ರಕಟಿಸಿದರು. ಇದು ಪ್ರಕಟವಾದ ಕೆಲವೇ ದಿನಗಳಲ್ಲಿ ಸೌರಾಷ್ಟ್ರದ ಕಾಳಾವಾಡ ಎಂಬ ಊರಿನ ಶ್ರೀ ಮಾಪದಾ೯ಜಿ ರತ್ನು ಎಂಬವರು ತಾವು ಬರೆದ ಜಾಮನಗರದ ಯದುವಂಶದ ಇತಿಹಾಸದಲ್ಲಿದ್ದ ಈ ಮೇಲಿನ ಸುದ್ದಿಗೆ ಪುಷ್ಟಿಯನ್ನೀಯುವಂಥ ಒಂದು ಸಮಾಚಾರವನ್ನು ಶ್ರೀಮತಿ ಸುಮತಿ ಬೇನರಿಗೆ ಬರೆದು ತಿಳಿಸಿದರು.

ಅವರು ಬರೆದ ಸಂಗತಿ ಇದು: ೧೮೪೪ ರ ಸುಮಾರಿಗೆ ಒಂದು ದಿನ ಜಾಮನಗರದ ಜಾಮಸಾಹೇಬ ಶ್ರೀ ರಣಮಲ್ಲಜಿಯವರು ತಮ್ಮ ದರ-ಬಾರಿನಲ್ಲಿ ಕುಳಿತಿದ್ದರು. ದರಬಾರಿನಲ್ಲಿ ಸರದಾರರು, ಜಾಮಸಾಹೇಬರ ಸಂಬಂಧಿಕರು, ಪ್ರಜಾಜನರು ಹಾಜರಿದ್ದರು. ಆಗ ಒಂದು ನಟಕುಟುಂಬ ಬಂದು ಜಾಮಸಾಹೇಬರಿಗೆ ಸಲಾಮು ಮಾಡಿ ಒಂದು ವಿನಂತಿಯನ್ನು ಮಾಡಿಕೊಂಡಿತು. "ಆಕಾಶದಲ್ಲಿ ಹಾರಿ ಒಂದು ನಿಶ್ಚಿತ ಸ್ಥಳದಲ್ಲಿ ಇಳಿಯಬಲ್ಲ 'ಗಗನವಿಹಾರಿ'ಗಳು ನಾವು. ತಾವು ಬಯಸಿದಲ್ಲಿ ಅದನ್ನು ಪ್ರಯೋಗಿಸಿ ತೋರಿಸುವೆವು." ಜಾಮಸಾಹೇಬರು ಆ ಪ್ರಯೋಗ ನೋಡ ಬಯಸಲು ಆ ನಟರು, "ನಮ್ಮದೊಂದು ಕರಾರಿದೆ. ನಾವು ಹಾರುತ್ತ ಯಾವ ಊರಿನಲ್ಲಿ ಸುರಕ್ಷಿತವಾಗಿ ಇಳಿಯುವೆವೊ ಆ ಊರನ್ನು ನಮಗೆ ವಂಶಪರಂಪರಾಗತವಾಗಿ ಜಹಾಗೀರು ಹಾಕಿಕೊಡಬೇಕು," ಎಂದರು. ದರಬಾರಿನವರ ವಿರೋಧವಿದ್ದರೂ ಜಾಮಸಾಹೇಬರು ನಟರ ಈ ಕರಾರನ್ನು ಒಪ್ಪಿಕೊಂಡರು.

ಮರುದಿನವೇ ಜಾಮಸಾಹೇಬರ ಕೋಡಾ ಮಹಲಿನ ಏಳನೆಯ ಉಪ್ಪರಿಗೆಯ ಮೇಲಿಂದ ಮೂರು ಜನ ಆಕಾಶದಲ್ಲಿ ಹಾರಲು ಸಿದ್ಧತೆ ಮಾಡಿಕೊಂಡರು. ಅದನ್ನು ನೋಡಲು ಜಾಮಸಾಹೇಬರು, ಅವರ ಕುಟುಂಬದವರು, ಸರದಾರರು ಮತ್ತು ಪ್ರಮುಖ ನಾಗರಿಕರು ನೆರೆದಿದ್ದರು. ಉಡ್ಡಾಣಗೈಯುವವರು ಯಾವ ಊರಿನಲ್ಲಿ ಸುರಕ್ಷಿತವಾಗಿ ಇಳಿಯುವರೋ ಆ ಊರನ್ನು ಅವರಿಗೆ ವಂಶಪರಂಪರಾಗತವಾಗಿ ಉಂಬಳಿ ಕೊಟ್ಟಿದೆ ಎಂದು ಬರೆದ ಪತ್ರಕ್ಕೆ ಸಹಿ ಹಾಕಿ ಮುದ್ರೆ ಹಾಕಿಸಿ ಪ್ರತಿಯೊಬ್ಬ ನಟನಿಗೂ ಜಾಮಸಾಹೇಬರು ಕೊಟ್ಟರು.

ಮೂರೂ ನಟರು ತಮ್ಮ ಭುಜಗಳಿಗೆ ಖಡ್ಗಮೃಗದ ಚರ್ಮದ ದೊಡ್ಡದೊಡ್ಡ ಢಾಲುಗಳನ್ನು ಕಟ್ಟಿಕೊಂಡರು. ಅವುಗಳ ಮೇಲೆ ಕಂಬಳಿಗಳನ್ನು ಕಟ್ಟಿ ಕಂಬಳಿಗಳಲ್ಲಿ ಗಾಳಿ ತುಂಬಿಕೊಳ್ಳುವುದಕ್ಕಾಗಿ ಕಡ್ಡಿಗಳನ್ನು ಕೂಡಿಸಿದರು ಆಮೇಲೆ ಆ ಮೂವರೂ ನಟರು ಆ ಕೃತ್ರಿಮ ರೆಕ್ಕೆಗಳನ್ನು ಬೀಸುತ್ತ ಹಕ್ಕಿಗಳಂತೆ ಮೊದಲೇ ನಿರ್ದಿಷ್ಟಪಡಿಸಿದ್ದ ಸ್ಥಳದತ್ತ ಹಾರತೊಡಗಿದರು. ಅವರು ಹಾರತೊಡಗಿದೊಡನೆ ಅವರನ್ನನುಸರಿಸಿ ಕೆಲ ಕುದುರೆ ಮತ್ತು ಒಂಟೆ ಸವಾರರು ಹೊರಟರು.

ಮೊದಲನೆಯ ನಟ ಜಾಮನಗರದಿಂದ ಪೂರ್ವಕ್ಕೆ ೩೦ ಮೈಲು ದೂರದಲ್ಲಿದ್ದ ಕಾಳಾ

ವಾಡಕ್ಕೆ ಹೊರಟಿದ್ದ. ಆತ ಕಾಳಾವಾಡ ಊರಿನ ನದಿಯ ಪಶ್ಚಿಮ ದಂಡೆಯ ಮೇಲೆ ಬಂದಾಗ ಎರಡೂ ರೆಕ್ಕೆಗಳು ಮುರಿದುಬಿದ್ದುದರಿಂದ ಕೆಳಗೆ ಬಿದ್ದು ಸತ್ತು ಹೋದ. ನದಿಯ ದಂಡೆಯಲ್ಲಿ ಜಾಮನಗರಕ್ಕೆ ಹೋಗುವ ಹಳೆಯ ರಸ್ತೆಯಲ್ಲಿ ಅವನ ಸಮಾಧಿ ಇನ್ನೂ ಇದೆ.

ಖಂಬಾಳಿಗೆ ಹೊರಟಿದ್ದ ಎರಡನೆಯ ನಟ ಹತ್ತೆಂಟು ಊರುಗಳನ್ನು ದಾಟಿದ್ದನೊ ಇಲ್ಲವೊ ಅಷ್ಟರಲ್ಲಿ ಅವನ ಒಂದು ರೆಕ್ಕೆ ಭುಜದಿಂದ ಜಾರಿ ಹೋಗಲು ಅವನೂ ಕೆಳಗೆ ಬಿದ್ದು ಸತ್ತ. ಇವನ ಹೆಂಡರು ಮಕ್ಕಳಿಗೆ ಜಾಮಸಾಹೇಬರು ಕೊಟ ಚಿಕ್ಕ ಭೂಮಿಯನ್ನು ಅವನ ವಂಶಜರು ಇಂದಿಗೂ ಉಪಭೋಗಿಸುತ್ತಾರೆ.

ಮೂರನೆಯ ನಟ ಮಾತ್ರ ಶೇಬಾ ಎಂಬ ಊರಿನಲ್ಲಿ ಸುರಕ್ಷಿತವಾಗಿ ಇಳಿದ. ಆತ ಅಲ್ಲಿಯ ಪಟೇಲನಿಗೆ ಜಾಮಸಾಹೇಬರ ಪತ್ರವನ್ನು ಕೊಟ್ಟ. ಅಷ್ಟರಲ್ಲಿ ಕುದುರೆ ಸವಾರರೂ ಅಲ್ಲಿಗ ಬಂದರು. ಪಟೇಲ ನಟನಿಗೆ ಊರನ್ನು ಒಪ್ಪಿಸಿ ಕೊಟ್ಟ. ಜಾಮಸಾಹೇಬರ ದರಬಾರಿನ ಕಾಗದ ಪತ್ರಗಳಲ್ಲಿ ಈ ಮಾತಿನ ಉಲ್ಲೇಖವಿದೆ. ಈ ಊರು ನಟನ ಶೇಬಾ ಎಂದು ಪ್ರಸಿದ್ಧವಿದೆ. ನಟ ವಂಶದ ಜನರು ಇನ್ನೂ ಈ ಜಹಾಗೀರನ್ನು ಅನು ಭವಿಸುತ್ತಿದ್ದಾರೆ.

ಮೇಲಿನ ಎರಡೂ ಉದಾಹರಣೆಗಳಿಂದ ಇಪ್ಪತ್ತನೆಯ ಶತಮಾನದ ವರೆಗೂ ಭಾರತದಲ್ಲಿ ಜನರು ಯಂತ್ರ ಸಹಾಯವಿಲ್ಲದೆ ಅಂತರಿಕ್ಷ ದಲ್ಲಿ ಮೂವತ್ತು ಮೂವತ್ತು ಮೈಲು ದೂರದ ವರೆಗೂ ಹಾರುತ್ತಿದ್ದರು ಎಂದು ತಿಳಿಯುತ್ತದೆ. ಈ ವಿಷಯದಲ್ಲಿ ಸಂಶೋಧನೆ ನಡೆಸಿ ಶೇಬಾ ಮತ್ತು ಬಿಯಾನಾ ಊರುಗಳ ನಟವಂಶಜರ ಸಂಪರ್ಕ ಬೆಳೆಸಿಕೊಂಡಲ್ಲಿ ಯಂತ್ರಗಳ ಸಹಾಯವಿಲ್ಲದೆ ಹಾರುವ ವಿದ್ಯೆ ಬೆಳಕಿಗೆ ಬ ಬಹುದಾದ ಸಂಭವವಿದೆ. ಹಾಗಾದಲ್ಲಿ ನೆಲದ ಮೇಲೆ ಮನುಷ್ಯನಿಗೆ ಅಲ್ಪ ಬೆಲೆಯ ಸೈಕಲಿನಂತ ವಾಹನ ಸಿಕ್ಕಿರುವಂತೆ ಅಂತರಿಕ್ಷ ಪ್ರಯಾಣ ಕ್ಕಾಗಿ ಸುಲಭ ಬೆಲೆಯ ಸಾಧನವೊಂದು ದೊರೆತೀತು.

ನಿಮಗೆ ಇದು ಗೊತ್ತೇ?

ಬೆಳ್ಳಿ ಬಂಗಾರದ ನಾಣ್ಯಗಳ ಕಾಲವೀಗ ಮುಗಿದಿದೆ. ಯುದ್ಧಾನಂತರ ಕರನ್ಸಿ ನೋಟುಗಳಿಗೆ ಮಹತ್ವ ಬಂದಿದೆ. ಭಾರತದಲ್ಲಿ ಇತ್ತೀಚೆಗೆ ಕಾಗದದ ಕರನ್ಸಿಗಳು ಹೆಚ್ಚು ಪ್ರಚಾರದಲ್ಲಿವೆ. ನೋಟುಗಳನ್ನು ಮಾಡಲು ಹೆಚ್ಚು ವೆಚ್ಚವಾಗದು ಎಂದು ಅನಿಸಬಹುದಾದರೂ ವಸ್ತುಸ್ಥಿತಿ ಹಾಗಿಲ್ಲ.

ಒಂದು ಕೋಟಿ ರೂಪಾಯಿ ಕಿಮ್ಮತ್ತಿನ ಒಂದು ರೂಪಾಯಿ ನೋಟುಗಳನ್ನು ಮುದ್ರಿಸಲು ಸರಕಾರಕ್ಕೆ ರೂ. ೮೧,೦೦೦-೦೦, ಎರಡು ರೂಪಾಯಿಯ ನೋಟುಗಳನ್ನು ಮುದ್ರಿಸಲು ರೂ. ೪೫,೦೦೦-೦೦, ಐದು ರೂಪಾಯಿ ನೋಟುಗ ಳನ್ನು ಮುದ್ರಿಸಲು ರೂ ೧೫,೫೩೦-೦೦ ಹಾಗು ನೂರು ರೂಪಾಯಿಯ ನೋಟುಗ ಳನ್ನು ಮುದ್ರಿಸಲು ರೂ ೨,೫೪೩-೦೦. ವೆಚ್ಚ ಬರುವದು.

೧೯೫೯-೬೦ ಹಾಗು ೧೯೬೦-೬೧ ರ ವರ್ಷದಲ್ಲಿ ಭಾರತ ಸರಕಾರವು ಕರನ್ಸಿ ನೋಟುಗಳನ್ನು ಮುದ್ರಿಸುವದಕ್ಕಾಗಿ ರೂ. ೧,೮೫,೮೫,೦೦೦ ಹಾಗು ರೂ. ೨,೩೮,೪೧,೦೦೦ ವೆಚ್ಚ ಮಾಡಿದೆ.

ಅದರಂತೆ ಹೊಸ ನಾಣ್ಯಗಳನ್ನು ತಯಾರಿಸುವ (mint) ವೆಚ್ಚ ಹೀಗಿದೆ. ೨೫ ನಯೆ ಪೈಸೆಯ ೧೦ ಲಕ್ಷ ನಾಣ್ಯಗಳನ್ನು ತಯಾರಿಸಲು ರೂ. ೭೯೧೯೦-೦೦ ೫ ನಯೆ ಪೈಸೆಯ ನಾಣ್ಯಗಳಿಗೆ ರೂ. ೩೪೩೬೦-೦೦ ಹಾಗು ೧ ನಯೆಪೈಸೆಯ ನಾಣ್ಯಗಳಿಗೆ ರೂ ೧೯೯೯೦-೦೦ ವೆಚ್ಚ ಬರುವದು.

—ಕೃ. ನಂ. ಅ.

ಇಬ್ನೆ ಬತೂತಾ: ಭಾರತ ಯಾತ್ರೆ



ಮುಹಮ್ಮದ ಶಾಹ ತುಗಲಕ್ ವಿದೇಶೀಯ ರಲ್ಲಿ ತುಂಬ ಸ್ನೇಹಾದರಗಳನ್ನುಳ್ಳವನಾಗಿದ್ದಾನೆ. ತನ್ನ ರಾಜ್ಯದಲ್ಲಿ ಕಾಲಿಡುವ ಪ್ರತಿಯೊಬ್ಬ ವಿದೇಶೀಯ ಪ್ರವಾಸಿಯ ಸಕಲ ವೃತ್ತಾಂತವೂ ಅಧಿಕಾರಿಗಳಿಂದ ಅವನಿಗೆ ಸಿಗುತ್ತದೆ. ಮುಹಮ್ಮದ ಶಾಹ ವಿದೇಶಿಯರಿಗೆ ಅಮೂಲ್ಯ ಕಾಣಿಕೆಗಳನ್ನೂ ದೊಡ್ಡದೊಡ್ಡ ಅಧಿಕಾರ ಪದಗಳನ್ನೂ ದಯಪಾಲಿಸುತ್ತಾನೆ

ವಿದೇಶೀಯರು ಮುಹಮ್ಮದ ಶಾಹನಿಗೆ ಕೊಡುವ ಕಾಣಿಕೆಗಳು ಧೂರ್ತ ವ್ಯಾಪಾರಿಗಳಿಗೆ ಧನ ಪ್ರಾಪ್ತಿಯ ಒಂದು ಅತಿ ಉತ್ತಮವಾದ, ಅತಿ ಸುಲಭವಾದ ಹಾದಿಯನ್ನು ತೆರೆದು ಕೊಟ್ಟಿವೆ. ರಾಜಧಾನಿಗೆ ಹೋಗುವ ವಿದೇಶೀ ಯಾತ್ರಿಕರಿಗೆ ಸಿಂಧ ಮತ್ತು ಹಿಂದುಸ್ತಾನದ ವ್ಯಾಪಾರಿಗಳು ಸುಲ್ತಾನನಿಗೆ ಮೆಚ್ಚಿಕೆಯಾಗುವಂಥ ವಸ್ತುಗಳನ್ನು ಸಾಲರೂಪವಾಗಿ ಕೊಡುತ್ತಾರೆ. ತನಗರ್ಪಿಸಲ್ಪಡುವ ಕಾಣಿಕೆಗಳಿಗೆ ಬದಲಾಗಿ ಮುಹಮ್ಮದ ಶಾಹ ಅವಕ್ಕಿಂತಲೂ ಬೆಲೆ ಬಾಳುವ ವಸ್ತುಗಳನ್ನು ಇನಾಮಾಗಿ ಕೊಡುತ್ತಾನೆ. ಆಗ ಈ ವ್ಯಾಪಾರಿಗಳು ವಿದೇಶೀ ಯಾತ್ರಿಕನಿಂದ ತಾವಿತ್ತ ಸಾಲವನ್ನು ಮನವಾರೆ ಬಡ್ಡಿಸಹಿತ ವಸೂಲು ಮಾಡಿಕೊಳ್ಳುತ್ತಾರೆ. ನಾನು ಸಹ ಸುಲ್ತಾನನಿಗೆ ಕಾಣಿಕೆ ಕೊಡಲು ಸಿಂಧದ ತಕರೀಸನ ಒಬ್ಬ ವ್ಯಾಪಾರಿಯಿಂದ ೩೦ ಕುದುರೆಗಳನ್ನೂ ಬಾಣಗಳನ್ನು ಹೇರಿಕೊಂಡ ಒಂದು ಒಂಟೆಯನ್ನೂ ಸಾಲವಾಗಿ ಪಡೆದು ಕೊಂಡಿದ್ದೆ.

ಮುಲ್ತಾನದಲ್ಲಿ ನಮ್ಮ ಸ್ವಾಗತಕ್ಕಾಗಿ ಬಂದಿದ್ದ ಸುಲ್ತಾನನ ಹಾಜಿಬ ಶಮಸುದೀನ ಬೂಶಜಿ ಮತ್ತು ಮಲಿಕ ಮೊಹಮ್ಮದ ಹರವಿ ಕೊತವಾಲರು ನಮಗೊಂದು ಮಾತು ಹೇಳಿದರು. ಯಾವ ಖುರಾಸಾನಿ (ಭಾರತಕ್ಕೆ ಬರುವ ಪ್ರತಿಯೊಬ್ಬ ವಿದೇಶೀಯನನ್ನೂ ಈ ಹೆಸರಿನಿಂದಲೇ ಕರೆಯುತ್ತಾರೆ.) ಯು ಇನ್ನು ಮುಂದೆ ಹಿಂದುಸ್ತಾನದಲ್ಲಿಯೆ ಕಾಯಮ್ಮಾಗಿ ವಾಸಿಸಲು ಒಪ್ಪುವುದಿಲ್ಲವೊ ಅಲ್ಲಿಯ ವರೆಗೆ ಆತ ಭಾರತ

ಐತಿಹಾಸಿಕ ಗ್ರಂಥಗಳಲ್ಲಿ ಇಬ್ನೆ ಬತೂತಾ ಎಂದು ಪ್ರಸಿದ್ಧನಾಗಿರುವ ತಾಂಜಿಯರ್‌ನ ನಿವಾಸಿ ಶಮುಸುದ್ದೀನನು ಇಪ್ಪತ್ತುನಾಲ್ಕು ವರ್ಷಗಳ ಕಾಲ ಭಾರತ ಮತ್ತು ಚೀನಗಳಲ್ಲಿ ಪ್ರವಾಸ ಮಾಡಿದನು. ಇವನ ಪ್ರವಾಸ ವೃತ್ತಾಂತವನ್ನು ಮೊರಕೊ ಸುಲ್ತಾನನ ಅದೇಶದಂತೆ ಪ್ರಸಿದ್ಧ ಇತಿಹಾಸಕಾರ ಮುಹಮ್ಮದ ಇಬ್ನೆ ಜುಜಎ ಅಲ್ ಕಲಬಿ ಬಹು ಸುಂದರವಾಗಿ ಬರೆದಿಟ್ಟಿದ್ದಾನೆ.

ಇಬ್ನೆ ಬತೂತಾ ೧೩೩೩, ಸೆಪ್ಟೆಂಬರ್ ೧೨ ರಂದು ಪಂಜಾಬದಲ್ಲಿ ಕಾಲಿರಿಸಿದ. ಅಲ್ಲಿಂದ ಮುಂದೆ ಆತ ದಿಲ್ಲಿಯ ಬಾದಶಾಹನ ದರಬಾರಕ್ಕೆ ಬಂದ. ಭಾರತದ ಅಂದಿನ ರಾಜ್ಯಕಾರಭಾರ, ಜನ ಜೀವನ ಇತ್ಯಾದಿಗಳ ಬಗ್ಗೆ ಆತ ತನ್ನ ಅನುಭವಗಳನ್ನು ಬರೆದಿದ್ದಾನೆ.

ಇಲ್ಲಿ ಇತಿಹಾಸದಲ್ಲಿ ಹುಚ್ಚನೆಂದು ಹೆಸರು ಪಡೆದಿರುವ ಮುಹಮ್ಮದ ತಗಲಕನ ಬಗ್ಗೆ ಆತ ಹೇಳಿರುವುದನ್ನು ಆತ ಹೇಳಿದಂತೆಯೆ (ಸಂಗ್ರಹಿಸಿ) ಕೊಡಲಾಗಿದೆ.

ದಲ್ಲಿ ಪ್ರವೇಶಿಸಲಾರ ಎಂದು ಖುಂದ ಆಲಮ (ಜಗತ್ತಿನ ಒಡೆಯ) ನ ಆಜ್ಞೆಯಿದೆ ಎಂದವರು ತಿಳಿಸಿದರು. ಈ ಮಾತು ಕೇಳಿದಾಗ ನಮ್ಮ ಪ್ರಯಾಣಿಕ ತಂಡದಲ್ಲಿದ್ದ ಕೆಲವರು ಬಂದ ಹಾದಿಗೆ ಸುಂಕವಿಲ್ಲವೆಂದುಕೊಂಡು ತಿರುಗಿ ಹೋಗಿಬಿಟ್ಟರು. ಆದರೆ ನಾನು ನನ್ನ ಇತರ ಕೆಲ ಸಂಗಡಿಗರೊಡನೆ ಕಾಜಿಗಳೆದುರಿನಲ್ಲಿ ಹಿಂದುಸ್ತಾನದಲ್ಲಿಯೆ ವಾಸಿಸುವುದಾಗಿ ಬರೆದು ಕೊಟ್ಟೆ.

ನಾವು ದಿಲ್ಲಿಯನ್ನು ಮುಟ್ಟಿದೆವು. ನಿಜವಾಗಿ

ದಿಲ್ಲಿ, ಸೀರೀ, ತುಗಲಕಾಬಾದ ಮತ್ತು ಜಹಾ ಪನಾಹ ಎಂಬ ನಾಲ್ಕು ಪಟ್ಟಣಗಳು ಕೂ ದಿಲ್ಲಿಯೆಂಬ ಮಹಾನಗರವಾಗಿದೆ. ಸದ್ಯ ಸುಲ್ತಾನ ಮುಹಮ್ಮದ ಶಾಹ ಜಹಾಂಪನಾ ಎಂಬ ಪಟ್ಟಣವನ್ನೂ ಇವನ ತಂದೆ ಗಯಾಸ ದ್ದೀನನು ತುಗಲಕಾಬಾದನ್ನೂ ಕಟ್ಟಿಸಿದರ ಗಯಾಸುದ್ದಿನ ತುಗಲಕ ಕರೌನಾ ಜಾತಿ ಒಂದು ದರಿದ್ರ ತುರ್ಕಿ ಕುಟುಂಬದಲ್ಲಿ ಹುಟ್ಟಿ ನಾದರೂ ಧೀರಯೋದ್ಧನೂ ಸರಳ ಮನುಷ್ಯನ ಆಗಿದ್ದ. ಸಿಂಧದ ಒಬ್ಬ ವ್ಯಾಪಾರಿಯ ಕುದು ಗಳನ್ನು ಕಾಯುತ್ತ ಕಾಯುತ್ತ ಒಂದು ದಿ ಭಾರತೀಯ ನಾಗರಿಕನಾಗಿ ಬಿಟ್ಟ.

ಭಾರತದ ಪ್ರದೇಶದ ಮೇಲೆ ದಾಳಿ ಮಾ ತ್ತಿದ್ದ ತಾರ್ತರಿಯ ಖುರೇಶರನ್ನು ಮೂ ತ್ತೊಂದು ಸಲ ಹಿಮ್ಮೆಟ್ಟಿಸುವುದರಲ್ಲಿ ಗಯ ಸುದ್ದೀನ ತೋರಿಸಿದ ಪರಾಕ್ರಮವನ್ನು ಕಂ ದಿಲ್ಲಿಯ ಖಿಲಜಿ ಸುಲ್ತಾನರು ಅವನಿಗೆ "ಮ ಕುಲ ಗಾಜಿ" ಎಂಬ ಬಿರುದುಕೊಟ್ಟರು.

ಕುತುಬುದ್ದೀನ ಖಿಲಜಿಯನ್ನು ಮೋಸದಿಂ ಕೊಲೆಮಾಡಿ ಖುಸರೋ ಖಾನ ಸುಲ್ತಾ ನಾಗಲು ಗಯಾಸುದ್ದೀನನು ಖುಸರೋನ ಮೇ ಸೇಡು ತೀರಿಸಿಕೊಳ್ಳ ಬಯಸಿ ಬುದ್ಧಿ-ಪರಾಕ್ರ ಗಳ ಬಲದಿಂದ ಖುಸರೋನನ್ನು ಸೋಲಿ ದಿಲ್ಲಿಯ ಸುಲ್ತಾನನಾದ.

ದುರ್ಭಾಗ್ಯದಿಂದ ಈತ ಪಟ್ಟವನ್ನೇರಿದೊಡ ಈತನ ಮಹತ್ವಾಕಾಂಕ್ಷಿ ಮಗ ಜೌನಹನು ಸ್ವ ಬಾದಶಹನಾಗಬೇಕೆಂಬ ಆಶೆಯಿಂದ ಕ ಸ್ಥಾನವನ್ನು ಹೂಡತೊಡಗಿದ. ಆದರೆ ಈತ ಮೊದಲನೆಯ ಬಂಡಾಯ ವಿಫಲವಾಯಿತ ಈತನನ್ನು ತಿಲಂಗದ ಸುಬೇದಾರನೆಂದು ಕಳ ಲಾಯಿತು. ಅಲ್ಲಿಗೆ ಹೋದೊಡನೆ ಜೌನ ಗಯಾಸುದ್ದೀನ ಸತ್ತು ಹೋದನೆಂಬ ಸು ಯನ್ನು ಹಬ್ಬಿಸಿದ. ಈ ಸುದ್ದಿ ಕೇಳಿ ತ ಸಂಗಡ ದಿಲ್ಲಿಯಿಂದ ಬಂದಿದ್ದ ಅಮೀರರು ಗನುಕೂಲರಾಗಬಹುದೆಂದು ಈತ ಬಾವಿಸಿ

ಆದರೆ ಅವರು ಈ ಸುದ್ದಿ ಕೇಳಿದೊಡನೆಯೆ ತಾವು ಸ್ವತಂತ್ರರೆಂದು ಸಾರಿ ಜೌನಹನ ಪ್ರಾಣಕ್ಕೇ ಗಂಡಾಂತರಕಾರಿಯಾದರು. ಬಲು ಕಷ್ಟದಿಂದ ಜೌನಹ ದಿಲ್ಲಿಗೆ ಓಡಿಬಂದು ತಂದೆಯ ಆಶ್ರಯ ಕೋರಿದ.

ಗಯಾಸುದ್ದೀನನಿಗೆ ಮಗನ ಮೇಲಣ ಮೋಹ ಎಷ್ಟಿತ್ತೆಂದರೆ ಆತ ಮಗನ ವಿದ್ರೋಹವನ್ನು ಅರಿತರಿತೂ ಅದನ್ನು ಅಸಡ್ಡೆ ಮಾಡಿದ. ಉಳಿದ ಬಂಡುಗಾರರು ಬಂಗಾಲಕ್ಕೆ ಓಡಿ ಹೋಗಲು ಗಯಾಸುದ್ದೀನ ಅಲ್ಲಿಗೆ ಹೋಗಿ ಅವರನ್ನು ಕತ್ತಿಕ್ಕಿ ದಿಲ್ಲಿಗೆ ತಿರುಗಿ ಹೊರಟ.

ಅಷ್ಟರಲ್ಲಿ ಇತ್ತ ಜೌನಹ ಮತ್ತೊಮ್ಮೆ ಕಾರಸ್ಥಾನದ ಜಾಲವನ್ನು ಹರಡಿದ್ದ. ಅದರ ಪರಿಣಾಮವಾಗಿ ಬಂಗಾಲದಿಂದ ಹೊರಟಿದ್ದ ಗಯಾಸದ್ದೀನ ದಿಲ್ಲಿಯನ್ನು ಮುಟ್ಟಲೇ ಇಲ್ಲ. ರಾಜಧಾನಿಗೆ ಸಮೀಪದ ಅಫಗಾನಪುರದಲ್ಲಿ ಆತನ ಇಚ್ಛಾನುಸಾರವಾಗಿಯೆ ಆತನ ಸ್ವಾಗತಕ್ಕಾಗಿ ಕಟ್ಟಿದ ಕಾಷ್ಠ ಮಹಲಿನಲ್ಲಿ ಆತ ಅಸು ನೀಗಿದ. ಮೂರೇ ಮೂರು ದಿನಗಳಲ್ಲಿ ಕಟ್ಟಿಗೆಯ ಕಂಬಗಳ ಮೇಲೆ ಕಟ್ಟಿದ ಈ ಸ್ವಾಗತ ಭವನವು ಕಟ್ಟಡಾಧಿಕಾರಿ ಮಲಿಕಜಾದಾ ಅಹಮದನ ಮಹಾತಂತ್ರವಾಗಿತ್ತು. ಈತ ಮುಂದೆ ಮುಹಮ್ಮದ ಶಾಹ (ಜೌನಹ)ನ ವಜೀರನಾದ. ಈ ಕಟ್ಟಡದ ಒಂದು ಬದಿಯಿಂದ ಆನೆಗಳು ನಡೆದು ಹೋದರೆ ಇಡೀ ಕಟ್ಟಡ ಕುಸಿದು ಬೀಳುವಂತೆ ಈತ ಅದನ್ನು ಕೌಶಲ್ಯದಿಂದ ಕಟ್ಟಿದ್ದ.

ಈ ಸ್ವಾಗತ ಭವನದಲ್ಲಿ ತಂಗಿ ಭೋಜನಾನಂತರ ಗಯಾಸುದ್ದೀನ ಕುಳಿತಿದ್ದಾಗ ರಾಜಕುಮಾರ ಜೌನಹನು ಆನೆಯ ಪ್ರದರ್ಶನ ನಡೆಯಲು ಆಜ್ಞೆ ಬೇಕೆಂದು ಕೇಳಿದ ಆನೆಗಳು ಬಂದೊಡನೆ ಭೀಕರ ಸಪ್ಪಳದೊಂದಿಗೆ ಇಡೀ ಕಟ್ಟಡ ಕುಸಿದು ಬಿತ್ತು. ಸುಲ್ತಾನನ ಶವವನ್ನು ಹೊರತೆಗೆದಾಗ ಅದರಡಿಯಲ್ಲಿ ಜೌನಹನ ಜೀವಂತ ದೇಹ ಸಿಕ್ಕಿತು. ಸಾಯುವಾಗಲೂ ತಂದೆ ಈ ಕೃತಘ್ನ ಮಗನ ಜೀವನವನ್ನುಳಿಸಿದ್ದ. ಜೌನಹ ಮುಹಮ್ಮದಶಾಹನೆಂದು ಹಿಂದುಸ್ತಾನದ ಬಾದಶಾಹನಾದ.

ಈ ಮುಹಮ್ಮದ ಶಾಹನ ವ್ಯಕ್ತಿತ್ವ ಅಪೂರ್ವವಾಗಿದ್ದಂತೆ ವಿಚಿತ್ರವೂ ಆಗಿದೆ. ಈ ಕ್ಷಣದಲ್ಲಿ ಅತ್ಯಂತ ಉದಾರ ಹಸ್ತದಿಂದ ಆತ ಒರ್ವ ಕಂಗಾಲನನ್ನು ಕುಬೇರ ಪದವಿಗೇರಿಸಿದರೆ ಮರುಕ್ಷಣದಲ್ಲಿ ಯಾವನಾದರೂ ನಿರಪರಾಧಿಯ ಅಮಾನುಷ ಕೊಲೆಯಿಂದ ದಿಲ್ಲಿ ವಾಸಿಗಳ ಹೃದಯವನ್ನು ನಡುಗಿಸಿ ಬಿಡುತ್ತಿದ್ದ. ಒಂದೆಡೆಗೆ ಅವನ ಶೌರ್ಯ, ನ್ಯಾಯಪ್ರಿಯತೆ, ಧಾರ್ಮಿಕತೆ ಮತ್ತು ಔದಾರ್ಯದ ಡಂಗುರ ಹೊಡೆಯುತ್ತಿದ್ದರೆ ಇನ್ನೊಂದೆಡೆ ಅವನ ಕ್ರೌರ್ಯ, ದುಷ್ಕೃತ್ಯಗಳ ತಾಂಡವ ನಡೆಯುತ್ತಿತ್ತು.

ಬಾದಶಾಹನ ದರಬಾರು ಸಾಮಾನ್ಯವಾಗಿ ಅಸ್ರ ನಮಾಜಿನ ನಂತರ ಸೇರುತ್ತದೆ. ಸುಲ್ತಾನನು ಸಿಂಹಾಸನದಲ್ಲಿ ಹಿಂದೆ, ಎಡಕ್ಕೆ ಮತ್ತು ಬಲಕ್ಕೆ ಲೋಡುಗಳನ್ನಿಟ್ಟುಕೊಂಡು ವೀರಾಸನದಲ್ಲಿ ಕುಳಿತಿರುತ್ತಾನೆ. ಅವನೆದುರಿನಲ್ಲಿ ವಜೀರ ನಿಂತಿರುತ್ತಾನೆ. ಅವನ ಹಿಂದೆ ಸಚಿವ ಮತ್ತು ಅವನ ಹಿಂದೆ ಹಾಜಿಬರ ಸರದಾರ ತನ್ನ ಸಹಕಾರಿಗಳೊಂದಿಗೆ ನಿಂತಿರುತ್ತಾರೆ. ಅವರ ಹಿಂದೆ ನೂರು ನಕೀಬರು ಸಾಲಾಗಿ ನಿಂತಿರುತ್ತಾರೆ. ಸುಲ್ತಾನ ಕುಳಿತೊಡನೆ ಹಾಜಿಬರೂ ನಕೀಬರೂ "ಬಿಸ್ಮಿಲ್ಲಾಹ" ಎಂದು ಘೋಷಿಸುತ್ತಾರೆ. ಖಡ್ಗ-ಢಾಲುಗಳನ್ನೂ ಧನುರ್ಬಾಣಗಳನ್ನೂ ಧರಿಸಿದ ನೂರು ನೂರು ಸೈನಿಕರು ಬಾದಶಾಹನ ಎಡಬಲಗಳಲ್ಲಿ ನಿಂತಿರುತ್ತಾರೆ. ದರಬಾರಿನ ಆ, ಈ ಬದಿಗಳಲ್ಲಿ ಕಾಜಿಗಳು, ಸುಲ್ತಾನನ ಸಂಬಂಧಿಕರು, ಗಣ್ಯವಕ್ತಿಗಳು, ಅಮೀರರು, ವಿದೇಶೀಯರೇ ಮೊದಲಾದವರು ನಿಂತಿರುತ್ತಾರೆ.

ದರಬಾರ ಆರಂಭವಾಗುವುದಕ್ಕೆ ಮುಂಚೆ ಮೂವತ್ತು, ಮೂವತ್ತು ಶ್ರೇಷ್ಠತಮ ಕುದುರೆಗಳ ಪಂಕ್ತಿಗಳು ಎಡ ಮತ್ತು ಬಲ ಪಾರ್ಶ್ವಗಳಲ್ಲಿ ಬಂದು ಸುಲ್ತಾನನಿಗೆ ಸಲಾಮು ಅರ್ಪ

ಸುತ್ತವೆ. ಆ ಮೇಲೆ ಐವತ್ತು ಆನೆಗಳು ಬಂದು ಸಲಾಮು ಮಾಡುತ್ತವೆ. ಆನೆಗಳು ಸಲಾಮು ಮಾಡುವಾಗ ಹಾಜಬರು ಉಚ್ಚ ಕಂಠದಿಂದ "ಬಿಸ್ಮಿಲ್ಲಾಹ" ಎಂದು ಕೂಗುತ್ತಾರೆ.

ದರಬಾರಿಗೆ ಬಂದಾತ ಹಾಜಬರ ಸ್ಥಾನದ ವರೆಗೆ ನಡೆದು ಹೋಗಿ ನಿಂತು ಅಲ್ಲಿಂದಲೇ ಸುಲ್ತಾನನಿಗೆ ಕುರ್ನಿಸಾತು ಮಾಡುತ್ತಾನೆ. ಆಗ ಹಾಜಬರು ಆ ವ್ಯಕ್ತಿಯ ಸ್ಥಾನಮಾನಕ್ಕನು ಗುಣವಾಗಿ ಏರು–ತಗ್ಗು ಧ್ವನಿಗಳಲ್ಲಿ "ಬಿಸ್ಮಿ-ಲ್ಲಾಹ" ಎನ್ನುತ್ತಾರೆ. ಕುರ್ನಿಸಾತ ಮಾಡುವವ ಹಿಂದುವಾಗಿದ್ದರೆ "ಹದ್‍ಕಲ್ಲಾಹ" (ಅಲ್ಲಾ ನಿನಗೆ ಮಾರ್ಗದರ್ಶನ ಮಾಡಲಿ) ಎನ್ನುತ್ತಾರೆ. ದರಬಾರಿಗಳ ಹಿಂದೆ ಸುಲ್ತಾನನ ಸೇವಕರು ಖಡ್ಗಧಾರಿಗಳಾಗಿ ನಿಂತಿರುತ್ತಾರೆ. ಇವರ ನಡುವಿನಿಂದ ಹಾಯ್ದು ಹೋಗುವುದು ಅಕ್ಷಮ್ಯ ಅಪರಾಧವಾಗಿದೆ.

ಈ ರಾಜ್ಯದ ಗುಪ್ತಚಾರರ ವಿಷಯ ನೆನಪಾದೊಡನೆ ನನ್ನ ಮೈಕೂದಲು ನೆಟ್ಟಗಾಗುತ್ತದೆ. ಹಿಂದುಸ್ತಾನಿ ಸುಲ್ತಾನರು ಈ ಗುಪ್ತಚಾರರ ಸಹಾಯದಿಂದ ರಾಜ್ಯದ ಮೂಲೆ ಮೂಲೆಯ ಸಮಾಚಾರವನ್ನು ತಿಳಿದುಕೊಳ್ಳುತ್ತಾರೆ. ಪ್ರತಿಯೊಬ್ಬ ವಜೀರ, ಅಮೀರ, ಅಧಿಕಾರಿ ಮುಂತಾದವರಿಗೆ ಬಾದಶಾಹ ಅನುಗ್ರಹವೆಂದು ಕೊಡುವ ದಾಸ ದಾಸಿಯರಿಗೆ ಸಂಚಾರ ಸ್ವಾತಂತ್ರ್ಯವಿದ್ದು ಅವರು ಬಾದಶಾಹನಿಗಾಗಿ ಗುಪ್ತಚಾರ ಕೆಲಸವನ್ನು ಮಾಡುತ್ತಾರೆ.

ಒಂದು ರೋಮಾಂಚಕಾರಿ ಘಟನೆ ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದುಳಿದಿದೆ. ಒಮ್ಮೆ ಒಬ್ಬ ಪ್ರಣಯಾತುರ ಅಮೀರ ಮಧ್ಯರಾತ್ರಿಯಲ್ಲಿ ತನ್ನ ಪತ್ನಿಯ ದೇಹಸುಖ ಬಯಸಿದ. ಆದರೆ ಅಂದೇಕೊ ಅವನ ಪತ್ನಿ ನಿರಾಕರಿಸಿದಳು. ಗಂಡನ ಆಗ್ರಹ ಬಲವಾಗಲು ಅವಳು ಸುಲ್ತಾನನ ಆಣೆಯನ್ನೂ ಹಾಕಿದಳು. ಕಾಮಾತುರನಾಗಿದ್ದ ಅಮೀರ ಅದನ್ನೂ ಲೆಕ್ಕಿಸಲಿಲ್ಲ. ಮರು

ದಿನ ಮುಂಜಾನೆ ಬಾದಶಾಹ ಅವನನ್ನು ಕರೆ[illegible] ರಾತ್ರಿಯ ಸಂಗತಿಯನ್ನೆಲ್ಲ ವಿವರಿಸಿ ಆ ಅಪರಾ[illegible]ಕ್ಕಾಗಿ ಅವನಿಗೆ ದೇಹಾಂತ ಶಿಕ್ಷೆ ವಿಧಿಸಿದ.

ನನಗೆ ಮುಹಮ್ಮದಶಾಹ ಅನೇಕ ಪದ[illegible] ಗಳನ್ನೂ ಅಧಿಕಾರಸ್ಥಾನಗಳನ್ನೂ ಆಸ್ತಿಯನ್[illegible] ದಯಪಾಲಿಸಿದ್ದ. ಆದರೆ ನಾನು ನನ್ನ ವಾ[illegible] ವ್ಯದ ಅವಧಿಯಲ್ಲಿ ನಾನಾ ಕಾರಣಗಳಿಗಾ[illegible] ವಿಪರೀತ ಸಾಲ ಮಾಡಿದ್ದೆ. ಬಾದಶಾಹ ಹ[illegible] ವಾರು ಸಲ ನನ್ನ ಸಾಲ ತೀರಿಸಲೆಂದು ಉದಾ[illegible] ಹಸ್ತದಿಂದ ಹಣವನ್ನೂ ಕೊಟ್ಟಿದ್ದ. ಒ[illegible] ಹೀಗೆಯೇ ನನ್ನ ಸಾಲ ತೀರಿಸುವ ಸಂದರ್ಭ[illegible] ಬಂದಿದ್ದಾಗ ಸಾಲವನ್ನು ತೀರಿಸುವ ಜೊತ[illegible] ಆತ ನನಗೆ ಗಂಭೀರವದನನಾಗಿ ಉಪದೇ[illegible] ಮಾಡಿದ. ಆತ "ನಿನಗೊಂದು ಸಲಹೆಯೀ[illegible]ತ್ತೇನೆ. ಎಂದೂ ಸಾಲ ಮಾಡಬೇಡ. [illegible] ವಿಷಯ ನನಗೆ ತಿಳಿಯುವ ಮೊದಲೇ ಸಾಲ[illegible]ರರು ನಿನ್ನನ್ನು ತೊಂದರೆಗೀಡುಮಾಡಬಹು[illegible] ನಾನು ಕೊಡುವಷ್ಟರಲ್ಲೆ ಖರ್ಚನ್ನು ತೂಗಿ[illegible] ನಮ್ಮ ಕೈಯನ್ನು ಕುತ್ತಿಗೆಗೆ ಕಟ್ಟಿಕೊಳ್ಳಬಾ[illegible] ಹಾಗೆಯೆ ಅದನ್ನು ಪೂರ್ಣ ಮುಕ್ತಮಾಡ[illegible] ಬಾರದು ಎಂದು ಅಲ್ಲಾನ ವಾಕ್ಯ[illegible] ತಿಂದುಂಡು ಸುಖವಾಗಿರು. ಆದರೆ ದುಂ[illegible] ವೆಚ್ಚಮಾಡಬೇಡ. ಯಾರು ದುಂದು ವೆ[illegible] ಮಾಡುವುದಿಲ್ಲವೊ, ಯಾರು ತೀರ ಕಂಜೂ[illegible]ಳಾಗಿರುವುದಿಲ್ಲವೊ ಅವರೇ ಅಂದರೆ ಇವೆರ[illegible] ನಡುವಿನ ಹಾದಿ ಹಿಡಿದವರೇ ಒಳ್ಳೆಯ ಗೃಹ[illegible]ರಾಗಿರುತ್ತಾರೆ." ಎಂದು ನನಗೆ ಉಪದೇ[illegible] ಮಾಡಿದ.

ನ್ಯಾಯಾನ್ಯಾಯಗಳ ವಿಚಾರದಲ್ಲಿ ಒಮ್ಮೊ[illegible] ಮುಹಮ್ಮದಶಾಹನಿಗೆ ಎಂಥ ಉತ್ಕಟೇಚ್ಛೆ [illegible] ದೇಳುತ್ತಿತೆಂದರೆ ಆಗ ಅವನ ವಿನಯಾದಿಗಳ[illegible] ಕಂಡು ಜನ ದಂಗಾಗಿ ಹೋಗುತ್ತಿದ್ದರು.

ಒಮ್ಮೆ ಪ್ರತಿಷ್ಠಿತ ಹಿಂದು ಒಬ್ಬ, ಸು[illegible]

ನನು ತನ್ನ ಬಂಧುವನ್ನು ಅನ್ಯಾಯವಾಗಿ ಕೊಲ್ಲಿಸಿದ್ದಾನೆಂದು ಆರೋಪ ಮಾಡಿದ. ಮುಹಮ್ಮದಶಾಹನ ಕಿವಿಗೆ ಈ ಮಾತು ಬಿದ್ದೊಡನೆಯೇ ಆತ ಆರೋಪಿಯಂತೆ ನಿಶ್ಶಸ್ತ್ರನಾಗಿ ಬರಿಗಾಲಿನಲ್ಲಿ ಕಾಜಿಯ ನ್ಯಾಯಾಸ್ಥಾನಕ್ಕೆ ಹೋದ. ಅಲ್ಲಿ ತನ್ನ ಮೇಲಿನ ಆರೋಪದ ವಿಚಾರವನ್ನು ಹೇಳಿದ. ಎಲ್ಲ ಸಂಗತಿ ಕೇಳಿಕೊಂಡ ಕಾಜಿ ಸುಲ್ತಾನನು ಅಪರಾಧಿಯೆಂದು ನಿರ್ಣಯಿಸಿ ಆತನು ಆ ಹಿಂದುವನ್ನು ಹೇಗಾದರೂ ಮಾಡಿ ಸಂತುಷ್ಟಗೊಳಿಸಬೇಕು ಎಂದು ವಿಧಿಸಿದ. ಸುಲ್ತಾನ ಅದನ್ನೊಪ್ಪಿಕೊಂಡ.

ಮಲಿಕ ಪುತ್ರನು ಸುಲ್ತಾನನು ತನ್ನನ್ನು ಅನ್ಯಾಯವಾಗಿ ಹೊಡೆದನೆಂದು ಆರೋಪಮಾಡಿದಾಗ ಕಾಜಿ "ಆ ಹುಡುಗನಿಗೆ ಸುಲ್ತಾನನು ದಂಡದ ಹಣ ತೆರಬೇಕು. ಹುಡುಗ ಅದನ್ನು ಸ್ವೀಕರಿಸದಿದ್ದರೆ ಅವನ ಕೈಯಿಂದ ಹೊಡೆತ ತಿನ್ನಬೇಕು" ಎಂದು ವಿಧಿಸಿದ.

ನಿರ್ಣಯವನ್ನು ಕೇಳಿಕೊಂಡು ದರಬಾರಕ್ಕೆ ಬಂದು ಮುಹಮ್ಮದಶಾಹ ಆ ಹುಡುಗನ ಕೈಗೆ ಬೆತ್ತವನ್ನಿತ್ತು "ಈ ಬೆತ್ತದಿಂದ ನಾನು ಹೊಡೆದಷ್ಟೆ ಏಟುಗಳನ್ನು ನನಗೆ ಹಾಕು" ಎಂದ. ಹುಡುಗ ಸುಲ್ತಾನನಿಗೆ ಇಪ್ಪತ್ತೊಂದು ಬೆತ್ತದೇಟುಗಳನ್ನು ಹಾಕಿದ.

ಪ್ರತಿ ಸೋಮವಾರ ಮತ್ತು ಗುರುವಾರ [illegible]ಯ ಅತ್ಯಾಚಾರಗಳ ಫಿರ್ಯಾದಿ ಕೇಳಿಕೊಂಡು ನ್ಯಾಯದಾನ ಮಾಡಲೆಂದು ಸುಲ್ತಾನನು ಬಹಿರಂಗ ದರಬಾರನ್ನು ಸೇರಿಸುತ್ತಿದ್ದ. ಈ ದರಬಾರಿನಲ್ಲಿ ಯಾರು ಬೇಕಾದರೂ ತಮ್ಮ ದೂರುಗಳನ್ನು ಅವನಿಗೆ ಮುಟ್ಟಿಸಬಹುದಿತ್ತು.

ಆದರೆ ಬೆಳಕಿನ ಹಿಂದೆಯೆ ಕತ್ತಲೆಯಿರುವಂತೆ ಈ ಉದಾರ ಬಾದಶಾಹನಲ್ಲಿ ಕ್ರೌರ್ಯವೂ ಅಷ್ಟೇ ಉತ್ಕಟ ಪ್ರಮಾಣದಲ್ಲಿತ್ತು. ಶುಕ್ರವಾರವನ್ನು ಬಿಟ್ಟು ಉಳಿದೆಲ್ಲ ದಿನಗಳಲ್ಲಿ ಆತ ಕೈದಿಗಳಿಗೆ ಚಿತ್ರಹಿಂಸೆ ಕೊಡುತ್ತಿದ್ದ, ಮರಣದಂಡನೆ ವಿಧಿಸುತ್ತಿದ್ದ.

ಒಮ್ಮೆ ತನ್ನ ಮಲತಾಯಿಯೊಬ್ಬಳ ಮೇಲೆ ವ್ಯಭಿಚಾರದ ಆರೋಪ ಹೊರಿಸಿ ಅವಳನ್ನು ನಡುಬೀದಿಯಲ್ಲಿ ನಿಲ್ಲಿಸಿ "ಅವಳನ್ನು ಕಲ್ಲು ಹೊಡೆದು ಸಾಯಿಸಿ" ಎಂದು ಜನರಿಗೆ ಅಪ್ಪಣೆ ಮಾಡಿದ. ಮರುವರ್ಷವೇ ಅವಳ ಮಗ ಮಸಲೂದಖಾನನ ಮೇಲೆ ಬಂಡಾಯದ ಆರೋಪ ಹೊರಿಸಿ ನಡುಪೇಟೆಯಲ್ಲಿ ಅವನ ಶಿರಚ್ಛೇದ ಮಾಡಿಸಿದ

ವಿರಕ್ತಿಯನ್ನು ಬಿಟ್ಟು ತಾನಿತ್ತ ಬಿರುದುಬಾವಲಿ ಮುಂತಾದವನ್ನು ಸ್ವೀಕರಿಸಲಿಲ್ಲ ಎಂಬ ಕಾರಣಕ್ಕಾಗಿ ಪವಿತ್ರಾತ್ಮನಾದ ಶೇಖ ಶಿಹಾಬುದ್ದೀನನ ಗಡ್ಡವನ್ನು ದರಬಾರಿನಲ್ಲಿ ಎಲ್ಲರ ಸಮ್ಮುಖದಲ್ಲಿ ಕೀಳಿಸಿದ. ಈ ಹೀನ ಕಾರ್ಯ ಮಾಡಲು ಒಪ್ಪದ ಜಿಯಾಉದ್ದೀನ ಸಿಮನಾನಿಯ ಗಡ್ಡವನ್ನೂ ಕೀಳಿಸಿದ.

ಕ್ಷುಲ್ಲಕ ಕಾರಣಗಳಿಗಾಗಿ ಆತ ನಡೆಸಿದ ಕ್ರೂರ ಹತ್ಯೆಗಳ ವಿಚಾರವನ್ನು ಬೇಕಷ್ಟು ಹೇಳಬಹುದು. ಶೇಖಶಿಹಾಬುದ್ದೀನ ಬಂಧಿತನಾದಾಗ ಅವನ ಭೆಟ್ಟಿಗೆ ಹೋಗುತ್ತಿದ್ದವರಲ್ಲಿ ನಾನೂ ಒಬ್ಬನಾಗಿದ್ದೆ ಎಂದು ಮುಹಮ್ಮದಶಾಹನಿಗೆ ತಿಳಿಯಲು ಆತ ದರಬಾರಿನಲ್ಲಿ ನನ್ನ ಮೇಲೆ ನಾಲ್ವರು ಗುಲಾಮರ ಪಹರೆಯಿರಬೇಕೆಂದು ವಿಧಿಸಿದ. ಹೀಗೆ ಗುಲಾಮರ ಪಹರೆಗೊಳಗಾದವನ ದಿನಗಳು ತುಂಬಿಬಂದವು ಎಂದೇ ನಂಬಿಗೆಯಿತ್ತು. ನನ್ನ ಮೇಲೆ ಶುಕ್ರವಾರ ಪಹರೆ ಕೂಡಿಸಲ್ಪಟ್ಟಿತು. ನಾನು ದೈವೀ ಪ್ರೇರಣೆಯಿಂದಲೊ ಎಂಬಂತೆ ಕುರಾನಿನಲ್ಲಿಯ "ನಮಗೆ ಭಗವಂತನೊಬ್ಬನೇ ಸಾಕು. ಆತನೇ ನಮ್ಮ ರಕ್ಷಕನು" ಎಂಬ ವಾಕ್ಯವನ್ನು ೩೩೦೦ ಸಲ ಜಪಿಸಿದೆ. ಆ ಮೇಲೆ ೫ ದಿನ ಉಪವಾಸ ಮಾಡಿ ಆ ೫ ದಿನಗಳಲ್ಲಿ ಪ್ರತಿ ದಿನವೂ ಕುರಾನನ್ನು ಪೂರ್ತಿಯಾಗಿ ಪಠನ ಮಾಡಿದೆ. ಆರನೆಯ ದಿನ ತುಸು ಆಹಾರ ಸೇವಿಸಿ ಮತ್ತೆನಾಲ್ಕು ದಿನ ಉಪವಾಸ ಮಾಡಿದೆ. ಶೇಖ ಶಿಹಾಬುದ್ದೀನನ ಕೊಲೆಯಾದ ಮೇಲೆ ಅಲ್ಲಾ ನನ್ನ ಪ್ರಾರ್ಥನೆಯನ್ನು ಕೇಳಿದ. ನನ್ನ ಮೇಲಿನ ಪಹರೆ ಹಿಂದೆಗೆಯಲ್ಪಟ್ಟಿತು.

ದಿಲ್ಲಿಯನ್ನು ತ್ಯಜಿಸಿ ದೌಲತಾಬಾದಿಗೆ ರಾಜಧಾನಿಯನ್ನು ಒಯ್ಯುವ ನಿರ್ಧಾರ ಮಾಡಿದ್ದು ಮಹಮ್ಮದಶಾಹನ ಜೀವನದಲ್ಲಿ ಒಂದು ಮಹಾ ಕಲಂಕವಾಗಿ ಖ್ಯಾತಿಪೆತ್ತಿದೆ. ಇಷ್ಟೊಂದು ದೊಡ್ಡ ನಗರದ ಅಪಾರ ಪ್ರಜೆಗಳ ಮೇಲಿನ ಈ ಅತ್ಯಾಚಾರಕ್ಕೆ ಸಂಭವಿಸಿದ ಕಾರಣ ಬಹು ಸಾಧಾರಣವಾದದ್ದು. ಸುಲ್ತಾನನ ಅತ್ಯಾಚಾರಿ ಶಾಸನದಿಂದ ಖತಿಗೊಂಡ ಕೆಲವರ ಉಪದ್ವ್ಯಾಪವೇ ಈ ಅತ್ಯಾಚಾರಕ್ಕೆ ಕಾರಣವಾಯಿತು.

ಈ ಜನ ರಾತ್ರಿ ಕಾಲದಲ್ಲಿ ಮೂಕ ಅರ್ಜಿಗಳನ್ನು ಬರೆದು ಮೊಹರಬಂದ ಕವರುಗಳಲ್ಲಿಟ್ಟು "ಸುಲ್ತಾನನ ಕೊರಳಾಣೆಯಾಗಿ ಮತ್ತೆ ಯಾರೂ ಇದನ್ನೋದ ಕೂಡದು" ಎಂದು ಮೇಲೆ ಬರೆದು ದರಬಾರಿನ ಭವನದಲ್ಲಿ ಚಲ್ಲುತ್ತಿದ್ದರು. ಇದರಲ್ಲಿನ ಅವಾಚ್ಯ ನುಡಿಗಳನ್ನು ಓದಿ ಓದಿ ಬಾದಶಾಹನ ಪಿತ್ತ ಕೆರಳಿತು. ಕೊನೆಗೆ ಅವನ ಕ್ಷೋಭೆ ಸ್ಫೋಟವಾಗಿ ಆತ ದಿಲ್ಲಿಯನ್ನು ನಿರ್ನಾಮ ಮಾಡಲು ನಿರ್ಧರಿಸಿದ. ದಶದಿಕ್ಕುಗಳಲ್ಲಿ ಅತ್ಯಾಚಾರ ಪಸರಿಸಿತು.

ದಿಲ್ಲಿಯಲ್ಲಿದ್ದ ಸಕಲರ ಮನೆಗಳನ್ನೂ ಖರೀದಿ ಮಾಡಿ ಅದರ ಹಣವನ್ನು ಅವರಿಗೆ ಕೊಟ್ಟು ಮುಹಮ್ಮದ ಶಾಹ ಮೂವತ್ತು ದಿನಗಳಲ್ಲಿ ಎಲ್ಲರೂ ದೌಲತಾಬಾದಿಗೆ ಹೊರಡಬೇಕು ಎಂದು ಕಟ್ಟಪ್ಪಣೆ ಮಾಡಿದ.

ನಿರುಪಾಯರಾದ ಜನ ಹೊರಟಿತು. ಆಮೇಲಿ ಮೂರು ದಿನಗಳ ನಂತರ ರಾಜಸೈನಿಕರು ರಾಜಧಾನಿಯಲ್ಲಿ ಯಾರಾದರೂ ಇದ್ದಾರೆಯೆ ಎಂದು ಶೋಧಿಸಿದಾಗ ಒಬ್ಬ ಕುರುಡ ಮತ್ತು ಹೆಳವ ಸಿಕ್ಕರು. ಆ ಕುರುಡನನ್ನು ಮದ್ದಿನಿಂದ ಹಾರಿಸಿ ಕೊಂದು ಆ ಹೆಳವನನ್ನು ದೌಲತಾಬಾದಿನ ವರೆಗೆ ನೆಲದ ಮೇಲೆಳೆಯುತ್ತ ಹೋಗಬೇಕು ಎಂದು ಬಾದಶಾಹ ಆಜ್ಞೆ ಮಾಡಿದ. ಹಾದಿಯಲ್ಲಿ ಹೆಳವನ ದೇಹ ತುಂಡುತುಂಡಾಗಿ ಕತ್ತರಿಸಿ ಹೋಗಿ ಅವನ ಕಾಲು ಮಾತ್ರ ದೌಲ[ತಾ]ಬಾದನ್ನು ಕಂಡಿತು.

ರಾಜಧಾನಿಗೆ ಸ್ಮಶಾನ ಶಾಂತಿಯನ್ನು ತಂದ[...]ಡ್ಡಿದ ಬಳಿಕ ಒಂದು ದಿನ ಬಾದಶಾಹ ತ[...] ಅರಮನೆಯ ಉಪ್ಪರಿಗೆಯ ಮೇಲೆ ನಿಂತು ಸಮ[...]ಧಾನದ ಉಸಿರೆಳೆದು "ಈಗ ನನ್ನ ಹೃದ[...] ಶಾಂತವಾಯಿತು" ಎಂದ.

ಮುಹಮ್ಮದ ಶಾಹನ ವಿರುದ್ಧ ಅನೇಕ ಬಂ[...]ಗಳೆದ್ದರೂ ಅವೆಲ್ಲವನ್ನೂ ಅವನು ಯಶ[...]ಯಾಗಿ ಕ್ರೂರತನದಿಂದ ಹತ್ತಿಕ್ಕಿದ. ಅ[...] ಸೋದರತ್ತೆಯ ಮಗ ಬಹಾ ಉದ್ದೀನ ಬಂಡ[...] ಸೋತು ಸೆರೆ ಸಿಕ್ಕಿದಾಗ ಮುಹಮ್ಮದಶಾ[...] ಅಪ್ಪಣೆಯಂತೆ ಅಂತಃಪುರದ ಸ್ತ್ರೀಯರು ಅ[...]ನನ್ನು ಅವಾಚ್ಯ ಶಬ್ದಗಳಿಂದ ಬಯ್ದು ಅ[...] ಮುಖದ ಮೇಲೆ ಉಗುಳಿದರು. ಆಮೇ[...] ಅವನ ಚರ್ಮ ಸುಲಿಸಿ ಅವನ ಮಾಂಸವನ್ನು ಅ[...]ಯೊಂದಿಗೆ ಬೇಯಿಸಿ ಅದನ್ನು ಅವನ ಹೆಂಡ[...] ಮಕ್ಕಳಿಗೆ ಕಳಿಸಿಕೊಡಲಾಯಿತು.

ದಿನಗಳು ಕಳೆದಂತೆ ನನ್ನಲ್ಲಿ ವೈರಾಗ್ಯಭಾ[...] ಮೂಡಿ ನಾನು ಶೇಖ ಇಮಾಮ ಕಮ[...]ಲುದ್ದೀನ ಅಬ್ದುಲ್ಲಾಹ ಗಾಜಿಯ ಶಿಷ್ಯನಾ[...] ಸತ್ಸಂಗದಲ್ಲಿರತೊಡಗಿದೆ. ಮುಹಮ್ಮದ ಶಾ[...] ನನ್ನನ್ನು ಕರೆಕಳಿಸಿ ಪುನಃ ದರಬಾರದವನಾ[...]ರಲು ಹೇಳಿದ. ನಾನೊಪ್ಪಲಿಲ್ಲ. ದರಬಾರದಿ[...] ಹೊರಗೆ ಬಂದ ಬಳಿಕ ನಾನು ೪೦ ದಿನಗ[...] ವರೆಗೆ ಉಪವಾಸ ಮಾಡಿದೆ.

ಉಪವಾಸ ಮುಗಿದ ಮೇಲೆ ಮುಹಮ್[...] ಶಾಹ ನನ್ನನ್ನು ಕರೆಸಿ ಬಹುಮಾನವಿತ್ತು "ನೀ[...] ನನ್ನ ರಾಯಭಾರಿಯಾಗಿ ಚೀನಕ್ಕೆ ಹೋಗ[...] ನೀನು ಪ್ರವಾಸಪ್ರಿಯನಾದ್ದರಿಂದ ನಿನಗೆ [...] ಕೆಲಸ ಒಪ್ಪಿಸಿದ್ದೇನೆ" ಎಂದ.

ನಾನು ಒಪ್ಪಿಕೊಂಡು ಚೀನಾ ಯಾತ್ರೆ[...] ಸಿದ್ಧತೆಯಲ್ಲಿ ತೊಡಗಿದೆ.



ಸುಂದರ ವನದ ಸುಂದರಿ

ಶಿವಾಜಿ ಶಂಕರ ಕಾರ್ಲೇಕರ

ಸುಂದರಿ, ಓ ಸುಂದರಿ, ಇಧರ್ ಆವೋ ಬೇಟಾ" ವೃದ್ಧ ಸಂನ್ಯಾಸಿಯ ಕರೆ ಕೇಳಿದೊಡನೆಯೆ ಸುಂದರಿ ಗಜಗತಿಯಿಂದ ನಡೆಯುತ್ತ ಅವನ ಬಳಿ ಬಂದಳು. ಸಂನ್ಯಾಸಿ ಅವಳ ಮಸ್ತಕದ ಮೇಲೆ ಕೈ ಆಡಿಸಿ ಅವಳಿಗೆ ತಿನಿಸು ಹಾಕುವುದರಲ್ಲಿ ಮಗ್ನನಾದ.

ಈ ಸುಂದರಿ ಎಂದರೆ ಯಾವಳೊ ರೂಪವತಿ ತರುಣಿಯಾಗಿರಲಿಲ್ಲ. ಅದೊಂದು ಹೆಣ್ಣು ಹುಲಿ; ಸಂನ್ಯಾಸಿಯ ಹೆಸರು ವಿಪಿನಚಂದ್ರ ಮಿತ್ರ ಎಂದಾಗಿತ್ತು.

ವಿಪಿನಬಾಬುಗಳ ಹುಟ್ಟಿದೂರು ಬಂಗಾಲದ ಖುಲನಾ. ತಂದೆ ರಾಸಬಿಹಾರಿ ಮಿತ್ರರಿಗೆ ಬಹು ಕಾಲದ ವರೆಗೆ ಮಕ್ಕಳಾಗದೆ ಕೊನೆಗೆ ಅವರ ಪ್ರದೀರ್ಘ ಪ್ರಯತ್ನಗಳಿಗೆ ಮೆಚ್ಚಿಯೊ ಎಂಬಂತೆ ದೇವರು ಅವರಿಗೊಂದು ಪುತ್ರರತ್ನವನ್ನಿತ್ತ.

ಹುಡುಗ ವಿಪಿನ ಚಿಕ್ಕಂದಿನಿಂದಲೂ ಶಾಂತ ಸ್ವಭಾವದವ. ಸದಾ ಗೂಢ ವಿಚಾರದಲ್ಲಿ ತೊಡಗಿರುತ್ತಿದ್ದನಾತ. ಸಸ್ಯಶಾಮಲವಾದ ಬಂಗಾಲದಲ್ಲಿ ವನಶ್ರೀ ಮತ್ತು ಸರೋವರಗಳು ವಿಪುಲವಾಗಿವೆ. ವಿಧಾತನು ಕೊಟ್ಟಿರುವ ಈ



ರಮ್ಯ ವನಶ್ರೀಯ ಶೋಭೆಯನ್ನು ಅವಲೋಕಿಸುವುದರಲ್ಲಿ ವಿಪಿನ ಗಂಟೆಗಟ್ಟಳೆ ಮಗ್ನನಾಗಿರುತ್ತಿದ್ದ. ಆಗ ಆತನಿಗೆ ಊಟ ನಿದ್ದೆಯ ಪರಿವೆಯೂ ಉಳಿಯುತ್ತಿದ್ದಿಲ್ಲ.

ವಿಪಿನ ಮ್ಯಾಟ್ರಿಕ್‍ನಲ್ಲಿ ಓದುತ್ತಿದ್ದಾಗ ಒಂದು ದಿನ ನಿತ್ಯದಂತೆ ಸರೋವರ ತೀರದಲ್ಲಿ ಸೃಷ್ಟಿಸೌಂದರ್ಯವನ್ನವಲೋಕಿಸುತ್ತಾ ಕೂತಿದ್ದ. ಇಷ್ಟರಲ್ಲಿ ಆರ್ತನಾದವೊಂದು ಆತನಿಗೆ ಕೇಳಿಸಿತು. ೧೫–೧೬ ವರ್ಷದ ಒಬ್ಬ ಹುಡುಗಿ ಸರೋವರದಲ್ಲಿ ಬಿದ್ದು ಮುಳುಗುತಿದ್ದಳು. ವಿಪಿನ ಕೂಡಲೆ ನೀರಿನಲ್ಲಿ ಹಾರಿ ಅವಳನ್ನು ಹೊರತೆಗೆದ. ದಂಡೆಗೆ ತಂದಾಗ ಹುಡುಗಿ ಮೂರ್ಛೆಹೋಗಿದ್ದಳು. ಅವಳನ್ನು ನೆಲದ ಮೇಲಿರಿಸಿ ಅವಳತ್ತ ನೋಡಿದ. ಎಂಥ ರೂಪ! ಸ್ತ್ರೀಯರ ಸ್ಪರ್ಶವನ್ನರಿಯದ ವಿಪಿನನಿಗೆ ರೋಮಾಂಚನವಾಯಿತು. ಯುವತಿ ಸಾವಕಾಶ ಕಣ್ದೆರೆದು ನೋಡಿದಳು. ಎದ್ದು ಕೂತಳು. ಕೃತಜ್ಞತೆಯಿಂದ ವಿಪಿನನ ಕಾಲುಗಳ ಮೇಲೆ ತಲೆಯಿಟ್ಟಳು. ತರುಣನೊಬ್ಬನು ಕುಮಾರಿಯೊಬ್ಬಳ ಪ್ರಾಣ ಉಳಿಸಿದರೆ ಆಕೆ ತನ್ನ ಸರ್ವಸ್ವವನ್ನೇ ಅವನಿಗರ್ಪಿಸುವ ರೂಢಿ ಬಂಗಾಲದಲ್ಲಿದೆ. ಆ ಮೇರೆಗೆ ಆ ಯುವತಿ—ಗಿರಿಬಾಲೆ—ಅವನ ಪಾದಕ್ಕೆ ಬಿದ್ದು, "ಸ್ವಾಮಿ, ನೀವೇ ನನ್ನನ್ನು ರಕ್ಷಿಸಿದಿರಿ. ನಾನು ನಿಮ್ಮವಳಾದೆ. ನನ್ನನ್ನು ಪರಿಗ್ರಹಿಸಿ ಕೃತಾರ್ಥಳನ್ನಾಗಿ ಮಾಡಿರೆ"ಂದು ಬೇಡಿಕೊಂಡಳು. ಆಗಲೇ ಮುಗ್ಧನಾಗಿದ್ದ ವಿಪಿನ ಅವಳನ್ನು ಎತ್ತಿ ಆಲಿಂಗಿಸಿ ದೀರ್ಘ ಚುಂಬನ ವಿತ್ತ.

ಅಂದಿನಿಂದ ಪ್ರತಿನಿತ್ಯ ಗಿರಿಬಾಲೆ ವಿಪಿನನನ್ನು ಕಾಣಲು ಕೆರೆ ದಂಡೆಗೆ ಬರತೊಡಗಿದಳು. ಸ್ನೇಹ ಬೆಳೆಯಿತು. ಆದರೆ ಗಿರಿಬಾಲೆ ಅಸ್ಪೃಶ್ಯಳು ಮತ್ತು ವಿಪಿನ ಉಚ್ಚ ವರ್ಣೀಯ ಬ್ರಾಹ್ಮಣ. ಇವರಿಬ್ಬರ ವಿವಾಹ ಹೇಗಾಗಬೇಕು? ವಿಪಿನನ ತಂದೆ ಧರ್ಮನಿಷ್ಠರಾದರಿಂದ ಈ ಲಗ್ನಕ್ಕೆ ಒಪ್ಪುವುದು ಸಾಧ್ಯವಿರಲಿಲ್ಲ. ಯಾರ ವಿರೋಧವನ್ನೂ ಲೆಕ್ಕಿಸದೆ ತಾನು ಇವಳನ್ನು ಲಗ್ನವಾಗುವುದಾ[gap]
ವಿಪಿನ ನಿಶ್ಚಯ ಮಾಡಿದ.

ಈ ವರೆಗೂ ಈ ಬಗ್ಗೆ ಬಿಹಾರಿಬಾಬುಗ[gap]
ಏನೂ ಅರಿಯದವರಾಗಿದ್ದರು. ಆದರೆ ಊ[gap]
ತುಂಬೆಲ್ಲ ಆಗಲೆ ಗುಜುಗುಜು ಎದ್ದಿತ್ತು[gap]
ಕೊನೆಗೆ ವಿಪಿನ ಒಬ್ಬ ಬಡ ಬ್ರಾಹ್ಮಣನಿಗೆ ಧ[gap]
ನೀಡಿ ಊರ ಹೊರಗಿನ ಒಂದು ಮಂದಿರದ[gap]
ತಮ್ಮ ವಿವಾಹ ಮುಗಿಸಿಕೊಂಡು ಬಿಟ್ಟ.

ವಿವಾಹಬದ್ಧರಾಗಿ ಇಬ್ಬರೂ ಮನೆಗೆ ಬಂ[gap]
ದಿವಾನಖಾನೆಯಲ್ಲಿ ಕೂತಿದ್ದ ಬಿಹಾರಿಬಾಬುಗ[gap]
ಪಾದಗಳನ್ನು ಮುಟ್ಟಿ ನಮಸ್ಕರಿಸಿದರು. ಏನ[gap]
ಕಲ್ಪನೆ ಇಲ್ಲದಿದ್ದ ತಂದೆ ಬಾಯ್ದೆರೆದುಕೊಂ[gap]
ನಿಂತರು. ಎಲ್ಲವನ್ನೂ ಕೇಳಿ ಬಿಹಾರಿಬಾ[gap]
ಎಚ್ಚರದಪ್ಪಿ ಬಿದ್ದರು. ಅವರು ಎಚ್ಚರಾದಾ[gap]
ಮಗನಿಗೆ ಬೈಗಳ ಸುರಿಮಳೆಯಾಯಿತು. ವಿ[gap]
ಓಟ್ಟೆನ್ನಲಿಲ್ಲ. ಗಿರಿಬಾಲೆ ಮಾತ್ರ ಕಣ್ಣೀರು ಸ[gap]
ಸಿದಳು. ಆದರೆ ಒಬ್ಬನೇ ಮಗ. ಮನೆ ಬಿ[gap]
ಹೊರಡೆಂದಾದರೂ ಹೇಗೆ ಹೇಳುವರು? ಆದ[gap]
ಲೋಕಾಪವಾದ ತಪ್ಪೀತೇ? ಕೆಲ ದಿನಗಳ[gap]
ಊರವರೆಲ್ಲ ಸೇರಿ ಬಿಹಾರಿಬಾಬುಗಳ ಮೇ[gap]
ಬಹಿಷ್ಕಾರ ಹಾಕಿದರು. ಎದೆಯೊಡೆದುಕೊಂ[gap]
ಬಿಹಾರಿಬಾಬುಗಳು ಹಾಸಿಗೆ ಹಿಡಿದರು.

ಗಿರಿಬಾಲೆಯ ಮನೆಯಲ್ಲಿ ಇದ್ದವರೆಂ[gap]
ಅವಳ ಅಜ್ಜ ಒಬ್ಬಳೇ. ಈ ವಿವಾಹದಿಂದಾ[gap]
ಅಸ್ಪೃಶ್ಯರೂ ಆ ಮುದುಕಿಯನ್ನು ಕಾಡತೊ[gap]
ಗಿದರು; ತಮ್ಮ ಜಾತಿಯ ಹುಡುಗಿ ಮೇಲ್ಜಾ[gap]
ಯವನನ್ನು ಮದುವೆಯಾದುದಕ್ಕೆ ತಾವು ಹೆ[gap]
ಪಡಬೇಕೆಂದು ಅವರಿಗೆ ಹೊಳೆಯಲಿಲ್ಲ. ಮುದ[gap]
ಬೇಸತ್ತು ತಾನೂ ವಿಪಿನನ ಆಶ್ರಯಕ್ಕೇ ಹೊ[gap]
ದಳು. ಬರಿಯ ಬಹಿಷ್ಕಾರ ಸಾಲದೆನಿಸಿ[gap]
ಕರ್ಮಾಂಧ ಬ್ರಾಹ್ಮಣರಿಗೆ. ಒಂದು ರಾ[gap]
ಮನೆಯಲ್ಲಿ ಎಲ್ಲರೂ ಮಲಗಿರುವಾಗ ಬಿಹಾ[gap]
ಬಾಬುಗಳ ಮನೆಗೆ ಬೆಂಕಿ ಇಡಲಾಯಿತು. ಜ್ವಾ[gap]
ಗಳು ಮುಗಿಲೇರತೊಡಗಿದವು. ವಿಪಿನ ಮ[gap]
ಗಿರಿಬಾಲೆ ಹೇಗೊ ಹೊರಬಿದ್ದರು. ಅವರ ಪ[gap]

ಗಳು ಸುಟ್ಟಿದ್ದವು. ಬಿಹಾರಿಬಾಬುಗಳೂ ಗಿರಿಬಾಲೆಯ ಅಜ್ಜಿಯೂ ಬೆಂದು ಹೋದರು.

ಭಗ್ನಹೃದಯಿಗಳಾಗಿ ಅವರಿಬ್ಬರೂ ಆ ಊರನ್ನೆ ಬಿಟ್ಟರು. ಒಮ್ಮೆ ಶ್ರೀಮಂತನೆಂದು ಮೆರೆದಿದ್ದ ವಿಪಿನ ಈಗ ಭಿಕಾರಿಯಾದ. ಇಷ್ಟೆಲ್ಲ ಅನಾಹುತಕ್ಕೆ ತಾನೇ ಕಾರಣಳೆಂದು ಬಗೆದು ಗಿರಿಬಾಲೆ ತಾಪ ಮಾಡಿಕೊಂಡಳು. ಜ್ವರ ಬಂತು. ನಡೆಯುವ ತ್ರಾಣ ಉಳಿಯಲಿಲ್ಲ. ಗರ್ಭಿಣಿಯಾದ ಅವಳೊಡನೆ ಹಾಗೂ ಹೀಗೂ ಕಾಶೀ ಪಟ್ಟಣಕ್ಕೆ ಬಂದು ವಿಪಿನ ಒಂದು ಧರ್ಮಶಾಲೆಯಲ್ಲಿ ಇಳಿದ. ಅಲ್ಲೇ ಪ್ರಸೂತಿವೇದನೆ ಆರಂಭವಾದಾಗ ಅವಳನ್ನು ದವಾಖಾನೆಗೆ ಒಯ್ದ. ಹೆಣ್ಣು ಕೂಸು ಹುಟ್ಟಿತು. ಆದರೆ ಮೊದಲೆ ಪ್ರಕೃತಿ ಕ್ಷೀಣವಾಗಿದ್ದ ಗಿರಿಬಾಲೆ ಮಗಳನ್ನು ವಿಪಿನನ ಉಡಿಯಲ್ಲಿಟ್ಟು ಕಣ್ಮುಚ್ಚಿದಳು.

ಅಂತ್ಯಸಂಸ್ಕಾರಗಳೆಲ್ಲ ಮುಗಿದ ಮೇಲೆ ಒಬ್ಬ ದಯಾಳು ಗೃಹಸ್ಥರು ವಿಪಿನ ಮತ್ತು ಅವನ ಕುವರಿಯನ್ನು ತಮ್ಮ ಮನೆಗೆ ಕರೆದೊಯ್ದರು. ಪ್ರೀತಿಯಿಂದ ಅವನ ಮಗಳಿಗೆ 'ಶರದಬಾಲಾ' ಎಂದು ಹೆಸರು ಇಟ್ಟರು ಮತ್ತು ಆಕೆಯ ಹಸರನ್ನು ಅವಳ ಕೈಯ ಮೇಲೆ ಹಚ್ಚೀ ಹಾಕಿಸಿದರು. ಶರದಬಾಲೆ ತದ್ರೂಪ ತಾಯಿಯಂತಿದ್ದಳು. ಅವಳನ್ನು ಕಂಡು ವಿಪಿನನಿಗೆ ತನ್ನ ಪತ್ನಿಯ ನೆನಪು ಮೇಲಿಂದ ಮೇಲೆ ಬರುತ್ತಿತ್ತು.

ಕೆಲದಿನಗಳ ನಂತರ ಶೋಕವೇಗ ಸ್ವಲ್ಪ ಇಳಿದ ಮೇಲೆ ವಿಪಿನ ಮಗಳೊಟ್ಟಿಗೆ ತೀರ್ಥಯಾತ್ರೆಗೆ ಹೊರಡುವ ವಿಚಾರ ಮಾಡಿ ಕಾಶಿಯಿಂದ ಅಲಹಾಬಾದಿಗೆ ಹೋದ. ಅಲ್ಲಿ ಧರ್ಮಶಾಲೆಯಲ್ಲಿ ಉಳಕೊಂಡ. ರಾತ್ರಿಯಾಗಿತ್ತು. ಇಬ್ಬರೂ ಮಲಗಿದರು. ಗಾಢ ನಿದ್ರೆ ಬಂತು. ಮರುದಿನ ಪ್ರಾತಃಕಾಲದಲ್ಲಿ ವಿಪಿನ ಎದ್ದು ಮಗ್ಗಲಿಗೆ ಹೊರಳಿ ನೋಡಿದರೆ ಮಗಳೇ ಇರಲಿಲ್ಲ. ದುಃಖಾವೇಗದಿಂದ ಹುಚ್ಚನಾಗಿ 'ಬಾಲಾ, ಬಾಲಾ' ಎಂದು ಕಿರುಚಿದ. ಜನ ಕೂಡಿದರು. ಎಷ್ಟು ಶೋಧಿಸಿದರೂ ವ್ಯರ್ಥವಾಯಿತು. ಹುಚ್ಚಾದ ವಿಪಿನ ಅಲೆಅಲೆಯುತ್ತ ಮತ್ತೆ ಬಂಗಾಲಕ್ಕೆ ಬಂದ. ಗಡ್ಡ ಜಡೆ ಬೆಳೆದಿದ್ದವು. ಸಂನ್ಯಾಸಿಯಾದನಾತ. ಒಂದು ದಿನ ಪೂರ್ವಬಂಗಾಲದ ದಂಡೆಗಿರುವ ಸುಂದರ ವನದತ್ತ ಪ್ರಯಾಣ ಬೆಳೆಸಿದ.

ಇತ್ತ ಶರದಬಾಲೆಯನ್ನು ಹೊತ್ತೊಯ್ದ ಕಳ್ಳ ದಿಲ್ಲಿಗೆ ಹೋದ. ಅಲ್ಲಿದ್ದ ಕಾರ್ಲೇಕರ ಸರ್ಕಸ್ಸಿಗೆ ಶರದಬಾಲೆಯೊಂದಿಗೆ ಬಂದು, "ಈಕೆ ನನ್ನ ಮಗಳಿದ್ದು ಇವಳ ತಾಯಿ ತೀರಿಕೊಂಡಿದಾಳೆ. ಇವಳನ್ನು ನೀವು ಸಾಕಿರಿ. ಮತ್ತು ನನಗೆ ೨೦೦ ರೂಪಾಯಿ ಕೊಡಿರಿ"ಎಂದ. ಮ್ಯಾನೇಜರ ಜೋಶಿಯವರಿಗೆ ಸಂಶಯ ಹುಟ್ಟಿತು. ಕೂಡಲೆ ಅವರು ಅವನನ್ನು ಪೋಲೀಸರ ಕೈಗೊಪ್ಪಿಸಿದರು. ಆತ ಎಲ್ಲ ಕಥೆಯನ್ನು ಹೇಳಿದ. ಪೋಲೀಸರು ಅಲಹಾಬಾದಿನಲ್ಲಿ ವಿಪಿನನ ಶೋಧ ಮಾಡಿದರು. ಆದರೆ ಆತನ ಪತ್ತೆ ಹತ್ತಲಿಲ್ಲ. ಆತ ಸಿಗುವವರೆಗೆ "ಹುಡುಗಿ ನಮ್ಮ ಹತ್ತಿರ ಇರಲಿ. ನಾವು ಸಾಕುವೆ"ವೆಂದು ಜೋಶಿಯವರು ಪೋಲೀಸರಿಗೆ ತಿಳಿಸಿದರು. ಅಧಿಕಾರಿಗಳೂ ಇದಕ್ಕೊಪ್ಪಿಕೊಂಡರು.

ಇತ್ತ ಸುಂದರವನವನ್ನು ಹೊಕ್ಕ ವಿಪಿನ ಅಡವಿಯಲ್ಲಿ ರಮ್ಯವಾದ ಒಂದು ಸ್ಥಳವನ್ನು ಹುಡುಕಿಕೊಂಡು ಅಲ್ಲಿ ಎಲೆ ಟೊಂಗೆಗಳಿಂದ ಒಂದು ಚಿಕ ಗುಡಿಸಲನ್ನು ಕಟ್ಟಿಕೊಂಡು ಇರತೊಡಗಿದ. ಹಲವು ವರ್ಷಗಳು ಕಳೆದವು. ಒಂದು ದಿನ ಒಂದು ಹುಲಿಯ ಮರಿ ಬಂದು ಇವನನ್ನು ನೆಕ್ಕತೊಡಗಿತು. ಮರಿ ಹೆಣ್ಣಾಗಿತ್ತು. ಮರಿಯನ್ನು ಕಂಡು ವಿಪಿನನ ಹೃದಯ ದ್ರವಿಸಿತು. ಆತ ಅದರ ಬೆನ್ನಮೇಲಿಂದ ಕೈಯಾಡಿಸಿದ. ಒಳಗೆ ಕರೆದೊಯ್ದ-ಇಷ್ಟರಲ್ಲಿ ವ್ಯಾಘ್ರ ಗರ್ಜನೆ ಕೇಳ ಬಂತು. ವಿಪಿನನ ಎದೆ ಝಲ್ಲೆಂದಿತು. ತನ್ನ ಮರಿಯನ್ನು ಹುಡುಕುತ್ತಾ ತಾಯಿ ಹುಲಿ ವಿಪಿನನ ಗುಡಿಸಲೊಳಗೆ ಬಂತು. ಆಗ ವಿಪಿನ ಮರಿಯನ್ನು ತೊಡೆಯಮೇಲಿರಿಸಿಕೊಂಡು

ಕೂತಿದ್ದ. ಸಹಸಾ ಹುಲಿ ಇಂಥ ಹೊತ್ತಿನಲ್ಲಿ ರೇಗಿ ಮೈಮೇಲೇರುವುದು. ಆದರೆ ಯಾಕೊ ಏನೊ ತಾಯಿ ಹುಲಿಯೂ ವಿಪಿನನ ಕಾಲನ್ನು ನೆಕ್ಕತೊಡಗಿತು. ವಿಪಿನ ಆಶ್ಚರ್ಯಗೊಂಡ. ಅಂದಿನಿಂದ ಅವೆರಡೂ ಹುಲಿಗಳು ಅವನಲ್ಲಿಯೆ ಇರತೊಡಗಿದವು. ವಿಪಿನ ಮರಿ ಹುಲಿಗೆ 'ಸುಂದರಿ' ಎಂದು ನಾಮಕರಣ ಮಾಡಿದ.

ತಾಯಿ ಹುಲಿ ಬೇಟೆಯಾಡಿ ಮಾಂಸವನ್ನು ತಂದು ಮರಿಗೆ ಕೊಡುತ್ತಿತ್ತು. ಬರಬರುತ್ತ ಸುಂದರಿಯೂ ದೊಡ್ಡದಾಗಿ ತಾನೂ ಬೇಟೆಯಾಡತೊಡಗಿತು. ಆದರೂ ವಿಪಿನನನ್ನು ಮೊದಲಿನಂತೆಯೇ ಪ್ರೀತಿಸುತ್ತಿತ್ತು.

ಮುಂದೆ ಒಂದು ದಿನ ತಾಯಿ ಹುಲಿ ಸತ್ತಿತು. ಸುಂದರಿಗೆ ಬಹಳ ದುಃಖವಾಯ್ತು. ತಾನೊಂದೇ ಬೇಟೆಗೆ ಹೋಗತೊಡಗಿತು. ಸುಂದರಿ ಒಂದು ದಿನ ಒಂದು ತರುಣ ಹುಲಿ–ಅದರ ಪ್ರಿಯಕರನನ್ನು ಕರೆದುಕೊಂಡು ಮನೆಗೆ ಬಂತು. ವಿಪಿನನನ್ನು ಕಂಡು ಗಂಡು ಹುಲಿ ಅಬ್ಬರಿಸಿತು. ಆಗ ಸುಂದರಿ ಗಂಡು ಹುಲಿಯ ಬಾಯಿ ನೆಕ್ಕಿ ಏನೊ ಸಂಜ್ಞೆ ಮಾಡಿತು. ತತ್ಕಾಲ ಗಂಡು ಹುಲಿ ತನ್ನ ಆರ್ಭಟವನ್ನು ಬಿಟ್ಟುಕೊಟ್ಟಿತು. ಅದೂ ಬಂದು ವಿಪಿನನ ಕಾಲು ನೆಕ್ಕತೊಡಗಿತು. ಇದು ಸುಂದರಿಯ ಗಂಡನಿರಬೇಕೆಂದರಿತು ವಿಪಿನ ನಸುನಕ್ಕ. ಇಬ್ಬರ ತಲೆಗಳ ಮೇಲೆ ಕೈ ಆಡಿಸಿದ ಅವನಿಗೆ ತನ್ನ ಮಗಳು ಶರದಬಾಲೆಯ ಜ್ಞಾಪಕವಾಗಿತ್ತು. ಅವಳು ಈಗ ಇದ್ದಿದ್ದರೆ ಹೀಗೇ ತಾನು ಅವಳನ್ನೂ ಅವಳ ಪತಿಯನ್ನೂ ಆಶೀರ್ವದಿಸುತ್ತಿದ್ದೆನಲ್ಲ ಎಂದುಕೊಂಡನು.

ಇತ್ತ ಜೋಶಿಯವರು ಶರದಬಾಲೆಯನ್ನು ಉತ್ತಮವಾಗಿ ಸಾಕಿದರು. ಅವಳ ಜಾತಿ ಯಾವುದೊ ಗೊತ್ತಿದ್ದಿಲ್ಲ. ಅವಳಿಗೆ ಮರಾಠಿಯಲ್ಲೇ ಶಿಕ್ಷಣ-ಕೊಡುವ ಏರ್ಪಾಡುಮಾಡಿದರು. ಜೊತೆಯೇ ಸರ್ಕಸ್ಸಿನ ಹಲವಾರು ಆಟಗಳನ್ನು ಕಲಿಸಿದರು.

೧೯೩೩ ರಲ್ಲಿ ಕಾರ್ಲೇಕರರ ಸರ್ಕಸ್ಸು ಬಂಗಾಲದ ಬಾರಿಸಾಲ ಎಂಬ ಊರಿಗೆ ಬಂತು. ಅಲ್ಲಿಂದ ಸುಂದರವನ ಬಲು ಸಮೀಪ. ಒಂದು ದಿನ ಕೆಲ ಬೇಟೆಗಾರರು ಸುಂದರವನದಲ್ಲಿ ಸುಂದರಿಯನ್ನು ಹಿಡಿದರು; ಸರ್ಕಸ್ಸಿಗೆ ತಂದರು. ಮ್ಯಾನೇಜರರು ಸುಂದರಿಯನ್ನು ಕೊಂಡರು.

ಆ ದಿನ ಸುಂದರಿ ಮರಳಿ ಮನೆಗೆ ಬಾರದ್ದರಿಂದ ವಿಪಿನ ಚಿಂತಾಕ್ರಾಂತನಾದ. ಗಂಡು ಹುಲಿ ಬಲವಾಗಿ ಚೀರುತ್ತಾ ಅಡವಿಯೆಲ್ಲ ಓಡಾಡತೊಡಗಿತು. ಮೂರು ದಿನ ಕಾಯ್ದರೂ ಸುಂದರಿ ಬರದಿರಲು ವಿಪಿನ ನಿರಾಶನಾಗಿ ಗಂಡು ಹುಲಿಯೊಂದಿಗೆ ಸುಂದರಿಯ ಶೋಧಾರ್ಥ ಹೊರಹೊರಟ. ವನ್ಯಪಶುಗಳ ಮೂಗು ಬಹಳ ಸೂಕ್ಷ್ಮವಾಗಿರುತ್ತವೆ. ಸುಂದರಿಯ ನಾತವನ್ನು ಹಿಡಿದು ಅದು ವಿಪಿನನೊಡನೆ ಬಾರಿಸಾಲಕ್ಕೆ ಬಂತು. ಅಲ್ಲಿ ಸರ್ಕಸ್ ಡೇರೆಯನ್ನು ಕಂಡ ವಿಪಿನ ಸುಂದರಿ ಇಲ್ಲಿಯೆ ಇರಬೇಕೆಂದು ಯೋಚಿಸಿ ಡೇರೆಯೊಳಗೆ ಹೋದ.

ಆಗ ಡೇರೆಯಲ್ಲಿ ಅಲ್ಲೋಲಕಲ್ಲೋಲವೆದ್ದಿತು. ಬಂದ ದಿನದಿಂದ ಸುಂದರಿ ಅನ್ನ ನೀರನ್ನೇ ಮುಟ್ಟುತ್ತಿದ್ದಿಲ್ಲ. ಸಾಧು ಮಾಡಲೆಂದು ಸುಂದರಿಯನ್ನು ರಿಂಗ್ ಮಾಸ್ಟರ್ ಮೋಹಿತೆಯವರು ರಿಂಗಿಗೆ ತಂದಿದ್ದರು. ಆದರೆ ಏನು ಮಾಡಿದರೂ ಅದು ಇವರತ್ತ ಗಮನ ಕೊಡುತ್ತಿದ್ದಿಲ್ಲ. ಕಾಲುಗಳಿಂದ ಹೊಡೆದು ಕೆಲವರಿಗೆ ಅದು ಗಾಯಮಾಡಿತು. ಮೋಹಿತೆಯವರ ಕೈಗೂ ಗಾಯವಾಯಿತು. ಇಂಥ ತಲೆಗೆಟ್ಟ ಹಿಂಸ್ರ ಪಶುವನ್ನು ಜೀವಂತ ಬಿಟ್ಟು ಉಪಯೋಗವಿಲ್ಲೆಂದು ಅದನ್ನು ಕೊಲ್ಲಲು ಜೇಬಿನಿಂದ ಪಿಸ್ತೂಲು ಹೊರತೆಗೆದಿದ್ದರು. ಇಷ್ಟರಲ್ಲಿ 'ಠಹರೋ' ಎಂದು ಯಾರೊ ಕೂಗಿದರು. ಅವರು ತಿರುಗಿ ನೋಡಿದರು. ಒಬ್ಬ ಸಂನ್ಯಾಸಿ ಒಂದು ಹುಲಿಯನ್ನು ಹಿಡಿದುಕೊಂಡು ಅವರತ್ತ ಬರುತ್ತಿದ್ದ. ತನ್ನ ಪ್ರಿಯತಮೆಯನ್ನು ನೋಡುವುದೇ ತಡ ಗಂಡು ಹುಲಿ ಜಾಳಿಗೆಯನ್ನು

ಜಿಗಿದು ರಿಂಗಿನಲ್ಲಿ ಸುಂದರಿಯ ಹತ್ತಿರಹೋಗಿ ನಿಂತಿತು. ಸಂನ್ಯಾಸಿ ಮೋಹಿತೆಯವರಿಗೆ ಎಲ್ಲ ವನ್ನು ವಿವರಿಸಿ ಹೇಳಿದರು. ಮೋಹಿತೆಯವರು ವಿಪಿನಬಾಬುಗಳನ್ನು ಪ್ರೊ. ಶಂಕರರಾಯರ ಕಡೆಗೆ ಕರೆದೊಯ್ದರು. ಅವರ ವೃತ್ತಾಂತ ಕೇಳಿ ಶಂಕರರಾಯರು ಬೆರಗುಗೊಂಡರು. ವಿಪಿನ ಬಾಬುಗಳು ತಮ್ಮ ಮಗಳು ಕಳೆದುಹೋದ ಸುದ್ದಿ ಹೇಳಿದೊಡನೆಯೆ ಶಂಕರರಾಯರು ಶರದ ಬಾಲೆಯನ್ನು ಕರೆಸಿ 'ಇವಳೆ ನಿಮ್ಮ ಮಗಳೊ ಹೇಗೆ?' ಎಂದರು. ವಿಪಿನ ಬಾಬು ಗಳು ಅವಳ ಎಡಗೈ ನೋಡಿದರು. 'ಶರದ ಬಾಲೆ' ಎಂಬ ಮುದ್ರೆಯಿತ್ತು. ಕೂಡಲೆ ಅವರು 'ಬಾಲಾ' ಎಂದು ಕೂಗಿ ಅವಳನ್ನು ಎದೆಗವಚಿ ಕೊಂಡರು. ಪಿತೃಪುತ್ರಿಯರ ಆ ಮಿಲನವನ್ನು ಸಾನಂದಾಶ್ರುನಯನರಾಗಿ ಉಳಿದೆಲ್ಲರೂ ನೋಡುತ್ತಾನಿಂತರು.

ಶರದ ಬಾಲೆಯನ್ನೂ ಸುಂದರಿಯನ್ನೂ ತಾವು ಒಯ್ಯುವುದಾಗಿ ವಿಪಿನ ಬಾಬು ಹೇಳಿದಾಗ ೧೬ ವರ್ಷ ಮಗಳಂತೆ ಸಾಕಿದ ಜೋಶಿ ಮತ್ತು ಶಂಕರರಾಯರ ಕಂಠ ಬಿಗಿಯಿತು. ಅವಳು ಸುರೂಪಿ ಇರುವಂತೆ ಸುಗುಣಿಯೂ ಆಗಿದ್ದಳು. ವಿಪಿನ ಬಾಬೂಗಳೇ ಸರ್ಕಸ್‌ನಲ್ಲಿ ಉಳಿದು ತಮ್ಮ ಜ್ಞಾನವನ್ನು ಇತರರಿಗೆ ಕೊಡಬೇಕೆಂದು ಜೋಶಿ ಹಾಗೂ ಶಂಕರರಾಯರು ವಿಪಿನಬಾಬು ಗಳನ್ನು ಕೇಳಿಕೊಂಡರು. ತಾನೂ ಹಾಗೇ ಅಪೇ ಕ್ಷಿಸುವುದಾಗಿ ಶರದಬಾಲೆಯೂ ತಂದೆಗೆ ಹೇಳಿದ ಳು. ಎಲ್ಲರ ಆಗ್ರಹಕ್ಕೆ ವಿಪಿನಬಾಬು ಒಪ್ಪಿದರು.

ಒಂದು ದಿನ ಸರ್ಕಸ್ಸಿನ ಎಲ್ಲರನ್ನೂ ಒಂದು ಕಡೆ ಕರೆಸಿ ವಿಪಿನಬಾಬುಗಳಿಂದ ಅವರ ಕತೆ ಹೇಳಿಸಿದರು. ಕೇಳುತ್ತಿದ್ದಂತೆ ಎಲ್ಲರ ಕಣ್ಣು ಒದ್ದೆಯಾದವು ತನ್ನ ತಾಯಿಯ ಕಷ್ಟನಷ್ಟಗ ಳನ್ನು ಕೇಳುತ್ತಿದ್ದಂತೆ ಶರದಬಾಲೆಯ ಕಣ್ಣೀರು ಕಟ್ಟೆಯೊಡೆದು ಹರಿದವು. ಭಾಷಣದ ಕೊನೆಗೆ ವಿಪಿನಬಾಬೂ ಆವೇಶದಿಂದ ಎಲ್ಲರನ್ನೂ ಉದ್ದೇಶಿಸಿ ಹೇಳಿದರು: "ಈ ನನ್ನ ಶರದಬಾಲೆ ಒಬ್ಬ ಅಸ್ಪೃಶ್ಯಮಾತೆಯ ಉದರದಲ್ಲಿ ಜನಿಸಿ ದಳು. ಹೇಳಿ, ಇಂಥವಳನ್ನು ಮದುವೆಯಾಗಲು ನಿಮ್ಮಲ್ಲಿ ಯಾವನಾದರೂ ತರುಣನು ಸಿದ್ಧನಿರು ವನೆ?" ಈ ಆಹ್ವಾನವನ್ನು ಕೇಳಿದೊಡನೆ ಅಲ್ಲಿ ಶಾಂತತೆ ಹಬ್ಬಿತು. ಬಹಳ ಹೊತ್ತು ಯಾರೂ ಮುಂದೆ ಬರಲಿಲ್ಲ. ಕೊನೆಗೆ ತೇಜಃಪುಂಜನಾದ ಒಬ್ಬ ತರುಣ ಎದ್ದು ನಿಂತ, 'ನಾನು ಶರದ ಬಾಲೆಯನ್ನು ವರಿಸುವೆ!' ಎಂದ. ಅವನ ಶಬ್ದಗ ಳನ್ನು ಎಲ್ಲರೂ ಅಸಂಖ್ಯ ಕರತಾಡನಗಳಿಂದ ಸ್ವಾಗತಿಸಿದರು.

ಆತನ ಹೆಸರು ಅನಿಲ ಭಟ್ಟಾಚಾರ್ಯ. ಜಾತಿ ಯಲ್ಲಿ ಉಚ್ಚ ಬ್ರಾಹ್ಮಣ. ಅವನ ಊರು ಬಂಗಾಲದಲ್ಲಿ ಮದನಪುರವೆಂಬುದು. ಸರ್ಕಸ್ಸಿ ನಲ್ಲಾತ ಸೈಕಲ್ ಟ್ರಿಕ್ಕಿನ ಕೆಲಸ ಮಾಡುತ್ತಿದ್ದ.


ಒಂದು ಶುಭ ಮುಹೂರ್ತಕ್ಕೆ ಅವರ ಲಗ್ನ ವಾಯಿತು. ಈ ಲಗ್ನದಲ್ಲಿ ವಧುಪಿತೃ ವಿಪಿನ ಬಾಬು. ವರಪಿತೃ ಶಂಕರರಾಯರು.

ವಿವಾಹವಾದ ಮೇಲೆ ವಿಪಿನಬಾಬುಗಳು ಸರ್ಕಸ್ಸಿನಲ್ಲೇ ಉಳಿದರು. ಅವರ ಉಪದೇಶ ದಿಂದ ಸ್ಪೃಶ್ಯಾಸ್ಪೃಶ್ಯ ಭೇದವನ್ನೇ ಶಂಕರ ರಾಯರು ಕಂಪನಿಯಲ್ಲಿ ತೆಗೆದುಹಾಕಿದರು. ಇಷ್ಟೇ ಅಲ್ಲ; ಹಿಂದೂ-ಮುಸ್ಲಿಮ ಭೇದವನ್ನೂ ಇಟ್ಟುಕೊಳ್ಳಲಿಲ್ಲ. ಸ್ವತಃ ಶಂಕರರಾಯರು ಪ್ರತಿ ಗುರುವಾರ ಏಳು ಜನ ಫಕೀರರಿಗೆ ಮಿಷ್ಟಾನ್ನ ಭೋಜನ ಮಾಡಿಸುತ್ತಿದ್ದರು. "ಅಸ್ಪೃಶ್ಯತೆ ಮಾನವಜಾತಿಗೊಂದು ಕಲಂಕ" ಎಂಬ ವಿಷಯ ವನ್ನು ಕುರಿತು ವಿಪಿನ ಬಾಬುಗಳ ಭಾಷಣ ಗಳನ್ನು ಅನೇಕ ಕಡೆಗಳಲ್ಲಿ ಶಂಕರರಾಯರು ಏರ್ಪಡಿಸಿದ್ದರು.


೧೯೪೦ ರಲ್ಲಿ ಕಲಕತ್ತೆಯ ಹತ್ತಿರಿರುವ ಡಮ್ ಡಮ್‌ನಲ್ಲಿ ವಿಪಿನಬಾಬುಗಳು ಕಾಲವಾದರು. ಅವರ ಇಚ್ಛೆಯಂತೆ ಅದೇ ಊರ ಹತ್ತಿರ ಅವರ ಶವವನ್ನು ದಫನ ಮಾಡಲಾಯಿತು. *

"ಸರ್ಕಸಾಚ್ಯಾ ಜಗಾತ" ಎಂಬ ಪುಸ್ತಕದಿಂದ





ಅದನ್ನು ಸೈತಾನನ ಸಾಧನ ಎಂದು ಕರೆಯಲಾಗಿತ್ತು !



ಸೈಕಲ್ ಪುರಾಣ

ಆರ್. ಕೆ. ನಾಯಿ

ಒಂದು ಹಳ್ಳಿ ಪಟ್ಟಣಗಳೆರಡರಲ್ಲೂ ಸಾಮಾನ್ಯ ಜನರಿಗೆಲ್ಲ ಪ್ರಿಯವಾಗಿರುವ ವಾಹನವೆಂದರೆ ಸೈಕಲ್. ತನ್ನ ತೂಕದ ಹತ್ತುಪಟ್ಟು ಭಾರವನು ಹೊರಬಲ್ಲ ಈ ಹಗುರಾದ ವಾಹನದ ಬಳಕೆಯ ವೆಚ್ಚ ಮಧ್ಯಮ ವರ್ಗದವರಿಗೂ ಬಡವರಿಗೂ ತೂಗುವಂಥದಿದೆಯಾದ್ದರಿಂದಲೇ ಅದು ಇಂದಿನ ಜನಪ್ರಿಯತೆಯನ್ನು ಗಳಿಸಿದೆ. ಆದರೆ ಸೈಕಲ್‌ನ ಇಂದಿನ ರೂಪದ ಹಿಂದೆ ಮೂರು ಶತಮಾನಗಳ ಇತಿಹಾಸವಿದೆ, ಒಂದು ಶತಮಾನ ಕಾಲ ಸುಧಾರಣೆಗಳಿಗಾಗಿ ನಡೆಸಿದ ಸಾಧನೆ ಪ್ರಯತ್ನಗಳಿವೆ ಎಂದು ಬಹ್ವಂಶ ಜನ [illegible].

ಗಾಲಿ ಉರುಳಿದರೆ ಅದನ್ನು ಆಧರಿಸಿರುವ ತೊಟ್ಟಿಲು ಮುಂದೆ ಸಾಗುವುದೆಂಬ ಮಾತನ್ನು ಬಹು ಪುರಾತನ ಕಾಲದಿಂದಲೂ ಅರಿತಿದ್ದರೂ ಒಂದೇ ಸಾಲಿನಲ್ಲಿ ಎರಡು ಗಾಲಿಗಳನ್ನಿಟ್ಟು ಅದನ್ನು ವಾಹನದಂತೆ ಉಪಯೋಗಿಸುವುದನ್ನು ಕಂಡುಹಿಡಿದದ್ದು ಆಧುನಿಕ ಯುಗ. ೧೭ ನೇ ಮತ್ತು ೧೮ ನೇ ಶತಮಾನಗಳಲ್ಲಿ ಸೈಕಲ್ಲನ್ನು ನಿರ್ಮಿಸುವ ಹಲವು ಪ್ರಯತ್ನಗಳು ನಡೆದರೂ ಈ ಪ್ರಯತ್ನಗಳು ೧೯ ನೇ ಶತಮಾನದ ಆದಿ ಭಾಗದಲ್ಲೇ ಭರದಿಂದ ನಡೆದು ಯಶಸ್ವಿಯಾದವು. ಕುದುರೆಗಳನ್ನು ಸಾಕಲು ಸ್ಥಳ ಹಾಗೂ ವೆಚ್ಚ ಬೇಕು. ಅವೆರಡೂ ಇಲ್ಲದ ಜನರು ಕುದುರೆಯ

ಬದಲು ಇಂಥ ಒಂದು ಚಿಕ್ಕ ವಾಹನ ಯಂತ್ರ ದೊರೆತರೆ ಅದನ್ನು ಸ್ವಾಗತಿಸಲು ಸಿದ್ಧರಿದ್ದರು. ಇದನ್ನರಿತವರೆಲ್ಲರೂ ಈ ದಿಕ್ಕಿನಲ್ಲಿ ಯತ್ನಿಸ ತೊಡಗಿದರು. ಅದರ ಫಲವಾಗಿ ಮುಂದಿನ ಗಾಲಿ ಎತ್ತರವಾಗಿದ್ದ ಸೈಕಲ್ಲು, ಆಮೇಲೆ ಹಿಂದಿನ ಗಾಲಿ ಎತ್ತರವಾದ್ದ ಸೈಕಲ್ಲು ಹುಟ್ಟಿತು. ಆ ಮೇಲೆ ಎರಡೂ ಗಾಲಿ ಸಮಾನಾಕಾರದವಿರುವ ಸೈಕಲ್ ಬಂದವು. ಮುಂದೆ ಸರಪಣಿಯ ಹೊಸ ಯೋ-ಜನೆ ಬಂತು. ಆದರೆ ಆಗಲೂ ಗಾಲಿಗಳು ಕಬ್ಬಿಣದವೇ ಆಗಿರುತ್ತಿದ್ದವು. ಆಗ ಈ ವಾಹನ ಹೊರುವುದು ಬಲ ಕಷ್ಟವಾಗಿರುತ್ತಿತ್ತು. ಮುಂದೆ ರಬ್ಬರಿನ ಟಾಯರಿನ ಕಲ್ಪನೆ ಹುಟ್ಟಿತು. ಕೊನೆಗೆ ಸೈಕಲ್ ಇಂದಿನ ಸೈಕಲ್ ಆಯಿತು.

ಇಂದಿನ ಸೈಕಲ್ ಹುಟ್ಟಿದ್ದರಿಂದ ವಿಜ್ಞಾನ ವಿಶ್ವದಲ್ಲೂ ಅನೇಕ ಉಪಯುಕ್ತ ಯಂತ್ರಗಳು ನಿರ್ಮಾಣವಾದವು. ಅಲ್ಲದೆ ಸೈಕಲ್ ಯುರೋಪಿಯನ್ ರಾಷ್ಟ್ರಗಳ ರಸ್ತೆಗಳನ್ನೂ ಸುಧಾರಿಸಲು ಕಾರಣವಾಯಿತು. ಇಂದು ಸೈಕಲ್ ಸಾಮಾನ್ಯರ ಒಂದು ಉಪಯುಕ್ತ ವಸ್ತುವಾಗಿದೆ.

ಆದರೆ ನೂರೇ ವರ್ಷಗಳ ಹಿಂದೆ ಇಂದಿನ ಅತಿ ಸುಧಾರಿಸಿದ ಅಮೇರಿಕೆಯಲ್ಲಿ ಇದು ಮೊಟ್ಟ ಮೊದಲು ಬಂದಾಗ ಇದನ್ನು ಪ್ರತಿಭಟಿಸದ ಅಧಿಕಾರಿ ಇರಲಿಲ್ಲ, ಸಜ್ಜನನಿರಲಿಲ್ಲ, ಪತ್ರಿಕೆ ಇರಲಿಲ್ಲ ಡಾಕ್ಟರನಿರಲಿಲ್ಲ.

ಧರ್ಮಗುರುಗಳು ಹೇಳಿದರು: ಇದು ರಾಕ್ಷಸಿ. ಮಾನವನ ಜೀವನವನ್ನು ಧ್ವಂಸ ಮಾಡಲು ಬಂದಿದೆ.

ಪೋಲೀಸ ಅಧಿಕಾರಿಯೊಬ್ಬನೆಂದ: ಅಪಘಾತಕ್ಕೆ ಮಿತಿ ಇಲ್ಲ. ನನ್ನ ಕೈಯಲ್ಲಿ ರಾಜಸತ್ತೆ ಇದ್ದಿದ್ದರೆ ಇಂಥ ಹಿಂಸಕ ವಾಹನವನ್ನು ಕಾನೂನಿನಿಂದ ತಡೆಗಟ್ಟುತ್ತಿದ್ದೆ.

ಡಾಕ್ಟರನೊಬ್ಬನೆಂದ: ಇದೊಂದು ಪೀಡೆ. ಅತಿಯಾಗಿ ಉಪಯೋಗಿಸುವವರನ್ನು ಅಂಗವಿಕಲರನ್ನಾಗಿ ಮಾಡುತ್ತದೆ.

ಪತ್ರಿಕೆಗಳೆಂದವು: ಇದರಿಂದ ಮನುಷ್ಯರು ರಸ್ತೆಯಲ್ಲಿ ನಡೆದಾಡುವುದೇ ಕಷ್ಟವಾಗುವುದ[...] ಭಯಾನಕ ವಾಹನವಿದು. ಇದು ದೈವೀ ಶಾಪ[...]

ಹೀಗೆ ಹೇಳಿದ ಪತ್ರಿಕೆಗಳೆಲ್ಲ ಅಮೇರಿಕೆಯ[...] ಗಣ್ಯ ಪತ್ರಿಕೆಗಳು. ಹೀಗೆ ಹೇಳಿದ ಜನರೆ[...] ಅಮೇರಿಕೆಯ ಗಣ್ಯ ನಾಗರಿಕರೇ.

ಆದರೆ ಮುಂದೆ ಮೂವತ್ತೇ ವರ್ಷಗಳ[...] ಜನರು ಈ ದೈವೀಶಾಪದೊಂದಿಗೆ ಹೊಂ[...] ಕೊಂಡರು. ಇಂದಿಗೆ ೨೫ ವರ್ಷಗಳ ಹಿಂ[...] ಅಮೇರಿಕೆಯಲ್ಲಿ ಇದಕ್ಕೆ ಬಲು ಮಹತ್ವ[...] ಪ್ರೀತಿಯ ಸ್ಥಾನ ಲಭಿಸಿತು. ೧೯೩೫ ರಿಂದ ೪೧[...] ವರೆಗೆ ಅಮೇರಿಕೆ ಪ್ರತಿ ವರ್ಷ ಸರಾಸ[...] ೧೦,೦೦,೦೦೦ ಸೈಕಲ್‌ಗಳನ್ನು ತಯಾರಿಸಿತ[...] ೧೯೪೦ ರಲ್ಲಿ ಅಮೇರಿಕೆಯ ಎಂಟು ಪ್ರಮು[...] ಕಾರಖಾನೆಗಳು ೧೫,೦೦,೦೦೦ ಸೈಕಲ್‌ಗಳನ[...] ತಯಾರಿಸಿದವು. ೪೧ ರಲ್ಲಿ ೧೮,೦೦,೦೦೦ ದಷ್ಟನ[...] ತಯಾರಿಸಿದವು. ೪೨ ರಲ್ಲಿ ಸರಕಾರವು [...] ವಾಹನಗಳ ತಯಾರಿಕೆಯನ್ನು ಸ್ವಲ್ಪ ತಡೆದ[...] ರಿಂದ ತಯಾರಿಕೆಯ ಪ್ರಮಾಣ ತುಸು ಕಡಿ[...] ಯಾದರೂ ೧೯೬೦ ರಿಂದೀಚೆಗೆ ನೂರು ವರ್ಷ [...] ಹಿಂದೆ ಸೈಕಲ್ಲನ್ನು ಕಂಡು ಹೆದರಿದ್ದ ಅಮೇ[...] ಕೆಯೇ ಪ್ರತಿವರ್ಷ ಸರಾಸರಿ ೧೩೦,೦೦,೦೦[...] ಸೈಕಲ್‌ಗಳನ್ನು ತಯಾರಿಸುತ್ತಿದೆ. ಭಾರತ ಕೂ[...] ಸೈಕಲ್‌ಗಳನ್ನು ಈಗ ತಯಾರಿಸುತ್ತಿದ್ದು ೧೯೬[...] ರಲ್ಲಿ ೧೦,೬೭,೬೦೦ ಸೈಕಲ್ಲುಗಳು ತಯಾರಾದವ[...]

ಇಂದಿನ ಆಕಾರದ ಮೊಟ್ಟಮೊದಲಿನ ಸೈ[...] ಲನ್ನು ಜರ್ಮನಿಯಲ್ಲಿ ೧೮೧೮ ರಲ್ಲಿ ಬ್ಯಾರನ[...] ವಾನ್ ಡ್ರೇಯಿಸ್ ಎಂಬ ಸಭ್ಯಗೃಹಸ್ಥನು ನಿರ್ಮಿ[...] ದನು. ಇದು ಇಂದಿನ ಸೈಕಲ್‌ಗಳ ಮೂ[...] ಪುರುಷ! ಆಗ ಆತ ತನ್ನ ಕಾಲಿನಿಂದ ನೆಲ ಒ[...] ಮುಂದೂಡಿಸಿಕೊಂಡು ತನ್ನ ಸೈಕಲ್ ಸಾಗಿಸ[...] ತ್ತಿದ್ದ. ಇದರ ಹೆಸರು ಡ್ರೆಸ್ಯಾನ್! ಇದರ ಅನ[...] ಕರಣೆ ಫ್ರಾನ್ಸ್, ಇಂಗ್ಲಂಡ್‌ಗಳಲ್ಲಿ ಆಯಿತ[...] ೧೮೩೪ ರಲ್ಲಿ ಒಬ್ಬ ಕಮ್ಮಾರ ಹಿಂದಿನಗಾಲಿಯನ[...] ತಿರುಗಿಸುವಂತೆ ಕಾಲಿನಿಂದ ಒತ್ತಲಿಕ್ಕೆ ಬರು[...] ಕೋಲನ್ನು ಜೋಡಿಸಿದ ಸೈಕಲ್ ತಯಾರಿಸಿದ[...]

ಸೈಕಲ್ ಸವಾರ ನೆಲದಿಂದ ಕಾಲನ್ನು ಮೇಲೆತ್ತಿಕೊಂಡು ವಾಹನ ಸಾಗಿಸಿದ ಮೊದಲ ಹೆಜ್ಜೆ ಇದು. ಮುಂದೆ ಡೊಂಬರಾಟವನ್ನೇ ಮಾಡಿ ಸೈಕಲ್ ಹತ್ತ ಬೇಕಾದ ವೆಲೊಸಿಪೇಡ್ ಎಂಬ ಸೈಕಲ್ ಬಂತು. ಅಮೇರಿಕೆಯನ್ನು ಪ್ರವೇಶಿಸಿದ ಮೊದಲ ಸೈಕಲ್ ಇದೇ. ಇಸವಿ ೧೮೬೬ ರಲ್ಲಿ ವೆಲೊಸಿಪೇಡನ್ನು ನಿರ್ಮಿಸಿದಾತ ಸ್ವತಃ ಡೊಂಬನೇ ಇದ್ದ. ಆತನ ಹೆಸರು ನೆಡ್ ಹ್ಯಾನ್ಲನ್. ವೇಗವನ್ನು ಹೆಚ್ಚಿಸಲೆಂದು ಇದರ ಮುಂದಿನ ಗಾಲಿಯನ್ನು ದೊಡ್ಡದಾಗಿರಿಸಿದ್ದನೀತ. ಮುಂದೆ ಮೂರೇ ವರ್ಷದಲ್ಲಿ ಈ ವೆಲೊಸಿಪೇಡ್ ಸೈಕಲ್ ಎಷ್ಟು ಜನಪ್ರಿಯವಾಯಿತೆಂದರೆ ಪೀಯರ್ಸಲ್ ಎಂಬೊಬ್ಬಾತ ನ್ಯೂಯಾರ್ಕಿನಲ್ಲಿ ಸೈಕಲ್ ಕಲಿಸುವ ಒಂದು ಶಾಲೆ ತೆಗೆದು ಮೂರೇ ತಿಂಗಳಲ್ಲಿ ಮುನ್ನೂರು ಜನರಿಗೆ ಶಿಕ್ಷಣ ಕೊಟ್ಟ. ೪೫೦೦ ಡಾಲರ ಸಂಪಾದನೆ ಮಾಡಿದ. ಮೂರೇ ತಿಂಗಳಲ್ಲಿ ಅಂಥವೇ ಮತ್ತೆ ೫೦ ಶಾಲೆಗಳು ಪ್ರಾರಂಭವಾದವು. ಮತ್ತು ಸ್ವಲ್ಪ ಅವಧಿಯಲ್ಲೇ ನೂರಾರು ಉಕ್ಕಿನ ಗಾಲಿಗಳು ಕಲ್ಲು ದಾರಿಯ ಮೇಲೆ ಸಪ್ಪಳ ಮಾಡುತ್ತಾ ಓಡಾಡತೊಡಗಿದವು.

ಆಗ ಹಿರಿಯ ಪತ್ರಿಕೆಗಳು ವಿರೋಧಿಸಿದವು. ಕಿರಿಯವು ದನಿಗೂಡಿಸಿದವು. ಜನ ಕಿವಿಗೊಟ್ಟಿತು. ಎರಡೇ ವರ್ಷದಲ್ಲಿ ಮತ್ತೆ ಇವು ನೋಡಸಿಗದಂತಾದವು. ಆದರೂ ಇದಕ್ಕಿಂತ ಒಳ್ಳೇ ವಾಹನ ಬೇಕೆಂಬ ಹಂಬಲ ಮಾತ್ರ ಜನತೆಯಲ್ಲಿ ಉಳಿಯಿತು. ಇಂಗ್ಲಂಡ್ ಅಮೇರಿಕಗಳಲ್ಲಿ ಪ್ರಯತ್ನಗಳು ನಡೆದವು. ಹಲ್ಲಿನ ಚಕ್ರದ ಮೇಲೆ ತಿರುಗುವ ಸರಪಳಿಯ ಯೋಜನೆಯಾಯಿತು. ಗತಿ ಹೆಚ್ಚಲು ವಿರುದ್ಧ ದಿಕ್ಕಿನಲ್ಲಿ ತಿರುಗುವ ಗುಂಡುಗಳ (ಬಾಲ್ ಬೇರಿಂಗ್) ಯೋಜನೆಯಾಯಿತು. ಆಮೇಲೆ ಮುಂದಿನಗಾಲಿ ತೀರ ದೊಡ್ಡದು ಹಿಂದಿನದು ತೀರ ಸಣ್ಣದು ಇರುವ 'ದೊಡ್ಡಗಾಲಿಯ' ಸೈಕಲ್ ಬಂತು. ಇದರೊಟ್ಟಿಗೆ ಇದನ್ನು ಹೇಗೆ ಹತ್ತಬೇಕು, ಇದರಿಂದ ಹೇಗೆ ಬೀಳ (ಇಳಿಯ) ಬೇಕು ಇತ್ಯಾದಿ ಸೂಚನೆಗಳನ್ನು ಕೊಡುವ ಚಿಕ್ಕ ಪುಸ್ತಿಕೆಯನ್ನು ವ್ಯಾಪಾರಸ್ಥರು ಕೊಡುತ್ತಿದ್ದರು. ಮುಂದಿನ ಹೆಜ್ಜೆ ಗಾಲಿಗಳ ಅದಲಾಬದಲಿ. ಹಿಂದಿನ ಗಾಲಿ ಎತ್ತರವಾಗಿದ್ದಾಗ ಮನುಷ್ಯ ಹಿಂದೊರಗಿ ಕೂತು ಸೈಕಲ್ ನಡೆಸುತ್ತಿದ್ದ. ಕಡೆಗೆ ಎರಡೂ ಗಾಲಿ ಒಂದೇ ಅಳತೆಯವಾದವು. ಆಗ ಈ ವಾಹನ ಮಕ್ಕಳು, ಸ್ತ್ರೀಯರು ಪುರುಷರು ಯಾರೇ ಆಗಲಿ ಸಹಜವಾಗಿ ಉಪಯೋಗಿಸಬಲ್ಲ ಅಪಾಯವಿಲ್ಲದ ವಾಹನವಾಯಿತು. ಈ ಮೊದಲು ಕಮ್ಮಾರರ ಸಾಲೆಗಳಲ್ಲಿ ತಯಾರಾಗುತ್ತಿದ್ದ ಸೈಕಲ್‌ಗಳನ್ನು ಈಗ ಕಾರಖಾನೆಗಳು ತಯಾರಿಸತೊಡಗಿದವು.

ಸೈಕಲ್ ಹತ್ತಿದ ಪ್ರಥಮ ಅಮೇರಿಕನ್ ಮಹಿಳೆ ಡಬ್ಲ್ಯು. ಈ. ಸ್ಮಿತ್‌ಳು. ಈಕೆಯ ಗಂಡನೇ ಸೈಕಲ್ ತಯಾರಕನಿದ್ದ. ೧೮೮೮ ರಲ್ಲಿ ಈಕೆ ಅವನ ವಾಹನಗಳನ್ನು ಹತ್ತಿ ವಾಶಿಂಗ್ಟನ್ನಿನಲ್ಲಿ ಪೆನ್ಸಿಲ್ವೆನಿಯಾ ರಸ್ತೆಯಲ್ಲಿ ಹೋಗುತ್ತಿದ್ದಳು. ಇಂದು ಎಲ್ಲಿ ಬೇಕಾದರೂ ಕಾಣಸಿಗುವ ಇಂಥ ದೃಶ್ಯ ಅಂದು ಇದೊಂದೇ ಆಗಿತ್ತು. ಆದರೆ ಮುಂದೆ ಬೇಗನೆ ಅದೂ ತುಂಬ ಪ್ರಸಾರವಾಯಿತು. ಅಮೇರಿಕನ್ ಪುರುಷರು ಸ್ತ್ರೀಯರಿಗೂ ಈ ಸವಲತ್ತು ಕೊಟ್ಟು ಪ್ರಗತಿಪಥದಲ್ಲಿ ಸಮಾನ ಹಕ್ಕು ನೀಡಿದರು. ಆಗ ಸೈಕಲ್‌ಗಾಗಿ ಸ್ತ್ರೀಯರು ಪ್ಯಾಂಟ್ ತೊಡಲಾರಂಭಿಸಿದರು. ಮುಂದೆ ಪ್ಯಾಂಟ್ ತೊಡದಿದ್ದರೂ ನಡೆಸಬಹುದಾದ ಸೈಕಲ್‌ಗಳು ಬಂದರೂ ಸ್ತ್ರೀಯರ ಮೈಮೇಲೆ ಪ್ಯಾಂಟು ಮಾತ್ರ ಉಳಿಯಿತು. (ಭಾರತದಲ್ಲಿ ಸ್ತ್ರೀಯರ ಸೈಕಲ್ ತಯಾರಾಗಿಯೇ ಬಂದವಾದ್ದರಿಂದಲೇ ಸ್ತ್ರೀಯರು ಸೀರೆಯನ್ನು ಪ್ಯಾಂಟಿಗೆ ತಿರುಗಿಸಲಿಲ್ಲವೇನೋ.)

ಮಾನವನ ಜೀವನದಲ್ಲಿ ಈ ಚಕ್ರಗಳು ತಿರುಗಿ ಎಲ್ಲ ಅಂಗಗಳಲ್ಲೂ ಹೊಸತನ ತಂದವು. ಮುಂದೆ ಇಬ್ಬರು ಕೂಡುವ ಸೈಕಲ್ ಬಂದವು. ಪ್ರಿಯಕರ ಪ್ರೇಯಸಿಯರು ಹತ್ತಿದರು– ಪತಿ ಪತ್ನಿಯರಾ

ದರು—ಮನೆ ಮಾಡಿದರು. ಮುಂದೆ ಮಕ್ಕಳನ್ನೂ ನಾಯಿಗಳನ್ನೂ ಹೊರುವ ಸೈಕಲ್ ಕೂಡ ಬಂದವು. ೧೦ ಜನ ಹತ ಬಹುದಾದ ಸೈಕಲ್ ನಿರ್ಮಾಣವಾಯಿತು.

ತಾಸಿಗೆ ೨೦ ಮೈಲಿನ ವೇಗ ಒಮ್ಮೆ ಅತಿ ಎನಿಸಿತ್ತು. ವೇಗದ ಅತಿಕ್ರಮಣವಾಗಬಾರದೆಂದು ಕಾನೂನಿನ ನಿಯಂತ್ರಣವೂ ಇತ್ತು.

೧೦,೦೦,೦೦೦ ಜನ ಅಮೇರಿಕನ್ ಸೈಕಲ್ ಸವಾರರು ಒಂದುಗೂಡಿದರು. ಸಂಘಗಳು ನಿರ್ಮಾಣವಾದವು. ಇವರಿಂದಾಗಿ ರಸ್ತೆ ಸುಧಾರಿಸಿದವು. ಪೆಸಾಡೆನಾ ಮತ್ತು ಲಾಸ್ ಎಂಜೆಲ್ಸ್ ನಡುವೆ ಕಟ್ಟಿಗೆಯ ಮಾರ್ಗವನ್ನು ಕೇವಲ ಸೈಕಲ್‌ಸವಾರರಿಗಾಗಿ ಕಟಿಸಲಾಯಿತು. ಈ ಸಂಘಗಳು ಸೈಕಲ್ ಪಂದ್ಯಗಳನ್ನೇರ್ಪಡಿಸುತ್ತಿದ್ದವು. ಸೈಕಲ್ ಸಾಹಸಗಳ ಪ್ರದರ್ಶನಗಳು ನಡೆದವು.

ಹಿಂದೆ ಬೈದಿದ್ದ ಡಾಕ್ಟರರೆ ಇಂದಿನ ಸೈಕಲನ್ನು ವ್ಯಾಯಾಮದ ಒಂದು ಸಾಧನವೆಂದು ಕರೆದರು.

ಸೈಕಲ್ ಕಳ್ಳರ ಸಾಧನವಾದ ಉದಾಹರಣೆಗಳೂ ಇವೆ. ೧೮೯೦ ರಲ್ಲಿ ಕಳ್ಳರು ಕದ್ದು ತಪ್ಪಿಸಿಕೊಳ್ಳಲು ಸೈಕಲ್ ಹತ್ತಿ ಓಡಿಹೋದರಂತೆ; ಆದರೆ ಆಗ ಚಾರ್ಲಿ ಮರ್ಫಿ ಸೈಕಲ್—ತಾಸಿಗೆ ೬೦ ಮೈಲು ಓಡುವುದು—ಇದ್ದಿದ್ದರೆ ಅವರನ್ನೂ ಹಿಡಿಯಬಹುದಿತ್ತಲ್ಲ! ಮೋಟಾರನ್ನು ಬಿಡದೆ ಬೆಂಬತ್ತಿದ್ದ ಸೈಕಲ್ ಸವಾರನನ್ನು ಕಂಡು ಅಮೇರಿಕನ್ನರು ವಿಸ್ಮಯಗೊಂಡ ಉದಾಹರಣೆಗಳೂ ಇವೆ. ಸೈಕಲ್ ಪಂದ್ಯಗಳು ೧೮೯[illegible] ರಿಂದ ೧೯೦೦ ರ ವರೆಗೆ ಬಲು ಲೋಕಪ್ರಿಯವಾಗಿದ್ದವು. ಉಳಿದ ಪಂದ್ಯಗಳಿಗಿಂತ ಸೈಕಲ್ ಪಂದ್ಯಗಳನ್ನೇ ಜನ ಬಹಳವಾಗಿ ಮೆಚ್ಚುತ್ತಿದ್ದರು. ೧೯೨೦ ರಿಂದ ೩೦ ರ ವರೆಗೆ ಆರಾರು ದಿನಗಳವರೆಗೆ ಸೈಕಲ್ ಪಂದ್ಯಗಳು ನಡೆಯುತ್ತಿದ್ದವು. (ಅಂಥ ಚಮತ್ಕಾರಗಳನ್ನು ನಮ್ಮಲ್ಲಿಯ ಜನ ಈಗ ಮಾಡುತ್ತಾರೆ. ಈಗ ಮೆಚ್ಚುತ್ತಿದ್ದಾರೆ.) ಈ ಸೈಕಲ್ಲಿಗೆ ಬೇರೆ ಬೇರೆ ಬಗೆಯ ಗಾಡಿಗಳನ್ನು ಜೋಡಿಸಿ ಉಪಯೋಗಿಸಲು ಜನ ತಪ್ಪಲಿಲ್ಲ. ಶಸ್ತ್ರ ಸಾಮುಗ್ರಿಗಳನ್ನು ರಣರಂಗಕ್ಕೆ ಒಯ್ಯುವುದನ್ನೂ ಮಾಡಿದೆ ಸೈಕಲ್. ಸಾಮಾನ್ಯರ ಪ್ರಪಂಚಗಳನ್ನೇ ಹೊತ್ತು ತಿರುಗಿದೆ ಈ ಸೈಕಲ್. ಶಾಂತಿಯ ಕಾಲದಲ್ಲಿ ಸಮಾಜದ ಸೇವೆಗೆಂದು ಉಪಯುಕ್ತ ವಸ್ತುಗಳನ್ನು ಹೊತ್ತೊಯ್ದಿದೆ ಈ ಸೆಕಲ್ ಗಾಡಿ!

ಇಂದು ಅಮೇರಿಕೆಯಲ್ಲಿ ಮೋಟಾರಿಗಿರುವ ಸ್ಥಾನ ನಮ್ಮಲ್ಲಿ ಸೈಕಲ್ಲಿಗೆ ಬರುತ್ತಿದೆ. ಸೈಕಲ್ಲಿಗೆ ನಮ್ಮಲ್ಲಿರುವ ಮಹತ್ವದ ಸ್ಥಾನ ಅಳಿಯಲು ಇನ್ನೂ ಬಹು ಕಾಲ ಬೇಕಾಗಬಹುದು.

ಅಲ್ಮೋರದಲ್ಲಿ ನನಗೊಬ್ಬ ಗೃಹಸ್ಥನ ಪರಿಚಯವಾಯಿತು. ಆತನಿಗೆ ವಕೀಲರನ್ನು ಕಂಡರಾಗದು. ಕುಮಾಂವ್ ಡಿವಿಜನ್ನಿನ ಕಮಿಶನರರಾಗಿದ್ದ ಸರ್ ಹೆನ್ರಿ ರಾಮ್ಸೆಯವರ ಮುಂದೆ ಹಾಜರಾದ ಪ್ರಥಮ ವಕೀಲನಿಗಾದ ಗತಿಯನ್ನು ಆತ ನನ್ನ ಮುಂದೆ ತುಂಬ ಆನಂದದಿಂದ ವರ್ಣಿಸಿದ.

ಸರ್ ಹೆನ್ರಿಯವರು ಯಾವನೋ ಒಬ್ಬ ಅಪಾದಿತನಿಗೆ ಆಗಲೇ ಶಿಕ್ಷೆ ವಿಧಿಸಿದ ಮೇಲೆ ಈ ವೀರ ವಕೀಲ ಮಹಾಶಯ ಎದ್ದು ನಿಂತು, "ತಾವು ಮಾಡಿದ್ದು ಕಾಯದೆಗೆ ವಿರುದ್ಧ" ಎಂದನಂತೆ. ಕ್ಷಣ ಕಾಲ ಗಭೀರ ಮೌನ ಆವರಿಸಿತು. ಬಳಿಕ ಸರ್ ಹೆನ್ರಿ ರಾಮ್ಸೆಯವರು, "ನಿಮ್ಮ ಕಾಯದೆ ತೋರಿಸಿರಿ" ಎಂದರು.

ವಕೀಲ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಒಂದು ಪುಟದಲ್ಲಿ ಗುರುತು ಹಾಕಿ ರಾಮ್ಸೆಯವರಿಗೆ ತೋರಿಸಿದ. ಅವರು ಅದನ್ನು ನೋಡಿದರು. ಆಮೇಲೆ ಬುದ್ಧಿಪೂರ್ವಕವಾಗಿ ಆ ಪುಟವನ್ನೇ ಹರಿದು ತೆಗೆದರು. ಮತ್ತು ಆ ಪುಸ್ತಕವನ್ನು ವಕೀಲನಿಗೆ ಕೊಟ್ಟು "ಈಗ ನಿಮ್ಮ ಕಾಯದೆ ತೋರಿಸಿರಿ!" ಎಂದರು!

ವೈವಸ್ವತ ಮನ್ವಂತರದ ತ್ರೇತಾಯುಗದಲ್ಲಿ ಶ್ರೀ ಅಯೋಧ್ಯೆಯ ನಿಬಿಡವಾದ ಅಡವಿಯೊಂದರಲ್ಲಿ ವ್ಯಾಘ್ರ ಒಂದು ಪಥಿಕನೋರ್ವನನ್ನು ಬೆಂಬತ್ತಿ ಹೊರಟಿತ್ತು. ಪಥಿಕನು ಜೀವವನ್ನುಳಿಸಿಕೊಳ್ಳಲು ಯಾವುದಾದರೂ ವಿಶಾಲವೃಕ್ಷವನ್ನಾಶ್ರಯಿಸಲು ಧಾವಿಸುತ್ತಿದ್ದನು. ಬದಿಯಲ್ಲಿ ಮುಗಿಲೆತ್ತರಕ್ಕೆ ಬೆಳೆದುನಿಂತ ವೃಕ್ಷವನ್ನು ಕಂಡು ಅವನಿಗೆ ಸಂತೋಷವಾಯಿತು. ಅದನ್ನೇರಬೇಕೆಂದು ಆ ಪಥಿಕನು ವೃಕ್ಷದ ಮೂಲಕ್ಕೆ ಬಂದಾಗ ಮೇಲೆ ಕುಳಿತ ಮಂಗ ಒಂದು ಕಂಡಿತು. ಸ್ವಚ್ಛಂದವನ್ನು ಕೊಡುವೆ ಈ ಕ್ಷಣವೇ ವೃಕ್ಷವನ್ನೇರು. ವಿಲಂಬ ಮಾಡಿದರೆ ಹುಲಿರಾಯನ ಬಲಿಯಾಗುವಿ" ಎಂದಿತು. ಮಾನವನಿಗೆ ಅಪಾರ ಸಂತೋಷವಾಯಿತು. ವೃಕ್ಷವನ್ನೇರಿ ಕುಳಿತನು. ಹುಲಿರಾಯ ಬಂದು ವೃಕ್ಷವನ್ನೇರಿದ ಮಾನವನನ್ನು ನಿರಾಶನಾಗಿ ನೋಡುತ್ತ ನಿಂತನು. ಬೇಟೆ ಹೋಯಿತಲ್ಲಾ ಎಂದು ಅವನಿಗೆ ಅಪಾರ ದುಃಖವಾಯಿತು. ಆದರೂ ಹಸಿವೆಯಾದರೆ ಮಾನವನು ಕೆಳಕ್ಕಿಳಿದು ಬಂದೇ ಬರುವನೆಂದು ಹುಲಿರಾಯ ವೃಕ್ಷದ ಕೆಳಕ್ಕೆ ಕಾದು ಕುಳಿತನು.

ಮಂಗ - ಮಾನವ

ಗೋವಿಂದಮೂರ್ತಿ ದೇಸಾಯಿ

ವಾಗಿ ತಿಂದುಂಡು ಕೊಬ್ಬಿದ ಆ ಕೋತಿಯನ್ನು ಕಂಡು ಆ ಮಾನವನಿಗೇಕೋ ಭೀತಿ ಎನಿಸಿತು. 'ವ್ಯಾಘ್ರದ ಬದಲು ಕೋತಿ ತಿಂದರೆ?' ಎಂಬ ಅಂಜಿಕೆಯಿಂದ ಬೇರೊಂದು ವೃಕ್ಷವನ್ನಾಶ್ರಯಿಸಬೇಕೆಂದು ಯೋಚಿಸುತ್ತಿರುವಾಗ ಹುಲಿರಾಯ ಧಾವಿಸಿ ಬರುವುದು ಪಥಿಕನಿಗೆ ಕೇಳುತ್ತಿತ್ತು. ಮೇಲೆ ಕುಳಿತ ಆ ಕೋತಿ ಮಾನವನ ಅಂಜಿಕೆಯನ್ನು ಕಂಡು "ಓ ಪಥಿಕ, ನನಗಂಜಬೇಡ. ನೀನ್ನತಿಥಿಯಾಗಿ ನನ್ನ ವೃಕ್ಷಕ್ಕೆ ಬಂದಮೇಲೆ ನಿನ್ನ ಜೀವವನ್ನು ಸುರಕ್ಷಿತವಾಗಿ ಕಾಪಾಡುವ ಅಭಯ

ಅತಿಥಿಗೆ ಸುಖವಾದ ತಾಣ ಒಂದನ್ನು ಮಾಡಿಕೊಡುತ್ತ ಕಪಿ, "ಅತಿಥಿದೇವ, ಕ್ಷಣಕಾಲ ಹಾಯಾಗಿ ವಿಶ್ರಮಿಸಿ. ರವಿರಾಜ ಅದಾಗಲೇ ತಾಯಿಯ ಬಳಿ ಹೊರಟಿದ್ದಾನೆ. ನಿಮಗಾಗಿ ಫಲಾಹಾರಕ್ಕೆ ವಿಧವಿಧದ ಫಲಗಳನ್ನು ಕಿತ್ತು ತರುವೆ. ನನ್ನಲ್ಲಿ ಯಾವ ಫಲದ ಸಂಗ್ರಹವೂ ಇಲ್ಲ ಕ್ಷಮಿಸಿ" ಎಂದು ಬಳ್ಳೇ ನಯವಿನಯದಿಂದ ಹೇಳಿತು.

"ಇದೇನು ಕಪಿರಾಯ? ವೃಕ್ಷಗಳ ಮಧ್ಯದಲ್ಲಿದ್ದುಕೊಂಡು, ಫಲಗಳು ಇಲ್ಲಿಯೇ ಇರು

ವಾಗ ಸಂಗ್ರಹಿಸಿಲ್ಲವೆಂದರೆ ಹೇಗೆ? ನಾನಾಗಿದ್ದರೆ ಹೀಗೆ ಫಲಗಳನ್ನು ನೋಡಿಯೂ ಸಂನ್ಯಾಸವೃತ್ತಿಯನ್ನು ತಾಳುತ್ತಿದ್ದೆನೆ....?" ಎಂದು ಕೇಳಿದನು ಪಥಿಕ.

"ನಮಗೆ ಸಂಗ್ರಹವೆಂದರೆ ಗೊತ್ತಿಲ್ಲ. ಅದು ಮಾನವರಾದ ನಿಮಗೇ ಗೊತ್ತು" ಎಂದು ಕಪಿರಾಯನು ಹೇಳುತ್ತ ಫಲಗಳನ್ನು ತರಲು ಹೋಯಿತು. ಕ್ಷಣಾರ್ಧದಲ್ಲಿ ಕಪಿ ಉತ್ತಮೋತ್ತಮ ಹಣ್ಣುಗಳನ್ನು ತಂದು "ಅತಿಥಿದೇವಾ, ಇವುಗಳಿಂದ ನಿಮ್ಮ ಹಸಿವನ್ನು ಹಿಂಗಿಸಿಕೊಂಡು ಈ ಕಪಿಯನ್ನು ಉದ್ಧಾರ ಮಾಡಬೇಕು" ಎಂದು ಕೈ ಜೋಡಿಸಿ ಕೇಳಿತು. ಮಾನವನು ನಿಧಾನವಾಗಿ ಒಂದೊಂದೇ ಹಣ್ಣಿನ ರುಚಿನೋಡ ಹತ್ತಿದನು. ಅತಿಥಿಯ ಭೋಜನವನ್ನು ಕಂಡು ಕೆಳಕ್ಕೆ ಹಸಿದು ಕುಳಿತ ಹುಲಿಗೆ ಸಂಕಟವಾಯಿತು. ಕಪಿ ಅದರ ಮುಖವನ್ನು ಕಂಡು "ಹುಲಿರಾಯ, ಫಲಗಳು ಬೇಕೆ? ಪಾಪ ಅವನ್ನ ನೀನು ತಿನ್ನಲಾರೆ" ಎಂದು ತನ್ನಷ್ಟಕ್ಕೆ ತಾನೇ ಮತ್ತೆ ಆಡಿಕೊಂಡಿತು.

ಭೋಜನವಾದಮೇಲೆ ಯಜಮಾನ ಅತಿಥಿಗೆ ಹೇಳಿದನು. "ಅತಿಥಿದೇವ, ಮೊದಲು ನೀವು ನಿದ್ರೆಮಾಡಿರಿ. ನಿಮ್ಮ ಸರದಿ ಮುಗಿದ ಮೇಲೆ ನಾನು ನಿದ್ರೆ ಹೋಗುತ್ತೇನೆ. ಇಬ್ಬರಲ್ಲಿ ಒಬ್ಬರು ಜಾಗೃತವಾಗಿದ್ದು ಈ ಹುಲಿ ಯಾವಾಗ ಮತ್ತು ಎಲ್ಲಿ ಹೋಗುವದೆಂದು ನಿರೀಕ್ಷಿಸೋಣ. ಇಲ್ಲದಿದ್ದರೆ ಅದು ಯಾವದಾದರೂ ಕಂಟಿಯ ಮಗ್ಗಲಿಗ ಕುಳಿತು ನೀವಿಳಿದು ಹೋಗುವಾಗ ನಿಮ್ಮ ಮೇಲೆ ನುಗ್ಗೀತು" ಎಂದು ಹೇಳಿತು. ಕಪಿರಾಯನ ವಿಚಾರ ಮಾನವನಿಗೆ ಹಿಡಿಸಿತು. ಮಾನವ ಮಂಗನ ಆತಿಥ್ಯದಿಂದ ಸಂತೃಪ್ತನಾಗಿ ಅದನ್ನೇ ಮೆಲಕುಹಾಕುತ್ತ ನಿದ್ದೆ ಹೋದ. ದಣಿದುಬಂದ ಅವನಿಗೆ ಒಮ್ಮೆಲೆ ನಿದ್ದೆಹತ್ತಿತು. ಅವನ ಗೊರಕೆಗಳ ಸಪ್ಪಳವನ್ನು ಕೇಳಿ ಹುಲಿರಾಯ ಮಂಗನಿಗೆ "ಮಂಗರಾಜ, ನನ್ನ ಬೇಟೆಯನ್ನು ನೀನು ವೃಥಾ ತಪ್ಪಿಸಿದಿ. ಈಗ ಹೇಗಾದರೂ ನಿನ್ನತಿಥಿ ನಿದ್ರೆಹೋಗಿದ್ದಾನೆ. ಅವನ[illegible] ಕೆಳಕ್ಕೆಸೆದು ಬಿಡು. ಅಂದರೆ ನಿನಗ[illegible] ತೊಂದರೆಯನ್ನು ಮಾಡಲಾರೆ" ಎಂದು ಅ[illegible] ಅಂಜಿಕೆ ಮತ್ತು ಅರ್ಧ ಆಜ್ಞೆಯ ರೂಪದ[illegible] ಹೇಳಿದನು.

ಮಂಗರಾಯನು ತಲೆಯಲ್ಲಾಡಿಸಿ "ಹು[illegible] ರಾಯ, ನೀನೇನೋ ಈ ಅಡವಿಯ ಅನಭಿಷ[illegible] ದೊರೆ. ನಿನ್ನ ಮಾತು ಕೇಳಬೇಕಾದದ[illegible] ನ್ಯಾಯ. ಆದರೆ ಆ ಪಥಿಕ ನನ್ನ ಅತಿಥಿ. [illegible] ಥಿಯ ಜೀವಕ್ಕೆ ಯಾವ ತೊಂದರೆಯಾಗದ[illegible] ನೋಡಿಕೊಳ್ಳುವ ಅಭಯವನ್ನಿತ್ತಿದ್ದೇನೆ. ನಾ[illegible] ಈ ಮಾನವನನ್ನು ನಿನಗೆ ಕೊಡಲಾರೆ" ಎಂದಿ[illegible] ಹುಲಿ ನಿರಾಶವಾಗಿ ಕೆಳಕ್ಕೆ ಮುಖಮಾಡಿ ಕ[illegible] ತಿತು. ಮಾನವನ ನಿದ್ದೆ ಮುಗಿಯಿತು. ಮಂ[illegible] ಸರದಿ ಬಂದಿತು. ಮಾನವನು ಮಂಗನ ರಾಜ[illegible] ಚಿತ ಆತಿಥ್ಯವನ್ನು ನೆನೆಯುತ್ತ "ಮಂಗರಾ[illegible] ನೀನಿನ್ನು ಮಲಗು. ನಾನು ಹುಲಿಯನ್ನು ನೀ[illegible] ಕ್ಷಿಸುವೆ" ಎಂದನು. ಮಂಗ ನಿದ್ರೆ ಹೋಯಿ[illegible] ಮಂಗ ಮಲಗಿದ ಕೆಲಹೊತ್ತಿನ ಮೇಲೆ ಹ[illegible] ರಾಯ ಮಾನವನನ್ನು ಕುರಿತು "ಎಲೊ ಮಾನ[illegible] ನಿನ್ನ ರಕ್ತಕ್ಕಾಗಿ ನಾನು ಬಂದಿದ್ದೆ. ಆ[illegible] ಉಪಾಯವಿಲ್ಲ. ಆ ಮಲಗಿದ ಮಂಗನ[illegible] ಕೆಳಕ್ಕೆಸೆದು ಬಿಡು. ಅದನ್ನು ತಿಂದು ರಾತ್ರಿ[illegible] ಈ ಹಸಿವೆಯನ್ನು ಹಿಂಗಿಸಿಕೊಂಡು ನನ್ನ ಗ[illegible] ಯತ್ತ ತೆರಳುವೆ. ನೀನು ಹಾಯಾಗಿ ಮ[illegible] ಹೋಗು. ಆ ಮಂಗನನ್ನು ಕೊಟ್ಟರೆ ನಿನಗ[illegible] ತೊಂದರೆಯನ್ನು ಮಾಡೆನು" ಎಂದನು.

ಮಾನವನು ಕ್ಷಣಕಾಲ ಯೋಚಿಸಿದನ[illegible] "ಹುಲಿಗೆ ಮಲಗಿದ ಮಂಗನನ್ನು ಒಗ[illegible] ನಾನೇಕೆ ಜೀವವನ್ನು ಉಳಿಸಿಕೊಳ್ಳಬಾರದು[illegible] ಎಂಬುದೇ ಅವನ ಯೋಚನೆ. ಅವ[illegible] ಕಪಿಯ ಆತಿಥ್ಯ ಮರೆಯಿತು. ಅದಿತ್ತ ಅಭ[illegible] ದಿಂದ ತನ್ನ ಜೀವವು ಉಳಿಯಿತೆಂಬುದು ಸ್ಮ[illegible] ಯಿಂದ ಜಾರಿತು. ಹುಲಿಗೆ ಒಗೆಯುವ ಆಶ್ವಾ[illegible] ವಿತ್ತು ಮಾನವನು ಮಂಗನನ್ನು ಎಳೆಯ[illegible]

ಮಂಗನ ದೇಹಕ್ಕೆ ಕೈ ಹಾಕಿದನು. ಆದರೆ ಆ ಮಂಗ ಬಹು ಗಟ್ಟಿಯಾಗಿ ಟೊಂಗೆಗಳನ್ನು ಹಿಡಿದು ಮಲಗಿತ್ತು. ಅದರ ದೇಹವು ಅತ್ತಿತ್ತ ಅಲುಗಾಡಿತೆ ವಿನಾ ಅದು ಬೀಳಲಿಲ್ಲ. ಮಂಗವು ಕಣ್ಣುಜ್ಜಿಕೊಳ್ಳುತ್ತ ಏಳಲು ಮಾನವನು ಅಂಜುತ ಅಂಜುತ್ತ "ಮಂಗರಾಯ, ನಿನ್ನ ನಿದ್ರೆಯ ಸರದಿ ಮುಗಿಯಿತೆಂದು ನಿನ್ನನ್ನು ಎಬ್ಬಿಸುವ ಪ್ರಯತ್ನ ಮಾಡಿದೆ. ನೀನು ತಪ್ಪು ತಿಳಿಯಬೇಡ" ಎಂದನು. ಮಂಗನಿದ್ದ ಮೇಲೆ ತನ್ನ ಬಲಿ ಹುಲಿಗಾಯಿತೆಂದೇ ಭಾವಿಸಿದನು ಆ ಮಾನವನು!

"ಮಾನವನೇ, ಅಸತ್ಯವು ನಿಮ್ಮ ಪ್ರಪಂಚದ ಅಸ್ತ್ರ. ಅತಿಥಿಯೆಂದು ನಾನು ಅಭಯವನ್ನಿತ್ತ ಮೇಲೆ ನಿನಗೇನನ್ನೂ ಮಾಡೆನು. ಈ ಕ್ಷಣದಲ್ಲಿಯೇ ನಾನು ನೀನು ಎಚ್ಚರಿದ್ದರೂ ನಿನ್ನನ್ನು, ಕೆಳಕ್ಕೆ ದೂಡಬಲ್ಲೆ" ಎಂದು ಮಂಗ ಹೇಳಿದಾಗ ಮಾನವನಿಗೆ ತಾನೇಕೆ—ಹುಲಿಯ ಬಾಯಿಗೆ ಸಿಗಲಿಲ್ಲವೊ ಎನಿಸಿತು. ಮಾನವನಿಗೆ ಆಡಲು ಯಾವ ಮಾತೇ ಇರಲಿಲ್ಲ.

ಹುಲಿರಾಯ ಕಾದುಕಾದು ಹಸಿವೆಯಿಂದ ನಿರಾಶನಾಗಿ ಅದಾವಾಗಲೋ ಹೋಗಿಬಿಟ್ಟಿದ್ದ. ಮಾನವನಿಗೆ ಸುರಕ್ಷಿತವಾಗಿ ಹೋಗಲು ಅವಕಾಶವಾಗಿದ್ದರಿಂದ ಅತಿಥಿಯನ್ನು ಮಂಗರಾಯ ಕೆಳಕ್ಕಿಳಿಸಿ ಬೀಳ್ಕೊಡುತ್ತ "ಮಾನವಾ, ನೀನೊಮ್ಮೆ ಮಂಗನಾಗಿದ್ದಿ. ನಾನು ನಿನ್ನ ಪೂರ್ವಜ ಪೂರ್ವಜನಾದ ನಾನು ಹೀಗೆಯೆ ಉಳಿಯಲು ಪ್ರಯತ್ನಿಸಿದ್ದೇ ನನ್ನ ಈ ಬುದ್ಧಿಗೆ ಕಾರಣವೇನೊ! ಯುಗದಿಂದ ಯುಗಕ್ಕೆ ಕಲ್ಪದಿಂದ ಕಲ್ಪಕ್ಕೆ ನಾನೂ ನಿನ್ನಂತೆ ಸುಧಾರಿಸುತ್ತ ಹೋ..ಗ..ಗಿ ..ದ್ದ .ರೆ!!" ಎಂದು ಹೇಳಿ ಕಳಿಸಿತು. ಅತಿಥಿಗೆ ಆತಿಥ್ಯ ನೀಡಿದ ಯಜಮಾನನ ಉಪಕಾರ ಸ್ಮರಣೆ ಮಾಡುವುದಕ್ಕೂ ಮುಖವಿರಲಿಲ್ಲ. *




ಮಿದುಳಿಲ್ಲದ ಪ್ರಾಣಿ

ಪ್ರಾಣಿವರ್ಗದಲ್ಲಿ ಮಿದುಳಿಲ್ಲದ ಪ್ರಾಣಿಯೂ ಉಂಟು. ಆ ರೀತಿಯ ಮಿದುಳಿಲ್ಲದ ಪ್ರಾಣಿಯೆಂದರೆ "ಸ್ಟಾರ್ ಫಿಶ್" (Star fish) ಇದಕ್ಕೆ ಮಿದುಳಿಲ್ಲ ಆದರೆ ಬಾಯಲ್ಲಿ ಮಾತ್ರ ಉಂಗುರಾಕಾರದ ನರವಿದೆ. ಅದರ ದೇಹದ ಚಲನವಲನೆ ಮುಂತಾದ ಕೆಲಸಗಳೆಲ್ಲವೂ ಈ ನರದ ಹತೋಟಿಯಲ್ಲಿದೆ. ಈ ನರದ ಸಹಾಯದಿಂದಲೇ ಅದರ ಚಲನವಲನೆಗಳು ನಡೆಯುವುವು.



— ಪಿ. ಮೇಘರಾಜನ್





ಸ್ಥೂಲಪರಿಚಯ

ನವೀನ ತ್ರಿಶಂಕು ಸ್ವರ್ಗಗಳು!

ಕಾಲ ನಿರ್ಧಾರವಾಗಿ ಹೇಳಲು ಬಾರದ
ಅದು ಮುಂದಿನ ಶತಮಾನದ ಆರಂಭದ
ಆದರೂ ಆಗಬಹುದು. ಸಾಹಸಪ್ರಿಯರು
ಹಿಮಾಲಯಾರೋಹಣಕ್ಕೋ ದಕ್ಷಿಣ ಧ್ರು
ಯಾತ್ರೆಗೋ ಹೋಗುವ ಹಾಗೆ, ಆಗ
ಅಂತರಿಕ್ಷಯಾತ್ರೆಗೆ ಹೋಗುವರು.
ದುರ್ಗಮ ಪ್ರದೇಶಗಳ ಯಾತ್ರೆ ಕೈಕೊಳ್
ವರು ಅಲ್ಲಲ್ಲಿ ಶಿಬಿರಗಳನ್ನು ಕಟ್ಟಿಕೊಂಡು ತ
ಇಚ್ಛಿತ ಸ್ಥಾನದ ಮೇಲೆ "ದಾಳಿ"ಯನ್ನು ಅಲ್ಲಿ
ಯೋಜಿಸುವ ಹಾಗೆ ಅಂತರಿಕ್ಷ ಯಾತ್ರಿಕ
ಅನುಕೂಲವಾಗಿ ಆಕಾಶದಲ್ಲಿ ನಿಲ್ದಾಣಗ
ಏರ್ಪಡುವವು.

"ಆಕಾಶದಲ್ಲಿ ನಿಲ್ದಾಣ"ಗಳು ನಾವು ಮ
ನಲ್ಲಿ ಉಪಯೋಗಿಸುವ 'ತ್ರಿಶಂಕು ಸ್ವಗ
ಗಳಂತಿರುವವು. ವಿಶ್ವಾಮಿತ್ರನ ಮಂತ್ರ
ಯಿಂದ ತ್ರಿಶಂಕು ಅಂತರಿಕ್ಷದಲ್ಲಿ ತಟಸ್ಥನ
ದ್ದಂತೆ ಈ ನಿಲ್ದಾಣಗಳೂ ತಟಸ್ಥವಾಗಿ ನಿಂ
ವವು. ರಶಿಯನ್ನರೂ ಅಮೇರಿಕನ್ನರೂ
ಹಾರಿಸಿರುವ ಕೃತಕ ಚಂದ್ರರಂತೆ
ಟನ್-ಎರಡು ಟನ್ ಭಾರದ ಮಕ್ಕಳಾಟಿಕೆ
ಗೋಲಗಳಾಗಿರಲಾರವು ಆಕಾಶ ನಿಲ್ದಾಣಗ

ಅವು ಭಾರೀ ಕೋಟೆಗಳಂತೆ ಇರುವವು. ಅಲ್ಲಿ ವಿಶೇಷವಾಗಿ ಮಿಶ್ರಿಸಿ ಅಣಿಗೊಳಿಸಿದ ಧಾತು ಧಾತುಗಳಿಂದ ನಿರ್ಮಿಸಿದ ಮನೆಗಳಿರುವವು. ಒಂದೊಂದು ನಿಲ್ದಾಣದ ತೂಕವೂ ಸಾವಿರಾರು ಟನ್ ಭಾರವಾಗಿರುವುದು.

ಇಷ್ಟು ದೊಡ್ಡ ನಿಲ್ದಾಣವನ್ನು ಆಕಾಶಕ್ಕೇರಿಸುವ ಬಗೆ ಹೇಗೆ? ಅಷ್ಟು ಪ್ರಬಲವಾದ ಎಂಜಿನ್ನುಗಳು ಇರಬಲ್ಲವೆ? ಎಂದು ನೀವು ಕೇಳುವಿರಿ. ಅದು ಬಹಳ ಸುಲಭ. ಇಡೀ ಅಂತರಿಕ್ಷ ನಿಲ್ದಾಣವನ್ನು ಭೂಮಿಯ ಮೇಲ ಮೊದಲು ಸಂಪೂರ್ಣವಾಗಿ ಕಟ್ಟಲಾಗುವುದು. ಬಳಿಕ ಅದರ ಭಾಗಗಳನ್ನು ಬಿಚ್ಚಿ ಬೇರೆ ಬೇರೆ ಮಾಡಲಾಗುವುದು. ಈ ಅನುಕೂಲಗಾತ್ರದ ಬಿಡಿ ಭಾಗಗಳನ್ನು ಆ ಮೇಲೆ ಸ್ಪುಟ್ನಿಕ್ಕುಗಳನ್ನು ಹಾರಿಸಿದಂತೆ ಗಗನಕ್ಕೆ ಹಾರಿಸಲಾಗುವುದು.

ಆಕಾಶ ನಿಲ್ದಾಣದ ಇಂಥ ಹತ್ತಾರು ಭಾಗಗಳೆಲ್ಲ ಅಂತರಿಕ್ಷ ತಲುಪಿದ ಮೇಲೆ ನಿಲ್ದಾಣ ಕಟ್ಟುವ ಶಿಲ್ಪಿಗಳು ಗಗನಕ್ಕೆ ಸಾಗುವರು. ಅದೊಂದು ಅಪರೂಪ ಶಿಲ್ಪಿಗಳ ತಂಡವೇ ಆಗಲಿದೆ. ಅವರು ಗಗನ ಮಹಲಿನ ಪುನಾರಚನೆಗೆ ಬೇಕಾದ ಸ್ಥಾಪತ್ಯಶಾಸ್ತ್ರದಲ್ಲಿ ಪ್ರವೀಣರಷ್ಟೇ ಅಲ್ಲ, ಅಂತರಿಕ್ಷ ಯಾತ್ರೆಯಲ್ಲಿ ಗಗಾರಿನ್ನನಂತೆ ವಿಶೇಷ ತರಬೇತಿ ಪಡೆದವರಾಗಿರುತ್ತಾರೆ. ಅಂಥವೇ ಆಕಾಶ ಬಾಣಗಳಲ್ಲಿ ಕುಳಿತು ಅವರು ಆಕಾಶ ನಿಲ್ದಾಣದ ಹಾರಾಡುವ ಬಿಡಿ ಭಾಗಗಳ ನಡುವೆ ಹೋಗಿ ಸೇರುವರು.

ಎಲ್ಲ ಬಿಡಿ ಭಾಗಗಳನ್ನು ಪೃಥ್ವಿಯಿಂದ ಒಂದೇ ದಿಶೆಯಲ್ಲಿ ಒಂದೇ ವೇಗದಿಂದ ಹಾರಿಸಿರುವುದರಿಂದ ಆ ಭಾಗಗಳೆಲ್ಲ ಒಂದೇ ಗತಿಯಿಂದ ಸುತ್ತುತ್ತಿರುತ್ತವೆ. ಆದ್ದರಿಂದ ಬಿಡಿ ಭಾಗಗಳು ಒಂದನ್ನು ಬಿಟ್ಟು ಇನ್ನೊಂದು ದೂರ ಸರಿಯುವ ಪ್ರಶ್ನೆಯೇ ಇಲ್ಲ. ಅಂತರಿಕ್ಷ ಶಿಲ್ಪಿಗಳಾದರೂ ತಮ್ಮ ವಾಹನದಲ್ಲಿ ಅವುಗಳ ನಡುವೆ ಅದೇ ವೇಗದಿಂದ ಸಾಗುತ್ತಿರುತ್ತಾರೆ. ಅವರಿಗೆ ತಾವು ಚಲಿಸುತ್ತಿರುವಂತೆಯೂ ಭಾಸವಾಗುವುದಿಲ್ಲ. ಬದಲಿಗೆ ಭೂಮಿಯೆ ತಮ್ಮೆದುರು ಉರುಳುತ್ತಿರುವಂತೆ ಕಾಣುತ್ತಿರುತ್ತದೆ.

ತಾವು ಸರಿಯಾದ ಸ್ಥಾನವನ್ನು ತಲುಪಿದೊಡನೆ ಈ ಶಿಲ್ಪಿಗಳ ತಂಡ ತಮ್ಮ ಆಕಾಶಬಾಣದ ಗರ್ಭದಿಂದ ಹೊರ ಬಂದು ಬಿಡಿ ಭಾಗಗಳನ್ನು ಜೋಡಿಸುವ ಎತ್ತುಗಡೆಯಲ್ಲಿ ತೊಡಗುವುದು. ಆ ಉರಿಯುವ ಕೆಂಡದಂಥ ಸೂರ್ಯ ಪ್ರಕಾಶವಿರುವ ಸ್ಥಾನದಲ್ಲಿ ಅವರು ಹೊರಗೆ ಹಣಕಲು ಶಕ್ತರಾಗಬೇಕಾದರೆ ವಿಶೇಷವಾಗಿ ನಿರ್ಮಿಸಿದ "ಆಕಾಶವೇಷ"ದಿಂದ ಅವರು ಸಜ್ಜಿತರಾಗಿರುತ್ತಾರೆ. ಅದು ಅವರನ್ನು ತಾಪದಿಂದಲೂ ಘಾತಕವಾದ ವಿಶ್ವಕಿರಣಗಳಿಂದಲೂ ರಕ್ಷಿಸುತ್ತದೆ. ಆ ಎತ್ತರದಲ್ಲಿ ವಾಯುವಿಲ್ಲದ್ದರಿಂದ ಉಸಿರಾಡಿಸಲು ಬೇಕಾದ ಪ್ರಾಣವಾಯು (ಆಮ್ಲಜನಕ)ದ ಪೂರೈಕೆಯೂ ಅವರ ಮುಖವಾಡದಲ್ಲೇ ಇರಬೇಕಾಗುವುದು. ಈ ವೇಷ ಅವರನ್ನು ಅಪಾಯದಿಂದ ರಕ್ಷಿಸಿದರೂ ಅವರ ಅಂಗಚಾಲನೆಗೆ ಆತಂಕವಾಗದಂತಿರುತ್ತದೆ. ಬಿಡಿ ಭಾಗಗಳ ಜೋಡಣೆಗೆ ಬೇಕಾದ ಉಪಕರಣಗಳೂ ಆಯುಧಗಳೂ ಅವರಿಗೆ ತಗಲಿಕೊಂಡ ಚೀಲದಲ್ಲಿ ಸಿದ್ಧವಾಗಿರುತ್ತವೆ.

ಇದೆಲ್ಲ ಸೇರಿ ಅವರ ದೇಹದ ತೂಕ ಸಾಕಷ್ಟಾದೀತೆಂದು ನೀವು ಸಹಜವಾಗಿಯೆ ಭಾವಿಸುವಿರಿ. ನಿಜ, ಭೂಮಿಯ ಮೇಲೆ ಅವರನ್ನಿರಿಸಿದರೆ ಅವರಿಗೆ ಒಂದು ಹೆಜ್ಜೆ ಕೂಡ ಮುಂದಿಡಲಾರದಷ್ಟಿದ್ದೀತು ಈ ಎಲ್ಲ ಸರಂಜಾಮುಗಳ ತೂಕ. ಆದರೆ ಅಂತರಿಕ್ಷದಲ್ಲಿ ಸುತ್ತುತ್ತಿರುವವರಿಗಿರುವ ಒಂದು ಅನುಕೂಲವೆಂದರೆ ಅವರಿಗೆ ಭಾರದ ಅನುಭವವೇ ಆಗುವುದಿಲ್ಲ. ಅವರು ಎಷ್ಟೇ ಸರಕು ಹೊತ್ತಿದ್ದರೂ ಕಾಗದ ಚೂರುಗಳಂತೆ ತೇಲುತ್ತಿರುತ್ತಾರೆ. ಈ ಭಾರರಾಹಿತ್ಯದ ಅವಸ್ಥೆಯಲ್ಲಿ ಯಾವುದಕ್ಕಾದರೂ ಸ್ವಲ್ಪ ತಗಲಿದರೂ ಅವರು ಪುಟನೆಗೆದಂತೆ ದೂರ ತಳ್ಳಲ್ಪಡುತ್ತಾರೆ.

ಆದ್ದರಿಂದ ಅವರು ಆಕಾಶಬಾಣದೊಳಗಿಂದ ಹೊರಬಂದೊಡನೆ ಕೆಳಗೆ ಬಿದ್ದು ಹೋದಾರೆಂಬ

ಭಯವಿಲ್ಲ. ಬದಲಿಗೆ ಅತ್ತಿತ್ತ ಪುಟಿದಾಡಿ ತಮ್ಮ ವಾಹನದ ಸಂಬಂಧ ತಪ್ಪಿಸಿಕೊಳ್ಳುವ ಅಂಜಿಕೆಯೆ ಇದೆ. ಹೀಗಾಗದಂತೆ ಬಲವಾದ ಹಗ್ಗಗಳಿಂದ ಅವರನ್ನು (ಗೂಟ ಬಡಿದು ಉದ್ದವಾದ ಹಗ್ಗದಿಂದ ಕಟ್ಟಿ ದನಗಳನ್ನು ಮೇಯಲು ಬಿಡುವ ಹಾಗೆ) ಆಕಾಶಬಾಣಕ್ಕೆ ಕಟ್ಟಿರಬೇಕಾಗುತ್ತದೆ.

ಅಂತರಿಕ್ಷದಲ್ಲಿ ಒಂದರಿಂದೊಂದು ಭಾಗ ಅಷ್ಟಿಷ್ಟು ದೂರದಲ್ಲಿ ಚೆದರಿರುವಾಗ ಇವರು ಅವುಗಳನ್ನು ಹೇಗೆ ಜೋಡಿಸುತ್ತಾರೆ? ಇದು ಬಲು ಸುಲಭ. ಇವರು ಒಂದು ತುಣುಕಿನಿಂದ ಇನ್ನೊಂದಕ್ಕೆ ಸಾಗಲು ಜೆಟ್ ಉಪಕರಣಗಳನ್ನುಪಯೋಗಿಸುವರು. ನ್ಯೂಟನ್ನನ "ಕ್ರಿಯೆ ಪ್ರತಿಕ್ರಿಯೆಗಳು ಸಮಾನ ಮತ್ತು ವಿರುದ್ಧವಾಗಿರುತ್ತವೆ" ಎಂಬ ತತ್ವವನ್ನನುಸರಿಸಿ ನಿರ್ಮಿಸಿದ ಉಪಕರಣಗಳಿವು. ಹಿಂದಕ್ಕೆ ಜೆಟ್ ಹಾರಿಸಿದರೆ ಅದನ್ನು ಹಾರಿಸಿದ ಪದಾರ್ಥ ಮುಂದೂಡಲ್ಪಡುತ್ತದೆ. ಅವರು ಕೆಲಸ ಮಾಡುತ್ತಿರುವಲ್ಲಿ ವಾತಾವರಣದ ಘರ್ಷಣೆಯಾಗಲಿ ಗುರುತ್ವಾಕರ್ಷಣದಿಂದುಂಟಾದ ಭಾರವಾಗಲಿ ಇಲ್ಲದಿರುವುದರಿಂದ ಬಹಳ ಕಡಿಮೆ ಜೆಟ್ ಶಕ್ತಿಯಿಂದಲೇ ಶಿಲ್ಪಿಗಳು ಒಂದು ಬಿಡಿಭಾಗದಿಂದ ಇನ್ನೊಂದಕ್ಕೆ ಸಾಗಬಲ್ಲರು. ಇದೇ ಜೆಟ್ ವಿಧಾನವನ್ನುಪಯೋಗಿಸಿ ಅವರು ಒಂದಕ್ಕೊಂದು ದೂರವಿರುವ ಆಕಾಶ ನಿಲ್ದಾಣದ ಬಿಡಿಭಾಗಗಳನ್ನು ಹತ್ತಿರ ಹತ್ತಿರ ಎಳೆತಂದು ಜೋಡಿಸುವರು. ಈ ಬಿಡಿ ಭಾಗಗಳು ಎಷ್ಟೇ ದೊಡ್ಡವಾಗಿದ್ದರೂ "ಭಾರರಾಹಿತ್ಯ" ಅವಸ್ಥೆಯಲ್ಲಿರುವುದರಿಂದ ಅವುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ತಳ್ಳುವುದು ಲೀಲಾಜಾಲವಾಗಿ ಮಾಡಬಹುದಾದ ಕೆಲಸ.

ಅಂದಾಕ್ಷಣ ಇದೆಲ್ಲ ಬಲು ಸುಲಭವೆಂದು ಮಾತ್ರ ಭ್ರಮಿಸಬಾರದು. ಭಾರರಹಿತ ಅವಸ್ಥೆಯಲ್ಲಿ ಪದಾರ್ಥಗಳನ್ನು ತಳ್ಳುವುದು ಸುಲಭವಾದರೂ ಭಾಗಗಳನ್ನು ಒಂದೇ ಕಡೆ ತಂದು ಜೋಡಿಸಲು ಬಲು ಸೂಕ್ಷ್ಮವಾದ ಲೆಕ್ಕಾಚಾರ ಬೇಕು. ಮೇಲಾಗಿ ಭಾರರಹಿತ ಅವಸ್ಥೆಯಲ್ಲಿ ಮುಟಿ ದೊ[...]ಡನೆ ಪುಟಿದಾಡುತ್ತ ಕೆಲಸ ಮಾಡುವುದು ಅಸಾ[...]ಧ್ಯಪ್ರಾಯ. ಒಂದು ಬೋಲ್ಟು ತಿರುಗಿಸಲ[...] ಉಪಯೋಗಿಸಿದ ಶಕ್ತಿಯು ಹಿಂಬಡಿತದಿಂ[...] ಫಿಟ್ಟರನು ಬಹುದೂರಕ್ಕೆ ಒಗೆಯಲ್ಪಟ್ಟಾನು[...]

ಹೀಗಾಗದೆ ಕೆಲಸಗಾರನು ಸ್ಥಿರವಾಗಿ ನಿ[...]ಲನುಕೂಲವಾಗುವಂತೆ ಅವನ ಪಾದಗಳ ಕೆಳ[...] ಅಯಸ್ಕಾಂತ ಇಲ್ಲವೆ ಇತರ ವಿಧದ ಚುಂಬ[...] ಶಕ್ತಿಯ ವ್ಯವಸ್ಥೆ ಮಾಡಬೇಕಾಗುವುದು. ವಿಜ್ಞಾ[...]ನದಲ್ಲಿ ಪಳಗಿದವರಿಗೇ ಈ ಎಲ್ಲ ಕೆಲಸ ಸಾಧ್ಯ[...] ಈ ಕಾರ್ಯಕ್ಕೆ ತಿಂಗಳುಗಟ್ಟಳೆ, ವರ್ಷಗಟ್ಟ[...] ಹಿಡಿದರೂ ಆಶ್ಚರ್ಯವಲ್ಲ.

ನಿಲ್ದಾಣವನ್ನು ಜೋಡಿಸುವ ಕೆಲಸ ಮುಗಿದ[...] ಅದರಲ್ಲಿ ಮನೆಗಳನು ಕಟ್ಟಿದ ಬಳಿಕ ಯಂತ್ರೋ[...]ಪಕರಣಗಳನ್ನು ಕೂಡಿಸಲಾಗುವುದು. ಈ ಮ[...]ಗಳು ಮಾನವ ವಸತಿಗೆ ಯೋಗ್ಯವಾಗುವಂ[...] ಸಕಲ ಸಾಧನ ಸಾಮಗ್ರಿಗಳಿಂದ ಕೂಡಿರುವು[...]

ಆಕಾಶ ನಿಲ್ದಾಣದಲ್ಲಿ ನಿರ್ಮಿಸಿದ ವಸ[...]ಗಳು ಭೂಮಿಯ ಮನೆಗಳಂತೆ ತೆರವಾಗಿರಲ[...]ರವು. ಅವು ವಾಯು ಹೊರ ಹೋಗದಂ[...] ಮುಚ್ಚಿ ಮುದ್ರಿಸಿದ ಮನೆಗಳು- ಅದರೊಳ[...] ಉಸಿರಾಡಿಸಲು ಹವೆ, ಶೀತೋಷ್ಣ ಸಮತೋ[...]ಲನ ವ್ಯವಸ್ಥೆ ಮೊದಲಾದವು ಇರುತ್ತವೆ.

ಒಮ್ಮೆ ಆಕಾಶ ನಿಲ್ದಾಣದ ರಚನೆ ಪೂರ್ತಿಯ[...]ಯಿತೆಂದರೆ ಅನಂತರ ಅಲ್ಲಿನ ಸ್ಥಿತಿಗತಿಗಳನ[...] ನಮಗೆ ಭೂಮಿಯಲ್ಲಿ ಅಭ್ಯಸ್ತವಾದ ಕ್ರಮ[...] ತರಲು ಬಹುಮಟ್ಟಿಗೆ ಸಾಧ್ಯವುಂಟು. ಉದ[...]ಹರಣೆಗೆ, ಎಷ್ಟೇ ತರಬೇತಾಗಿದ್ದರೂ ಭಾರರಹಿ[...] ಅವಸ್ಥೆಯಲ್ಲಿ ಕೆಲಸ ಮಾಡುವುದು ಬಲು ಕಷ[...] ಆಹಾರದ ತುತ್ತು ನುಂಗುವುದಕ್ಕೆ ಕೂಡ ಭಾ[...]ರಹಿತ ಅವಸ್ಥೆಯಲ್ಲಿ ಗಂಟಲ ಸ್ನಾಯುಗಳನ[...] ಬಲವಾಗಿ ಉಪಯೋಗಿಸಬೇಕಾಗುತ್ತದೆ. ನಿ[...]ರ್ಗದ ಕರೆಗಳನ್ನು ತೀರಿಸಲು ಕೂಡ ಭಾರ[...] ಅಗತ್ಯವಾಗಿದೆ. ಭಾರರಹಿತ ಅವಸ್ಥೆಯ ಕ[...] ಸಮಸ್ಯೆಗಳನ್ನು ಪರಿಹರಿಸಲು ಮೊದಲೇ ಹೆ[...]

ದಂತೆ ಚುಂಬಕ ಶಕ್ತಿ ಉಪಯೋಗಕ್ಕೆ ಬರುತ್ತದೆ. ಆದರೆ ಅದಕ್ಕೆ ಅದರದೇ ಅಡಚಣಿಗಳೂ ಇವೆ.

ಸುದೈವದಿಂದ ಒಮ್ಮೆ ನಿಲ್ದಾಣವಾದ ಮೇಲೆ ಕೃತ್ರಿಮ ಗುರುತ್ವಾಕರ್ಷಣವನ್ನು ಅಲ್ಲಿ ನಿರ್ಮಿಸಲು ಸಾಧ್ಯವಿದೆ. ಒಂದು ಪದಾರ್ಥವು (ಭೂಮಿಯ ಹಾಗೆ) ತನ್ನ ಅಚ್ಚಿನಲ್ಲಿ ಉರುಳುತ್ತಿದ್ದರೆ ಅಲ್ಲಿ "ಸ್ಥಾನಿಕ" ಗುರುತ್ವಾಕರ್ಷದ ಆಭಾಸವು (ಭಾರರಹಿತ ಅವಸ್ಥೆಯಲ್ಲೂ) ಉಂಟಾಗುತ್ತದೆಂದು ವಿಜ್ಞಾನಿಗಳಿಗೆ ಗೊತ್ತಿದೆ. ಕೃತ್ರಿಮ ಗುರುತ್ವ ಪಡೆಯಲು ಚಿಕ್ಕ ಪದಾರ್ಥಗಳು ವೇಗವಾಗಿ ಉರುಳಬೇಕಾಗುವುದು, ದೊಡ್ಡವು ಮೆಲ್ಲಗೆ ಉರುಳಿದರೆ ಸಾಕು. ನಮ್ಮ ನಿಲ್ದಾಣದ ವ್ಯಾಸ ೨೦೦ ಮೀಟರ್ ಇದೆಯೆಂದಾದರೆ ಅದು ಮಿನಿಟಿಗೊಂದು ಚಕ್ರ ಹೊಡೆದರೂ ಭೂಮಿಯ ಗುರುತ್ವಾಕರ್ಷಣದಷ್ಟು ಗುರುತ್ವಾಕರ್ಷಣದ ಆಭಾಸವನ್ನುಂಟು ಮಾಡಬಹುದು. ಹೀಗೆ ಗಿರಕಿ ಹೊಡೆಯಲು ಅನುಕೂಲವಾಗುವಂತೆ ಆಕಾಶ ನಿಲ್ದಾಣಗಳನ್ನು ಟಾಯರ್, ಪೀಪಾಯಿ, ಗೋಲ ಅಥವಾ ಅರ್ಧ ಗೋಲಾಕೃತಿಯಲ್ಲಿ ನಿರ್ಮಿಸಬಹುದೆಂದು ವಿಜ್ಞಾನಿಗಳು ಸೂಚಿಸಿದ್ದಾರೆ.

ಆಕಾಶ ನಿಲ್ದಾಣದ ನಿವಾಸಿಗಳ ಸುಖ ಸೌಕರ್ಯಕ್ಕಾಗಿ ಅಲ್ಲಿ ತೋಟಪಟ್ಟಿಗಳನ್ನು ನಿರ್ಮಿ

ಸುವ ಸೂಚನೆಗಳೂ ಇವೆ. ಇದರಿಂದ ಆಹಾರ ಸಮಸ್ಯೆಗೂ ಪರಿಹಾರ ದೊರೆತು ಮಾನವನ ಉಸಿರಲ್ಲಿ ಹೊರಬೀಳುವ ಅಂಗಾರಾಮ್ಲ ಮತ್ತು ಅವನ ನೈಸರ್ಗಿಕ ಕರೆಗಳಿಂದ ಹೊರಬೀಳುವ ಹೊಲಸನ್ನು ಸ್ವಚ್ಛಗೊಳಿಸುವ ಕೆಲಸವೂ ಸಾಧಿಸುವುದು. ಬೇಸರಬಂದರೆ ನಿವಾಸಿಯು ತನ್ನ ಆಕಾಶ ವೇಷಧರಿಸಿ ಹೊರಬಂದು ಬ್ರಹ್ಮಾಂಡದ ಸತ್ಯ ಸ್ವರೂಪದರ್ಶನದ ಸುಖವನ್ನೂ ಅನುಭವಿಸಬಹುದು.

ಆದರೆ ಕೋಟ್ಯಂತರ ವೆಚ್ಚದಿಂದ ಇಂಥ ಗಗನ ನಿಲ್ದಾಣಗಳನ್ನು ನಿರ್ಮಿಸಿದ್ದರಿಂದೇನು ಉಪಯೋಗ? ಶುದ್ಧ ವಿಜ್ಞಾನಿಗಳಿಗೆ ಇದು ಜ್ಞಾನ ವಿಕಾಸಕ್ಕೆ ದಾರಿ ಮಾಡಿಕೊಡುವುದು, ವ್ಯವಹಾರದೃಷ್ಟಿಯವರಿಗೆ ಇದು ವ್ಯವಹಾರ ಬೆಳೆಸಲು ಅನುವುಮಾಡಿಕೊಡುವುದು ಮತ್ತು ಯುದ್ಧದೃಷ್ಟಿಯವರಿಗೆ ಅದಕ್ಕೂ ಅನುಕೂಲ ಮಾಡಿಕೊಡುವುದು.

ಖಗೋಲ ವಿಜ್ಞಾನಿಗಳಿಗೆ ಭೂಮಿಯಿಂದ ನೋಡಿದ ಬ್ರಹ್ಮಾಂಡದ ದೃಶ್ಯದಿಂದ ಸಂತೋಷವಿಲ್ಲ. ಅದೊಂದು ಮಾಯಾ ದೃಶ್ಯವೆಂದು ಅವರಿಗೆ ಗೊತ್ತಿದೆ. ನಮ್ಮ ವಾಯುಮಂಡಲ, ಅದರಲ್ಲಿ ಹಬ್ಬಿದ ಧೂಳಿ, ಮೋಡ ಇವೆಲ್ಲವೂ ಬಾಹ್ಯ ಜಗತ್ತನ್ನು ಸತ್ಯರೂಪದಲ್ಲಿ ಕಾಣಲು ಆತಂಕವೊಡ್ಡುತ್ತವೆ. ಆಕಾಶ ನಿಲ್ದಾಣದಲ್ಲಾದರೆ ಇದೊಂದೂ ತೊಂದರೆಯಿಲ್ಲ. ಶುದ್ಧ ರೂಪದಲ್ಲಿ ಗ್ರಹ-ನಕ್ಷತ್ರ ನೀಹಾರಿಕೆಗಳನ್ನು ನೋಡಿ ವಿಶ್ವದ ನೈಜಜ್ಞಾನವನ್ನವರು ಪಡೆಯಬಲ್ಲರು.

ಗ್ರಹಾಂತರಗಳಿಗೆ ಪ್ರಯಾಣ ಬೆಳೆಸಬೇಕೆಂ[illegible] ವರಿಗೆ ಇದು ಎಣ್ಣೆ ತುಂಬಿಕೊಳ್ಳುವ ಕೇಂ[illegible] ವಾಗಬಲ್ಲದು. ಭೂಮಿಯಿಂದ ಹೊರಟವರು ಇ[illegible] ಇಳಿದು ಮುಂದಿನ ಪಯಣಕ್ಕೆ ಬೇಕಾದ ಇಂಧ[illegible] ವನ್ನು ತುಂಬಿಕೊಂಡು ಹೊರಡುವರಾದರೆ ಭೂ[illegible] ಮಿಯಿಂದ ಹೊರಡುವಾಗಲೇ ಅತಿ ಭಾರವಾ[illegible] ಎಣ್ಣೆ ಪೂರೈಕೆಯನ್ನೆಲ್ಲ ಒಯ್ಯುವ ಕಷ್ಟ ತ[illegible] ತ್ತದೆ. ಇದರಿಂದ ಅಂತರ್ಗ್ರಹವಾಹನಗಳ ಭಾ[illegible] ಕಡಿಮೆಯಾದರೂ ನಡೆಯುವುದು.

ವ್ಯಾಪಾರಿ ದೃಷ್ಟಿಯವರಿಗೆ ಈ ನಿಲ್ದಾಣಗ[illegible] ಎಲ್ಲಕ್ಕೂ ಹೆಚ್ಚಾಗಿ ರೇಡಿಯೊ ಮತ್ತು ಟೆಲಿ[illegible] ಜನ್ ಕಾರ್ಯಕ್ರಮಗಳನ್ನು ಬಿತ್ತರಿಸಲು ಅಪ್ರತಿ[illegible] ವಾದ ಸೌಕರ್ಯವನ್ನು ಕಲ್ಪಿಸುತ್ತವೆ.

ಆಕಾಶ ನಿಲ್ದಾಣಗಳಿಂದ ಮಾಡಬಹುದಾ[illegible] ಒಂದು ಜನ ಹಿತದ ಚಮತ್ಕಾರವೆಂದರೆ ಅದ[illegible] ಕೃತಕ ಚಂದ್ರನಂತೆ ಉಪಯೋಗಿಸಬಹುದೆ[illegible] ಬಹುದು. ನಿಲ್ದಾಣಗಳಿಗೆ ದೈತ್ಯ ಕನ್ನಡಿಗಳ[illegible] ಹಚ್ಚಿ ಸೂರ್ಯಪ್ರಕಾಶವನ್ನು ಭೂಮಿಯತ್ತ ಪ್ರ[illegible] ಬಿಂಬಿಸಲು ಸಾಧ್ಯವಿದೆ. ಭೂಮಿಯ ಸು[illegible] ವಿಕೆಯ ಗತಿಗೆ ಅನುಸಾರವಾಗಿ ಹೊರಳುವ ಕನ್ನಡಿಗಳ ಸಹಾಯದಿಂದ ಭೂಮಿಯ ವಿಶಿ[illegible] ಪ್ರದೇಶಗಳಲ್ಲಿ ರಾತ್ರಿಗಳನ್ನು ಹಗಲಾಗಿ ಮಾ[illegible] ಡಿಸಬಹುದು, ಚಳಿಯನ್ನು ಬೆಚ್ಚಗಾಗಿ ಮಾ[illegible] ಬಹುದು, ಧ್ರುವಪ್ರದೇಶದ ಹಿಮವನ್ನು ಕರಗಿ[illegible] ಬಹುದು.

'ಧರ್ಮಯುಗ'ದ ಆಧಾರದಿಂದ



ಮಿದುಳು

ಗಂಡಸರ ಮಿದುಳಿಗಿಂತಲೂ ಹೆಂಗಸರ ಮಿದುಳು ಬಹಳ ಚಿಕ್ಕದು. ಆದರೆ ಅದು ಅಷ್ಟು ಕೀಳುಮಟ್ಟದಲ್ಲಿಲ್ಲ. ಕೇವಲ ಅವರ ದೇಹಕ್ಕೆ ತಕ್ಕಂತೆ ಸಮಭಾಗಿಸಲ್ಪಟ್ಟಿದೆ.

—ಪಿ. ಮೇಘರಾಜನ್

ಅವಳ ಜಯದ ಗುಟ್ಟು...

ವಿಚಾರಮಾಡ ಬೇಡ; ಸರಸು. ನಾನು ಬಂದು ನಿನಗೆ ಸಹಾಯ ಮಾಡುತ್ತೇನೆ. ಸ್ವಲ್ಪ ತುಷಾರನ್ನು ಅಡಿಗೆಗೆ ತರಿಸು.

ಪಾರುವಿನ ಸಹಾಯಕ್ಕಾಗಿ ಮರುದಿನ ವಂದನೆಗಳು.

ನಿಮ್ಮ ಸತ್ಕಾರ ಕೂಟಕ್ಕೆ ತುಂಬಾ ವಂದನೆಗಳು. ಆಹಾರವು ತುಂಬಾ ರುಚಿಕರವಾಗಿತ್ತು.

ಪಾರು ಅಡುಗೆಯ ಗುಟ್ಟನ್ನು ತಿಳಿಸಿದ್ದಕ್ಕೆ ಸಂತೋಷವಾಗಿದೆ ಅದೇ ತುಷಾರ್.

ತುಷಾರ್

ವಿಟಮಿನ್‌ಗಳನ್ನೊಳಗೊಂಡ ವನಸ್ಪತಿ

(ವಿಟಮಿನ್ A ಮತ್ತು D ಒಳಗೊಂಡಿದೆ)

ಮತ್ತು

ಶುದ್ಧೀಕರಿಸಿದ ತುಷಾರ್ ಎಣ್ಣೆ




ತುಂಗಭದ್ರಾ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನೂಲ್.

ನನ್ನ ಹೆಂಡತಿ ಇದ್ದಾಳೆ, ನೋಡಿ. ಅವಳು..."

"ಇರಲಿ ಬಿಡಿ. ಅದೇನು ಮಹಾ! ಎಲ್ಲರಂತೆ ನಿಮಗೂ ಒಬ್ಬ ಹೆಂಡತಿ ಇದ್ದಾಳೆ; ಅಡಿಗೆ ಮಾಡಿ. ಮಕ್ಕಳನ್ನು ನೋಡಿಕೊಂಡು ಸಂಸಾರ ಸಾಗಿಸುತ್ತಾಳೆ, ಹೌದೊ ಅಲ್ಲವೊ? ಹೆಂಡಂದಿರು ಎಷ್ಟೇ ದಕ್ಷರು ಎಂದಾದರೂ ಅವರನ್ನು ಹೀಗೆ ಬಹಿರಂಗವಾಗಿ ಹೊಗಳುವ ಅಗತ್ಯವೇನೂ ಇಲ್ಲ. ಬಹಿರಂಗವಾಗಿ ಹೊಗಳಬೇಕಾದ ಹೆಂಡತಿ ಇರಬೇಕಾದರೆ ಏಳೇಳು ಜನ್ಮದ ಪುಣ್ಯ-ಬಲ ಬೇಕು."

ನೋಡಿದಿರಾ, ನಾನು ಮಾತೆತ್ತುವುದೇ ತಡ, ಎಷ್ಟುದ್ದ ಪುರಾಣ ಓದಿ ಬಿಟ್ಟಿರಿ. ಒಪ್ಪುತ್ತೇನೆ, ಸ್ವಾಮಿ, ನಿಮಗೂ ಹೆಂಡತಿ ಇದ್ದಾಳೆ ಎಂದು. ಆದರೆ ನಾನು ಕೇಳುವ ಒಂದು ಪ್ರ-ಶ್ನೆಗೆ ನಿಮ್ಮ ಹೆಂಡತಿ ಉತ್ತರ ಹೇಳಿಯಾ-ಳೇ? ನಿಮ್ಮೊಬ್ಬರ ಮಾತ್ರವಲ್ಲ ನಿಮ್ಮ ಪರಿಚಯದ ಎಲ್ಲ ಗೃಹಸ್ಥರ ಹೆಂಡಂದಿರಲ್ಲಿ ಒಬ್ಬಳಾದರೂ ಹೇಳಿಯಾಳೇ? ಅದೂ ಹೋಗಲಿ, ನೀವು ಗಂಡಸರು-ಕಾಲೇಜು ಕಟ್ಟೆ ಹತ್ತಿ ದಾಟಿ ದೊಡ್ಡ ಆಫೀಸರರೊ, ವಕೀಲರೊ ಡಾಕ್ಟರರೊ ಆಗಿರುವ ನಿಮ್ಮಲ್ಲಿ ನನ್ನ ಪ್ರಶ್ನೆಗೆ ಉತ್ತರ ಹೇಳಬಲ್ಲ ಒಬ್ಬನಾದರೂ ಪಂಡಿತ ಇದ್ದಾನೆಯೆ ಎಂದು ಕೇಳುತ್ತೇನೆ.



ಪ್ರಶ್ನೆ ಕೇಳದೆ ಉತ್ತರ ಹೇಳುವುದಾದರೂ ಹೇಗೆ ಎಂದು ಹುಬ್ಬುಹಾರಿಸಿದಿರಿ ತಾನೇ! ಕೇಳುತ್ತೇನೆ ಸ್ವಾಮಿ, ಪ್ರಶ್ನೆಯನ್ನು ಹೇಳುತ್ತೇನೆ. ಬತ್ತಲೆಯಾಗಿ ಮಲಗುವ ಅಭ್ಯಾಸವಿರುವವರಿಗೆ ಬೆಳಿಗ್ಗೆ ಬೇಗ ಏಳಲಾಗುವುದಿಲ್ಲ, ಅವರದು ಕುಂಭಕರ್ಣನ ನಿದ್ರೆ; ಯಾಕೆ? ಹೇಳಬಲ್ಲಿರಾ? ಉತ್ತರ ಕೊಡಲಾರದ್ದಕ್ಕೆ ಹುಚ್ಚು ಪ್ರಶ್ನೆ ಎಂ
ಬಿಟ್ಟಿರಿ ಹೌದಲ್ಲೊ?

ಅದಕ್ಕೇ ನಾನು ನನ್ನ ಹೆಂಡತಿಯ ವಿಚಾ
ವನ್ನು ನಿಮಗೆ ಹೇಳತೊಡಗಿದ್ದು. ಅವಳಿಗೆ
ಪ್ರಶ್ನೆಯ ಉತ್ತರ ಗೊತ್ತಿದೆ. ಇಷ್ಟೇ ಅ
ಅನೇಕಾನೇಕ ವಿಷಯಗಳ ಬಗ್ಗೆ, ವಿಜ್ಞಾನಿಗಳ
ತಟ್ಟನೆ ವಿವರಿಸಲಾರದಂಥ ವಿಷಯಗಳ ಬ
ಅವಳ ಬಳಿ ಯಾವಾಗಲೂ ಒಂದು ಉತ್ತ
ವಿರುತ್ತದೆ. ಒಂದು ವ್ಯಾಖ್ಯೆಯಿರುತ್ತದೆ. ನಾ
ಅವಳಿಗೆ "ವ್ಯಾಖ್ಯಾ ಸತಿ" ಎಂದೇ ಹೆಸರಿ
ದ್ದೇನೆ.

ಬತ್ತಲೆ ಮಲಗಿದ
ಬೇಗ ಏಳಲಾಗುವು
ಲ್ಲ. ಯಾಕೆ ಅಂದ

ಆ ದಿನ ಹೀ
ಯಿತು. ಬೆಳಿಗ್ಗೆ ಎಂ
ಗಂಟೆಯಾಗಿರಬೇಕ
ನಾನಿನ್ನೂ ಮುಸು
ಹಾಕಿಕೊಂಡು ಹ
ಗೆಯ ಮೇಲೆ ಬಿದ್ದ
ನನ್ನ ಹೆಂಡತಿ ಬಂ
"ಚಹ ತಯಾರ
ತಣ್ಣಗಾಗಿ ಬರ್ಫ
ಗುವ ಹೊತ್ತು ಬಂ
ಇನ್ನೂ ಮಲಗುವುದೆಂದರೆ? ಏಳಿ ಏ
ಎಂದು ಚಾದರವನ್ನು ಎಳೆದಳು. ನಾನು ಅ
ತೆರೆದ ಕಣ್ಣಿನಿಂದಲೇ "ಬೆಳಗಾಯಿತೇ?" ಎ
ಕೇಳಿದೆ. ಅದಕ್ಕವಳು "ಬೆಳಗಾಗದೆ ಏ
ಬೆಳಗಾಗಿ ರಾತ್ರಿಯಾಗುತ್ತ ನಡೆದಿದೆ.
ನಿದ್ದೆ ಬಡಕತನ ನಿಮಗೆ ಏಕೆ ಅಂಟಿಕೊಂ
ಗೊತ್ತೆ? ದಿನಾಲು ಪಾಯಜಾಮಾ ಮತ್ತು ಶ
ಹಾಕಿಕೊಂಡು ಮಲಗಿ. ಅಂದರೆ ಬೆ
ಕೋಳಿ ಕೂಗುವ ಹೊತ್ತಿಗೆ ಎಚ್ಚರಾಗುತ್ತ
ಇಲ್ಲವೊ ನೋಡಿ." ಎಂದಳು.

ಅಂ! ಯಾವಾಗಲೂ ಎರಡು ಕಪ್ಪ
ಚಹ ಗಂಟಲಲ್ಲಿಳಿದ ಮೇಲೆಯೆ ಪ್ರ

ತೆರೆಯುತ್ತಿದ್ದ ನನ್ನ ಕಣ್ಣು ಈಗ ಚಹದ ಕಪ್ಪು ಕೈಗೆ ಬರುವ ಮೊದಲೇ ಪೂರ್ಣ ತೆರೆಯಿತು. "ಅಂ! ಏನೆಂದೆ?" ಎಂದು ಕೇಳಿದೆ.

"ಮಲಗುವಾಗ ಪಾಯಜಾಮಾ ಮತ್ತು ಶರ್ಟು ತೊಟ್ಟುಕೊಂಡು ಮಲಗಿದರೆ ಬೇಗ ಏಳುವುದಕ್ಕಾಗುತ್ತೆ, ಅಂದೆ."

ಏನಿದು, ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಎಂದು ನಿಮಗನಿಸುತ್ತಿರಬೇಕು. ಅದು ಸ್ವಾಭಾವಿಕವೇ. ಆದರೆ ಒಂದು ಗುಟ್ಟಿನ ಮಾತನ್ನು ನಿಮಗೆ ಹೇಳಿದ ಮೇಲೆ "ಇದ್ದರೂ ಇರಬಹುದು" ಎಂದು ನಿಮಗನಿಸೀತು. ನನ್ನದೊಂದು ಅಭ್ಯಾಸವಿದೆ. ರಾತ್ರಿ ಮಲಗುವಾಗ ಬಟ್ಟೆಗಳನ್ನೆಲ್ಲ ಕಳಚಿ ಬರಿ ಚಡ್ಡಿಯಲ್ಲಿ ಮಲಗುವ ಅಭ್ಯಾಸ ನನಗಿದೆ ನನ್ನ ಈ ಅಭ್ಯಾಸ ಸೇರಿಕೆಯಾಗದೆ ಇವಳು ಹೀಗೆ ಅಡ್ಡ ಗೋಡೆಯ ಮೇಲೆ ಹಾಯಿಸಿ ಮೂದಲಿಸುತ್ತಿದ್ದಾಳಲ್ಲ ಎಂದೆನಿಸಿ ನಾನು "ನಿನ್ನ ತಲೆ. ಬಟ್ಟೆಗೂ ನಿದ್ದೆಗೂ ಏನು ಸಂಬಂಧ?" ಎಂದು ಸಿಡುಗುಟ್ಟಿದೆ.

"ಅಯ್ಯೋ! ಯಾಕೆ ಸಿಟ್ಟಿಗೇಳುತ್ತೀರಿ? ನೋಡಿ, ಬತ್ತಲೆ ಮಲಗಿದರೆ ತಾಯಿಯ ಗರ್ಭದಲ್ಲಿದ್ದಾಗಿನ ಅನುಭವ ಉಂಟಾಗುತ್ತದೆ. ಗರ್ಭದಲ್ಲಿರುವಾಗ ನಿಮ್ಮ ಮೈಮೇಲೆ ಒಂದು ನೂಲೂ ಇರಲಿಲ್ಲ ತಾನೇ? ಅಲ್ಲಿ ನೀವೇನು ಮಾಡುತ್ತಿದ್ದಿರಿ? ಇಪ್ಪತ್ತು ನಾಲ್ಕು ತಾಸೂ ನಿದ್ದೆ. ಬತ್ತಲೆ ಮಲಗಿದಾಗ ನಿಮ್ಮ ಸುಪ್ತ ಮನಸ್ಸು ಆ ಹಿಂದಿನ ಅವಸ್ಥೆಯನ್ನು ನೆನೆದುಕೊಂಡು ನಿಮ್ಮನ್ನು ಗಾಢ ನಿದ್ದೆಯಲ್ಲಿ ಕೆಡಹುತ್ತದೆ. ಅದೇ ಬಟ್ಟೆ ತೊಟ್ಟುಕೊಂಡರೆ ನಿದ್ದೆ ಅಷ್ಟು ಗಾಢವಾಗಿ ಬಾರದು."

ಏನು ಸ್ವಾಮಿ, ಏನನ್ನುತ್ತೀರಿ ಈಗ? ಯಾವ ವಿಜ್ಞಾನಿ, ಯಾವ ದೇಹ ಶಾಸ್ತ್ರಿ ಇಂಥ ವಿವರಣೆಯನ್ನು ಹೇಳಿದ್ದಾನೆ? ಮತ್ತು– ನಿಮ್ಮ ಮುಖದ ಮೇಲಿನ ಸಂದೇಹದ ಗೆರೆ ಇನ್ನೂ ಇದೆಯಲ್ಲ. ನನ್ನ ಹೆಂಡತಿಯ ವೈಶಿಷ್ಟ್ಯದ ಈ ಒಂದು ಉದಾಹರಣೆ ಸಾಲದೇ ನಿಮಗೆ? ಆಯಿತು. ಹೇಳುತ್ತೇನೆ ಕೇಳಿ, ಈ ಇಪ್ಪತ್ತು ವರ್ಷದ ಸಂಸಾರದಲ್ಲಿ ಅವಳ ವೈಶಿಷ್ಟ್ಯವನ್ನು ಅವಳು ಒಂದು ಸಾವಿರ ಸಲವಾದರೂ ತೋರಿಸಿರಬೇಕು.

ಇದು ನನ್ನ ಹೆಂಡತಿಯ ಮನಶ್ಶಾಸ್ತ್ರ ಪಾಂಡಿತ್ಯದ ಮಾತಾಯಿತು. ಆದರೆ ಅವಳ ಪಾಂಡಿತ್ಯ ಅದೊಂದೇ ಶಾಸ್ತ್ರಕ್ಕೆ ಮೀಸಲಾಗಿದೆ ಎಂದು ನೀವು ಬಗೆದರೆ ಅದು ತಪ್ಪು. ಜಗತ್ತಿನ ಪ್ರತಿಯೊಂದು ಶಾಸ್ತ್ರದ ಬಗ್ಗೆಯೂ ಅವಳ ಹತ್ತಿರ ತರ್ಕಬದ್ಧ ಮತ್ತು ಮೌಲಿಕ ವಿಚಾರಗಳು ಇವೆ. ಮುಂದೆ ನಾನು ಕೊಡುವ ಉದಾಹರಣೆ ಸರಿಯಾಗಿ ಯಾವ ಶಾಸ್ತ್ರದ ಕೆಳಗೆ ಬರುತ್ತದೆಂದು ನಾನರಿಯೆ. ಬಹುಶಃ "ಡೈನಾಮಿಕ್ಸ್"ನಲ್ಲಿ ಬರಬಹುದು.

ಅಂದು ಊಟ ಸ್ವಲ್ಪ ತಡವಾಗಿತ್ತು. ಅವಸರವಸರವಾಗಿ ಬಟ್ಟೆ ಹಾಕಿಕೊಂಡು ಹೊರಟು ನಿಂತಾಗ, ನೋಡುತ್ತೇನೆ, ಸೈಕಲ್ಲಿನ ಹಿಂದಿನ ಗಾಲಿ ಪಂಕ್ಚರ್! ಸಂತಾಪದಿಂದ ನಾನು ಥೂತ್ ಎಂದದ್ದು ಒಳಗೆ ಊಟಕ್ಕೆ ಕುಳಿತಿದ್ದ ನನ್ನ ಹೆಂಡತಿಗೆ ಕೇಳಿತೆಂದು ಕಾಣುತ್ತದೆ. ಅವಳು ಎಂಜಲು ಕೈಯಲ್ಲಿ ಹೊರಗೆ ಬಂದು "ಏನಾಯಿತು?" ಎಂದು ಕೇಳಿದಳು.

"ಪಂಕ್ಚರ್. ಹಿಂದಿನ ಗಾಲಿಗೆ ಒಂದು ನಾಲಿನ ಮೊಳೆ ನಟ್ಟುಬಿಟ್ಟಿದೆ. ಮೊದಲೇ ತಡವಾಗಿದೆ. ಇನ್ನು ಎರಡು ಮೈಲು ದೂರ ನಡೆಯಬೇಕು. ಹಾಳು ಪ್ರಾರಬ್ಧ!"

"ಪ್ರಾರಬ್ಧ ಏನು ಮಾಡೀತು? ನಿಮಗೀಗ ವಯಸ್ಸಾಗುತ್ತ ಬಂತು ಎನ್ನುವುದೂ ಪ್ರಾರಬ್ಧವೆ?"

ಮೊದಲೇ ಬೇಸರಗೊಂಡಿದ್ದ ನನಗೆ ಪಿತ್ತ ಕೆರಳಿತು. "ಹೋಗು ಹೋಗು ಊಟ ಮಾಡು. ವಯಸ್ಸಿಗೂ ಪಂಕ್ಚರಿಗೂ ಏನು ಸಂಬಂಧ? ಗಂಡ ಮುದುಕ ಪಾಪ! ಎಂದು ಜನ ಅನ್ನಲು ನೀನೇನೂ ಹದಿನಾರರ ಹುಡುಗಿಯಲ್ಲ. ನಿನಗೂ ೩೦ ದಾಟಿ ಹೋಯಿತು."

ಅವಳು ಸಮಾಧಾನದಿಂದಲೇ ಹೇಳಿದಳು. "ಯೋಚನೆ ಮಾಡದೆ ಮಾತಾಡಬಾರದು.

ನಿಮ್ಮನ್ನು ಹೀಯಾಳಿಸಲು ನಿಮಗೆ ವಯಸ್ಸಾಯಿತು ಎನ್ನಲಿಲ್ಲ. ನೋಡಿ, ಸೈಕಲ್ಲು ವೇಗವಾಗಿ ಓಡುತ್ತಿದ್ದರೆ, ಮೊಳೆಗೆ ಟಾಯರಿನೊಳಗೆ ಹೊಕ್ಕಲು ಸಮಯವಾದರೂ ಎಲ್ಲಿ ಸಿಗುತ್ತದೆ? ಮೊಳೆ ನಡಬೇಕಾದರೆ ಸೈಕಲ್ಲು ಸಾವಕಾಶವಾಗಿ ಹೋಗುತ್ತಿರಬೇಕು. ನೀವು ತಾರುಣ್ಯದಲ್ಲಿ ತುಳಿಯುತ್ತಿದ್ದಂತೆ ಬಲವಾಗಿ ಪೆಡಲ್ ತುಳಿಯುತ್ತಿರಲಿಕ್ಕಿಲ್ಲ ಎಂದೇ ನಾನು ಹೇಳಿದ್ದು."

ಇದಕ್ಕೆ ನನ್ನಲ್ಲಿ ಉತ್ತರವಿರಲಿಲ್ಲ. ಸುಮ್ಮನೆ ಸೈಕಲ್ಲನ್ನು ತಳ್ಳಿಕೊಂಡು ಹೊರಬಿದ್ದೆ. ನನ್ನ ಸ್ಥಾನದಲ್ಲಿ ನೀವೇ ಇದ್ದರೂ ಉತ್ತರ ಹೇಳುತ್ತಿದ್ದಿರಾ? ಇಲ್ಲ ತಾನೇ? ಈಗೇನನ್ನುತ್ತೀರಿ?

ಇನ್ನೊಂದು ದಿನದ ಮಾತು. ಶರೀರಶಾಸ್ತ್ರದ ಹೀಟ್ ಕನ್ಸರ್ವೇಶನ್ ಅರ್ಥಾತ್ ಉಷ್ಣತಾ ರಕ್ಷಣೆಯ ಬಗ್ಗೆ ಅವಳ ವಿಚಾರಗಳೂ ಕಡಿಮೆ ಮೌಲಿಕವಾಗಿಲ್ಲ. ಒಂದು ರಾತ್ರಿ ಊಟಕ್ಕೆ ಕುಳಿತಿದ್ದೆ. ಸಹಜವಾಗಿ "ಈವತ್ತು ಸ್ವಲ್ಪ ಛಳಿ ಹೆಚ್ಚು" ಎಂದೆ. ನೀವಾಗಿದ್ದರೆ ಅಥವಾ ನಿಮ್ಮ ಸೌಭಾಗ್ಯವತಿಯಾಗಿದ್ದರೆ, "ಕಿಡಕಿ ಮುಚ್ಚಲೆ?" ಎಂದು ಕೇಳುತ್ತಿದ್ದಿರಿ. ಆದರೆ ನನ್ನ ಹೆಂಡತಿ ಏನಂದಳು ಗೊತ್ತೆ? "ಛಳಿಯೂ ಇಲ್ಲ, ಹೆಚ್ಚೂ ಇಲ್ಲ. ಗಪಗಪ ತಿನ್ನುತ್ತೀರಿ. ಛಳಿಯಾಗದೆ ಏನು ಮಾಡೀತು?" ಎಂದಳವಳು. ನಾನು ಬಾಯಿಗೆ ಒಯ್ಯುತ್ತಿದ್ದ ತುತ್ತನ್ನು ಅರ್ಧಕ್ಕೇ ನಿಲ್ಲಿಸಿ ಅವಳ ಮುಖ ನೋಡಿದೆ. ಅವಳು ವಿವರಣೆ ಕೊಟ್ಟಳು. "ಹೌದು ಗಪಗಪ ಅನ್ನ ತಿಂದಾಗ ಬಹಳಷ್ಟು ರಕ್ತ ಹೊಟ್ಟೆಯ ಕಡೆ ಹರಿಯುತ್ತದೆ. ದೇಹದ ಉಳಿದ ಭಾಗಗಳಿಗೆ ರಕ್ತ ಕಡಿಮೆ ಬಿದ್ದು ಅಲ್ಲಿಯ ಚರ್ಮದ ಬಿಸಿ ಕುಗ್ಗುತ್ತದೆ. ಆದ್ದರಿಂದ ಛಳಿಯ ಅನುಭವವಾಗುವುದು."

ಅಷ್ಟರಲ್ಲಿ ಕಿಡಕಿಯ ಮೂಲಕ ಬೆಕ್ಕೊಂದು ಒಳಗೆ ಬಂತು. 'ಹುಶಾ' ಎಂದು ಅದನ್ನು ಓಡಿಸಿ ನನ್ನ ಹೆಂಡತಿ ಕಿಡಕಿ ಮುಚ್ಚಿದಳು. ಅವಳ ಮಾತಿನ ಅನುಭವ ಪಡೆಯಲೆಂದು ನಾನು ಆರೋಗ್ಯಶಾಸ್ತ್ರದ ನಿಯಮಾನುಸಾರ ಒ
ದೊಂದು ತುತ್ತನ್ನೂ ಮೂವತ್ತೆರಡು ಸ
ಜಗಿದು ತಿನ್ನಲಾರಂಭಿಸಿದೆ. ಎಲಾ! ಹೌದ
ಮೊದಲಿನಷ್ಟು ಛಳಿಯಾಗುವುದು ನಿಂತಿತು.

ಒಮ್ಮೆ ನಮ್ಮ ಮಗುವಿಗೆ ನಾನು ಸ್ನಾನ ಹಾ
ಬೇಕಾದ ಪ್ರಸಂಗ ಬಂತು. ಅಂದೇ ಸಂ
ಮಗುವಿಗೆ ನೆಗಡಿಯಾಯಿತು. ನಾನು ಸ್ನಾ
ಮಾಡುವುದು ಯಾವಾಗಲೂ ಉಗುರು ಬೆಚ
ಗಿನ ನೀರು. "ನೀರು ಬಿಸಿಬಿಸಿ ಇರಲಿ ಎಂದಿದ
ನಿಮಗೆ ತಣ್ಣೀರೇ ಬಿಸಿಯಾಗಿರುತ್ತದೆ. ಈ
ಮಗುವಿಗೆ ನೆಗಡಿ ಬಂತು." ಎಂದಳು ನನ್ನಾಕೆ
ನ್ಯಾಯವಾಗಿ ಅಂದರೆ ನಾನು ಸ್ನಾನ ಹಾಕ
ವಾಗ ಮಗುವಿನ ಮೈಗೆ ಗಾಳಿ ಹತ್ತದಂ
ನೋಡಿಕೊಂಡಿದ್ದೆ. ಸ್ನಾನ ಹಾಕಿ ಮೈ ಚೆನ್ನಾ
ಒರೆಸಿದ್ದೆ. ನಾನು ಸ್ನಾನ ಹಾಕಿದ್ದರಿಂದಲೇ
ನೆಗಡಿ ಬಂತು ಎನ್ನುವುದು ಅವಳ ಧಾರ್ಷ್ಟ್ಯ
ಎಂದು ನನಗನಿಸಿತು. "ಸಾಕು ಬಿಡು. ದೊಡ
ಪಂಡಿತಳಂತೆ ಮಾತಾಡಬೇಡ" ಎಂದು ನಾನನ
ವಷ್ಟರಲ್ಲಿ ಅವಳು "ಇದರಲ್ಲಿ ಪಂಡಿತ-ಪಾಮ
ಪ್ರಶ್ನೆಯಿಲ್ಲ. ಉಗುರುಬೆಚ್ಚಗಿನ ನೀರು ಹಾ
ದರೆ ನೆಗಡಿ ಬಾರದೆ ಉಳಿಯುತ್ತದೆಯೇ
ಮೈಗೆ ಬಡಿಯುವ ಗಾಳಿ ಬಿಸಿ ಸತ್ವವಿಲ್ಲ
ಉಗುರುಬೆಚ್ಚನ್ನ ನೀರನ್ನು ತಣ್ಣಗೆ ಮಾ
ಬಿಡುತ್ತದೆ. ಆ ನೀರಿನ ತಂಪು ದೇಹದೊಳ
ಪ್ರವೇಶಿಸಿ ನೆಗಡಿಯನ್ನು ತರುತ್ತದೆ. ಅದಕ್
ಬಿಸಿಬಿಸಿ, ಕುದಿಕುದಿ ನೀರನ್ನು ಮಕ್ಕಳಿಗೆ ಹಾ
ಬೇಕು. ಗಾಳಿ ಎಷ್ಟು ಒದ್ದಾಡಿದರೂ ಅದು
ಆ ನೀರನ್ನು ಪೂರ್ತಿ ತಣ್ಣಗೆ ಮಾಡಲಿಕ್ಕಾಗು
ದಿಲ್ಲ. ಮಗುವಿನ ದೇಹದೊಳಗೆ ತಂಪು ಪ್ರವೆ
ಸುವುದಿಲ್ಲ. ನೀರಿನ ಕಾವು ದೇಹದೊಳಗ
ಸಂಚರಿಸಿ ಮಗುವಿಗೆ ಆರೋಗ್ಯವನ್ನು ದಯಪ
ಲಿಸುತ್ತದೆ" ಎಂದಳು. ದ್ರೋಣನ ಮುಂ
ವಿರಾಟನೇ ಎಂದು ಸುಮ್ಮನಾದೆ.

ಇನ್ನೊಂದು ಮಾತನ್ನು ಹೇಳಿದರೆ ನಿಮ್ಮ
ನಂಬಿಕೆ ಪೂರ್ಣ ಹುಟ್ಟೀತು ಎಂದು ನಿಮ್ಮ ಮು

ನೋಡಿದರೆ ಅನಿಸುತ್ತದೆ. ನನಗೆ ಒಂದು ಕಾದಂಬರಿ ಬರೆಯಬೇಕೆಂಬ ಹುಚ್ಚು ಬಲವಾಗಿತ್ತು. ಮಧ್ಯರಾತ್ರಿಯ ವರೆಗೂ ದೀಪ ಉರಿಸಿ, ಚಹಾ-ಕಾಫಿ ಕುಡಿದು, ಸಿಗರೇಟು ಸೇದಿ ಮಾಡಿದ ಪ್ರಯತ್ನವೆಲ್ಲ ನೀರಿನಲ್ಲಿ ತೊಳೆದ ಹುಣಸೇಹಣ್ಣಿನಂತಾಗುತ್ತಿದ್ದುದನ್ನು ಕಂಡು ಅವಳಿಗೆ ಕನಿಕರ ಹುಟ್ಟಿರಬೇಕು. ಒಂದು ರಾತ್ರಿ ನಾನು ಏನು ಬರೆಯಬೇಕೆಂದು ಹೊಳೆಯದೆ ವಿಚಾರಮಗ್ನನಾಗಿ ಪೆನ್ನಿನ ತುದಿಯನ್ನು ತುಟಿಗೆ ಹಚ್ಚಿ ಅದನ್ನು ಕಪ್ಪು ಮಾಡಿಕೊಂಡು ಕುಳಿತಿದ್ದಾಗ ಅವಳು ಬಂದು ನನ್ನ ಮುಂದೆ ಕುಳಿತು ನಕ್ಕಳು. "ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ. ನನಗೇನಾದರೂ ಸ್ಫೂರ್ತಿ ಬರುವಂತೆ ಮಾಡುವ ಬದಲು ಕಿಸಕ್ಕನೆ ನಕ್ಕರೇನು ಬಂತು?" ಎಂದು ಜಬರಿಸಿದೆ.

"ಅದೇ ಅದೇ, ನಿಮಗೆ ಸ್ಫೂರ್ತಿಯನ್ನು ಒದಗಿಸಲೆಂದೇ ಬಂದೆ. ನೀವು ತುಟಿ ಕಪ್ಪು ಮಾಡಿಕೊಂಡದ್ದು ಕಂಡು ನಗೆ ಬಂತು. ಮೂಗಿನ ತುದಿಯ ಮೇಲೇ ಸಿಟ್ಟು ಇಟ್ಟುಕೊಂಡರೆ ನನಗಾದರೂ ಏನು? ಹೋಗಿ ಮಲಗಿಕೊಂಡು ಬಿಡುತ್ತೇನೆ. ನೀವೇನೊ ನಿಮ್ಮ ಸ್ಫೂರ್ತಿಯೇನೊ?"

ನನ್ನ ಹೆಂಡತಿಯ ಸರ್ವಜ್ಞತ್ವದ ಬಗ್ಗೆ ಸಾಕಷ್ಟು ಅನುಭವವಿದ್ದ ನನಗೆ ಕತ್ತಲೆಯಲ್ಲಿ ಮಿಣುಕು ಹುಳು ಕಂಡಂತಾಯಿತು. ಅವಳನ್ನು ರಮಿಸಿ "ಏನುಪಾಯ?" ಎಂದು ಕೇಳಿದೆ.

ಅವಳೆಂದಳು, "ಯಾರೂ ಏನನ್ನೂ ಹೊಸತು ಬರೆಯುವುದಿಲ್ಲ. ಇದ್ದದ್ದನ್ನೇ ತಿರುವು ಮುರುವು ಮಾಡಿ, ಬಣ್ಣ ಬದಲು ಮಾಡಿ, ಬರೆದರೆ ಹೊಸದಾಗಿಬಿಡುತ್ತದೆ. ಈ ಹೊಸ ರೂಪ ಕೊಡುವ ಜಾಣ್ಮೆಗೇ ಸ್ಫೂರ್ತಿಯೆನ್ನುತ್ತಾರೆ. ಇವತ್ತಿನಿಂದ ಪೆನ್ನು-ಕಾಗದ ಕಪಾಟಿನಲ್ಲಿಡಿ. ಹದಿನೈದು ದಿನ ದಿನಕ್ಕೊಂದರಂತೆ ಹದಿನೈದು ಕಾದಂಬರಿ ಓದಿ, ಒಂದೊಂದರಿಂದ ಒಂದೊಂದು ಅಂಶವನ್ನು ಎತ್ತಿಕೊಳ್ಳಿ. ಹದಿನಾರನೇ ದಿನ ಅವನ್ನೆಲ್ಲ ಜೋಡಿಸಿ ಹೆಸರು, ಕಾಲ, ಸ್ಥಳ ಬದಲು ಮಾಡಿ ಬರೆಯಲು ತೊಡಗಿ."

ಹಾಗೇ ಮಾಡಿದೆ ಸ್ವಾಮಿ. ಕಾದಂಬರಿ ಬರೆದು ಮುಗಿಯಿತು. ಪ್ರಕಟವೂ ಆಗಿದೆ. ಕಾದಂಬರಿಯನ್ನು ಸ್ಫೂರ್ತಿದೇವತೆಯಾದ ನನ್ನ ಹೆಂಡತಿಗೇ ಅರ್ಪಿಸಿದ್ದೇನೆ. ನಿಮ್ಮ ಹೆಂಡತಿ ಇಂಥ ಅಮೂಲ್ಯ ಸಲಹೆಯನ್ನಿತ್ತಿದ್ದಾಳೆಯೆ? ಇಲ್ಲವಷ್ಟೇ. ಈಗ ಹೇಳಿ, ನೀವು "ಕ್ಲೀನ್ ಬೌಲ್ಡ್" ಆದಿರೋ ಇಲ್ಲೊ?

ಅದಕ್ಕೇ ನಾನು "ನನ್ನ ಹೆಂಡತಿ ಇದ್ದಾಳೆ, ನೋಡಿ......" ಎಂದರೆ ನಾನು ಮಾತ್ರವಲ್ಲ, ನೀವು ಕೂಡ ಅಭಿಮಾನಪಟ್ಟುಕೊಳ್ಳಬೇಕು. *

ಮಹಾದೇವಭಾಯಿ 'ಸಾಹೇಬ'ರಾದದ್ದು

ಎ. ಎಸ್. ರಾಮಕೃಷ್ಣ

ಮುಂದೆ ಮಹಾತ್ಮಾ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿ ತಪಸ್ಸೇ ಎನ್ನಬಹುದಾದ ಅತ್ಯಂತ ಕಟ್ಟುನಿಟ್ಟಿನ ಅವಿಶ್ರಾಂತ ಜೀವನವನ್ನು ನಡೆಸಿದ ಮಹಾದೇವ ದೇಸಾಯಿಯವರು ಬಾಲ್ಯದಲ್ಲಿಯೂ ಇತರ ಮಕ್ಕಳಿಗಿಂತ ಹೆಚ್ಚಿನ ಕರ್ತವ್ಯ ನಿಷ್ಠೆಯನ್ನೂ ತಮ್ಮ ವಯಸ್ಸಿಗೆ ಮೀರಿದ ವಿವೇಕವನ್ನೂ ತೋರಿಸುತ್ತಿದ್ದರು. ಆದರೆ ರಸಿಕತನ ವಿನೋದ ಶೀಲತೆಗಳೂ ಅವರಿಗೆ ಸಹಜವಾಗಿ ಬಂದಿದ್ದವು. ಮುಂದೆ ಅವರ ವಿದ್ವದ್ರಸಿಕತೆ ಹಾಗೂ ಹಾಸ್ಯ ಪ್ರಿಯತೆ ಗಾಂಧೀಜಿ ಬೀಡು ಬಿಟ್ಟಲ್ಲೆಲ್ಲ ಬೆಳಗುತ್ತಿದ್ದುದನ್ನು ಕಾಣಬಹುದಾಗಿತ್ತು. ಆ ಮಟ್ಟಿಗೆ ಅವರನ್ನು ಮೀರಿಸುವವರಿದ್ದಿದ್ದರೆ ಅದು ಸರೋಜಿನಿ ದೇವಿ ಮಾತ್ರ.

ಮಹಾದೇವರು ಚಿಕ್ಕವರಾಗಿದ್ದಾಗ ಒಂದು ಸಲ ಅವರ ಹುಡುಗಾಟಿಕೆ ಸಹವಾಸ ಫಲದಿಂದ ಅವರಿಗೆ ಸಹಜವಲ್ಲದಷ್ಟು ಮುಂದೆ ಹೋಗಿತ್ತು. ಆ ಸಂದರ್ಭದಲ್ಲಿ ಅವರು ಮೈಮುರಿಸಿಕೊಳ್ಳದೆ ಪಾರಾದದ್ದು ದೊಡ್ಡದು.

ಆಗ ಮಹಾದೇವರ ತಂದೆ ಸೂರತ್ ಸಮೀಪದ ಆದಾಜನ್ ಎಂಬ ಹಳ್ಳಿಯಲ್ಲಿ ಶಾಲಾ ಮಾಸ್ತರರಾಗಿದ್ದರು. ಮಹಾದೇವರು ಅಲ್ಲಿಂದ ಸೂರತದ ಹೈಸ್ಕೂಲಿಗೆ ಹೋಗುತ್ತಿದ್ದರು. ಒಮ್ಮೆ

ಇದ್ದಕ್ಕಿದ್ದ ಹಾಗೆ ಪ್ಲೇಗುರೋಗ ಕಾ
ಕೊಂಡು ಹಬ್ಬತೊಡಗಿದ್ದರಿಂದ ಸೂರತದ ಶ
ಗಳನ್ನೆಲ್ಲ ಮುಚ್ಚಿದರು. ಆಗ ಮಹಾದೇವರ
ಮನೆಯ ಇತರ ಹುಡುಗರನ್ನೂ ಅವರ ಚಿಕ
ಬಾಪೂಭಾಯಿಯವರಿದ್ದ ಹಳ್ಳಿಗೆ ಕ
ಸಿದರು. ಆ ಹಳ್ಳಿಯಲ್ಲಿ ಆಗ ಒಂದು ರ
ಲೀಲಾ ಮೇಳ ಬೀಡುಬಿಟ್ಟಿತ್ತು. ಮಹಾ
ವರು ತಮ್ಮ ಚಿಕ್ಕಪ್ಪನ ಮಗ ಭೋಳೂಭಾ
ಮತ್ತು ಇತರ ಹುಡುಗರನ್ನು ಕೂಡಿಕೊ
ಪ್ರತಿ ರಾತ್ರಿಯ ಆಟಕ್ಕೂ ಹಾಜರಾಗುತ್ತಿದ್ದ
ಊರಿನ ಜನರಿಗೆ ಇಂಗ್ಲೀಷ ಶಾಲೆಯಲ್ಲಿ ಓ
ಈ ಪೇಟೆಯ ಹುಡುಗರನ್ನು ಕಂಡು ಒ
ಯೋಚನೆ ಹೊಳೆಯಿತು. ಮದ್ಯಪಾನದ ಕೆ
ಗಳ ಕುರಿತು ಭಾಷಣ ಕೊಡಬೇಕೆಂದು ಅ
ಹುಡುಗರನ್ನು ಕೇಳಿಕೊಂಡರು. ಭೋಳೂಭ
ರಂಗಮಂಟಪದಲ್ಲಿ ನಿಂತು ಭರ್ಜರಿ ಭಾ
ಮಾಡಿದ. ಆದರೆ ಮಹಾದೇವರಿಗೆ ಸಭೆಯ ಮ
ದೆನಿಂತು ಮಾತನಾಡಲು ಅಳುಕಾಯಿತು.
ಹಿಂದಿನಿಂದ ಬೇಕಾದರೆ ಭಾಷಣ ಕೊಡು
ಎಂದರು. ಜನರು ಒಪ್ಪಿದ್ದರಿಂದ ತೆರೆಯ
ಯಲ್ಲಿಯೇ ಅವರ ಭಾಷಣ ನಡೆಯಿತು. ಎ
ಭಾಷಣಗಳು ಜನರ ಮೆಚ್ಚುಗೆಗೆ ಪಾತ್ರವಾ

ಹುಡುಗರ ಮದ್ಯಪಾನ ನಿಷೇಧ ಕಾರ್ಯಾಚರಣೆ ಅಷ್ಟಕ್ಕೇ ನಿಲ್ಲಲಿಲ್ಲ. ಅವರ ಅತ್ಯುತ್ಸಾಹದ ಫಲವಾಗಿ ಬೇರೊಂದು ರೂಪವನ್ನು ಅದು ತಾಳಿತು.

ಹೊಸ ಯೋಜನೆ ಮೊದಲು ಹೊಳೆದದ್ದು ಆಡಾಜನ್ ಗ್ರಾಮದ ಪಟೇಲನ ಮಗನಿಗೆ. ಮಹಾದೇವಭಾಯಿ ಬೆಳ್ಳಗೆ ಫರಂಗಿಯವರ ಹಾಗಿದ್ದರು. ಹ್ಯಾಟು ಬೂಟು ಸೂಟುಗಳನ್ನು ತೊಟ್ಟರೆ ಪಕ್ಕಾ ಸಾಹೇಬರೇ ಆಗುತ್ತಾರೆ ಎಂಬುದು ಆ ನಿಸ್ಸೀಮ. ಮಾತ್ರವಲ್ಲದೆ ಮಹಾದೇವ ಆಗಲೇ ಸೊಗಸಾಗಿ ಇಂಗ್ಲೀಷ ಮಾತಾಡಬಲ್ಲವರಾಗಿದ್ದರು. ಸರಿ; ಆ ಊರಿನ ಹೆಂಡದಂಗಡಿಯ ಗುತ್ತಿಗೆದಾರನಾದ ಪಾರ್ಸಿ ಆಸಾಮಿಗೆ ಬುದ್ಧಿ ಕಲಿಸುವ ಯೋಜನೆಯೊಂದು ಸಿದ್ಧವಾಯಿತು. ಅದು ಕಾರ್ಯರೂಪಕ್ಕೆ ಬರುವುದಕ್ಕೂ ತಡವಾಗಲಿಲ್ಲ.

ಹೆಂಡದಂಗಡಿಗೆ 'ಸಾಹೇಬರು' ಭೇಟಿಕೊಡುವುದೆಂದು ನಿಶ್ಚಯವಾಯಿತು. ಮಹಾದೇವಭಾಯಿಗೆ ಅನಿರೀಕ್ಷಿತ ಭೆಟ್ಟಿ ಕೊಡುವ ಸಾಹೇಬರ ಪಾತ್ರ, ಭೋತೂಭಾಯಿಗೆ ಸಾಹೇಬರ ಖಾಸಗಿ ಗುಮಾಸ್ತನ ಪಾತ್ರ. 'ಸಾಹೇಬ'ರು ತಕ್ಕ ಉಡಿಗೆ ತೊಡಿಗೆ ತೊಟ್ಟು ಕೈಯಲ್ಲೊಂದು ಬಾಜೂಕಿನ ಬೆತ್ತವನ್ನು ಹಿಡಿದು ಸಿದ್ಧರಾದರು. ತನ್ನ ಪರಿವಾರವನ್ನು ಕೂಡಿಕೊಂಡು ಹೆಂಡದಂಗಡಿಯ ಕಡೆಗೆ ಹೊರಟರು.

ಹೆಂಡದಂಗಡಿಯ ಪಾರ್ಸಿ, ಸಾಹೇಬರು ಬರುತ್ತಿದ್ದಾರೆಂದು ತಿಳಿದೊಡನೆ ಬಲು ದಿಗಿಲುಗೊಂಡ. ನೀರು ಬೆರೆಸಿದ ಕಳ್ಳು ಅವನಲ್ಲಿ ಬೇಕಾದ ಹಾಗಿತ್ತು. ಬಲು ಬೇಗನೆ ಆತ ಅದನ್ನೆಲ್ಲ ಚೆಲ್ಲಿಬಿಟ್ಟ. ಅಷ್ಟರಲ್ಲಿ ಸಾಹೇಬರ ಸವಾರಿ ಪ್ರತ್ಯಕ್ಷವಾಯಿತು. ಪಟೇಲರ ಮಗ ಅವರನ್ನು ಪರಾಮರ್ಶೆಗೆಂದು ಹೆಂಡದಂಗಡಿಯ ಸುತ್ತ ಕರೆದುಕೊಂಡು ಹೋದ. ಸಾಹೇಬರ ಇಂಗ್ಲೀಷೋ ಬಲು ಝೋರು! ಸಾಹೇಬರು ಇಂಗ್ಲೀಷಿನಲ್ಲಿ ಏನೇನೋ ಹೇಳುವುದು, ಗುಮಾಸ್ತೆ ಭೋತೂಭಾಯಿ ಸಾಹೇಬರ ಸವಾಲುಗಳನ್ನು ಗುಜರಾತಿಯಲ್ಲಿ ತಿಳಿಸುವುದು– ಹೀಗೆ ಒಂದೈದು ನಿಮಿಷ ನಡೆದಿರಬಹುದು. ಅಷ್ಟರಲ್ಲಿ ದುರ್ದೈವವಶಾತ್ ಸಾಹೇಬರಿಗೆ ಕೊಂಚ ತಲೆ ತುರಿಕೆಯುಂಟಾಯಿತು. ಆ ಬಾಧೆಯನ್ನು ನಿವಾರಿಸಲು ಹ್ಯಾಟ್ ಎತ್ತದೆ ಉಪಾಯವಿಲ್ಲ. ಹ್ಯಾಟ್ ಕೊಂಚ ಮೇಲೆ ಸರಿಯಿತು. ಆಗ ನೋಡಿ, ಆಗಿಬಿಟ್ಟಿತ್ತು, ಅನಾಹುತ! ಸಾಹೇಬರ ತಲೆಯ ಮೇಲೆ ಬಿಳ್ಳು ಜುಟ್ಟು! ಹಾಗೆ ಜುಟ್ಟಿಡುವುದು ಗುಜರಾತಿಗಳ ಸಂಪ್ರದಾಯ. ಆದರೆ ಫರಂಗಿ ಸಾಹೇಬರಿಗೂ ಉಂಟೆ ಅದು?

ಗುಟ್ಟು ರಟ್ಟಾಯಿತು. ಇನ್ನೇನು ಹೆಂಡದಂಗಡಿಯ ಪಾರ್ಸಿ ಟೊಂಕ ಮುರಿದರೂ ಮುರಿದ; ಚರ್ಮ ಸುಲಿದರೂ ಸುಲಿದ– ಎಂದುಕೊಂಡು ಸಾಹೇಬರ ಪಟಾಲಂನವರೆಲ್ಲ ನಡುಗಿದರು. ಆದರೆ 'ಗುಮಾಸ್ತೆ' ಭೋತೂಭಾಯಿ ಬಲು ಚೂಟಿ ಆಸಾಮಿ. ಆತ ಕೊಂಚವೂ ಅಧೀರನಾಗದೆ "ಕೇಳಯ್ಯ, ಈ ಸಾಹೇಬರು ವಿಲಾಯತಿಯವರಲ್ಲ; ಮದರಾಸು ಕಡೆಯಿಂದ ಬಂದವರು ಮೊನ್ನೆ ಮೊನ್ನೆ ಡಿಗ್ರಿ ತೆಗೆದುಕೊಂಡರು—" ಎಂದು ಮುಂತಾಗಿ ಹೆಂಡದಂಗಡಿಯವನ ಮುಂದೆ ನಾಲಗೆ ಝಳಪಿಸತೊಡಗಿದ. ಅಷ್ಟರಲ್ಲಿ ಪಟಾಲಂನವರೆಲ್ಲ ಪರಾರಿಯಾದರು. ಗುಮಾಸ್ತರೂ ಬಡಬಡಿಸಿಬಿಟ್ಟು ಸಾಹೇಬರೊಡನೆ ಉಸಿರು ಹಿಡಿದು ಅಲ್ಲಿಂದ ಕಂಬಿ ಕಿತ್ತರು. ಆ ಮೇಲೆ ಬಹಳ ಸಮಯದ ತನಕ ಪಾರ್ಸಿಯ, ಕ್ರೋಧಾಗ್ನಿಯಿಂದ ತಪ್ಪಿಸಿಕೊಳ್ಳಲು ಅವರೆಲ್ಲ ಆ ದಾರಿಯನ್ನು ಬಿಟ್ಟು, ಬಳಸಿಕೊಂಡು ಬೇರೊಂದು ದಾರಿಯಲ್ಲಿ ಶಾಲೆಗೆ ಹೋಗಬೇಕಾಯಿತು. *

ಯಮ ಮತ್ತು ನಿ ಯ ಮ

ವ್ಯೋಹಾರ ರಾಜೇಂದ್ರ ಸಿಂಹ

ಜಗತ್ತನ್ನು ನಿಯಂತ್ರಿಸುವುದು 'ಕಾಲ.' ಅಂತೆಯೇ ಅದಕ್ಕೆ 'ಯಮ'ನೆನ್ನುವುದು. ನಮ್ಮನ್ನು ನಾವೇ ನಿಯಂತ್ರಿಸಿಕೊಂಡರೆ ಅದು ಧರ್ಮ— ಧರ್ಮರಾಜ! ಶಾಸನವು ನಿಯಂತ್ರಿಸಿದರೆ ಅದು ಯಮ; ಯಮರಾಜ! ಈ 'ಯಮ' ಸದಾ ನಮ್ಮನ್ನು ಬೆನ್ನಟ್ಟಿರುತ್ತಾನೆ. ಇವನನ್ನು ತಡೆಯುವ ಉಪಾಯ ಒಂದೇ. ಅದೇ 'ನಿಯಮ'! ಆತ್ಮ ನಿಯಂತ್ರಣದ ನಿಯಮ. 'ಯಮ' ಮತ್ತು 'ನಿಯಮ'ಗಳು ಸ್ನೇಹಿತರೆಂಬುದು ಈಶ್ವರೀ— ನಿಯಮ. ಇದು ಸೃಷ್ಟಿಯಲ್ಲಿ ಗುಪ್ತರೂಪದಿಂದ ಇರುತ್ತದೆ. ಈ ವಿಶ್ವವು ಪರಮಾತ್ಮನ ಚಿತ್ರ. ಇದರಲ್ಲೇ ಈ 'ನಿಯಮ' ಅಡಗಿದೆ. ಅಂತೆಯೆ ಅದಕ್ಕೆ 'ಚಿತ್ರಗುಪ್ತ'ನೆನ್ನುವುದು. ಶಾಸನದಿಂದ ಇಲ್ಲವೆ ದಂಡಶಕ್ತಿಯಿಂದ ಸಂಚಾಲಿತವಾಗುವುದೇ 'ಯಮ' ಮತ್ತು ಸಮಾಜದ ಮುಖೇನ ಸ್ವೇಚ್ಛೆಯಿಂದ ಸಂಚಾಲಿತವಾಗುವುದೇ 'ನಿಯಮ'!

ಈ 'ನಿಯಮ'ವನ್ನು 'ಮನು' (ಮನನಶೀಲ ಮನುಷ್ಯ) ನಿರ್ಮಿಸಿದ. ಜಗತ್ತಿನ ಜನರಲ್ಲಿ ಎರಡು ಬಗೆ ಇರುತ್ತದೆ. ಒಂದು 'ಮಸಿಜೀವಿ', ಇನ್ನೊಂದು 'ಅಸಿಜೀವಿ'. ಸ್ವಂತ ಬುದ್ಧಿಯಿಂದ ವ್ಯವಹರಿಸುವವರು 'ಮಸಿಜೀವಿ'ಗಳು ಮತ್ತು ದಂಡ–ಶಾಸನದ ಮೇರೆಗೆ ವ್ಯವಹರಿಸುವವರು 'ಅಸಿಜೀವಿ'ಗಳು. 'ಅಸಿ'ಯ ದುರುಪಯೋಗ ದಮನ ಮಾಡಲಿಕ್ಕಾಗಬಹುದು. ಆದರೆ 'ಮ[illegible] ಯ ಉಪಯೋಗ ಸದಾ ವಿನಯಪೂರ್ವ[illegible] ನಿಯಮನ ಮಾಡಲಿಕ್ಕೇ ಆಗುತ್ತದೆ. ಅಂತ[illegible] 'ಯಮ'ನ ಕೈಯಲ್ಲಿ ದಂಡಪಾಶಗಳಿರು[illegible] ಮತ್ತು 'ಚಿತ್ರ–ಗುಪ್ತ' ('ನಿಯಮ') ನ ಕೈಯ[illegible] ದೌತಿ ಲೆಕ್ಕಣಿಕೆಗಳಿರುವವು. ಆಧುನಿಕ ಭ[illegible] ಯಲ್ಲಿ ವಿವರಿಸುವದಾದರೆ ಅದನ್ನೇ ಒಬ್ಬನ [illegible] ಬಾಂಬು, ಮತ್ತೊಬ್ಬನ ಶಸ್ತ್ರ ಲೆಕ್ಕಣಿಕೆ ಎ[illegible] ಹೇಳಬಹುದು.

ಲೇಖನಿಯ ಹತ್ತರ 'ಪರಮ ಪ್ರೇಮ ಪ[illegible] ಮೃದುಮಸಿ'ಯ ಅಕ್ಷಯ ಭಂಡಾರ. ಅ[illegible] ಬಾಂಬಿನ ಹತ್ತರ ದ್ವೇಷ ಮತ್ತು ಹೇಸಿಕ[illegible] ಭಂಡಾರ. ದಂಡದ ಹಿಂದೆ ಭಯ ಮತ್ತು ಮು[illegible] ವಿನಾಶ. ಆದರೆ ಲೇಖನಿಯ ಹಿಂದೆ ಬ[illegible] ಮತ್ತು ಮುಂದೆ ವಿಕಾಸ. ಲೇಖನಿ ಮ[illegible] 'ಮಸಿ'ಯಿಂದ ಶಾಸ್ತ್ರದ ಉತ್ಪತ್ತಿ; 'ಶಾಸ್ತ್ರ[illegible] ಪ್ರಪಂಚದ ಬುದ್ಧಿಯನ್ನು ಪ್ರೇಮಪೂರ್ವ[illegible] ನಿಯಮನಗೊಳಿಸುತ್ತದೆ. ಆದರೆ ದಂಡ ಮ[illegible] ಪಾಶದಿಂದ ದಂಡವಿಧಾನದ ಉತ್ಪತ್ತಿ; ದ[illegible] ವಿಧಾನ (ಕಾನೂನು)ವು ಲೋಕವನ್ನು ಹೆ[illegible] ಆಳುತ್ತದೆ. 'ದಂಡ' ವನ್ನು ಯೋಗ್ಯರೀತಿ[illegible] ಉಪಯೋಗಿಸಿದರೆ ಸಮಾಜದ ಸಂರಕ್ಷಣೆಯ[illegible] ಬಹುದು. ಆದರೆ ಹೆಚ್ಚಾಗಿ ಭಕ್ಷಣವೇ ಆಗ[illegible] ರುತ್ತದೆ. ಇದಕ್ಕೆ ಬದಲು ಲೇಖನಿಯ ಬಹ[illegible] ಸದುಪಯೋಗವು ಲೋಕ ಶಿಕ್ಷಣಕ್ಕಾಗಿ [illegible] ತ್ತಿರುತ್ತದೆ. ಶಿಕ್ಷಣವೆ ರಕ್ಷಣದ ಸರ್ವೋತ್ತ[illegible] ಉಪಾಯವು.

'ಮಸಿಜೀವಿ' (ಬುದ್ಧಿಜೀವಿ) ಗಳು ಲೇ[illegible] ಜನ್ಯ-ಶಾಸ್ತ್ರದಂತೆ ಮತ್ತು 'ಅಸಿಜೀವಿ'[illegible] ಶಾಸನ-ಜನ್ಯ ಶಾಸ್ತ್ರದಂತೆ ತಮ್ಮ ತಮ್ಮ ಕಾ[illegible] ಗಳನ್ನು ನಿರ್ವಹಿಸಿದ್ದಾರೆ. ಇಂದು ಇವೆ[illegible] ಮಾರ್ಗಗಳು ಜಗತ್ತಿನೆದುರು ಇವೆ. ಒಂ[illegible] ಆರಿಸುವ ಹೊಣೆಯೂ ಇದೆ. ಆಯ್ಕೆಯ [illegible] ಸಮಯವೂ ಈಗ ಬಂದಿದೆ. ಈಗ ಜ[illegible] ಶಸ್ತ್ರದ ಭಯ ನಿಯಂತ್ರಿತ ಆಡಳಿತ[illegible] ಆರಿಸುವುದೊ ಶಾಸ್ತ್ರದ ಪ್ರೇಮ ಪುರಸ್[illegible] ರಾಜ್ಯವನ್ನು ಆರಿಸುವುದೊ ನೋಡಬೇಕು.

ಅವರ ಒಳವ್ಯಥೆ ಅವರನ್ನು ವಿಕ್ಷಿಪ್ತರನ್ನಾಗಿ ಮಾಡಿತ್ತು

"ಕೆಂಪುದಾರಾ ಫುರ್‌!!"

ಕನ್ಹೈಯ್ಯಲಾಲ ಮಿಶ್ರ 'ಪ್ರಭಾಕರ'

ವಯಸ್ಸಿನಲ್ಲಿ ಹಿರಿಯರಾದವರನ್ನು ಕಂಡರೆ ಅವರೆದುರು ನಮ್ರತೆಯಿಂದಿರುವುದು ನನ್ನ ಸ್ವಭಾವಧರ್ಮವಾಗಿದೆ. ಈ ನನ್ನ ಸ್ವಭಾವಧರ್ಮಕ್ಕೆ ಸಂಬಂಧಪಟ್ಟ ಒಂದು ಮೋಜಿನ ಕತೆ ಇದೆ. ಕೇಳಿರಿ. ೧೯೩೦ ರಲ್ಲಿ ಜೈಲಿನಿಂದ ಹೊರಬಿದ್ದೆ. ಆಗ ಕ್ರೂರ ಬ್ರಿಟಿಶ್ ಸರಕಾರವು ಕಾಂಗ್ರೆಸಿನ ಎದುರು, ಭಾರತದ ಸ್ವಾತಂತ್ರ್ಯ ಚಳವಳಿಯ ಎದುರು ಸೋತು ಮೊಳಕಾಲೂರಿ ನಮ್ಮನ್ನು ಜೈಲಿನಿಂದ ಬಿಡುಗಡೆ ಮಾಡಿತ್ತು. ಆಗಿನ ನಮ್ಮ ಉತ್ಸಾಹ ವೀರಯೋಧನ ಉತ್ಸಾಹದಂತಿತು.

ದೇಶಕ್ಕೆ ದೇಶವೇ ಈ ವಿಜಯದ ಉತ್ಸಾಹದಲ್ಲಿತ್ತು. ಜೇಲಿನಿಂದ ಹೊರಬಿದ್ದು ನಾನು ಅಣ್ಣ ಆನಂದನೊಂದಿಗೆ ನನ್ನೂರಿಗೆ ಬಂದೆ. ಸ್ಟೇಶನ್ನಿನಲ್ಲಿ ಸುಮಾರು ೧೫-೧೬ ಸಾವಿರ ಸ್ತ್ರೀಪುರುಷರು ನಮ್ಮ ಸ್ವಾಗತಕ್ಕಾಗಿ ಕಾದಿದ್ದರು.

ಮೆರವಣಿಗೆ ಮುಗಿಸಿಕೊಂಡು ನಾನು ಮನೆಗೆ ಬಂದಾಗ ಬಹು ಎತ್ತರಕ್ಕೆ– ನನ್ನಿಂದ ಗೌರೀಶಂಕರದಷ್ಟು ಎತ್ತರಕ್ಕೆ ಮುಟ್ಟಿದವರೆನ್ನುವವರೂ ನನ್ನ ಮನೆಗೆ ಬಂದಿದ್ದರು. ಅವರಿಗೂ ಸಂತೋಷವೆನಿಸದಿರಲಿಲ್ಲ. ಆದರೆ ದಿನ ಬೆಳಗಾದರೆ



ಇಂಗ್ಲಿಷ್ ಕಲೆಕ್ಟರನ ಸಹವಾಸದಲ್ಲಿರಬೇಕಾದ ಅವರು ತಮ್ಮ ಸಂತೋಷವನ್ನು ಹೇಗೆ ಮನ ಬಿಚ್ಚಿ ಪ್ರಕಟೀಕರಿಸಿಯಾರು? ಅವರು ಬಂದದ್ದು ನನ್ನ ಓಣಿಯಲ್ಲಿ ಒಂದು ಆಶ್ಚರ್ಯ!

ಅವರ ಭೆಟ್ಟಿ ಮುಗಿಸಿ ನಾನು ತಂದೆಯವರ ಕೋಣೆಗೆ ಹೋದೆ. ಅವರ ಹತ್ತಿರ ಸ್ವಲ್ಪ ವಾರ್ತಾಲಾಪ ಮಾಡೋಣ ಎಂದುಕೊಂಡೆ. ಆದರೆ ಅವರು ಅಸ್ವಸ್ಥರಾಗಿದ್ದಾರೆನಿಸಿತು. ಅಲ್ಲ; ಅವರು ದುಃಖಿಗಳೇ ಆಗಿರಬೇಕು. ಬಹಳೇ ಆಗ್ರಹಮಾಡಿದಾಗ ಕೊನೆಗಿಷ್ಟು ನುಡಿದರು: "ಬಹುಶಃ ಹಿರಿಯರ ಪುಣ್ಯ ಮುಗಿಯುತ್ತಾ ಬಂದಿರಬೇಕು!"

ಅವರು ಮುಂದುವರಿಸಿದರು: "ನೀನು ಖಾನ ಬಹಾದ್ದೂರ ಶೇಖ ಜಿಯಾ ಉಲಹಕ್‌ರೊಂದಿಗೆ ಮಾತಾಡುತ್ತಿದ್ದಾಗ ಅಬ್ಬಾ ನಿನ್ನ ಹತ್ತಿರ ಬಂದಿದ್ದರು. ನೀನು ಎದ್ದು ಅವರ ಪಾದ ಮುಟ್ಟಿ ಆಶೀರ್ವಾದ ಹೊಂದುವುದೊತ್ತಟ್ಟಿಗಿರಲಿ, ಕಣ್ಣೆತ್ತಿ ನೋಡಲಿಲ್ಲ. ಅವರಿಗೆ ಅವಮಾನವಾಗಿ ಅವರು ಹೋಗಿಬಿಟ್ಟರು."

"ನಾನು ನೋಡಿಲ್ಲ. ನೋಡಿದ್ದರೆ ಖಂಡಿತವಾಗಿ ಅವರನ್ನು ಹಾಗೇ ಹೋಗಗೊಡುತ್ತಿದ್ದಿಲ್ಲ."

"ಖಾನ್ ಬಹಾದ್ದೂರ ಶೇಖರಂಥವರು ನಮ್ಮ ಮನೆಗೆ ಬರುವುದು ನಮ್ಮ ಪರಮಭಾಗ್ಯವೇ ಸೈ. ಆದರೆ ಮಗೂ, ಹಿರಿಯರ ಅವಮಾನ ನಡೆದರೆ ಅಲ್ಲಿಗೆ ಎಲ್ಲ ಪುಣ್ಯವು ಮುಗಿದುಹೋಗುತ್ತದೆ."

ಈ ಅಬ್ಬಾ ಎಂದರೆ ಯಾರೆಂಬುದನ್ನು ಮೊದಲು ಹೇಳುವೆ. ನಮ್ಮ ಹಿಂದೂ ಓಣಿಯೊಳಗಿನ ಏಕ-ಮಾತ್ರ ಮುಸಲ್ಮಾನರಿವರು. ಅವರು ದರ್ಜಿಗಳು. ವಯಸ್ಸು ನನ್ನ ತಂದೆಯವರಿಗಿಂತ ಹೆಚ್ಚು. ಅವರ ಮಕ್ಕಳೊಟ್ಟಿಗೆ ನಾನೂ ಅವರನ್ನು ಅಬ್ಬಾ ಎಂದೇ ಸಂಬೋಧಿಸುತ್ತಿದ್ದೆ.

ನಾನು ಎದ್ದು ಅವರಲ್ಲಿಗೆ ಹೋಗಿ ಅವರ ಪಾದ ಮುಟ್ಟಿ ನಮಸ್ಕರಿಸಿ ಆದ ತಪ್ಪಿಗಾಗಿ ಕ್ಷಮೆ ಕೇಳಿದೆ. ಅವರು ಎಬ್ಬಿಸಿ ಆಲಿಂಗಿಸಿದರು. ನಮ್ಮ ಮನೆಗೆ ಬಂದು ತಂದೆಯವರಿಗೆ ಪ್ರೀತಿಯಿ[illegible] ಜಬರಿಸಿ ಹೇಳಿದರು: "ನೀವಿನ್ನು ಹರಿದಾ[illegible] ತೀರ್ಥಕ್ಷೇತ್ರದಲ್ಲೇ ಇರುವುದೊಳಿತು. ನಿ[illegible] ಖರ್ಚಿಗೆ. ಅಲ್ಲಿಯೇ ಕಳಿಸಿಕೊಡಲಾಗುವು[illegible] ಮುಪ್ಪಡರಿದ ಹಾಗೆ ತಲೆ ಕೆಡುತ್ತಾ ಹೊ[illegible] ಹುಡುಗರನ್ನು ಕಾಡಿಸಹತ್ತಿದಿರಿ. ನಾನು ಹೊ[illegible] ಹೋದದ್ದು ಖಾನ ಬಹಾದ್ದೂರರನ್ನು ನೋ[illegible] ಅದನ್ನು ನೀವು ತಿರುವುಮುರುವು ಮಾಡಿಬಿಟ್ಟಿ[illegible] ಭಪ್ಪರೆ ಭೂಪ!"

ತಂದೆಯವರು ಆನಂದಿತರಾದರು. ಆದ[illegible] ಹಿರಿಯರ ಗೌರವದ ಬಗ್ಗೆ ನನ್ನಲ್ಲಿ ಒಂದು ಭ[illegible] ಭಾವನೆ ಉಳಿದೇ ಹೋಯಿತು. ಆಮೇಲೆ [illegible] ತಿಂಗಳಾದ ಮೇಲೆ ನನ್ನ ತಂದೆಯವರ ಆರೋ[illegible] ಕೆಟ್ಟಿತು. ನಾನು ಆರೈಕೆ ಮಾಡತೊಡಗಿ[illegible] ಒಂದು ವಾರ ಶಾಂತರೀತಿಯಿಂದ ಔ[illegible] ಕುಡಿದು ಆಮೇಲೊಮ್ಮೆ ನನ್ನೆದುರು, "ಔ[illegible] ಯಿಂದ ಏನೂ ಪ್ರಯೋಜನವಾಗಿಲ್ಲ ಎ[illegible] ದನ್ನು ನೋಡುತ್ತೀಯಲ್ಲ!" ಎಂದರು.

ಹೆದರಬೇಕಾದ ಸಂದರ್ಭವೇನಲ್ಲವಾದ್ದರಿ[illegible] ನಾನಂದೆ. "ಹೌದು, ಅಂತೆಯೇ ಇನ್ನು ಸರ್ಜ[illegible] ರನ್ನೇ ಕರೆಸಬೇಕೇನೊ ಎಂದು ಯೋಚಿ[illegible] ತ್ತಿದ್ದೇನೆ."

"ಹುಚ್ಚಪ್ಪಾ, ಯಾವ ಡಾಕ್ಟರ ಬಂದರೇ[illegible] ಮೃತ್ಯುವನ್ನು ತಡೆಯಬಲ್ಲನೆ? ಎಲ್ಲ ಔ[illegible] ಯನ್ನು ಕಾಲಭಗವಂತನೇ ಕುಡಿದು ಬಿ[illegible] ನಾನು ಮತ್ತೆ ರೋಗಿಯಾಗಿಯೇ ಉಳಿ[illegible] ನೋಡಿಲ್ಲಿ" ಎಂದರು.

ಕೊಂಚ ತಡೆದು ಹೀಗೆಂದರು, "ನೋ[illegible] ಮಗೂ, ಇನ್ನು ಗುರುಪೂರ್ಣಿಮೆ ಬಂತು. ಇ[illegible] ಔಷಧಿ ಸಾಕು. ಗಂಗಾಜಲವೇ ನನ್ನ ಬಾಯ[illegible] ಬೀಳಲಿ. ಇನ್ನು ಐಳೇ ದಿನಕ್ಕೆ ಪೂರ್ಣಿ[illegible] ಅಂದೇ ಹೊರಡುವೆ."

ಆಯಿತು. ಸರಳ ಸ್ವಭಾವದಿಂದ ನಾನು ಅ[illegible] ಮಾತನ್ನು ನಂಬಿದೆ. ಅವರಿಗಾಗಿ ಗಂಗಾಜ[illegible] ವ್ಯವಸ್ಥೆ ಮಾಡಿದೆ. ಮರುದಿನ ಅವರ [illegible]

ಮುಟ್ಟಿ, "ಅಪ್ಪಾ, ನಿಮ್ಮ ಜೀವನದ ಸರ್ವೋತ್ತಮ ಅನುಭವ ಯಾವದು? ಅದರಿಂದ ಸಾಧ್ಯವಿದ್ದರೆ ನಾನೂ ಪಾಠ ಕಲಿಯಬಹುದು. ಹೇಳುವಿರಾ?' ಎಂದು ಕೇಳಿದೆ.

ಅವರು ಗಂಭೀರವಾಗಿ ನುಡಿದರು: "ಪದ ಪ್ರತಿಷ್ಠೆ, ಧನ, ಬುದ್ಧಿ ಯಾವ ಬಗೆಯಲ್ಲಿ ಕಡಿಮೆ ಇದ್ದರೂ ವಯಸ್ಸಿನಲ್ಲಿ ಹಿರಿಯರಿದ್ದರೆ ಅವರನ್ನು ಯಾವಾಗಲೂ ಗೌರವದಿಂದ ಕಾಣು. ಅವರೆದುರು ಶಿರಬಾಗಿ ನಡೆ. ಗಟ್ಟಿಸಿ ಮಾತನಾಡಬೇಡ. ಮತ್ತು ವಯಸ್ಸಿನಲ್ಲಿ ಚಿಕ್ಕವರಿದ್ದರೆ ಸದಾ ಅವರಿಗೆ ಸಾಧ್ಯವಿದ್ದ ಮಟ್ಟಿಗೆ ನೆರವಾಗುತ್ತಿರು. ಪ್ರೀತಿಯಿಂದ ನೋಡು. ಇಷ್ಟೇ ನಾನು ಹೇಳುವುದು. ಇನ್ನು ಮೇಲೆ ಈಶಕೃಪೆಯೇ ನಿನಗೆ ದಾರಿ ತೋರುವುದು."

ಅಂದಿನಿಂದ ಹಿರಿಯರನ್ನು ಕಂಡರೆ ನತಮಸ್ತಕನಾಗಿ ವಿನಮ್ರನಾಗಿರಲು ನಾನು ಕಲಿತಿದ್ದೇನೆ.

"ಅದೆಲ್ಲಾ ಆಯ್ತು. ಆದರೆ ಇನ್ನು ನಮಗೆ ಆ ರೋಚಕ ಹಾಗೂ ವೈಚಾರಿಕ ಸಂಗತಿಯನ್ನು ಹೇಳಬಹುದಲ್ಲ?"

ಹೌದು ಹೇಳುವೆ, ಕೇಳಿರಿ. ಅದನ್ನು ಹೇಳಲೆಂದೇ ಈ ಪೂರ್ವಪೀಠಿಕೆ. ಅವರೊಬ್ಬ ವೃದ್ಧರು. ಅವರನ್ನು ಗೌರವಿಸುವುದು ನನ್ನ ಸ್ವಭಾವಧರ್ಮ. ಒಮ್ಮೆ ನನ್ನ ಮನೆಯ ಎದುರೇ ಅವರ ಅವಮಾನವಾಯಿತು, ನಾನು ಹೇಗೆ ಸಹಿಸಲಿ?

ಅವರು ೬೦ ವರ್ಷದವರು. ಆದರೂ ಸಶಕ್ತರು. ಧ್ವನಿ ಸಿಂಹಗರ್ಜನೆ. ನನಗೆ ಹೆಸರೂ ಗೊತ್ತಿಲ್ಲ. ಆದರೆ ಇಷ್ಟು ಗೊತ್ತು, ಅವರದೊಂದು ಕಾಳಿನ ಅಂಗಡಿ ಪೇಟೆಯಲ್ಲಿ ಇದೆ. ಓಣಿಯಲ್ಲಿ ಗಲಭೆ ಕೇಳಿ ನಾನು ಕಿಟಕಿಯಿಂದ ಇಣಿಕಿದೆ. ಅವರು ಕೆಳಗೆ ನಿಂತು ಬೈಯುತ್ತಿದ್ದಾರೆ. ಮತ್ತು ದೂರದಲ್ಲಿ ನಿಂತು ಮಕ್ಕಳು ಒಂದೇ ವಾಕ್ಯವನ್ನು ಚೀರುತ್ತಿವೆ. ಕೂಗು ಜೋರಾಗಿತ್ತಾದರೂ ಶಬ್ದಗಳು ಸ್ಪಷ್ಟವಾಗಿದ್ದಿಲ್ಲ.

ಅಲ್ಲಿಂದಲೇ ನಾನು ಕೇಳಿದೆ: "ಏನಾಯಿತು ಸ್ವಾಮಿ?"

"ಈ ಹುಡುಗರನ್ನು ನೋಡಿದಿರಾ? ನನ್ನನ್ನು ಬೈಯುತ್ತಿವೆ."

ಒಬ್ಬ ವೃದ್ಧನನ್ನು ನನ್ನ ಓಣಿಯ ಹುಡುಗರು ಬೈಯುವುದೆಂದರೆ ನಾನೆಂದೂ ಸಹಿಸಲಾರೆ. ನಾನು ಕೆಳಗಿಳಿದೆ. ಹುಡುಗರು ಅತ್ತಿತ್ತ ಮಾಯವಾದರು. ಮತ್ತು ಆ ವೃದ್ಧರೂ ಒದರಾಡುತ್ತಾ ಹೊರಟುಹೋದರು.

ಮರುದಿನ ಅದೇ ಹೊತ್ತಿಗೆ ಮತ್ತೆ ಅದೇ ಆಟ. ಈಗ ಹುಡುಗರು ಯಾವುದೊ ಕವಿತೆಯ ಒಂದು ಸಾಲು ಹೇಳುತ್ತಿದ್ದಾರೆಂದು ಅನಿಸುತ್ತಿತ್ತು.

ನಾನು ಕೆಳಗೆ ಹೋಗಿ, "ಏನು ವಿಷಯ?" ಎಂದು ಪ್ರಶ್ನಿಸಿದೆ.

"ಇವರು ನನ್ನನ್ನು ಬೈಯುತ್ತಿದ್ದಾರೆ, ಕಾಣುವುದಿಲ್ಲವೇನು?" ಎಂದು ಆ ಗೃಹಸ್ಥರು ಗರ್ಜಿಸಿದರು.

ಈಗ ಹುಡುಗರು ಸುಮ್ಮನೆ ನಿಂತಿದ್ದವು. ಸಿಟ್ಟಾಗಿ ನಾನು ಕೇಳಿದೆ: "ಹಿರಿಯರನ್ನು ಬೈಯಲು ನಿಮಗೆ ನಾಚಿಕೆಯಾಗುವುದಿಲ್ಲವೇ?"

ಒಬ್ಬ ಹುಡುಗ ಅಂದ, "ನಾವೇಕೆ ಬೈಯೋಣ? ತಿರುಗಿ ಇವರೇ ನಮ್ಮನ್ನು ಬೈಯುತ್ತಿದ್ದಾರೆ."

"ಹಾಗಾದರೆ ನೀವು ಕೂಗುವುದೇನು?"

"ನಾವು ಕವಿತೆ ಅನ್ನುತ್ತಿದ್ದೆವು." ಕೇಳಿದೊಡನೆ ಆ ಗೃಹಸ್ಥರು ಚೀರಿದರು, "ಕವಿತೆ ಹೇಳುತ್ತಿದ್ದೆಯೋ ನನ್ನ ಹೆಸರಿನಲ್ಲಿ ಹೊಯ್ಕೊಳ್ಳುತ್ತಿದ್ದೆಯೋ ಮುಂ..... ಮಗನೇ?"

ನಾನು ಆ ಹುಡುಗನನ್ನು ಕೇಳಿದೆ, "ಕವಿತೆ ಹೇಳುತ್ತಿದ್ದಿರಾ?"

"ಹೌದು."

"ಯಾವ ಕವಿತೆ?"

"ಕೆಂಪು ದಾರದ ಕವಿತೆ."

ಈ ಪ್ರಕರಣವನ್ನು ಬಗೆಹರಿಸಲು ನಾನು ಯತ್ನಿಸಬೇಕೆನ್ನುತ್ತಿದ್ದಾಗಲೇ ಆ ಗೃಹಸ್ಥರು ಹೊರಟುಹೋದರು. ನನ್ನನ್ನೇ ಬೈಯುತ್ತಾ ಹೋದರು.

ಅವರು ಹೋಗುವುದನ್ನು ಕಂಡು ಹುಡುಗರು ಒಕ್ಕೊರಲಿನಿಂದ ಜೋರಾಗಿ ಚೀರಿದರು.

"ಕೆಂಪುದಾರಾ ಫುರ್, ಕೆಂಪುದಾರಾ ಫುರ್."

ಕೆಂಪುದಾರಾ ಫುರ್. . . . ಏನು ಇದರ ಅರ್ಥ? ನಾನು ಹುಡುಗರನ್ನು ಕೇಳಿದೆ–ಅವರು ನಗುತ್ತಾ "ಇದು ಕೆಂಪುದಾರದ ಕವಿತೆ" ಎಂದರು.

ಅಂತೂ ಕೆಂಪುದಾರಾ ಫುರ್ ಎಂದರೆ ಈ ಗೃಹಸ್ಥರು ಸಿಟ್ಟಾಗುತ್ತಾರೆಂದ ಹಾಗಾಯಿತು. ಆಗ ನನಗೆ ನನ್ನ ಒಬ್ಬ ವಿದ್ಯಾರ್ಥಿ ಗೆಳೆಯನ ನೆನಪಾಯಿತು. ಆತ, "ಮಿಠಾಯಿ" ಎಂದೊಡನೆಯೇ ರೇಗುತ್ತಿದ್ದ. ಮತ್ತೊಬ್ಬರು "ಕಲ್ಲಂಗಡಿ ಹಣ್ಣು" ಎಂದೊಡನೆಯೆ ಸಿಟ್ಟಾಗುತಿ ದ್ದರು.

ಆದರೂ ಈ ಕೆಂಪುದಾರಾ ಫುರ್ ಅಂದರೆ ಏನಿರಬೇಕು? ನಾನು ಒಬ್ಬ ಹುಡುಗನನ್ನು ಕೇ-ಳಿದೆ. ಆತ ಹೇಳಿದ, "ಒಮ್ಮೆ ಈ ಗೃಹಸ್ಥರು ಒಂದು ಹಕ್ಕಿಯನ್ನು ಹಿಡಿದರು. ಇವರ ಹತ್ತಿರ ಹಕ್ಕಿಯನ್ನು ಇಡಲು ಪಂಜರವಿರಲಿಲ್ಲ. ಕೆಂಪು ದಾರದಿಂದ ಅವನು ಕಟ್ಟಿ ಇಡಬೇಕೆಂದು ಯತ್ನಿಸಿದರು. ಆದರೆ ಇವರು ಹಾಕಿದ ಗಂಟು ಸಡಿಲಾಗಿ ಹಕ್ಕಿ ಕೈಯಿಂದ ಜಾರಿ ಫುರ್ರೆಂದು ಹಾರಿ ಹೋಯಿತು. ಅಂದಿನಿಂದ ಇವರನ್ನು ಕೆಂಪು ದಾರಾ ಫುರ್ರ್, ಎಂದು ಕೆಣಕುವುದು ಶುರುವಾ-ಯಿತು." ಕೇಳಿ ನಾನೂ ನಕ್ಕೆ.

ಒಂದೆರಡು ದಿನ ಏನೂ ಆಗಲಿಲ್ಲ. ಬಹುಶಃ ಆ ಗೃಹಸ್ಥರೇ ಇತ್ತ ಬರಲಿಲ್ಲವೊ ಏನೊ? ಮೂರನೆ ದಿನ ಮತ್ತೆ ಈ ಘಟನೆ ಸಂಭವಿಸಿತು. ಈ ದಿನದ ವಿಕ್ರಮ ಹಿಂದಿನ ದಿನಗಳನ್ನು ಹಿಮ್ಮೆಟ್ಟಿ ನಿಂತಿತು. ಅಂಗಡಿ ಮುಚ್ಚಿ ಮಧ್ಯಾಹ್ನ ಊಟಕ್ಕೆ ಅವರು ನಮ್ಮ ಓಣಿಯೊಳಗಿಂದ ನಡೆದಿದ್ದರು. ಅವರ ಎರಡೂ ತೋಳುಗಳಲ್ಲಿ ನಾಲ್ಕು ಕಲ್ಲಂ-ಗಡಿ ಹಣ್ಣುಗಳು ಇದ್ದವು. ಅಂದು ರವಿವಾರ. ಎಲ್ಲ ಹುಡುಗರೂ ಮನೆಯಲ್ಲೇ.

ಆ ಗೃಹಸ್ಥರನ್ನು ನೋಡಿದವರೇ ಎಲ್ಲರೂ ಒಟ್ಟಾದರು. ಮುಂದೆ ಕೇಳುವುದೇನು?

ಒಬ್ಬ ಹುಡುಗ ಅವರ ತೀರ ಹತ್ತಿರ ಬಂದು ಮುಜರೆ ಮಾಡುವಂತೆ, "ಸ್ವಾಮೀ, ಕೆಂಪುದಾರಾ ಫುರ್ರ್" ಎಂದ.

ಅವರು ಹಿಡಿದು ಹೊಡೆಯುವಷ್ಟು ಅ[illegible] ಸಮೀಪವಿದ್ದ. ಅವರು ಅವನನ್ನು ಹಿಡಿಯಲೆ[illegible] ಸಿದರು. ಆದರೆ ಹುಡುಗ ಬಲು ಚೂಟಿ. ತಪ್ಪಿ[illegible] ಕೊಂಡು ಓಡಿಬಿಟ್ಟ. ಹಿಡಿಯಹೋಗಿದ್ದ ಅವ[illegible] ಬೀಳುವುದರಲ್ಲಿದ್ದರು. ಈವಾಗ ಮತ್ತೊ[illegible] ಬಾಗಿದ್ದ ಅವರ ಟೊಪ್ಪಿಗೆಯನು ಕಸಿ[illegible] ಕೊಂಡು ಓಡಿ ಬಂದು ಮನೆ ಹೊಕ್ಕ.

ಗೃಹಸ್ಥರ ಸಿಟ್ಟು ಮಿತಿಮೀರಿತು. ದಿನ [illegible] ಗಾದರೆ ಆಗುವ ಅವಮಾನವನ್ನು ಯಾರು ಸಹಿ[illegible] ಯಾರು? ಕಲ್ಲಂಗಡಿ ಹಣ್ಣುಗಳನ್ನು ಅಲ್ಲಿ[illegible] ಒಂದು ಮನೆಯ ಕಟ್ಟೆಯ ಮೇಲಿಟ್ಟು ಟೊಪ್ಪಿ[illegible] ಹಾರಿಸಿದ ಹುಡುಗ ಓಡಿದ್ದ ಮನೆಯ[illegible] ಹೊಕ್ಕರು.

ಮನೆಯಲ್ಲಿಂದ ಕೂಗು ಕೇಳಿಸುತಿ[illegible] ಅರ್ಧ ಗಂಟೆಯಾದ ಮೇಲೆ ಗೃಹಸ್ಥರು ತ[illegible] 'ಗರಂ' ಆಗಿಯೆ ಹೊರಗೆ ಬಂದು ಕಟ್ಟೆ[illegible] ಹತ್ತಿರ ತಡೆದರು. ಬರುವಾಗ ಅಲೇನಿದೆ? ಹು[illegible] ಗರು ತಿಂದು ಮುಗಿಸಿದ ಹಣ್ಣುಗಳ ಬೀಜಗ[illegible] ಮಾತ್ರ. ಮತ್ತೊಂದು ನಾಲ್ಕು ಬೈಗಳನ್ನು ಕ[illegible] ಅವರು ಹೊರಡಲು ಸಿದ್ಧರಾದರು. ಅಷ್ಟರ[illegible] ಅವರ ನೆತ್ತಿಗೆ ಏನೊ ಬಡೆಯಿತು. ಮೇಲೆ ನೋ[illegible] ದರೆ ಅವರ ಟೊಪ್ಪಿಗೆ ಕೆಂಪು ದಾರಕ್ಕೆ ತ[illegible] ತ್ತಿತ್ತು. ಹಿಡಿಯಲು ಕೈಎತ್ತಿದರು. ಟೊ[illegible] ಮೇಲೆ ಹೋಯಿತು. ಹೀಗೆ ಅವರ ಕೈನಿ[illegible] ದಂತೆ ಟೊಪ್ಪಿಗೆ ಕೆಳಗೂ ಮೇಲೂ ಓಡ[illegible] ಅವರನ್ನು ಪೀಡಿಸತೊಡಗಿತು. ಆಗೊಬ್ಬ ಮ[illegible] ಅಲ್ಲಿ ಬಂದಳು. ಅವಳೇ ಆ ಟೊಪ್ಪಿಗೆ ಅ[illegible] ಸಿಗುವಂತೆ ಮಾಡಿದಳು. ಸಿಪ್ಪೆ ಹಾಗೂ ಬ[illegible] ಗಳನ್ನು ನೋಡುತ್ತ ಅವರು ಹೋದರು.

ಅಟ್ಟದ ಮೇಲೆ ಕೂತು ನಾನು ಇದ[illegible] ನೋಡುತ್ತಿದೆ. ನೋಡುತ್ತಿದ್ದಂತೆ ನನಗೂ[illegible] ಬರುತ್ತಿತ್ತು. ಈ ಮೊದಲೇ ಹೇಳಿದ್ದೇ[illegible] ಹಿರಿಯರನ್ನು ಗೌರವಿಸುವುದು ನನ್ನ ಮ[illegible] ಧರ್ಮವಾಗಿದೆ ಎಂದು! ಹೌದು. ಅಂತೆಯ[illegible] ಮಾತಿಗಾಗಿ ನನಗೆ ವ್ಯಥೆಯಾಯಿತು. ಇ[illegible]

ಸರಿಪಡಿಸಲು ಏನಾದರೂ ಕ್ರಮ ಕೈಕೊಳ್ಳಲೇ ಬೇಕೆಂದು ನಿರ್ಧರಿಸಿದೆ.

ಸಂಜೆಗೆ ಎಲ್ಲ ಹುಡುಗರನ್ನೂ ಕರೆಸಿದೆ. ಅವರಿಗೆ ನಾನು ತಿಳಿಹೇಳಿದೆ. "ಒಬ್ಬ ವಯಸ್ಸಾದ ವ್ಯಕ್ತಿ. ಏನೋ ಅಂದರೆ ಸಿಟ್ಟಾಗುತ್ತಾನೆ. ಆದರೆ ಅದಕ್ಕಾಗಿ ನಾವೇಕೆ ಆ ಮಾತಿನಿಂದ ಅವರನ್ನು ಕೆಣಕಬೇಕು? ಇದು ಒಳಿತೆ? ಅಲ್ಲ" ಎಂದಾಗ ಹುಡುಗರು ನನ್ನ ಮಾತನ್ನು ಒಪ್ಪಿ ಇನ್ನು ಮೇಲೆ ತಾವು ಕೆಣಕುವುದಿಲ್ಲವೆಂದು ಒಪ್ಪಿಕೊಂಡರು.

ನಾನು ಸಂತುಷ್ಟನಾದೆ. ಮುಂದೆ ಎರಡು ಮೂರು ದಿನ ಬಿಟ್ಟು ಆ ಗೃಹಸ್ಥರು ಮತ್ತೆ ಬಂದರು. ಅವರನು ಯಾರೂ ಕೆಣಕಲಿಲ್ಲ. ಅವರು ನೋಡುತ್ತಲೇ ನಡೆದರು. ಒಬ್ಬಿಬ್ಬರಂತೂ ಅವರನ್ನು ವಂದಿಸಿದರು. ಇದರಿಂದ ಅವರು ಆನಂದಿತರಾಗುವರೆಂದು ನಾನು ಭಾವಿಸಿದೆ. ಆದರೆ ಮಕ್ಕಳ ಮೌನ ಅವರನ್ನು ಪೀಡಿಸುತ್ತಿತ್ತೆಂದು ಅನಿಸಿತು. ಅವರೊಮ್ಮೆಲೆ ಅಂದರು: "ಇಂದು ಯಾರೂ ಮಾತಾಡುತ್ತಿಲ್ಲ. ಯಾಕೆ? ನಿಮ್ಮೆಲ್ಲರ ತಾಯಂದಿರು ಸತ್ತರೇನು?" ಸ್ವಲ್ಪ ತಡೆದರು, ಮತ್ತು ಹೊರಟುಹೋದರು.

ಮರುದಿನ ಮತ್ತೆ ಬಂದರು. ಆಗ ನಾನು ಅವರನ್ನು ಭೆಟ್ಟಿಯಾಗಿ, "ಇನ್ನು ನೀವೇನೂ ಚಿಂತಿಸಬೇಡಿರಿ. ಯಾವ ಹುಡುಗರೂ ನಿಮ್ಮ ಗೋಜಿಗೆ ಬರಲಾರರು. ಅವರಿಗೆ ನಾನು ತಿಳಿಹೇಳಿದ್ದೇನೆ" ಎಂದೆ

ನನ್ನ ಮಾತು ಕೇಳಿ ನನ್ನನ್ನು ಆಶೀರ್ವದಿಸುವರೆಂದು ಬಗೆದಿದ್ದ ನನ್ನನ್ನೇ ಅವರು ದೂರಿದರು. "ಹಾಗಾದರೆ ಇದೆಲ್ಲ ನಿನ್ನ ಕಾರಸ್ಥಾನ! ಆಗಲಿ. ನಿನ್ನ ಕೈಯಲ್ಲಿ ಇದ್ದರೆ ಆ ಹುಡುಗರ ಕತ್ತನ್ನು ಹಿಚುಕಿಬಿಡು" ಮತ್ತು, "ಇವರೊಂದು ಹೊಸ ಬಗೆಯ ಜೇಲು ಹುಡುಕಿದ್ದಾರೆ. ಹುಡುಗರು ಸ್ವಲ್ಪ ನಕ್ಕು ನಲಿದಾಡಿದರೆ ಇವರಪ್ಪನದೇನು ಗಂಟು ಖರ್ಚಾಗುವುದೆ?" ಎನ್ನುತ್ತ ನನ್ನನ್ನು ಶಪಿಸುತ್ತಾ ಹೋದರು.

ಮರುದಿನ ಅವರು ಬಂದರು. ಹುಡುಗರು ಇದ್ದರು. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತಿದ್ದರು. ಮೌನವಾಗಿ ನಾನು ಮರೆಯಲ್ಲಿ ನಿಂತು ಏನಾಗುವುದೆಂದು ನೋಡುತ್ತಿದ್ದೆ. ದೀನರಾಗಿ ಅವರು ಮಕ್ಕಳನ್ನು ನೋಡುತ್ತಿದ್ದರು. ಒಬ್ಬ ದೊಡ್ಡ ಹುಡುಗನನ್ನು ನೋಡಿ ಅವರು ಗಾರ್ಡ್ ಹಸಿರು ಪತಾಕೆ ಅಲ್ಲಾಡಿಸುವಂತೆ ಸೂಚ್ಯವಾಗಿ ತಲೆ ಅಲ್ಲಾಡಿಸಿದರು.

ಅವರ ಸೂಚನೆ ಕಾರ್ಯರೂಪಕ್ಕಿಳಿಯಿತು. ಆ ಹುಡುಗ ಹೆದರುತ್ತ ಅಂತೂ ನುಡಿದ: "ಕೆಂಪು ದಾರಾ ಪುರ್." ಕೇಳಿದೊಡನೆಯೆ ಅವರ ಮುಖ ಅರಳಿತು. ಅವರು ಮತ್ತೆ ಎರಡುಮೂರು ಬಾರಿ ತಲೆ ಅಲ್ಲಾಡಿಸಿ ಸೂಚನೆ ಕೊಟ್ಟರು. ಗಾಡಿ ಬಿಟ್ಟಿತು. ಶುರುವಾಯಿತು, ಮತೊಮ್ಮೆ ಮೊದಲಿನಂತೆ "ಕೆಂಪುದಾರಾ ಪುರ್ ಕೆಂಪುದಾರಾ ಪುರ್."

ಸಭೆಯೆಲ್ಲ ಜಯಜಯಕಾರ ಮಾಡಿದರೆ ಸಭಾ

ಪತಿಗೆ ಆಗುವಷ್ಟು ಸಂತೋಷ ಅವರಿಗಾಗಿತ್ತು.

ಅವರು ಹೊರಟುಹೋದರು. ಯಾರನ್ನೂ ಬೈಯಲಿಲ್ಲ. ಮರುದಿನ ನಾನು ಮನೆಯಲ್ಲಿರಲಿಲ್ಲ. ಆದರೂ ವರದಿ ಮುಟ್ಟಿತು. ಅಂದು ಅವರು ಹಲವು ಸಿಪ್ಪೆಗಳನ್ನು ಹುಡುಗರ ಮೇಲೆ ಬೀಸಿ ಅವರನ್ನು ಕೆಣಕಿದರು. ಆಗ ಸಿಟ್ಟಾದ ಹುಡುಗರು ಕೂಗಿದರು. ಆ ಗೃಹಸ್ಥರು ಸಂತುಷ್ಟರಾಗಿ ಕೈಯೆತ್ತಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು. ಹುಡುಗರೂ ನಗುನಗುತ್ತ ಜಯಜಯಕಾರ ಮಾಡಿದರು. ಅವರು ಬೈಯಲಿಲ್ಲ. ಬರೆ 'ಥುತ್ ಥುತ್' ಎಂದಿಷ್ಟೇ ಅಂದರು.

ನಾಲ್ಕು ದಿನ ಮತ್ತೆ ಮೊದಲಿನಂತೆ ಸಾಗಿತ್ತು ಇತ ಇವರ ಕೆಂಪುದಾರಾ ಫುರ್ರ್, ಅತ್ತ ಅವರ ಬೈಗಳು.

ಹುಡುಗರನ್ನು ನಾನು ಕೇಳಿದೆ. "ಮತ್ತೆ ನಿಮ್ಮ ಮಂಗನಾಟ ಪ್ರಾರಂಭಿಸಿದಿರೇನು?" ಆಗ ಅವರು "ಅವರಿಗೆ ಅದೇ ಸೇರುತ್ತದೆ. ನಾವೇನು ಮಾಡೋಣ?" ಎಂದು ಉತ್ತರಿಸಿದರು. ನನಗೂ ಅದು ಗೊತ್ತಿತ್ತು. ಕಣ್ಣಾರೆ ನೋಡಿದ್ದೆ. ಈ ವಿಕ್ಷಿಪ್ತತನ ನನ್ನಲ್ಲಿ ವಿಶೇಷ ಅನ್ವೇಷಣೆಯ ಪ್ರೇರಣೆ ಹುಟ್ಟಿಸಿತು.

ಅವರ ಜೀವನದ ಹಳೇ ಅನುಭವಗಳನ್ನು ತಿಳಿದುಕೊಳ್ಳತೊಡಗಿದೆ. ಅವರ ಅಂಗಡಿಯ ಗ್ರಾಹಕನಾದೆ ಮತ್ತು ಆ ನೆಪದಿಂದ ಅವರೊಂದಿಗೆ ಗಂಟೆಗಟ್ಟಲೆ ಮಾತಾಡುವ ಅವಕಾಶ ಹೊಂದಿದೆ.

ಒಂದು ತಿಂಗಳ ನನ್ನ ಪ್ರಯತ್ನದಿಂದ ಹೊರಬಂದ ಕಥೆ ಇಷ್ಟು. ಅವರು ಐದು ವರ್ಷದವರಿದ್ದಾಗ ತಾಯಿ ಸತ್ತರು. ಅವರ ತಂ[illegible] ಬೇರೆ ಲಗ್ನ ಮಾಡಿಕೊಂಡರು. ಮುಂದೆ ಐದ[illegible] ವರ್ಷದಲ್ಲಿ ಆಕೆಗೆ ನಾಲ್ಕು ಮಕ್ಕಳಾದವು. [illegible] ನಾಲ್ಕು ಮಕ್ಕಳಿಗೆ ತಾಯಿ ತಂದೆಯರ ಪ್ರೀ[illegible] ಇವರ ಕಣ್ಮುಂದೆ ಲಭಿಸುತ್ತಿತ್ತು. ಇವರ ಪಾಲಿ[illegible] ತಾಯಿಯ ದ್ವೇಷ, ಉಪೇಕ್ಷೆ, ತಂದೆಯ ಹೊಡೆ[illegible]ಗಳು. ಇವರು ಹುಡುಗರ ಹತ್ತಿರ ಆಡಬಯ[illegible]ದರೂ ತಾಯಿ ಇವರನ್ನು ದೂರ ಮಾಡುವಳು[illegible] ಮುಂದೆ ಆ ಹುಡುಗರೂ ಇವರನ್ನು ತಿರಸ್ಕರಿ[illegible] ತೊಡಗಿದವು. ಮುಂದೆ ಇವರು ಮನೆ ಬಿಟ್ಟರು[illegible] ದುಡಿದರು. ಫಲ ಸಿಕ್ಕಿತು. ಲಗ್ನವಾದರು[illegible] ಮೂರು ಮಕ್ಕಳಾದವು. ಆದರೆ ಮಕ್ಕ[illegible] ಸತ್ತವು. ಪತ್ನಿಯೂ ಸತ್ತಳು. ಈಗೊಬ್ಬ ದೂರ[illegible] ಸಂಬಂಧಿಕ ವಿಧವೆಯ ಮನೆಯಲ್ಲಿ ಇರುತ್ತಾರೆ.

ಕತೆ ಕೇಳಿ ಕರುಳು ಕತ್ತರಿಸಿದಂತಾಯಿತು[illegible] ಮಲತಾಯಿಯ ವಿದ್ರೋಹದ ಪರಿಣಾಮವಾ[illegible] ಹುಡುಗರನ್ನು ಕೆಣಕಿ ತನ್ನತ್ತ ಆಕರ್ಷಿ[illegible] ಕೊಂಡು ಹಿಂದೆ ತನಗಾದ ತಾಪದ ಸೇಡು ತೀ[illegible] ಸಲೆಂದು ಇಂದು ತಾನೂ ಆ ಹುಡುಗರನ[illegible] ತಿರಸ್ಕರಿಸಬೇಕೆಂಬ ಬಯಕೆ ಇವರಲ್ಲಿ ಬೆಳೆದಿತ್ತು[illegible] ಪ್ರತಿಹಿಂಸೆಯ ಅದ್ಭುತ ಮನೋವೈಜ್ಞಾನಿ[illegible] ರೂಪವೇ "ಕೆಂಪುದಾರಾ ಫುರ್ರ್."

ಅವರು ಈಗ ಜೀವಿಸಿಲ್ಲ. ಆದರೂ ಅವ[illegible] ನೆನಪಾದಾಗಲೆಲ್ಲ ಒಂದು ವಿಚಾರ ತಲೆಯ[illegible] ಬರುತ್ತದೆ. ಈ ರೀತಿ ಇನ್ನೊಬ್ಬರ ಪಾಪದ ಫ[illegible] ವಾಗಿ ನೈಚ್ಯಾನುಸಂಧಾನದ ಮನೋವೃತ್ತಿಯ[illegible] ರಾಗಿ ಕಷ್ಟಪಡುತ್ತಿರುವವರು ಅದೆಷ್ಟು ಜನರಿ[illegible] ವರೊ!

'ದೀಪ ಜಲೆ ಶಂಖ ಬಜೆ' ಎಂಬ ಪುಸ್ತಕದಿಂದ

ಜಗತ್ತಿನಲ್ಲಿ ಯಾವುದೂ ಭಯಪಡಬೇಕಾದ್ದಿಲ್ಲ. ಎಲ್ಲವೂ ತಿಳಿದುಕೊಳ್ಳತಕ್ಕ[illegible]ದ್ದಷ್ಟೆ.

— ಕಾರ್ಲೈಲ್

* * *

ಸಾಬೂನಿನ ನೊರೆ ಚೆನ್ನಾಗಿದ್ದರೆ ಅರ್ಧ ಕ್ಷೌರವಾದಂತೆಯೇ. —ವಿಲಿಯಂ ಹೋ.

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಕಡ್ಡಾಯ
(ಅ) ಸಿಹಿ ತಿಂಡಿ (ಆ) ಚೌಕಟ್ಟು (ಇ) ಕೊನೆ (ಈ) ಒತ್ತಾಯ

೨. ಪ್ರಾಚೀರ
(ಅ) ಹಳೆಯ (ಆ) ಹಣೆಬರಹ (ಇ) ಸುತ್ತುಗೋಡೆ (ಈ) ಬಸ್ತಿ

೩. ಧೂಸರ
(ಅ) ತಳತಳಿಸುವ (ಆ) ಮೆಲುದನಿ (ಇ) ಧೂಳಿಬಣ್ಣದ (ಈ) ಹೂಮಾಲೆ

೪. ನಿಃಶ್ರೇಯಸ
(ಅ) ಅಪಮಂಗಲ (ಆ) ಅತಿಶ್ರೇಷ್ಠ (ಇ) ಶರಣು ಬಂದ (ಈ) ಪರಿತ್ಯಕ್ತ

೫. ನಿರವದ್ಯ
(ಅ) ನಿರ್ದೋಷ (ಆ) ಹೀನ (ಇ) ಅಸಮಾನ (ಈ) ಮೂಕ

೬. ಪಂಚತ್ವ
(ಅ) ಐವರು (ಆ) ಲೋಕವ್ಯವಹಾರ (ಇ) ದಾರಿಗಾಣುವಿಕೆ (ಈ) ಮರಣ

೭. ಹದುಳ
(ಅ) ಕ್ಷೇಮ (ಆ) ಮುತ್ತೈದೆತನ (ಇ) ಹೋಲಿಕೆ (ಈ) ಪದರು

೮. ಛಿದ್ರಾನ್ವೇಷಣ
(ಅ) ಬುದ್ಧಿ ಕೌಶಲ (ಆ) ತಪಸ್ಸು (ಇ) ತಪ್ಪುಹುಡುಕುವಿಕೆ (ಈ) ಗಂಟುಹಾಕುವುದು

೯. ಉಭಯಸಂಕಟ
(ಅ) ಕಷ್ಟದಿಂದ ಪಾರಾಗುವಿಕೆ (ಆ) ಇಕ್ಕಟ್ಟು (ಇ) ತಾಳಲಾರದ (ಈ) ಹೆದರಿಕೆಯಿಲ್ಲದಿರುವುದು

೧೦. ಅಭಿಹಿತ
(ಅ) ಕೇಡು (ಆ) ಹೇಳಲ್ಪಟ್ಟ (ಇ) ಒಳಿತು (ಈ) ಎದುರುಬದುರು

೧೧. ಕಟಾಕ್ಷ
(ಅ) ಕೆಂಗಣ್ಣು (ಆ) ಕಿಡಿಕಿ (ಇ) ಕಡಾಯಿ (ಈ) ಕಡೆಗಣ್ಣು

೧೨. ಚತುಷ್ಟಯ
(ಅ) ನಾಲ್ಕರ ಗುಂಪು (ಆ) ಬುದ್ಧಿಶಾಲಿ (ಇ) ಸ್ವಸ್ಥ (ಈ) ಗಟ್ಟಿಯಾದ ಪದಾರ್ಥ



' ಶಬ್ದಭಾಂಡಾರ ' ದ ಸರಿಯಾದ ಅರ್ಥಗಳು

೧. ಕಡ್ಡಾಯ (ಈ) ಒತ್ತಾಯ, ಬಲಾತ್ಕಾರ; ಇಂಥ ಬೆಲೆಗೇ ಸರಕುಗಳನ್ನು ಕೊಳ್ಳಬೇಕೆಂದು ಜನರನ್ನು ನಿರ್ಬಂಧಿಸುವುದು. [ಕನ್ನಡ ಕಟ್ಟು = ಬಂಧನದಿಂದ]

೨. ಪ್ರಾಚೀರ (ಇ) ಸುತ್ತುಗೋಡೆ, ಬೇಲಿ. [ಸಂ. ಪ್ರಾಚೀನ]

೩. ಧೂಸರ (ಇ) ಧೂಳಿ ಬಣ್ಣದ, ಮಾಸು ಬಣ್ಣದ; ಧೂಳು ಮುಸುಕಿದ. ಉದಾ: ಪ್ರಯಾಣಿಕನ ಮುಖ ಧೂಸರ (ಧೂಸರಿತ)ವಾಗಿತ್ತು. [ಸಂ.]

೪. ನಿಃಶ್ರೇಯಸ (ಅ) ಅತಿಶ್ರೇಷ್ಠ, ಮಿಗಿಲಿಲ್ಲದ ಅವಸ್ಥೆ; ಮೋಕ್ಷ, ಮುಕ್ತಿ; ಪರಮಮಂಗಲ [ಸಂ.]

೫. ನಿರವದ್ಯ (ಅ) ನಿರ್ದೋಷ, ನಿಷ್ಕಲಂಕ, ಯಾವ ತಪ್ಪೂ ಇಲ್ಲದ. ಉದಾ— ನಿರವದ್ಯವಾದ ಶೈಲಿಯಲ್ಲಿ ಅವನು ಮಾತಾಡುತ್ತಾನೆ. [ಸಂ. ನಿರ್ = ಇಲ್ಲ, ಅವದ್ಯ = ದೂಷಿಸಲ್ಪಡುವ].

೬. ಪಂಚತ್ವ (ಈ) ಮರಣ, ಸಾವು. [ಸಂ. ಐದಾಗಿಹೋಗುವಿಕೆ, ಸತ್ತ ಮೇಲೆ ಶರೀರವು ಪಂಚಭೂತಗಳಲ್ಲಿ ಹಂಚಿಹೋಗುವುದರಿಂದ].

೭. ಹದುಳ (ಅ) ಕ್ಷೇಮ, ಮಂಗಲ, ಶುಭ, ಸೌಖ್ಯ; ಸ್ಥೈರ್ಯ. ಉದಾ– ಕುದಿಯುದ ಕೂಳಿಗಿಂತ ಹದುಳದ ಅಂಬಲಿ ಲೇಸು. [ಕನ್ನಡ]

೮. ಛಿದ್ರಾನ್ವೇಷಣ (ಇ) ತಪ್ಪು ಹುಡುಕುವುದು. ಉದಾ— ಅವನ ಛಿದ್ರಾನ್ವೇಷಣ ಬುದ್ಧಿಗೆ ಯಾವುದೂ ಮೆಚ್ಚಿ[illegible] ಯಾಗದು. [ಸಂ. ಛಿದ್ರ=ತೂತು, ಅನ್ವೇಷಣ = ಹುಡುಕುವಿಕೆ.]

೯. ಉಭಯ ಸಂಕಟ (ಅ) ಇಕ್ಕಟ್ಟ[illegible] ಪೇಚಾಟ, ಹಾಗೆ ಮಾಡಿದರೂ ಕ[illegible] ಹೀಗೆ ಮಾಡಿದರೂ ಕಷ್ಟ ಎಂಬ ಮ[illegible] ಗಾಣದ ಪರಿಸ್ಥಿತಿ. ಉದಾ— ಹೆಂಡ[illegible] ತಾಯಿಯರ ನಡುವೆ ಅವನು ಉಭಯ ಸಂಕಟಕ್ಕೆ ಸಿಲುಕಿದ. [ಸಂ. ಉಭಯ[illegible] ಎರಡೂ, ಸಂಕಟ].

೧೦. ಅಭಿಹಿತ (ಅ) ಹೇಳಲ್ಪಟ್ಟ, ಘೋಷಿ[illegible]ಲ್ಪಟ್ಟ, ಸಾರಲಾದ. ಉದಾ— ಅ[illegible] ಅಭಿಹಿತಾರ್ಥವೇ ಬೇರೆ, ನಿಜಾಭಿಪ[illegible]ಯವೇ ಬೇರೆ. [ಸಂ.]

೧೧. ಕಟಾಕ್ಷ (ಈ) ಕಡೆಗಣ್ಣಿನ ನೋ[illegible] ಓರೆನೋಟ; ಪ್ರೀತಿ. ಉದಾ– ಅ[illegible] ಕಟಾಕ್ಷ ಅವನ ಮೇಲೆ ಪೂರ್ತಿಯ[illegible]ಗಿತ್ತು. [ಸಂ. ಕಟ = ಕಡೆಯ, ಅಕ್ಷ[illegible] ಕಣ್ಣು]

೧೨. ಚತುಷ್ಟಯ (ಅ) ನಾಲ್ಕರ ಗುಂ[illegible] ಉದಾ– ಚೋರಚತುಷ್ಟಯದ ಯೋ[illegible]ಜನೆ ಸಫಲವಾಗಲಿಲ್ಲ. [ಸಂ. ಚತುರ[illegible] ನಾಲ್ಕು ಎಂಬುದರಿಂದ].

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬಗಳಿಗೆ ಅರ್ಥ ಆರಿಸಿ[illegible] ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿ[illegible] ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	....	ಸಾಧಾರಣ[illegible]
೯—೧೦	,,	....	ಉತ್ತಮ
೧೧—೧೨	,,	....	ಅತ್ಯುತ್ತಮ[illegible]

ಮಂತ್ರ ಹಸ್ತ

ಜೋಸೆಫ್ ಕೆಸೆಲ್



ಮಂತ್ರ ಹಸ್ತ

ಅತಿ ದೊಡ್ಡ ಕಟ್ಟಡ ಎಂಬ ಮಾತನ್ನಷ್ಟು ಬಿಟ್ಟರೆ ಆ, ಪ್ರಿಂಝ್ ಆಲ್ಬ್ರೆಚ್ಟ್‌ಸ್ಟ್ರಾಸ್ ಉಳಿದೆಲ್ಲ ಸಾರ್ವಜನಿಕ ಕಟ್ಟಡಗಳಂತೆಯೆ ಇತ್ತು. ಸ್ವಸ್ತಿಕ ಧ್ವಜಗಳು ಅದರ ಮೇಲೆ ಹಾರಾಡುತ್ತಿದ್ದವು. ಆದರೆ ಈ ಕಟ್ಟಡವನ್ನು ಹಗಲಿರುಳು ಸಶಸ್ತ್ರ ಸಿಪಾಯಿಗಳು ಕಾಯುತ್ತಿದ್ದರು. ರಸ್ತೆಯ ಮೇಲೆ ಅಡ್ಡಾಡುವವರು ಈ ಕಟ್ಟಡ ಸನಿಹದಲ್ಲಿ ಬಂದೊಡನೆ ಬೇರೆಡೆ ದೃಷ್ಟಿ ಹೊರಳಿಸಿಕೊಂಡು ಅವಸರದಿಂದ ಮುಂದೆ ಸಾಗುತ್ತಿದ್ದರು. ಯುದ್ಧ ಪೂರ್ವ ಜರ್ಮನಿಯ ಪ್ರಸಿದ್ಧ ಗೆಸ್ಟಪೊ ದಲದ ವರಿಷ್ಠಾಧಿಕಾರಿ ಹೆನ್ರಿಚ್ ಹಿಮ್ಲರನ ಕಚೇರಿ ಈ ಕಟ್ಟಡದಲ್ಲಿ ಇದ್ದಿತು. ಹಿಮ್ಲರ್ ಎಂದರೆ ಜರ್ಮನಿಯ ಜನವೆಲ್ಲ ಗದಗದ ನಡುಗುತ್ತಿತ್ತು.

೧೯೪೫ ರ ಮಾರ್ಚ್ ತಿಂಗಳ ಒಂದು ಮಧ್ಯಾಹ್ನ ಒಂದು ಬೆಲೆಯುಳ್ಳ ಕಾರು ಈ ಕಟ್ಟದ ಎದುರು ಬಂದು ನಿಂತಿತು. ೪೦ ವರ್ಷದ ತುಸು ಲಠ್ಠ ಶರೀರದ ನಾಗರಿಕನೊಬ್ಬ ಕಾರಿನಿಂದಿಳಿದು ಆ ಕಟ್ಟಡವೂ ತೀರ ಸಾಮಾನ್ಯವಾದದ್ದೇನೋ ಎನ್ನುವ ರೀತಿಯಲ್ಲಿ ನಡೆದು ಬಂದು ತಾನು ರೈಹ್ಸ್‌ಫ್ಯುರರ್ ಹಿಮ್ಲರನನ್ನು ಕಾಣಬೇಕು ಎಂದು ಹೇಳಿದ. (ಹಿಟ್ಲರನು ಹಿಮ್ಲರನಿಗೆ ಈ ಪದವಿ ದಯಪಾಲಿಸಿದ್ದ.)

"ಸ್ವತಃ ಅವರನ್ನೇ ಕಾಣಬೇಕೇ?" ಕಾವಲುಗಾರ ಕೇಳಿದ.

"ಹೌದು."

ಆ ಸೈನಿಕ ಅತಿಥಿಯ ಪರಿಚಯದ ಕಾರ್ಡು ತೆಗೆದುಕೊಂಡು ಒಳಗೆ ನಡೆದ. ಕೆಲವೇ ಕ್ಷಣಗಳಲ್ಲಿ ಎಸ್ ಎಸ್. ಸಮವಸ್ತ್ರ ಧರಿಸಿದ ಅಧಿಕಾರಿ ಒಬ್ಬ ಬಂದು ನಾಝಿ ಸಲಾಮು ಹೊಡೆದು "ಹೇಲ್ ಹಿಟ್ಲರ್" ಎಂದ. ಅತಿಥಿ ತನ್ನ ಹ್ಯಾಟು ತೆಗೆದು "ನಮಸ್ಕಾರ ಲೆಫ್ಟನಂಟ್" ಎಂದ.

ಅಧಿಕಾರಿ ವಿನಯದಿಂದಲೆ "ಬನ್ನಿ" ಎಂದು ಅವನನ್ನು ಕರೆದುಕೊಂಡು ಒಳಗೆ ನಡೆದ
ಕಾವಲುಗಾರರು ಆಶ್ಚರ್ಯದಿಂದ ಕಣ್ಣು ಪಿ
ಕಿಸಿದರು. ಸಾಮಾನ್ಯವಾಗಿ ಈ ಕಟ್ಟಡಕ್ಕೆ ಬ
ವಂಥವರ ಲಕ್ಷಣವೊಂದೂ ಈ ಅತಿಥಿಯಲ್ಲಿ
ಲಿಲ್ಲ. ಇಲ್ಲಿಗೆ ಬರುವವರೆಂದರೆ ಎಸ್ ಎಸ್. ಅ
ಕಾರಿಗಳು, ವರಿಷ್ಠ ಪೋಲೀಸ ಅಧಿಕಾರಿಗಳ
ಗುಪ್ತಚಾರರು, ಮತ್ತು ವಿಚಾರಣೆಗಾಗಿ ಕರ
ಲ್ಪಟ್ಟವರೇ ಆಗಿರುತ್ತಿದ್ದರು. ಈ ಅತಿಥಿಯು ಹೆ
ರಿಕೆ, ಉದ್ಧಟತನ ಅಥವಾ ದೈನ್ಯ—ಒಂದನ
ತೋರಿಸಿರಲಿಲ್ಲ. ಸಾಮಾನ್ಯ ನಾಗರಿಕನೊ
ಹೀಗೆ ಬರುವುದೆಂದರೆ ಅದ್ಭುತವೇ ಆಗಿತ್ತು.

ಅಧಿಕಾರಿ ಬಾಗಿಲು ತಟ್ಟುವ ಮೊದಲೇ ಅ
ತೆರೆಯಿತು. ಎಸ್ ಎಸ್. ಜನರಲ್ಲನ ಸಮವ
ಧರಿಸಿದ ಹಿಮ್ಲರ್ ಅವರಿಗಾಗಿ ಕಾದು ನಿಂತಿ
ಆತ ಅತಿಥಿಯ ಪುಷ್ಟ ಕೈಯನ್ನು ತನ್ನ ಕೈಗಳ
ಹಿಡಿದುಕೊಂಡು "ಬಂದದ್ದಕ್ಕಾಗಿ ಆಭಾರಿ
ಗಿದ್ದೇನೆ, ಡಾಕ್ಟರರೇ" ಎನ್ನುತ್ತ ಅವರ
ಒಳಗೆ ಕರೆದುಕೊಂಡನು. ಮತ್ತೆ "ನಿ
ವಿಚಾರವಾಗಿ ಬಹಳಷ್ಟು ಕೇಳಿದ್ದೇನೆ. ನ
ನಡೆಯಲು ಅಥವಾ ಕೂಡ್ರಲು ಕೂಡ ಕೊ
ಈ ವಿಪರೀತವಾದ ಹೊಟ್ಟೆಶೂಲೆಯನ್ನು ನಿ
ಗುಣ ಮಾಡಬಲ್ಲಿರೆಂದು ಆಶೆಯಿದೆ" ಎಂದ

ಮೊದಲೇ ಅಪ್ರಿಯನಾಗಿದ್ದ ಹಿಮ್ಲರನ ಮ
ಇನ್ನಿಷ್ಟು ಅಸಹ್ಯವಾಯಿತು. "ಜರ್ಮನಿಂ
ರುವ ಒಬ್ಬನೇ ಒಬ್ಬ ಡಾಕ್ಟರನಿಗೂ ನನ್ನ ರೋ
ಗುಣಪಡಿಸುವುದಾಗಿಲ್ಲ. ನೀವು ಏನಾದ
ಮಾಡಬಲ್ಲಿರಾ?" ಎಂದು ಆತ ಕೇಳಿದ.

ಅತಿಥಿ—ಡಾಕ್ಟರ್ ಫೆಲಿಕ್ಸ್ ಕರ್ಸ್ಟೆ
ಉತ್ತರವೀಯಲಿಲ್ಲ. ಆತ ಹಿಮ್ಲರನ
ಕಾಣುವ ಗಲ್ಲದ ಎಲುವುಗಳು, ತಲೆಯ ಮೇ
ವಿರಳವಾದ ಕೂದಲುಗಳನ್ನು ನೋಡತೊಡ
ಜರ್ಮನ್ನರಿಗೆ ಮತ್ತು ಎಲ್ಲ ಸುಧಾರಿಸಿದ ನಾ

ಕರಿಗೆ ಭಯಪ್ರದವಾದ ಕ್ರಮಗಳನ್ನು ಕೈಕೊಂಡ ಮನುಷ್ಯನೇ ಈತನಾಗಿದ್ದ. ಇವನ ತಲೆಯಲ್ಲಿ ಅತಿ, ಕ್ರೂರವಾದ ಬಂಧನಸತ್ರ ಸಾಮೂಹಿಕ ಕೊಲೆ–ಗಡೀಪಾರು ಮುಂತಾದವುಗಳ ಯೋಜನೆಗಳು ಹುಟ್ಟಿ ರೂಪ ತಾಳಿದ್ದವು.

ಆದರೆ ಆ ಕ್ರೂರ ಮುಖದಲ್ಲೂ ಕರ್ಸ್ಟೆನ್‌ರಿಗೆ ನೋವಿನಿಂದ ನರಳುವ ಮಾನವನ ದೈನ್ಯದ ಛಾಯೆ ಕಾಣಿಸಿತು. "ದಯವಿಟ್ಟು ಅಂಗಿ ಕಳೆದು ಅಂಗಾತವಾಗಿ ಮಲಗಿಕೊಳ್ಳುವಿರಾ, ಹರ್ ರೈಹ್ಸ್‌ಫ್ಯುರರ್?" ಅವರು ಕೇಳಿದರು.

ಹಿಮ್ಲರ್ ತಟ್ಟನೆ ಅಂಗಿಕಳೆದು ಮಲಗಿದ. ಡಾಕ್ಟರರು ಮಂಚದ ಬಳಿಗೆ ಖುರ್ಚಿ ಸರಿಸಿ ಕುಳಿತು ಹಿಮ್ಲರನ ಮೈಮೇಲೆ ಕೈಯಾಡಿಸತೊಡಗಿದರು. ಬೆರಳುಗಳು ಆಡುತ್ತಿದ್ದಂತೆ ಅವರ ಕಣ್ಣು ಮುಚ್ಚಿದವು. ಬುದ್ಧನ ಮೂರ್ತಿಯಂತೆ ಅವರು ಕಾಣಿಸತೊಡಗಿದರು. ಡಾಕ್ಟರರ ಬೆರಳುಗಳು ಹಿಮ್ಲರನ ಗಂಟಲು, ಎದೆ, ಹೃದಯ ಹೊಟ್ಟೆಯ ಮೇಲೆ ಸರಿಯತೊಡಗಿದವು. ಆ ಮೇಲೆ ಕೆಲವೆಡೆ ನಿಂತು ಒತ್ತಿ ಅರಸತೊಡಗಿದವು.

ಹಾ! ಹಿಮ್ಲರ್ ಕೂಗಿದ. ಡಾಕ್ಟರರ ಕೋಮಲ ಬೆರಳುಗಳು ಒಂದೆಡೆ ಬಿರುಸಾಗಿ ಊರಿದ್ದವು. ಹಿಮ್ಲರ್ ಅಸಾಧ್ಯ ನೋವಿನಿಂದ ನರಳಿದ. "ಸರಿ. ಸುಮ್ಮನೆ ಮಲಗಿರಿ" ಎಂದರು ಡಾಕ್ಟರರು. ಹಿಮ್ಲರನಿಗೆ ನೋವಿನ ಇನ್ನೊಂದು, ಮತ್ತೊಂದು ಆಘಾತವಾಯಿತು. ಆತ ನರಳಿದ. ತುಟಿ ಕಚ್ಚಿಕೊಂಡ. ಅವನ ಹಣೆ ಬೆವರಿನಿಂದ ತೊಯ್ದು ಹೋಯಿತು.

ಕರ್ಸ್ಟೆನ್ ಕೈ ತೆಗೆದು ಹೇಳಿದರು. "ತಿಳಿಯಿತು. ಈ ಬಗೆಯ ನೋವು ತುಂಬ ಭಯಂಕರವಾದದ್ದು."

"ಗುಣ ಮಾಡಬಲ್ಲಿರಾ?" ಹಿಮ್ಲರನ ತೇಜೋಹೀನ ಮುಖದಲ್ಲಿ ಯಾಚನೆಯ ಛಾಯೆಯಿತ್ತು.

"ಈಗಲೆ ಚಿಕಿತ್ಸೆ ಆರಂಭಿಸೋಣ."

ಈ ಸಲ ಡಾಕ್ಟರರ ಬೆರಳುಗಳು ಹುಡುಕಾಡಲಿಲ್ಲ. ರೋಗಿಯ ಹೊಟ್ಟೆಯ ಒಂದೆಡೆಯಲ್ಲಿ ಅವು ನಾಟ ಮಾಂಸದ ಮುದ್ದೆಯೊಂದನ್ನು ಅಮುಕಿ ತಿಕ್ಕಿದವು. ಹಿಮ್ಲರ್ ನೋವಿನಿಂದ ನರಳಿದ. ಕೆಲ ನಿಮಿಷಗಳ ನಂತರ ಡಾಕ್ಟರರು "ಇಂದಿಗೆ ಸಾಕು. ಹೇಗೆನಿಸುತ್ತದೆ ಈಗ?" ಎಂದು ಕೇಳಿದರು.

ಉತ್ತರ ಕೊಡುವ ಮೊದಲು ರೈಹ್ಸ್‌ಫ್ಯುರರ್ ತಡೆದ. ತನ್ನ ದೇಹದಲ್ಲಿ ನಡೆಯುವ ವ್ಯಾಪಾರವನ್ನು ಅವನು ಆಲಿಸುವಂತಿತ್ತು. ಆತ ಅನುಮಾನಿಸುತ್ತಲೇ "ನನಗೆ, ಹಾ! ಆಶ್ಚರ್ಯ! ನನಗೆ ಆರಾಮೆನಿಸಹತ್ತಿದೆ" ಎಂದ.

ಏನಾದೀತೋ ಎಂದು ಹೆದರುತ್ತಲೇ ಹಿಮ್ಲರ್ ಎದ್ದು ನಿಂತ. ಆದರೆ ನೋವು ಕಾಣಿಸಲಿಲ್ಲ. "ಯಾವ ಮದ್ದೂ-ಮೊರ್ಫಾಯಿನ್ ಕೂಡ ಪ್ರಯೋಜನಕಾರಿಯಾಗುತ್ತಿದ್ದಿಲ್ಲ. ಆದರೆ ಈಗ ಕೆಲವೇ ನಿಮಿಷಗಳಲ್ಲಿ— ಛೆ! ಛೆ! ನನಗೆಂದೂ ಇಂಥ ಮಾತಿನಲ್ಲಿ ನಂಬಿಕೆಯಾಗುವುದು ಸಾಧ್ಯವಿರಲಿಲ್ಲ. ಡಾಕ್ಟರ್, ನೀವು ನನ್ನ ಬಳಿ ಇರಬೇಕು. ನಿಮ್ಮನ್ನು ಕೂಡಲೇ ಎಸ್ ಎಸ್‌ನಲ್ಲಿ ಕರ್ನಲ್ ಎಂದು ನೇಮಿಸಿಕೊಳ್ಳುತ್ತೇನೆ" ಎಂದ ಹಿಮ್ಲರ್.

ಈ ಕೊಡುಗೆಯಿಂದ ಡಾಕ್ಟರರು ಅಸ್ವಸ್ಥರಾದರು. ಆದರೆ ಅವರು ಗಂಭೀರರಾಗಿ "ಹರ್ ರೈಹ್ಸ್‌ಫ್ಯುರರ್, ನೀವು ನನಗೆ ಕೊಡುತ್ತಿರುವ ಗೌರವದ ಕಲ್ಪನೆ ನನಗಿದೆ. ಆದರೆ ದುರ್ದೈವದಿಂದ ನಾನದನ್ನು ಸ್ವೀಕರಿಸಲಾರೆ" ಎಂದು ತಾನು ಕುಟುಂಬ ಸಮೇತ ಹಾಲಂಡಿನಲ್ಲಿ ಇರುವುದಾಗಿಯೂ ಅಲ್ಲಿ ತನ್ನ ಅನೇಕಾನೇಕ ರೋಗಿಗಳಿರುವುದಾಗಿಯೂ ತಿಳಿಸಿದರು. "ಆದರೆ ನಿಮಗೆ ಬೇಕೆಂದಾಗ ಬರುತ್ತೇನೆ. ಈಗಂತೂ ಬರ್ಲಿನ್‌ನಲ್ಲಿರುವ ನನ್ನ ರೋಗಿಗಳ ಆರೈಕೆಗಾಗಿ ಎರಡು ವಾರ ಇರುತ್ತೇನೆ."

"ಸರಿ. ಹಾಗಾದರೆ ಇಂದಿನಿಂದ ನಾನೂ ನಿಮ್ಮ ರೋಗಿ. ದಯವಿಟ್ಟು ಪ್ರತಿನಿತ್ಯ ಬಂದುಹೋಗಿ" ಎಂದು ಹಿಮ್ಲರ್ ಗಂಟೆ ಒತ್ತಿದ. ಬಂದ ಅಧಿಕಾರಿಯೊಡನೆ "ಡಾಕ್ಟರ್ ಕರ್ಸ್ಟೆನ್‌ರಿಗೆ ಇಲ್ಲಿ ಯಾವಾಗಲೂ ಸ್ವಾಗತವಿದೆ. ಎಲ್ಲರಿಗೂ ತಿಳಿಸು" ಎಂದ.

ಅಂದಿನಿಂದ ಎರಡು ವಾರಗಳ ವರೆಗೆ ಪ್ರತಿನಿತ್ಯ ಮುಂಜಾನೆ ಡಾಕ್ಟರರು ಹಿಮ್ಲರನಿಗೆ ಉಪಚಾರ ಮಾಡಿದರು. ಪ್ರೀತಿಯಿಂದಲೇ ಅವರು ಕೆಲಸ ಮಾಡಿದರೆಂದಲ್ಲ. ಅವರ ಮಿತ್ರನೂ

ಹಳೆಯ ರೋಗಿಯೂ ಆದ ಜರ್ಮನ್ ಉದ್ದಿಮೆದಾರ ಆಗಸ್ಟ್ ಡೀನನಲ್ಲದಿದ್ದರೆ ಈಗ ಅವರು ಬರ್ಲಿನ್ನಿನಲ್ಲಿ ಇರುತ್ತಲೇ ಇರಲಿಲ್ಲ. ೧೯೩೪ ರಲ್ಲಿ ಆಗಸ್ಟ್ ಡೀನ್ ಬಂದು "ಹಿಮ್ಲರನಿಗೆ ಚಿಕಿತ್ಸೆ ಮಾಡುವಿರಾ?" ಎಂದು ಕೇಳಿದಾಗ ಡಾಕ್ಟರರು "ಖಂಡಿತ ಇಲ್ಲ"ವೆಂದಿದ್ದರು. ಆದರೆ ಡೀನ್ ಅವರ ಬೆನ್ನು ಬಿಟ್ಟಿರಲಿಲ್ಲ. "ಪೊಟಾಶ್ ಉದ್ದಿಮೆಯ ರಾಷ್ಟ್ರೀಕರಣ ಮಾಡಬೇಕೆನ್ನುತ್ತಾನೆ ಹಿಮ್ಲರ್. ಅವನ ಈ ಯೋಜನೆಗೆ ನಾನೇ ಮೊದಲ ಬಲಿಯಾಗುತ್ತೇನೆ. ನನಗಾಗಿ ಇಷ್ಟು ಕೆಲಸಮಾಡಿ. ರೋಗಿಗಳ ಮೇಲೆ ನಿಮ್ಮ ಪ್ರಭಾವ ಎಷ್ಟು ಆಳವಾಗಿ ಬೀಳುತ್ತದೆಂದು ಬಲ್ಲೆ" ಎಂದು ಕಾಡಿ ಬೇಡಿಕೊಂಡಿದ್ದ ಡೀನ್. ಅಂತೇ ಈಗ ಕರ್ಸ್ಟೆನ್ ಬಂದಿದ್ದರು. ಅವರ ಈ ಒಪ್ಪಿಗೆ ವಿಧಿಯ ಒಂದು ಆಟವೇ ಆಗಿತ್ತು. ಈ ಒಪ್ಪಿಗೆ ಮುಂದೆ ಸಹಸ್ರಾರು ಜನರ ಜೀವವುಳಿಸಲು ಒಂದು ಸಾಧನವಾಯಿತು.

ಹಾಗೆ ನೋಡಿದರೆ ಕರ್ಸ್ಟೆನ್ ಡಾಕ್ಟರರಲ್ಲ. ಅವರೊಬ್ಬ ಮಾಲೀಸು ಮಾಡುವವರು. ಆದರೆ ಅವರ ಕೈಗಳಲ್ಲಿ ಒಂದು ಬಗೆಯ ದೈವೀ ಶಕ್ತಿಯಿತ್ತು.

೧೮೯೮ ರಲ್ಲಿ ಇಸ್ಟೋನಿಯದಲ್ಲಿ ಹುಟ್ಟಿದ ಕರ್ಸ್ಟೆನ್ ಮೊದಲನೆಯ ಮಹಾಯುದ್ಧದ ನಂತರ ಫಿನ್ನಿಶ್ ನಾಗರಿಕರಾಗಿ ಹೆಲ್ಸಿಂಕಿಯಲ್ಲಿ ಮಾಲೀಸು ವಿದ್ಯೆಯನ್ನು ಕಲಿಯತೊಡಗಿದರು. ಅಲ್ಲಿ ಶಿಕ್ಷಣ ಮುಗಿಸಿ ಪದವಿ ಪಡೆದು ಬರ್ಲಿನ್ನಿಗೆ ಹೆಚ್ಚಿನ ಅಭ್ಯಾಸಕ್ಕಾಗಿ ಬಂದಿದ್ದಾಗ ೧೯೨೨ ರಲ್ಲಿ ಡಾ. ಕೊ ಎಂಬವರ ಭೆಟ್ಟಿ ಅವರಿಗಾಯಿತು.

ವೃದ್ಧರೂ ಸುಕ್ಕುಗಟ್ಟಿದ ದೇಹದವರೂ ಆದ ಡಾ. ಕೊ ಚೀನೀಯ ಮನುಷ್ಯ. ಆದರೆ ಅವರು ತಿಬೇಟಿನ ಒಂದು ಮಠದಲ್ಲಿ ಬೆಳೆದು ಲಾಮಾ ಆಗಿದ್ದರು. ಬಾಲ್ಯದಿಂದಲೂ ಅವರಿಗೆ ಔಷಧೋಪಚಾರದ, ಹೆಚ್ಚಾಗಿ ಮಾಲೀಸು ವಿದ್ಯೆಯ ಶಿಕ್ಷಣ ಸಿಕ್ಕಿತ್ತು. ಮೂರು ವರ್ಷಗಳ ಕಾಲ ಕರ್ಸ್ಟೆನ್ ಡಾ. ಕೊರಲ್ಲಿ ಶಿಕ್ಷಣ ಪಡೆದರು. ಎಲ್ಲ ರೋಗಗಳಿಗೂ ತಮ್ಮ ಮಾಲೀಸು ರಾಮಬಾಣವೆಂದು ಕೊ ಹೇಳುತ್ತಿರಲಿಲ್ಲ. ಆದರೆ ಹೆಚ್ಚಿನ ಡಾಕ್ಟರರು ಗುಣಪಡಿಸಲಾರದ ಎಷ್ಟೋ ರೋಗಗಳು ಇದರಿಂದ ಖಂಡಿತ ಗುಣವಾಗುತ್ತಿದ್ದವು.

೧೯೨೫ ರಲ್ಲಿ ಕೊ "ಕರ್ಸ್ಟೆನ್, ನನಗೆ ಬರುವುದೆಲ್ಲವನ್ನೂ ನಿನಗೆ ಕಲಿಸಿದ್ದೇನೆ" ಎಂದು ತನ್ನ ರೋಗಿಗಳೆಲ್ಲರನ್ನೂ ಕರ್ಸ್ಟೆನ್‌ರಿಗೆ ಒಪ್ಪಿಸಿ ತಿಬೇಟಿಗೆ ಮರಳಿದರು.

ರಾತ್ರಿ ಬೆಳಗಾಗುವುದರೊಳಗಾಗಿ ಕರ್ಸ್ಟೆನ್ನರ ಭಾಗ್ಯ ತೆರೆಯಿತು. ನಿರ್ಧನ ವಿದ್ಯಾರ್ಥಿಯಾಗಿದ್ದ ಅವರು ಶ್ರೀಮಂತರಾದರು. ಅವರ ಕೀರ್ತಿ ಜರ್ಮನಿಯ ಹೊರಗೆ ಹಬ್ಬಿತು. ೧೯೨೮ ರಲ್ಲಿ ನೀದರ್‌ಲ್ಯಾಂಡ್ಸಿನ ರಾಣಿ ವಿಲ್‌ಹೆಲ್ಮಿನಾ ಗಂಡ ಪ್ರಿನ್ಸ್ ಹೆಂಡ್ರಿಕ್‌ರ ಚಿಕಿತ್ಸೆಗಾಗಿ ಅವರನ್ನು ಕರೆಸಲಾಯಿತು. ಅವರಿಗೆ ಆ ನಾಡು ತುಂಬ ಮೆಚ್ಚಿಕೆಯಾದ್ದರಿಂದ ಅವರು ಹೇಗ್ ನಗರಕ್ಕೆ ತಮ್ಮ ದವಾಖಾನೆಯನ್ನು ಸ್ಥಳಾಂತರಿಸಿದರು. ಆದರೆ ಬರ್ಲಿನ್ನಿನಲ್ಲಿ ಒಂದು ಮನೆಯನ್ನೂ ನಗರದ ಹೊರಗೆ ಒಂದಿಷ್ಟು ಆಸ್ತಿಯನ್ನೂ ಕೊಂಡಿಟ್ಟರು.

ಡಾಕ್ಟರರು ಲಗ್ನವಾದರು. ಒಬ್ಬ ಮಗನು ಹುಟ್ಟಿದ. ಡಾಕ್ಟರರು ಲಗ್ನವಾಗುವ ಸಮಯದಲ್ಲಿ ಹಿಟ್ಲರ್ ಆಸ್ಟ್ರಿಯವನ್ನು ಗೆದ್ದುಕೊಂಡ. ಅವರ ಮಗ ಹುಟ್ಟಿದ ವರ್ಷ ಹಿಟ್ಲರ್ ಝೆಕೊಸ್ಲೊವಾಕಿಯದ ಒಂದು ತುಣುಕನ್ನು ಆಕ್ರಮಿಸಿದ. ಕರ್ಸ್ಟೆನ್ ಇವನ್ನೆಲ್ಲ ಕಂಡೂ ಕಾಣದವರಂತಿದ್ದು ತಮ್ಮ ವ್ಯವಸಾಯ, ಕುಟುಂಬದಲ್ಲಿ ಮಗ್ನರಾಗಿದ್ದರು. ರಾಜಕೀಯಕ್ಕೂ ಅವರಿಗೂ ಸಂಬಂಧವೇನು ?

ಮೊದಲಿನ ಎರಡು ವಾರಗಳಲ್ಲಿ ಕರ್ಸ್ಟೆನ್ ಉಪಚಾರಕ್ಕೆ ಹಿಮ್ಲರ್ ತೋರಿದ ಪ್ರತಿಕ್ರಿಯೆ ಅದ್ಭುತವಾಗಿತ್ತು. ಅತ್ಯಂತ ಗುಪ್ತವಾದ ಕ್ರೂರ ಕೆಲಸಗಳ ಹೊಣೆ ಹೊರಿಸಲ್ಪಟ್ಟ, ಕೇವಲ ಪೋಲೀಸರು ಗುಪ್ತಚಾರರು ದುರಭಿಮಾನಿಗಳು ಮುಂತಾದವರ ಜೊತೆಯಲ್ಲಿ ದಿನ ಕಳೆಯುತ್ತಿದ್ದ ಹಿಮ್ಲರ್ ಸ್ವಾಭಾವಿಕವಾಗಿಯೆ ಬಲು ಸಂಶಯ ಪ್ರಕೃತಿಯವನಾಗಿದ್ದ. ಆದರೆ ಈಗ ಡಾಕ್ಟರರ ಕೈಗಳಿಂದ ವೇದನಾರಹಿತನಾದ ಹಿಮ್ಲರ್ ಬಹಳಷ್ಟು ಮೃದುವಾದ. ಪ್ರತಿ ಐದು ನಿಮಿ

ಗೊಮ್ಮ ನರಗಳಿಗೆ ವಿಶ್ರಾಂತಿಕೊಡಲು ಕರ್ಸ್ಟೆನ್ ಮಾಲೀಸು ನಿಲ್ಲಿಸುತ್ತಿದ್ದರು. ಆಗ ರೈಹ್ಸ್-ಫ್ಯುರರ್ ಹರಟೆ ಹೊಡೆಯತೊಡಗಿದ.

ಮೊದಮೊದಲಿಗೆ ಹಿಮ್ಲರ್ ತನ್ನ ಮತ್ತು ತನ್ನ ರೋಗದ ಮಾತನ್ನಾಡುತ್ತಿದ್ದ. ಆ ಮೇಲೆ ಜರ್ಮನ್ ಕುಲದ ಹಿರಿಮೆ, ಎಸ್ ಎಸ್‌ನ ಯಶೋದುಂದುಭಿ ಮತ್ತು ತತ್ತ್ವಗಳ ಬಗ್ಗೆ ಭಾಷಣ ಬಿಗಿದ. ಎಸ್‌ಎಸ್‌ಗಾಗಿ ಹಿಮ್ಲರ್ ಸ್ವತಃ ನೀಲಿ ಕಣ್ಣಿನ ಎತ್ತರದ ಬೀಸು ಆಳುಗಳನ್ನೆ ಸೈನಿಕರನ್ನಾಗಿ ಆರಿಸುತ್ತಿದ್ದ. ಮಾತು ಹಿಟ್ಲರನ ವಿಷಯದ ವರೆಗೂ ಬರತೊಡಗಿತು. ಆಗಲಂತೂ ಹಿಮ್ಲರನ ನಾಲಿಗೆ ಬಲು ಉದ್ದವಾಗುತ್ತಿತ್ತು. ಸಾವಿರ ವರ್ಷಗಳಲ್ಲಿ ಒಮ್ಮೆ ಹುಟ್ಟುವಂಥ ಅಪ್ರತಿಮ ಮೇಧಾವಿ ಪುರುಷ ಹಿಟ್ಲರ್. ಆತ ಸರ್ವಶಕ್ತಿವಂತನಾದ ದೇವರು. ಕೀರ್ತಿಶಿಖರವನ್ನೇರಲು ಜರ್ಮನ್ನರು ಅವನನ್ನು ಕಣ್ಮುಚ್ಚಿ ಅನುಸರಿಸಿದರೆ ಸಾಕು ಎಂದು ಆತ ಹೇಳುತ್ತಿದ್ದ.

ಆದರೆ ಕರ್ಸ್ಟೆನ್ ಇವಾವುದಕ್ಕೂ ಉತ್ತರ ಕೊಡುತ್ತಿರಲಿಲ್ಲ. ಅವರಿಗೆ ರಾಜಕೀಯ ಬೇಡವಾಗಿತ್ತು. ಆದರೆ ಒಂದು ದಿನ ಹಿಮ್ಲರ್ ಅಚಾನಕವಾಗಿ "ಬೇಗನೆ ನಾವು ಯುದ್ಧರಂಗಕ್ಕಿಳಿಯುವೆವು" ಎಂದಾಗ ಅವರಿಗೆ ಆಘಾತವಾಯಿತು. "ಯುದ್ಧ! ಯಾಕೆ?" ಎಂದು ಅವರ ಬಾಯಿ ನುಡಿದುಬಿಟ್ಟಿತು.

ಮಲಗಿದ್ದ ಹಿಮ್ಲರ್ ಮೊಳಕೈಯೂರಿ ಉತ್ಸಾಹಾತಿರೇಕದಲ್ಲಿ ಗಟ್ಟಿಯಾಗಿ ಹೇಳಿದ. "ಹಿಟ್ಲರನಿಗೆ ಯುದ್ಧ ಬೇಕಾಗಿದೆಯೆಂದು ಯುದ್ಧವಾಗಲಿದೆ. ಯುದ್ಧದಿಂದ ಜನ ಹೆಚ್ಚು ಬಲಶಾಲಿಗಳೂ ಪೌರುಷಶಾಲಿಗಳೂ ಆಗುತ್ತಾರೆ."

ಮತ್ತೆ ಮೊದಲಿನಂತೆ ಮಲಗಿಕೊಂಡು ಶಾಂತವಾಗಿ ಹೇಳಿದ "ಏನಾದರೂ ಈ ಯುದ್ಧ ಸಣ್ಣದೂ ಅಲ್ಪಸಮಯದ್ದೂ ಸುಲಭದ್ದೂ ವಿಜಯಶಾಲಿಯಾದದ್ದೂ ಆಗುವುದು. ಪ್ರಜಾಪ್ರಭುತ್ವ ರಾಷ್ಟ್ರಗಳು ಕೊಳೆತು ಲಡ್ಡಾಗಿವೆ. ನಿಮಿಷಾರ್ಧದಲ್ಲಿ ಅವು ಶರಣುಬರುವವು."

ಕರ್ಸ್ಟೆನ್ ಹಾಲಂಡಿಗೆ ಮರಳಿದಾಗ ಹಿಮ್ಲರನ ನೋವು ಮಾಯವಾಗಿತ್ತು. ಹಿಮ್ಲರ್ ಡಾಕ್ಟರರನ್ನು ಕೃತಜ್ಞತೆಯಿಂದ ತುಂಬು ಹೃದಯದಿಂದ ಬೀಳ್ಕೊಂಡ. ಡಾಕ್ಟರರೆಂದರೆ ಪವಾಡ ಪುರುಷರು ಎಂದಾತ ತಿಳಿದಿದ.

ಕರ್ಸ್ಟೆನ್ ಮತ್ತೆ ಬರ್ಲಿನ್ನಿಗೆ ಮರಳಿದಾಗ ಮೂರು ತಿಂಗಳುಗಳು ಗತಿಸಿ ಹೋಗಿದ್ದವು. ಹಿಮ್ಲರನಿಗೆ ಅವರ ಅಗತ್ಯವೆನಿಸಿತು. ಮತ್ತೆ ಉಪಚಾರ ಆರಂಭವಾಯಿತು. ಮತ್ತೆ ಹಿಟರನಿಗೆ ಬೇಕಾಗಿದ್ದ ಯುದ್ಧದ ಮಾತುಗಳು ಬಂದವು. "ಯುದ್ಧದಿಂದ ಶುದ್ಧೀಕರಿಸಲ್ಪಡದಿದ್ದರೆ ಜಗತ್ತಿಗೆ ನಿಜ ಶಾಂತಿ ಸಿಗದು" ಎಂದು ಹಿಮ್ಲರ್ ಬಡಬಡಿಸುತ್ತಿದ್ದ.

ಸಾವಕಾಶವಾಗಿ ಕರ್ಸ್ಟೆನ್ ಉತ್ತರಕೊಡಲಾರಂಭಿಸಿದರು. ತನ್ನ ಮೌನವನ್ನು ಹಿಮ್ಲರ್ ಸಮ್ಮತಿಯೆಂದು ಭಾವಿಸಿಕೊಳ್ಳುವುದು ಅವರಿಗೆ ಬೇಕಾಗಿರಲಿಲ್ಲ. ಯುದ್ಧವು ಮಾನವಜಾತಿಯ ಮೇಲಿನ ಅತ್ಯಾಚಾರ ಎಂದು ಅವರು ಪುನಃ ಪುನಃ ಹೇಳಿದರು. ಅದಕ್ಕೆಲ್ಲ ಹಿಮ್ಲರನ ಉತ್ತರ ಒಂದೇ: "ಫ್ಯುರರ್ ಹೇಳುವುದು ಹೀಗೆ."

ಆ ಶರದೃತುವಿನಲ್ಲಿ ಹಿಟ್ಲರ್ ಪೋಲಂಡಿನ ಮೇಲೆ ದಾಳಿ ಮಾಡಿ ಯುದ್ಧ ಆರಂಭಿಸಿದಾಗ (ಹಿಮ್ಲರನ ಭವಿಷ್ಯವನ್ನು ಸುಳ್ಳುಮಾಡಿ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಯುದ್ಧದಲ್ಲಿ ಧುಮುಕಿದ್ದವು.) ಕರ್ಸ್ಟೆನ್‌ರು ಇಕ್ಕಟ್ಟಿನಲ್ಲಿ ಸಿಲುಕಿದರು. ಅಕ್ಟೋಬರ ತಿಂಗಳಲ್ಲಿ ಹಿಮ್ಲರನ ಅವಸರದ ಕರೆಯನ್ನು ಮನ್ನಿಸಿ ಬಂದ ಅವರು ತಿರುಗಿ ಹಾಲಂಡಿಗೆ ಹೋಗುವ ಮೊದಲು ಫಿನ್ನಿಶ್ ರಾಯಭಾರಿ ಕಚೇರಿಯ ಸಲಹೆ ಪಡೆಯಬಯಸಿದರು. ಅವರೀಗ ಫಿನ್‌ಲಂಡಿಗೆ ಹೋಗುವುದು ಅಪರಾಧವಾಗಿದ್ದರೂ ಇನ್ನೂ ಅದರ ನಾಗರಿಕರೂ ಫಿನ್‌ಲಂಡಿನ ರಿಜರ್ವ್ ದಲದಲ್ಲಿ ಅಧಿಕಾರಿಗಳೂ ಆಗಿದ್ದರು.

ಅವರು ಅನೇಕ ಫಿನ್ನಿಶ್ ರಾಜಕಾರಣಿಗಳನ್ನು ಭೆಟ್ಟಿಯಾಗಿ ತಾವು ಹಿಮ್ಲರನನ್ನು ಉಪಚರಿಸುತ್ತಿರುವ ವಿಚಾರವನ್ನೂ ಚಿಕಿತ್ಸೆಯ ಸಮಯದಲ್ಲಿ ಹಿಮ್ಲರ್ ಹರಟೆ ಹೊಡೆಯುವಾಗ ಸೈನಿಕ ಮತ್ತು ರಾಜಕೀಯ ರಹಸ್ಯಗಳನ್ನು ಹೇಳುತ್ತಾನೆಂದೂ ತಿಳಿಸಿದರು. ತಾನು ಚಿಕಿತ್ಸೆಯನ್ನು ಮುಂದುವರಿಸಬೇಕೇ ಎಂದೂ ಕೇಳಿ

ದರು.

"ಖಂಡಿತವಾಗಿಯೂ ಮುಂದುವರಿಸಬೇಕು. ಅವನು ತೋರಿಸುತ್ತಿರುವ ವಿಶ್ವಾಸವನ್ನು ಕಾಯ್ದು ಕೊಳ್ಳಿ. ನಮಗೆ ಸುದ್ದಿ ಮುಟ್ಟಿಸುತ್ತಾ ಇರಿ. ಅದು ತುಂಬ ಮಹತ್ವದ್ದು" ಎಂದು ಮುತ್ಸದ್ದಿಗಳು ಅವರಿಗೆ ಹೇಳಿದರು. ಕರ್ಸ್ಟೆನ್ ಒಪ್ಪಿಕೊಂಡರು.

೧೯೪೦ ರ ಮೇ ಅಷ್ಟೊತ್ತಿಗೆ ಕರ್ಸ್ಟೆನ್ನರ ಪರಿಸ್ಥಿತಿ ತೀರ ಗಡುಚಾಗಿತ್ತು. ಅವರ ಸ್ವದೇಶವಾದ ಇಸ್ಟೋನಿಯನನ್ನು ಸೋವಿಯೆಟ್ ರಶಿಯ ಕಬಳಿಸಿತ್ತು. ರಶಿಯದ ವಿರುದ್ಧ ೧೯೧೯ ರಲ್ಲಿ ಅವರು ಯುದ್ಧ ಮಾಡಿದ್ದರಾದ್ದರಿಂದ ಅಲ್ಲಿ ಹೋದರೆ ರಾಜದ್ರೋಹಿಗಳೆಂದು ಅವರಿಗೆ ಮರಣದಂಡನೆ ಕಾದಿತ್ತು.

ಅವರು ವಾಸಿಸುತ್ತಿದ್ದ ಹಾಲಂಡನ್ನು ಹಿಟ್ಲರನ ಸೈನ್ಯ ಆಕ್ರಮಿಸಿತ್ತು. ರಾಣಿ ವಿಲ್‌ಹೆಲ್ಮಿನಾಳೊಡನೆ ವಿಶೇಷ ಸಂಪರ್ಕವಿಟ್ಟುಕೊಂಡವರೆಂದು ಕರ್ಸ್ಟೆನ್ನರ ಆಹುತಿ ತೆಗೆದುಕೊಳ್ಳಲು ಡಚ್ ನಾಝಿಗಳು ಕಾದಿದ್ದರು. ಹಿಮ್ಲರನ ಚಿಕಿತ್ಸೆ ಮುಂದುವರಿಸುವ ಅಪ್ಪಣೆಯಿತ್ತಾದ್ದರಿಂದ ಅವರು ತಾವು ನಾಗರಿಕರಾಗಿದ್ದ ಫಿನ್ಲಂಡಿಗೆ ಹೋಗುವಂತಿರಲಿಲ್ಲ.

ಜರ್ಮನಿಯಲ್ಲಿ ಅವರ ಸಂಚಾರ ಸ್ವಾತಂತ್ರ್ಯಕ್ಕೆ ತುಂಬ ನಿರ್ಬಂಧಗಳಿದ್ದವು. ಹಾಲಂಡಿನ ಮೇಲಿನ ದಾಳಿಯಲ್ಲಿ ಅವರನ್ನು ಬರ್ಲಿನ್ನಿನ ಹೊರವಲಯದಲ್ಲಿದ್ದ ಅವರ ಮನೆಯಲ್ಲಿ ಸ್ಥಾನಬದ್ಧರನ್ನಾಗಿ ಮಾಡಿದ್ದರು. ಮೇ ತಿಂಗಳ ಮಧ್ಯದಲ್ಲಿ ಅವರಿಗೆ ಹಿಮ್ಲರನ ಜೊತೆಯಲ್ಲಿ ರಣರಂಗಕ್ಕೆ ಬರಲು ಆಮಂತ್ರಣವಲ್ಲ, ಅಪ್ಪಣೆ ಬಂತು.

ಜರ್ಮನ್ ಸೈನ್ಯಗಳು ಅತಿ ತ್ವರಿತವಾಗಿ ಫ್ರಾನ್ಸಿನಲ್ಲಿ ಮುನ್ನುಗ್ಗಹತ್ತಿದವು. ಹಿಮ್ಲರನ ಖಾಸಗಿ ರೇಲ್ವೆ ಗಾಡಿ ಗಾಲಿಗಳ ಮೇಲಿನ ಕೇಂದ್ರಕಚೇರಿಯಾಗಿತ್ತು. ಈ ರೇಲ್ವೆ ಗಾಡಿಯ ಬೆನ್ನ ಹಿಂದೆಯೆ ಭಯ, ಹಸಿವು, ಹಿಂಸೆ ಮರಣಗಳು ಬಂದವು. ಈ ವಿನಾಶದೃಶ್ಯದ ದರ್ಶನವನ್ನು ತಪ್ಪಿಸಿಕೊಳ್ಳಲೆಂದು ಡಾಕ್ಟರರು ಹಿಮ್ಲ-
ರನ ಖಾಸಗಿ ಲೈಬ್ರರಿಯಲ್ಲಿ ಕಾಲಕಳೆಯುತ
ದರು. ಅವರಿಗೆ ಆಶ್ಚರ್ಯವಾಯಿತು. ಅಲ್ಲಿ
ಪುಸ್ತಕಗಳೆಲ್ಲ ಧಾರ್ಮಿಕವಾಗಿದ್ದವು. ವೇದಗ
ಹಳೆ ಒಡಂಬಡಿಕೆ, ಕುರಾನ್, ಸುವಾರ್ತೆಗ
ಇತ್ಯಾದಿ.

"ನಿಜವಾದ ನಾಝಿಗೆ ಧರ್ಮವಿರುವು
ಎಂದಿರಲ್ಲವೆ ನೀವು? ಹಾಗಾದರೆ ಈ ಪುಸ
ಗಳೇಕೆ?" ಎಂದು ಅವರು ಒಂದು ದಿನ ಕೇ
ದರು. "ಛೆ! ಛೆ! ನಾನೇನೂ ಮತ ಬದಲಿಸಿ
ನನ್ನ ಕೆಲಸಕ್ಕಾಗಿ ಈ ಪುಸ್ತಕಗಳು ಅಗತ್ಯ
ಗಿವೆ. ಹೊಸ ನಾಝಿ ಧರ್ಮದ ಬೈಬಲ್ಲ
ಬರೆಯಲು ಹಿಟ್ಲರ್ ನನಗೆ ಹೇಳಿದ್ದಾ
ಎಂದು ಹಿಮ್ಲರ್ ಉತ್ತರವಿತ್ತ.

"ಅಂದರೆ?"

"ವಿಜಯಪ್ರಾಪ್ತಿಯ ನಂತರ ಹಿಟ್ಲ
ಕ್ರಿಶ್ಚನ್ ಧರ್ಮವನ್ನು ನಿರ್ಮೂಲಮಾಡಿ ಹ
ಜರ್ಮನ್ ಧರ್ಮವನ್ನು ಸ್ಥಾಪಿಸುವನು. ದೇ
ಅಸ್ತಿತ್ವವನ್ನು ನಾವು ಕಾಯ್ದುಕೊಳ್ಳುವೆವಾದ
ಅದು ಅಸ್ಪಷ್ಟ ಸಂದಿಗ್ಧ ಸ್ವರೂಪದ್ದಾಗುವು
ಮಾನವನ ಉದ್ಧಾರಕರ್ತನೆಂದು ಯೇಸು
ಸ್ಥಾನವನ್ನು ಹಿಟ್ಲರ್ ಆಕ್ರಮಿಸುವನು.
ಗಟ್ಟಲೆ ಜನ ಪ್ರಾರ್ಥನೆಯಲ್ಲಿ ಹಿಟ್ಲರನ ನಾ
ಚ್ಚಾರ ಮಾಡುವರು. ಇನ್ನು ಮೂರು ವರ
ಳಲ್ಲಿ ಈ ಹೊಸ ಧರ್ಮವನ್ನು ಬಿಟ್ಟು ಮತಾ
ಧರ್ಮವೂ ಇರುವುದಿಲ್ಲ."

ಕರ್ಸ್ಟೆನ್ನರನ್ನು ಹಿಮ್ಲರ್ ಕಾಣುತ್ತಿ
ಬಗೆಯಿಂದ ಅವನ ಪರಿವಾರದ ಇತ
ಅಸೂಯೆ ತಾಳಿದ್ದರು. ಹಿಮ್ಲರನ ಖಾ
ಕಾರ್ಯದರ್ಶಿಯಾಗಿದ್ದ ರುಡಾಲ್ಫ್ ಬ್ರಾ
ಎಂಬ ಅಧಿಕಾರಿ ಮಾತ್ರ ಈ ಸಾಮೂ
ಅಸೂಯೆಗೆ ಹೊರತಾಗಿದ್ದ. ಅವನೊಬ್ಬ ವಕೀ
ನಾಗಿದ್ದ. ಹಿಮ್ಲರನ ಕಾರ್ಯದರ್ಶಿ ಪದ ಅ
ಪಾಲಿಗೆ ಬಂದಾಗ ಅವನು ವಿರೋಧ ಮಾಡ
ರದೆ ಒಪ್ಪಿಕೊಂಡಿದ್ದ. ನಾಝಿಗಳ ಬಗ್ಗೆ ಅವ
ಸಹಾನುಭೂತಿ ಇರದಿದ್ದರೂ ಅವನು ಹಿಮ್ಲ
ಕಾರ್ಯದರ್ಶಿಯಾಗಿ ಕೆಲಸ ಮಾಡಿ
ವಿಶ್ವಾಸವನ್ನು ಸಂಪಾದಿಸಿಕೊಂಡಿದ್ದ. ಬ್ರಾ
ನಿಗೂ ಹೊಟ್ಟೆನೋವಿತು. ಕರ್ಸ್ಟೆನ್ ಅವ

ಚಿಕಿತ್ಸೆ ನಡೆಸಿದ್ದರು. ಮೊದಲಿಗೆ ಅವರಿಬ್ಬರೂ ತುಂಬ ಜಾಗರೂಕತೆಯಿಂದ ವರ್ತಿಸಿದರೂ ಸಾವಕಾಶವಾಗಿ ಪರಸ್ಪರರ ಪರಿಚಯ ಬೆಳೆಯುತ ಹೋದಂತೆ ನಿಜರೂಪ ತಿಳಿದುಬಂದು ಸ್ನೇಹಿತರಾದರು.

ಫ್ರಾನ್ಸಿನ ಪತನದ ನಂತರ ಹಿಮ್ಲರ್ ಬರ್ಲಿನ್ನಿಗೆ ಮರಳಿದ. ಕರ್ಸ್ಟೆನ್ನರ ಜೀವನ ತೋರಿಕೆಗೆ ಮೊದಲಿನಂತೆಯೆ ಶಾಂತವಾಗಿ ನಡೆದಂತೆ ಕಂಡರೂ ಒಳಗೊಳಗೇ ಅವರ ಮನದಲ್ಲಿ ಏನೊ ಒಂದು ಅಶಾಂತಿ ಕುದಿಯುತ್ತಲಿತ್ತು. ಆಗಸ್ಟ್ ತಿಂಗಳ ಕೊನೆಯಲ್ಲಿ ಯುದ್ಧಕಾಲದಲ್ಲಿ ಅವರು ಮಾನವ ಜಾತಿಗೆ ಸಲ್ಲಿಸಿದ ಅಪೂರ್ವ ಸೇವೆಗೆ ಕಾರಣೀಭೂತವಾದ ಘಟನೆ ನಡೆಯಿತು.

ಹಿಮ್ಲರನಿಗೆ ವಿಪರೀತ ನೋವೆದ್ದು ಆತ ಕರ್ಸ್ಟೆನ್‌ರನ್ನು ಕರೆಸಿದ. ನೋವು ಕಡಿಮೆಯಾದ ಬಳಿಕವೂ ಹಿಮ್ಲರ್ ಮಲಗಿಯೇ ಇದ್ದ. ಆತ ಅತ್ಯಂತ ಕೃತಜ್ಞತೆಯಿಂದ ಕರ್ಸ್ಟೆನ್‌ರನ್ನು ನೋಡುತ್ತ "ನಿಮ್ಮ ಉಪಕಾರ ಹೇಗೆ ತೀರಿಸಲಿ? ನಿಮಗೆ ನಾನೇನನೂ ಕೊಟ್ಟಿಲ್ಲವಾದ್ದರಿಂದ ನನ್ನ ಮನಸ್ಸು ನನ್ನನ್ನು ತಿನ್ನುತ್ತಿದೆ" ಎಂದ.

ತಾವೇನಾದರೂ ಹಣ ತೆಗೆದುಕೊಂಡರೆ ತನ್ನ ಮೇಲಿನ ಗೌರವ ಹೋಗಿಬಿಡುತ್ತದೆಂದು ಕರ್ಸ್ಟೆನ್‌ರಿಗೆ ಅವಗತವಾಯಿತು. ಅಲ್ಲದೆ ಹಿಮ್ಲರನ ಗಳಿಕೆಯೂ ಸಾಮಾನ್ಯವೇ ಆಗಿತ್ತು. ಆತ ತನ್ನ ಕಾರ್ಯದಲ್ಲಿ ಎಷ್ಟು ನಿಷ್ಠಾವಂತನೂ ಪ್ರಾಮಾಣಿಕನೂ ಆಗಿದ್ದನೆಂದರೆ ನಾಝಿ ವರಿಷ್ಠಾಧಿಕಾರಿಗಳಲ್ಲೆಲ್ಲ ಅವನೊಬ್ಬನೇ ತನ್ನ ಬಳಿಯಿದ್ದ ಸರಕಾರೀ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳದವನಾಗಿದ್ದ. ತಿಂಗಳಿಗೆ ಸಿಗುವ ೨,೦೦೦ ಮಾರ್ಕುಗಳಲ್ಲೆ ಹೆಂಡತಿ ಮತ್ತು ಮತ್ತು ಮಗಳು, ಒಬ್ಬ ರೋಗಿಷ್ಠ ಉಪಪತ್ನಿ, ಅವಳ ಇಬ್ಬರು ಮಕ್ಕಳ ಸಂಸಾರ ನಡೆಸುತ್ತಿದ್ದ.

"ನಾನು ಪೂರ್ಣ ಗುಣ ಮಾಡಿದ ಬಳಿಕವೇ ಹಣ ತೆಗೆದುಕೊಳ್ಳುತ್ತೇನೆ. ಅಲ್ಲದೆ ನಿಮಗಿಂತಲೂ ನಾನು ಶ್ರೀಮಂತನಾಗಿದ್ದೇನೆ."

"ಅದೇನೇ ಇದ್ದರೂ ನಾನು ನಿಮಗೆ ಹಣ ಕೊಡಬೇಕಾದ್ದು ನನ್ನ ಕರ್ತವ್ಯ. ಎಷ್ಟು ಕೊಡಬೇಕು ತಿಳಿಸಿ."

ಕರ್ಸ್ಟೆನ್ "ಹೋಗಲಿಬಿಡಿ ಈ ಮಾ... ನಿಮ್ಮ ಪರಿಸ್ಥಿತಿ ಸುಧಾರಿಸಿದಾಗ ಕಟುಕನ... ಕೇಳುತ್ತೇನೆ" ಎಂದರು.

ಹಿಮ್ಲರ್ ಎದ್ದು ಕುಳಿತು "ಪ್ರಿಯ ಕರ್ಸ್ಟೆ... ನಾನೆಂತು ನಿಮ್ಮ ಉಪಕಾರ ತೀರಿಸಲಿ... ಎಂದ. ಅವನು ಅಷ್ಟೊಂದು ಭಾವನಾ... ನಾಗಿದ್ದುದನ್ನು ಕರ್ಸ್ಟೆನ್ ಅದುವರೆಗೆ ಕಂ... ಲಿಲ್ಲ.

ಕರ್ಸ್ಟೆನ್ನರಿಗೆ ತಟ್ಟನೆ ಎರಡು ವಾರ... ಹಿಂದೆ ತನ್ನ ಬಳಿಗೆ ಬಂದಿದ್ದ ತಮ್ಮ ಹಳ... ರೋಗಿ ಆಗಸ್ಟ್ ರೋಸ್ಟರ್ಗನ ನೆನಪಾಯಿ... ಜರ್ಮನಿಯಲ್ಲಿ ಆತ ಪ್ರಭಾವಿ ಉದ್ಯಮಿ... ನಾಗಿದ್ದರೂ ಅವನನ್ನು ಸ್ಥಾನಬದ್ಧ ಶಿಬಿ... ಕಳಿಸಿದ್ದರು. ಆತ ಸೋಷಲ್ ಡೆಮೊಕ್ರಾಟ... ಪಕ್ಷದವನಾಗಿದ್ದುದೇ ಅವನ ಅಪರಾಧವಾಗಿ... ಕರ್ಸ್ಟೆನ್ ತನ್ನ ವರ್ಚಸ್ಸು ಉಪಯೋ... ತನ್ನನ್ನು ಶಿಬಿರದಿಂದ ಮುಕ್ತಮಾಡಿಸಬೆ... ಎಂದಾತ ಬೇಡಿಕೊಂಡಿದ್ದ.

ಈಗ ನೆನಪಾಗಲು ಕರ್ಸ್ಟೆನ್ ತನ್ನ ಬಾ... ತೆರೆದು ಅದರಲ್ಲಿದ್ದ ರೋಸ್ಟರ್ಗನ ಮ... ಯನ್ನು ಹಿಮ್ಲರನ ಕೈಗೆ ಕೊಟ್ಟರು. "ತೆ... ಕೊಳ್ಳಿ, ನನ್ನ ಬಿಲ್ ಹರ್‌ರೈಹ್ಸ್‌ಫ್ಯುರರ್. ... ಮನುಷ್ಯನ ಸ್ವಾತಂತ್ರ್ಯ ನನಗೆ ಬೇಕು."

ಹಿಮ್ಲರ ಬೆಚ್ಚಿದ. ... ಮನವಿಯನ್ನು ... "ಕೇಳುವವರು ನೀವಾದ್ದರಿಂದ ಹೂಂ ... ತ್ತೇನೆ" ಎಂದು "ಬ್ರಾಂಡ್" ಎಂದು ಕೂ... ಆತ ಬರಲು "ಈ ಮನವಿಯನ್ನು ತೆಗೆದು... ಈ ಮನುಷ್ಯನ ಬಿಡುಗಡೆಯಾಗಲಿ. ನಮ್ಮ ಡ... ರರು ಅದನ್ನು ಕೇಳುತಾರೆ" ಎಂದ.

ಆರೋಗ್ಯ ಸುಧಾರಿಸಿದೊಡನೆ ಹಿಮ್ಲರ್ ಪ... ಲಿನವನೇ ಆದ. ಡಾಕ್ಟರರೊಡನೆಯೂ ಅ... ಕಠಿಣವಾಗಿಯೆ ವರ್ತಿಸುತ್ತಿದ್ದ. ರೋಸ್ಟ... ಬಿಡುಗಡೆಯ ಅಪ್ಪಣೆ ಮಾಡಿ ಮೂರೇ ಮ... ದಿನಗಳಾಗಿದ್ದಾಗ ಹಿಮ್ಲರ್ ಬಿರುಸುದನಿ... "ಹೇಗ್‌ನಲ್ಲಿ ನಿಮ್ಮ ಮನೆಯಿದೆ ಎಂದು ... ಹಾಲಂಡಿನ ಏಜಂಟರು ಹೇಳುತಾರೆ. ನಿ...

ಎಂದು ಡಾಕ್ಟರರನ್ನು ಕೇಳಿದ. "ನೀವು ಹಾಲಂ-ಡಿನ ಸಂಬಂಧವನ್ನು ಇಟ್ಟುಕೊಂಡದ್ದಕ್ಕಾಗಿ ಕೆಲ ಡಚ್ಚರು ನಿಮ್ಮನ್ನು ಕೊಲ್ಲಬೇಕೆಂದಿದ್ದಾರೆ ಎಂದು ನಿಮಗೆ ಮೇಲಿಂದ ಮೇಲೆ ಎಚ್ಚರಿಕೆ ಕೊಟ್ಟಿದ್ದೇನೆ. ನಿಮ್ಮ ಸಂರಕ್ಷಣೆಯ ಭಾರವನ್ನು ಇನ್ನು ಮುಂದೆ ಹೊರಲಾರೆ. ನೀವು ಈ ಮನೆಯನ್ನು ಬಿಟ್ಟುಕೊಡಬೇಕು" ಎಂದು ಸಿಟ್ಟಿನಿಂ-ದಲೇ ಹೇಳಿದ.

ಈ ಕಾರ್ಯ ಮಾಡಲು ಕರ್ಸ್ಟೆನ್‌ರಿಗೆ ಹತ್ತು ದಿನಗಳ ಅವಧಿಯನ್ನು ಕೊಟ್ಟ. ಆದರೆ ಅವರು ಪ್ರತಿನಿತ್ಯ ಹಾಲಂಡಿನಲ್ಲಿ ಗೆಸ್ಟಪೊ ಕಚೇರಿಗೆ ಹಾಜರಿ ಕೊಡಬೇಕೆಂದು ವಿಧಿಸಿದ.

ಹಾಲಂಡಿಗೆ ಬಂದಾಗ ಜರ್ಮನ್ ಆಕ್ರಮಣ ಎಷ್ಟು ಭೀಕರವಾಗಿತ್ತೆಂದು ಕರ್ಸ್ಟೆನ್ನರಿಗೆ ತಿಳಿಯಿತು. ಮಿತ್ರರು ಅವರಿಗೆ ಬಂಧನ, ಗಡಿಪಾರು, ಹಿಂಸೆ, ಕೊಲೆಗಳ ಸುದ್ದಿ ಹೇಳಿದರು.

ಕರ್ಸ್ಟೆನ್ ಹಾಲಂಡಿಗೆ ಬಂದು ಐದು ದಿನಗಳಾದಾಗ ಒಂದು ಮುಂಜಾನೆ ಬಿಸ್ನೆಲ್ ಎಂಬವನನ್ನು ಗೆಸ್ಟಪೊದವರು ಬಂಧಿಸಿದ ಸುದ್ದಿ ಕೇಳಿ ಅವರು ಗೆಸ್ಟಪೊ ಕಚೇರಿಗೆ ಓಡಿದರು. ಗೆಸ್ಟಪೊ ಪ್ರಮುಖ ವಾಲ್ಟರ್ ರಾಟರ್ ಹೇಳಿದ: "ಅವನ ಬಂಧನವಾದದ್ದು ನಿಜ. ಅವನು ಲಂಡನ್ನಿನೊಡನೆ ಸಂಪರ್ಕವಿಟ್ಟುಕೊಂಡಿರುವ ದೇಶದ್ರೋಹಿ. ನಾನು ಸೆರೆಮನೆಯಲ್ಲಿ ಅವನ ವಿಚಾರಣೆ ಮಾಡುವೆ."

ಕರ್ಸ್ಟೆನ್ನರ ಮಿತ್ರನಾದ ಬಿಸ್ನೆಲ್ ಕಲಾಕೃತಿಗಳ ಮಾರಾಟಗಾರನಾಗಿದ್ದ. ಅವನು ವೃದ್ಧನೂ, ರೋಗಿಯೂ ಆಗಿದ್ದ. ಅವನ ಗತಿ ಏನಾದೀತು ಎಂಬ ಕಲ್ಪನೆಯಿಂದಲೇ ನಡುಗಿದ ಕರ್ಸ್ಟೆನ್ ಒಮ್ಮೆಲೆ ರಾಟರನಿಗೆ "ಅವನು ನಿರಪರಾಧಿ. ಅವನು ವಿಷಯದಲ್ಲಿ ನಾನು ಆಶ್ವಾಸನೆ ನೀಡಬಯಸುತ್ತೇವೆ. ಅವನು ಜರ್ಮನಿಗೆ ವಿರೋಧವಾಗಿ ಏನೂ ಮಾಡಿಲ್ಲ. ಅವನನ್ನು ಬಿಡುಗಡೆ ಮಾಡಿ" ಎಂದರು.

ರಾಟರನಿಗೆ ಸಂದೇಹ ಬಂತು. ಅಂ! ನಿತ್ಯವೂ ಹಾಜರಿ ಕೊಡಬೇಕಾಗಿರುವ ವಿದೇಶಿಯೊಬ್ಬ ತನಗೆ ಅಪ್ಪಣೆ ಮಾಡುತಿದ್ದಾನೆ. ಈ ನಾಯಿಯನ್ನು ಬಿಡುಗಡೆ ಮಾಡಲೆ? ಛೆ! ಸಾಧ್ಯವೇ ಇಲ್ಲ. ನೀವು ಹೇಳುತ್ತೀರೆಂ-ದರಂತೂ ಖಂಡಿತ ಬಿಡುವುದಿಲ್ಲ" ಎಂದಾತ ಮೇಜು ಗುದ್ದಿದ.

ಸಮಾಧಾನದಿಂದಲೇ ಇರಬೇಕು ಎಂದು ನಿಶ್ಚಯಿಸಿಕೊಂಡಿದ್ದರೂ ರಾಟರನ ಕೋಪಾಟೋಪ ಕಂಡು ಕರ್ಸ್ಟೆನ್ನರ ರಕ್ತವೂ ಬಿಸಿಯಾಯಿತು. "ಇಲ್ಲಿ ಟೆಲಿಫೋನಿದೆಯೆ? ನಾನು ಹಿಮ್ಲರರ ಜೊತೆ ಮಾತಾಡಬೇಕು" ಎಂದರವರು ಗಂಭೀರ ಸ್ವರದಲ್ಲಿ.

ರಾಟರ್ ಕುರ್ಚಿಯಿಂದ ಜಿಗಿದೆದ್ದರು. "ಅದು ಶಕ್ಯವಿಲ್ಲ. ನನಗೂ ಸಾಧ್ಯವಿಲ್ಲದ ಮಾತು. ಹಿಮ್ಲರರ ಜೊತೆ ಮಾತಾಡಬೇಕಾದರೆ ಎಲ್ಲ ಶಾಖೆಗಳಿಗೂ ವರಿಷ್ಠನಾದ ಹೇಡ್ರಿಚ್ ಮೂಲಕವೇ ಮಾತಾಡಬೇಕಾಗುವುದು."

"ನೋಡೋಣ, ಪ್ರಯತ್ನಿಸಿ."

ರಾಟರ್ ಟೆಲಿಫೋನಿನ ಮೇಲೆ ಕರ್ಸ್ಟೆನ್ನರ ವಿನಂತಿಯನ್ನು ತಿಳಿಸಿ ಕಾಗದ ಪತ್ರಗಳಲ್ಲಿ ಮಗ್ನನಾದವನಂತೆ ಕುಳಿತ. ಐದು ಮಿನಿಟುಗಳಲ್ಲಿ ಟೆಲಿಫೋನ್ ಗಂಟೆ ಬಾರಿಸಿತು. ಉಪಹಾಸದ ನಗು ರಾಟರನ ಮುಖದಲ್ಲಿ ಮೂಡಿತು. ಆತ ಟೆಲಿಫೋನ್ ಎತ್ತಿಕೊಂಡ. ಅವನ ಮುಖದಲ್ಲಿ ಗಾಬರಿ ಕಾಣಿಸಿತು. ಟೆಲಿಫೋನನ್ನು ಆತ ಡಾಕ್ಟರರ ಕೈಗೆ ಕೊಟ್ಟ. ಹಿಮ್ಲರನೇ ಮಾತಾಡಲು ಬಂದಿದ್ದ.

ಇಷ್ಟರೊಳಗಾಗಿ ತಾನು ಮಾಡಿದ್ದು ಸರಿಯಲ್ಲ ಎಂದು ಡಾಕ್ಟರರಿಗೆ ಅನಿಸಿತ್ತು. ಆದರೆ ಈಗ ಕೈಮೀರಿತ್ತು. ಅವರು ಟೆಲಿಫೋನಿನಲ್ಲಿ "ಹರ್ ರೈಹ್ಸ್ ಫ್ಯುರರ್, ನನ್ನೊಬ್ಬ ಮಿತ್ರರು ಬಂಧಿಸಲ್ಪ-ಟ್ಟಿದ್ದಾರೆ. ಅವರು ನಿರಪರಾಧಿಗಳೆಂದು ನಾನು ಪ್ರಮಾಣ ಮಾಡುತೇನೆ. ಅವನನ್ನು ಬಿಡುಗಡೆ ಮಾಡಿಸಿ ಉಪಕಾರ ಮಾಡಿ" ಎಂದರು.

ಆ ಕಡೆಯಿಂದ 'ನೀವೆಂದು ಬರುತ್ತೀರಿ? ನನಗೆ ನಿಮ್ಮ ಅಗತ್ಯವಿದೆ" ಎಂದು ತಪ್ತಧ್ವನಿಯಲ್ಲಿ ಹಿಮ್ಲರ್ ಕೇಳಿದ.

ಕರ್ಸ್ಟೆನ್ನರ ದೈವ ಅನುಕೂಲವಾಗಿತು. ನೋವು ಬಂದಾಗ ಹಿಮ್ಲರನ ಕಠೋರತನವೆಲ್ಲ ಕರಗಿ ಹೋಗಿರುತ್ತಿತ್ತು. "ನನ್ನ ಕೆಲಸವಿನ್ನೂ ಮುಗಿದಿಲ್ಲ. ನನ್ನ ಮಿತ್ರನ ಬಂಧನವಾದರೆ

ನಾನು ಯಾರಿಗೂ ಸಹಾಯ ಮಾಡುವುದು ಸಾಧ್ಯವಾಗದು" ಕರ್‍ಸ್ಟೆನ್ ಹೇಳಿದರು.

"ರಾಟರ್‌ನಿಗೆ ಮಾತಾಡಲು ಹೇಳಿರಿ; ಬೇಗ."

ರಾಟರ್ ಸೆಟೆದು ನಿಂತು ಮುಖ ಬಿಗಿದು ಕೊಂಡು ಟೆಲಿಫೋನ್ ಎತ್ತಿಕೊಂಡ. "ಒಳ್ಳೇದು, ರೈಹ್ಸ್‌ಪ್ಯುರರ್. ಒಳ್ಳೇದು. ಈಗಿಂದೀಗ ಮಾಡುತ್ತೇನೆ" ಎಂದು ಅವನಂದದ್ದಷ್ಟೇ ಡಾಕ್ಟರರಿಗೆ ಕೇಳಿಸಿತು. ರಾಟರ್ ಟೆಲಿಫೋನನ್ನು ಮತ್ತೆ ಕರ್‍ಸ್ಟೆನ್ನರ ಕೈಗಿತ್ತ. "ನಿಮ್ಮ ಮೇಲೆ ನನಗೆ ನಂಬಿಗೆಯಿದೆ. ನಿಮ್ಮ ಮಿತ್ರನ ಬಿಡುಗಡೆಯಾಗುತ್ತದೆ. ಕೂಡಲೆ, ಆದಷ್ಟು ಬೇಗ ಬನ್ನಿ" ಎಂದ ಹಿಮ್ಲರ್.

ಮುಂದಿನ ತಿಂಗಳುಗಳಲ್ಲಿ ಕರ್‍ಸ್ಟೆನ್ನರಿಗೆ ಹಾಲಂಡಿನಲ್ಲಿ ನಡೆದ ಅತ್ಯಾಚಾರದ ಸುದ್ದಿಗಳು ಒಂದೇ ಸವನೆ ಬರುತ್ತಿದ್ದವು. ಅವರಿಗೆ ಬರುವ ಪತ್ರಗಳು ಹಿಮ್ಲರನ ವಿಳಾಸಕ್ಕೆ ಬರುತ್ತಿದ್ದುದರಿಂದ ಬ್ರಾಂಡ್ ಅವನ್ನು ಒಡೆಯದೆಯೆ ಅವರಿಗೆ ಒಪ್ಪಿಸುತ್ತಿದ್ದ. ಹಿಮ್ಲರನ ವಿಳಾಸ ಉಪಯೋಗಿಸಿಕೊಳ್ಳಲೆಂದು ಕರ್‍ಸ್ಟೆನ್ ಒಂದು ತಂತ್ರ ಮಾಡಿದ್ದರು. ಹಾಲಂಡಿನಲ್ಲಿ ಅನೇಕ ಸ್ತ್ರೀಯರೊಡನೆ ತನ್ನ ಸಂಬಂಧವಿರುವುದೆಂದೂ ತಾವು ಬರೆದ ಪತ್ರಗಳನ್ನು ಸೆನ್ಸರ್ ಮಾಡಿಯೆ ಕೊಡುತ್ತಾರೆಂದು ಅವರಿಗೆ ತಿಳಿದರೆ ಅವರಿಗೆಷ್ಟು ಸಂಕೋಚವಾಗಲಿಕ್ಕಿಲ್ಲ ಎಂದೂ ಇದರಿಂದ ತನ್ನ ಹೆಂಡತಿಗೆ ತನ್ನ ಪ್ರಣಯ ವ್ಯವಹಾರ ತಿಳಿಯುವ ಸಂಭವವಿದೆಯೆಂದೂ ಕರ್‍ಸ್ಟೆನ್ ಹೇಳಿದ್ದರಿಂದ ತನ್ನ ವಿಳಾಸವನ್ನು ಉಪಯೋಗಿಸಿಕೊಳ್ಳಲು ಹಿಮ್ಲರ್ ಒಪ್ಪಿದ್ದ.

ಕರ್‍ಸ್ಟೆನ್ನರು ಒಂದು ಯೋಜನೆ ಮಾಡಿಕೊಂಡರು. ಹಿಮ್ಲರನ ಬೇನೆ ಪ್ರಬಲವಾಗಿ ಕರ್‍ಸ್ಟೆನ್ನರೊಬ್ಬರೇ ಅದನ್ನು ಗುಣಪಡಿಸುವಂತಿರುವಾಗ ಮಾತ್ರ ಅವರು ಯಾರದಾದರೂ ಬಿಡುಗಡೆಯ ಅಥವಾ ಅಂಥದೇ ಇನ್ನಾವುದಾದರೂ ಕಾರ್ಯದ ಮಾತೆತ್ತುತ್ತಿದ್ದರು. ಹಿಮ್ಲರನಿಗೆ ಗುಣವಾದೊಡನೆಯೆ ಅವನ ಮೇಲಿನ ಹಿಡಿತ ಡಾಕ್ಟರರ ಕೈತಪ್ಪಿ ಹೋಗುತ್ತಿತ್ತು. ಆ ಸಮಯದಲ್ಲಿ ಅವರು ಹಿಮ್ಲರನನ್ನು ಹೊಗಳಿ ಮೆತ್ತಗೆ ಮಾಡುತ್ತಿದ್ದರು. ಹಿಮ್ಲರ ಸ್ತುತಿಪ್ರಿಯನಾಗಿದ್ದ. "ನೀವು ಕೂಡ ಜರ್ಮನ್ ವೀರ ಫ್ರೆಡ್ರಿಕ್ ಬಾರ್ಬ[illegible]ಸಾರಂತೆ ಜನರ ಗೌರವಕ್ಕೆ ಪಾತ್ರರಾಗು[illegible] ಆದರೆ ಅವರು ಶೌರ್ಯ-ಶಕ್ತಿಗಳಿಂದ ಮಾತ್ರ ಕೀರ್ತಿಶಾಲಿಗಳಾಗಲಿಲ್ಲ. ಅವರು ಉ[illegible] ಹೃದಯದವರೂ ಆಗಿದ್ದರು. ನೀವು ಹಾಗೆ[illegible] ಆಗಬೇಕು" ಎಂದು ಕರ್‍ಸ್ಟೆನ್ ಹೇಳುತ್ತಿದ್ದ[illegible] ಹಿಮ್ಲರ್ ಹಿಗ್ಗಿ ಹಿರೇಕಾಯಿಯಾಗು[illegible] "ನೀವೊಬ್ಬರೇ ನನ್ನ ಮಿತ್ರರು" ಎಂದು ಕ[illegible]ಟೆನ್ನರಿಗೆ ಹೇಳುತ್ತಿದ್ದ. ಆ ಮೇಲೆ ಬ್ರಾ[illegible]ನನ್ನು ಕರೆದು ಕರ್‍ಸ್ಟೆನ್ನರು ಹೇಳಿದ [illegible] ಯಾದಿ ಮಾಡಿಕೊಂಡು ಅವರ ಬಿಡುಗ[illegible] ಆಜ್ಞೆ ತಯಾರಿಸಲು ಹೇಳುತ್ತಿದ್ದ. ಹಿಮ್[illegible] ಸಹಿಯಾದ ಮೇಲೆ ಸ್ಥಳವಿದ್ದರೆ ಆ ಯಾದಿ[illegible] ಬ್ರಾಂಡ್ ಇನ್ನೂ ೨-೩ ಹೆಸರು ಸೇರಿಸಿ[illegible]ತ್ತಿದ್ದ.

ಬಿಡುಗಡೆಯಾಗುವವರ ಸಂಖ್ಯೆ ದೊಡ[illegible]ಗುತ್ತ ನಡೆದಂತೆ ಗೆಸ್ಟಪೊ ಅಧಿಕಾರಿಗಳು [illegible]ಲಾದರು. ಹಿಮ್ಲರ್ ಯಾಕೆ ಇವರಿಗೆಲ್ಲ [illegible] ಮಾಡುತ್ತಿದ್ದಾನೆಂದು ಅವರಿಗೆ ತಿಳಿಯದೆ ಕ[illegible]ಲಾದರು. ಒಂದಲ್ಲ ಒಂದು ದಿನ ಗೆಸ್ಟಪೊ[illegible]ಕಾರಿಗಳಿಗೆ ಇದೆಲ್ಲ ತನ್ನ ತಂತ್ರ ಎಂದು ತಿ[illegible]ದಿರದು ಎಂದು ಕರ್‍ಸ್ಟೆನ್ನರಿಗ ಗೊತ್ತಿತ್ತು.

ಬಹಳ ಸಮಯದ ವರೆಗೆ ಕರ್‍ಸ್ಟೆ[illegible] ಗೆಸ್ಟಪೋದವರಿಂದ ಏನೂ ತೊಂದರೆಯಾಗ[illegible] ಆ ಮೇಲೆ ೧೯೪೧, ಜನವರಿಯ ಒಂದು [illegible] ಜಾನೆ ಅವರ ಬರ್ಲಿನ್ ಮನೆಗೆ ಇಬ್ಬರು ಗೆ[illegible] ಜನರು ಬಂದರು. "ನಿಮ್ಮೊಡನೆ ಮಾತಾಡಬೆ[illegible] ಎಂದು ಅವರಲ್ಲೊಬ್ಬ ಹೇಳಿದ.

ಇನ್ನೂ ಪೈಜಾಮಾದಲ್ಲೇ ಇದ್ದ ಕರ್[illegible] ಗಾಬರಿಯಾದರು. ತನ್ನ ಕಾರಸ್ಥಾನ ಗೆ[illegible] ಯಿತೇ ಇವರಿಗೆ?

ಬಂದವರಲ್ಲಿ ಒಬ್ಬಾತ "ಯಹೂದಿ ರೋ[illegible]ಳೇನಾದರೂ ನಿಮ್ಮಿಂದ ಚಿಕಿತ್ಸೆ ಹೊಂ[illegible]ದ್ದಾರೆಯೆ?" ಎಂದು ಕೇಳಿದ. "ಹೌದು" ಎ[illegible] ಕರ್‍ಸ್ಟೆನ್.

"ಜರ್ಮನ್ ಡಾಕ್ಟರರು ಯಹೂದಿ[illegible] ಚಿಕಿತ್ಸೆ ಮಾಡಲು ಪ್ರತಿಬಂಧವಿದೆ

ಆ ದಿನ ...

ಅತ್ಯಂತ ಪ್ರಾಮುಖ್ಯವಾದುದು.

ಸಿ. ಡಿ.

ವಿದ್ಯಾರಂಭ ಪರೀಕ್ಷೆಯಲ್ಲಿ ತೇರ್ಗಡೆ, ಉಪನಯನ, ಮದುವೆ, ಉದ್ಯೋಗಾರಂಭ, ಇವೇ ಮೊದಲಾದ ಕೆಲವು ದಿನಗಳು ಜೀವಮಾನದ ಒಳಿತು ಕೆಡುಕುಗಳನ್ನು ರೂಪಿಸುವಷ್ಟು ಮಹತ್ವದ ದಿನಗಳು.

ಅಂತೆಯೇ ತಿಂಗಳ ವೇತನ ಕೈಗೆ ಬಂದೊಡನೆ ನಿಯಮಿತವಾಗಿ ಇಂತಿಷ್ಟನ್ನು ಉಳಿಸಬೇಕೆಂದು ನಿರ್ಧಾರ ಮಾಡಿದ ಮತ್ತು ಅದಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸಿ. ಡಿ. ಯನ್ನು ಆರಂಭಿಸಿದ ದಿನ ಕೂಡಾ.

ಎಷ್ಟು ಬೇಗ ಈ ದಿನ ನಿಮ್ಮ ಜೀವನದಲ್ಲಿ ಉದಯವಾಗುವುದೋ ಅಷ್ಟು ಹೆಚ್ಚು ನೀವು ನಿಮ್ಮ ಜೀವನದಲ್ಲಿ ಸಂತುಷ್ಟರಾಗಿರಬಲ್ಲಿರಿ.

ಕ್ಯುಮುಲೇಟಿವ್ ಡಿಪಾಜಿಟ್

ಯಾಕೆಂದರೆ ಸಿಂಡಿಕೇಟ್ ಬ್ಯಾಂಕಿನ ಕ್ಯುಮುಲೆಟಿವ್ ಡಿಪಾಜಿಟ್ ಯೋಜನೆ ಆ ರೀತಿಯಾಗಿ ರೂಪಿಸಲ್ಪಟ್ಟಿದೆ.

ಸಿಂಡಿಕೇಟ್ ಬ್ಯಾಂಕ್

ನಿಮಗೆ ಗೊತ್ತಿಲ್ಲವೆ?"

"ನಾನು ಜರ್ಮನ್‌ನಲ್ಲ. ಫಿನ್ನಿಶ್ ನಾಗರಿಕ" ಎಂದು ಕರ್ಸ್ಟೆನ್ನರು ತಮ್ಮ ಪಾಸ್‌ಪೋರ್ಟನ್ನು ತೋರಿಸಿದರು. ಅಧಿಕಾರಿಗಳು ಅದನ್ನು ಕಂಡು "ಕ್ಷಮಿಸಿ, ಕ್ಷಮಿಸಿ" ಎನ್ನುತ್ತ ಬಂದಂತೆಯೇ ಹೋಗಿಬಿಟ್ಟರು.

ಇಷ್ಟಕ್ಕಾಗಿಯೆ ಇವರು ಬಂದಿದ್ದರೆ? ಇದರ ಹಿಂದೇನಾದರೂ ರಹಸ್ಯವಿದೆಯೆ ಎಂದು ಕರ್ಸ್ಟೆನ್ನರು ಯೋಚಿಸಿದರು. ತಮಗೆ ಇದೊಂದು ಎಚ್ಚರಿಕೆಯಾಗಿರಲಿಕ್ಕಿಲ್ಲವಷ್ಟೆ?

ಹಿಮ್ಲರನಿಗೆ ಅವರು ಈ ವಿಷಯ ತಿಳಿಸಿದಾಗ ಆತ ಫೋನ್ ಎತ್ತಿಕೊಂಡು ಒಂದು ನಂಬರು ಕೇಳಿದ. ಅವನ ಮುಖ ಸಿಟ್ಟಿನಿಂದ ಉರಿಯುತ್ತಿತ್ತು. ಆತ ಗರ್ಜಿಸಿದ: "ಯಾರೇ ಆಗಲಿ, ಯಾವ ಕಾರಣಕ್ಕಾಗಿಯೆ ಆಗಲಿ, ಡಾ. ಕರ್ಸ್ಟೆನ್ನರ ಸುದ್ದಿಗೆ ಹೋಗಲಾಗದು. ಇದು ನನ್ನ ಆಜ್ಞೆ."

ಆದರೆ ಮುಂದೆ ಕೆಲ ದಿನಗಳಲ್ಲೆ ಹಿಮ್ಲರನ ನಂತರ ಗೆಸ್ಟಪೋದಲ್ಲಿ ಹಿರಿ ಅಧಿಕಾರಿಯಾದ ರೀನ್‌ಹಾರ್ಡ್ ಹೇಡ್ರಿಚ್‌ನ ವಿಚಾರದಲ್ಲಿ ಜಾಗರೂಕನಾಗಿರಲು ಬ್ರಾಂಡ್ ಕರ್ಸ್ಟೆನ್‌ರಿಗ ಎಚ್ಚರಿಕೆಯಿತ್ತ. ಹೇಡ್ರಿಚ್ ತನ್ನ ಸಹಕಾರಿಗಳಿಗೆ "ಕರ್ಸ್ಟೆನ್ನರು ಶತ್ರುಗಳ ಗೂಢಚಾರನಾಗಿರಬೇಕು. ಕೊನೆಯ ಪಕ್ಷ ಜರ್ಮನಿಯ ಶತ್ರುಗಳ ಪರವಾಗಿ ಹಿಮ್ಲರನ ಮೇಲಿನ ತನ್ನ ಪ್ರಭಾವವನ್ನು ಉಪಯೋಗಿಸುತ್ತಿರಬೇಕು. ನಿಮಗೆಲ್ಲ ಬೇಗನೆ ಇದಕ್ಕೆ ಪುರಾವೆ ಒದಗಿಸಬಲ್ಲೆ" ಎಂದಿದ್ದ.

೧೯೪೧ ಫೆಬ್ರುವರಿ ತಿಂಗಳಲ್ಲಿ ಕರ್ಸ್ಟೆನ್ ಹಿಮ್ಲರನ ಕಚೇರಿಯಿಂದ ಹೊರಬೀಳುತ್ತಿದ್ದಾಗ ಹೇಡ್ರಿಚ್ ಭೆಟ್ಟಿಯಾಗಿ "ಡಾಕರ್, ನಿಮ್ಮ ಜೊತೆ ಮಾತಾಡಬಯಸುತ್ತೇನೆ" ಎಂದು ನಮ್ರವಾಗಿ ಹೇಳಿದ. "ಸರಿ ಸರಿ. ನೀ ಬೇಕಾದಾಗ ಬನ್ನಿ. ನಿಮಗೆ ಪುರುಸೊತ್ತಿದ್ದರೆ ಇಂದೇ ಆಗಬಹುದು" ಎಂದರು ಕರ್ಸ್ಟೆನ್.

ಅಂದು ಸಂಜೆ ಗೆಸ್ಟಪೊ ಕಚೇರಿಯಲ್ಲಿ ಅವರು ಭೆಟ್ಟಿಯಾದರು. ಹಾಲಂಡ್ ಮತ್ತು ಫಿನ್‌ಲಂಡಗಳಿಂದ ಕರ್ಸ್ಟೆನ್ನರಿಗೆ ಸಮಾಚಾರ ಬರುತ್ತಿರುವ ವಿಚಾರ ಗೆಸ್ಟಪೊಗೆ ಗೊತ್ತಿದೆಯೆಂ[illegible] ಮಾತನ್ನು ಹೇಡ್ರಿಚ್ ನೇರವಾಗಿ ಅಲ್ಲದಿದ್ದರ[illegible] ಸ್ಪಷ್ಟವಾಗಿ ತಿಳಿಯುವಂತೆ ಹೇಳಿದ. "ನಮ್ಮಿಂ[illegible] ನಿಮಗೆ ತುಂಬ ಪ್ರಯೋಜನವಾದೀತೆಂ[illegible] ನಿಮಗೆ ತಿಳಿಯದೆ? ತಮ್ಮ ಪರವಾಗಿ ಮಾತ[illegible]ಡಲು ಜನ ನಿಮ್ಮನ್ನು ಕೇಳಿದಾಗ ಅವ[illegible] ಪೂರ್ವಾಪರ ತಿಳಿಯುವುದು ಅಗತ್ಯವಲ್ಲವೆ[illegible] ಆ ಸಮಯದಲ್ಲಿ ನಾವು ನಿಮಗೆ ಅವರ ಇತಿಹಾ[illegible]ವನ್ನೆಲ್ಲ ಒದಗಿಸಲು ಸಿದ್ಧರಿದ್ದೇವೆ. ನಿಮ[illegible] ಬೇಕಾದ ಅಭಿಪ್ರಾಯವನ್ನು ಮಾಡಿಕೊಳ್ಳ[illegible] ನೀವು ಸ್ವತಂತ್ರರೇ ಇರುವಿರಿ."

ಹೇಡ್ರಿಚ್ ಹೀಗೆಲ್ಲ ಸುತ್ತುಸುತ್ತಿ ಮಾತಾಡು[illegible] ಉದ್ದೇಶ ಒಂದೇ ಆಗಿತ್ತು—ಮಾತಿನ ಭರದ[illegible] ಹಾಲಂಡ್ ಮತ್ತು ಫಿನ್‌ಲಂಡ್‌ಗಳಲ್ಲಿಯ ತ[illegible] ಸುದ್ದಿಗಾರರ ಹೆಸರನ್ನು ಕರ್ಸ್ಟೆನ್ ಹೇಳ[illegible] ಎಂದು. ಅದೇನೂ ಸಾಧಿಸಲಿಲ್ಲ. ಮಾತುಕ[illegible] ಇಷ್ಟಕ್ಕೇ ಮುಗಿಯಿತು.

ಬ್ರಾಂಡ್ ಮಾತ್ರ ತುಂಬ ಜಾಗರೂಕರಾಗಿ[illegible] ಎಂದು ಕರ್ಸ್ಟೆನ್ನರಿಗೆ ಮತ್ತೊಮ್ಮೆ ಹೇಳಿ[illegible] ಕರ್ಸ್ಟೆನ್ ಒಪ್ಪಿದರು. ಆದರೆ ಕೆಲವೇ [illegible]ಗಳಲ್ಲಿ ಅವರು ಜಾಗರೂಕತೆಯನ್ನೆಲ್ಲ ಬದಿ[illegible]ಸರಿಸಿ ಕಾರ್ಯಮಾಡುವ ಪ್ರಸಂಗ ಬಂತು.

೧೯೪೧ ಮಾರ್ಚ ೧ ರಂದು ಕರ್ಸ್ಟೆನ್[illegible] ನಿತ್ಯದಂತೆ ಹಿಮ್ಲರನನ್ನು ಕಾಣಲು ಹೋದ[illegible] ಆದರೆ ಆತ ಯಾವುದೊ ಸಭೆಯಲ್ಲಿ ಮಗ್ನ[illegible]ಗಿದ್ದದುರಿಂದ ಕರ್ಸ್ಟೆನ್ನರು ನೌಕರರ ಕ್ಯಾಂ[illegible]ನಿನಲ್ಲಿ ಹೋಗಿ ಕುಳಿತರು. ಕರ್ಸ್ಟೆನ್[illegible] ಯಾವಾಗಲೂ ಅತಿ ಒಳ್ಳೆಯದನ್ನೆ ಕೊಡಬೇ[illegible] ಎಂದು ಹಿಮ್ಲರನ ಆಜ್ಞೆಯಿತ್ತಾದ್ದರಿ[illegible] ಕ್ಯಾಂಟೀನಿನವ ಅವರಿಗೆ ಒಳ್ಳೆಯ ಕಾಫಿ ತಿ[illegible] ತಂದುಕೊಟ್ಟ.

ಅವರು ಕಾಫಿ ಕುಡಿಯುತ್ತಿದ್ದಾಗ ವಾಲ[illegible] ರಾಟರ್ ಮತ್ತು ರೀನ್‌ಹಾರ್ಡ್ ಹೇಡ್ರಿಚ[illegible] ಬಂದರು. ಅವರು ಡಾಕ್ಟರರ ಸಮೀ[illegible] ಮೇಜಿನ ಬಳಿ ಕುಳಿತರೂ ತಮ್ಮ ಸಂಭಾಷಣೆ[illegible] ಮಬ್ಬಿನಲ್ಲಿ ಡಾಕರರ ಕಡೆ ಕಣ್ಣು ಹಾ[illegible]ಸಲಿಲ್ಲ. ಅವರಿಬ್ಬರ ಮಾತು-ಕತೆಗಳ[illegible]

ಹಾಲಂಡಿನಲ್ಲಿ ದೊಡ್ಡದೊಂದು ಅತ್ಯಾಚಾರ ನಡೆಯಲಿದೆ ಎಂದು ಕರ್ಸ್ಟೆನ್ನರಿಗೆ ತಿಳಿಯಿತು. ಆದರೆ ಯಾವ ದಿನ ಎಂಬುದು ತಿಳಿಯಲಿಲ್ಲ. ಕರ್ಸ್ಟೆನ್ನರು ಬಹುಪ್ರಯಾಸದಿಂದ ತಮ್ಮ ಉದ್ವೇಗವನ್ನು ಹತ್ತಿಕ್ಕಿಕೊಂಡು ಅಲ್ಲಿಂದ ಹೊರಬಿದ್ದರು. ಹಿಮ್ಲರನಿಗೆ ಉಪಚಾರ ಮಾಡುತ್ತಿರುವಾಗ ಕೂಡ ಅವರಿಗೆ ಮನದ ತಳಮಳ ಹತ್ತಿಕ್ಕಿಕೊಳ್ಳಬೇಕಾದರೆ ಸಾಕುಸಾಕಾಯಿತು.

ಅಂದು ಸಂಜೆ ಕರ್ಸ್ಟೆನ್ ಮತ್ತು ಬ್ರಾಂಡ್ ಸಂಧಿಸಿದರು, ಬ್ರಾಂಡನ ಕಚೇರಿಯಲ್ಲಿ. ಕರ್ಸ್ಟೆನ್ ತಾನು ಕೇಳಿದ ಸುದ್ದಿಯ ವಿಷಯ ಹೇಳಿ ಸಂಗತಿಯೇನು ಎಂದು ಕೇಳಿದರು. ಬ್ರಾಂಡ್ ಬಾಗಿಲು ಮುಚ್ಚಿ ಬೀಗಹಾಕಿ "ಅತಿ ಗುಪ್ತ" ಎಂದಿದ್ದ ಒಂದು ಲಕೋಟೆಯನ್ನು ಕೊಟ್ಟ. ಡಚ್ಚರು ಜರ್ಮನ್ ರಕ್ತದವರಾದರೂ ದ್ರೋಹಿಗಳಾದ್ದರಿಂದ ಅವರ ಸಾಮೂಹಿಕ ಗಡೀಪಾರಿನ ಆಜ್ಞೆಯನ್ನು ಹಿಟ್ಲರ ಕೊಟ್ಟಿದ್ದ. ೩೦ ಲಕ್ಷ ಡಚ್ಚರನ್ನು ಗಡೀಪಾರು ಮಾಡಲಿದ್ದರು. ಅವರೆಲ್ಲ ಕಾಲ್ನಡಿಗೆಯಿಂದಲೇ ದೇಶಬಿಟ್ಟು ತೆರಳಬೇಕಾಗಿತ್ತು. ಅವರ ಕುಟುಂಬದವರನ್ನು ಹಡಗುಗಳು ಮತ್ತು ರೇಲ್ವೆಗಳ ಮೂಲಕ ಗಡೀಪಾರು ಮಾಡುವವರಿದ್ದರು.

ಓದುತ್ತಿದ್ದಾಗ ಆ ಜನರ ಭೀಕರ ಭವಿತವ್ಯದ ಕಲ್ಪನೆಯಿಂದ ಕರ್ಸ್ಟೆನ್ನರ ಕೈಗಳು ಥರಥರ ನಡುಗುತ್ತಿದ್ದವು.

ಮರುದಿನ ಮಧ್ಯಾಹ್ನ ಕರ್ಸ್ಟೆನ್ ಹಿಮ್ಲರನ ವಾಸಸ್ಥಾನಕ್ಕೆ ಹೋದರು. ಹಿಂದಿನ ರಾತ್ರಿಯೆಲ್ಲ ಅವರಿಗೆ ನಿದ್ದೆ ಬಂದಿರಲಿಲ್ಲ. ಏನೇ ಆಗಲಿ, ಈ ಗಡೀಪಾರಿನ ಆಜ್ಞೆಯ ವಿಚಾರ ಮಾತಾಡಬೇಕು ಎಂದವರು ನಿರ್ಧರಿಸಿದ್ದರು. ಅವರಿಗೆ ಈ ಮಾತು ಗೊತ್ತಾಗಿದೆಯೆಂಬ ಮಾತೇ ಅವರಿಗೆ ಸಾವನ್ನು ತರಲು ಸಾಲುವಂತಿತ್ತು.

ಹಿಮ್ಲರ್ ಎಂದಿನಂತೆ ಮಲಗಿದ್ದ. ಅವನ ಹೊಟ್ಟೆಯ ತೀರ ನಾಜೂಕಾದ ನರವನ್ನು ಒತ್ತುತ್ತ ಕರ್ಸ್ಟೆನ್ನರು ಸ್ವಾಭಾವಿಕ ಧ್ವನಿಯಲ್ಲಿ "ಡಚ್ಚರ ಗಡೀಪಾರಿನ ತಾರೀಖು ಯಾವುದು ?" ಎಂದು ಕೇಳಿದರು.

ಸಮ್ಮೋಹನಿಗೊಳಗಾಗಿರುವವನಂತೆ ಹಿಮ್ಲರ್ "ಹಿಟ್ಲರನ ಜನ್ಮದಿನ ಅಂದರೆ ಏಪ್ರಿಲ ೨೦ ರಂದು. ಅದು ಹಿಟ್ಲರನ ಜನ್ಮದಿನದ ಕಾಣಿಕೆಯಾಗುವುದು" ಎಂದ.

ಆ ಮೇಲೆ ಕೋಣೆಯಲ್ಲಿ ಗಭೀರ ಶಾಂತತೆ ಪಸರಿಸಿತು. ಹಿಮ್ಲರ್ ತಟ್ಟನೆ ಎದ್ದು ಕುಳಿತು ತನ್ನ ಮುಖವನ್ನು ಡಾಕ್ಟರರ ಮುಖಕ್ಕೆ ತೀರ ಹತ್ತಿರ ಒಯ್ದು "ಎಲ್ಲಿ ಸಿಕ್ಕಿತು ಈ ಸುದ್ದಿ?" ಎಂದು ಕೇಳಿದ.

ಕ್ಯಾಂಟೀನಿನಲ್ಲಿ ರಾಟರ್ ಮತ್ತು ಹೇಡ್ರಿಚ್ ಮಾತಾಡುತ್ತಿದ್ದುದನ್ನು ಕೇಳಿದೆ ಎಂದರು ಡಾಕ್ಟರರು. "ಥೂತ್ ! ಬಡಬಡಿಸುವ ಮೂರ್ಖರು" ಎಂದು ಹಿಮ್ಲರ್ ಅರಚಿದ. ಆದರೆ ಡಾಕ್ಟರರು ನಿರಪರಾಧಿಗಳು ಎಂದು ಅವನಿಗೆ ಅನಿಸಿ ಅವನಿಗೆ ಹಾಯೆನಿಸಿತು.

ಕರ್ಸ್ಟೆನ್ನರು ಮಾಲೀಸು ಮಾಡುತ್ತಲೇ "ಈ ಗಡೀಪಾರು ಎಂದರೆ ನಿಮ್ಮ ಜೀವನದ ಅತಿ ದೊಡ್ಡ ತಪ್ಪು" ಎಂದರು.

"ನಿಮಗೆ ರಾಜಕಾರಣ ಏನೇನೂ ತಿಳಿಯದು. ಹಿಟ್ಲರನ ಯೋಜನೆ ಎಂದರೆ ಪರಮಾದ್ಭುತವಾದದ್ದು. ನಾವು ಪೋಲಂಡನ್ನು ಗೆದ್ದಿದ್ದೇವೆ. ಆದರೆ ಪೋಲಂಡಿನವರು ನಮ್ಮನ್ನು ದ್ವೇಷಿಸುತ್ತಾರೆ. ಅಲ್ಲಿ ನಮಗೆ ಜರ್ಮನ್ ರಕ್ತದವರು ಬೇಕು. ಡಚ್ಚರು ಜರ್ಮನ್ ರಕ್ತದವರು. ಪೋಲಂಡಿನಲ್ಲಿ ಡಚ್ಚರು ನಮಗನುಕೂಲರಾಗಿರಲು ಕಲಿಯುವರು. ಪೋಲಂಡಿನವರು ಡಚ್ಚರನ್ನು ದ್ವೇಷಿಸುವರಾದ್ದರಿಂದ ಡಚ್ಚರು ನಮಗನುಕೂಲರಾಗದೆ ಗತಿಯಿರುವುದಿಲ್ಲ. ಹಾಲಂಡಿನಲ್ಲಿ ಜರ್ಮನ್ ರೈತರನ್ನು ತುಂಬಿ ಬಿಡುತ್ತೇನೆ. ಅದ್ಭುತವಾಗಿಲ್ಲವೆ ಈ ಯೋಜನೆ ?" ಹಿಮ್ಲರ್ ಅಭಿಮಾನದಿಂದ ಹೇಳಿದ.

"ಇರಬಹುದು" ಡಾಕ್ಟರರು ಶುಷ್ಕವಾಗಿ ಹೇಳಿದರು. "ಆದರೆ ನಾನು ನಿಮ್ಮ ಆರೋಗ್ಯದ ವಿಚಾರವನ್ನಷ್ಟೆ ಮಾಡುತ್ತಿದ್ದೆ. ನಿಮ್ಮ ಎಂದಿನ ಕೆಲಸಗಳ ಜೊತೆಯಲ್ಲಿ ಬೇಸಿಗೆಗೆ ಮೊದಲು ನಿಮ್ಮ ಎಸ್‌ಎಸ್‌ದ ಸಂಖ್ಯೆಯನ್ನು ಹತ್ತು ಲಕ್ಷಕ್ಕೇರಿಸಬೇಕೆಂದು ಹಿಟ್ಲರ್ ಆಜ್ಞೆ ಮಾಡಿದ್ದಾನೆಂದು ಹೇಳಿದ್ದಿರಿ. ಈಗ ಅವರ ಸಂಖ್ಯೆ ೧ ಲಕ್ಷಕ್ಕಿಂತಲೂ ಕಡಿಮೆಯೆ ಇದೆ. ಇನ್ನೂ ೯ ಲಕ್ಷ

ಜನರನ್ನು ಆರಿಸಿ ತರಬೇತಿಯಿತ್ತು ಸಿದ್ಧಗೊಳಿಸುವ ಮಹಾಕಾರ್ಯದ ಜೊತೆಗೆ ಈ ಗಡೀಪಾರಿನ ಮಹಾಕಾರ್ಯದ ಭಾರವನ್ನೂ ಹೊರುವಿರಾ ?"

"ಬೇರೆ ಮಾರ್ಗವಿಲ್ಲ. ಅದು ಫ್ಯುರರನ ಸ್ವಂತ ಆಜ್ಞೆ."

"ನನಗೆ, ರೋಗಿ ಡಾಕ್ಟರರ ಹತ್ತಿರ ಮಾತಾಡುವ ರೀತಿಯಲ್ಲಿ ಸ್ಪಷ್ಟ ಹೇಳಿರಿ. ಎಸ್‌ಎಸ್ ದಲವನ್ನು ಹತ್ತು ಲಕ್ಷಕ್ಕೆ ಬೆಳಸುವುದು ಹೆಚ್ಚು ಮಹತ್ವದ್ದೊ ಅಥವಾ ಡಚ್ಚರನ್ನು ಗಡೀಪಾರು ಮಾಡುವುದೊ ? "

"ಎಸ್‌ಎಸ್ ದಲವನ್ನು ಬೆಳೆಸುವುದು."

"ಹಾಗಾದರೆ ಗಡೀಪಾರಿನ ವಿಚಾರವನ್ನು ಯುದ್ಧದಲ್ಲಿ ಪೂರ್ಣಜಯ ಸಿಗುವವರೆಗೆ ನೀವು ಮುಂದಕ್ಕೆ ಹಾಕಬೇಕು. ಎರಡೂ ಕಾರ್ಯಗಳನ್ನು ಮಾಡುವಷ್ಟು ಶಕ್ತಿಯನ್ನು ನಿಮಗೆ ತಂದು ಕೊಡಲು ನಾನು ಅಸಮರ್ಥನಿದ್ದೇನೆ."

"ಛೆ! ಅಶಕ್ಯ. ಹಿಟ್ಲರ್ ಬಯಸುವುದರಿಂದ ಗಡೀಪಾರಿನ ದಿನವನ್ನು ಮುಂದೆ ಹಾಕಲು ಸಾಧ್ಯವಿಲ್ಲ."

ಅಷ್ಟೊತ್ತಿಗೆ ಮಾಲೀಸು ಮುಗಿದಿತ್ತು. ಹಿಮ್ಲರ್ ಮತ್ತೆ ವಜ್ರಹೃದಯಿಯಾಗಿದ್ದ.

ಡಾಕ್ಟರರು ಹೊಗಳಿದರು, ರೋಗದ ಅಂಜಿಕೆ ಹಾಕಿದರು, ಬಿನ್ನವಿಸಿದರು—ಆದರೆ ಮುಂದೆ ಕೆಲ ವಾರಗಳಾದರೂ ಹಿಮ್ಲರ್ ಒಂದಿಷ್ಟೂ ವಿಚಲಿತನಾಗಲಿಲ್ಲ. ಕರ್ಸ್ಟೆನ್ನರ ಪ್ರಭಾವಕ್ಕಿಂತಲೂ ಮಿಗಿಲಾದ ಇನ್ನೊಂದು- ಪ್ರಭಾವ- ಹಿಮ್ಲರನ ದೇವರಾದ ಹಿಟ್ಲರನ ಪ್ರಭಾವ-ಕೆಲಸ ಮಾಡುತ್ತಿತ್ತು. "ನಿಶ್ಚಿತವಾದ ದಿನದಂದು ಗಡೀಪಾರಿನ ಕಾರ್ಯ ಜರುಗಿಯೆ ತೀರುವುದು" ಎಂಬ ಒಂದೇ ಪಲ್ಲವಿಯನ್ನು ಹಿಮ್ಲರ್ ಆಡುತ್ತಿದ್ದ.

ಆಮೇಲೆ ಮಾರ್ಚ್ ತಿಂಗಳ ಕೊನೆಯಲ್ಲಿ ಈ ಎರಡು ವರ್ಷಗಳ ಅವಧಿಯಲ್ಲಿ ಮೊಟ್ಟ ಮೊದಲನೆಯ ಸಲ ಕರ್ಸ್ಟೆನ್ನರ ಚಿಕಿತ್ಸೆ ನಿರುಪಯುಕ್ತವಾಗಹತ್ತಿತು. ಬೇಕೆಂದೇ ಆತ ತಪ್ಪ ಚಿಕಿತ್ಸೆ ನಡೆಸಿದರೊ ಅಥವಾ ಅವರ ಮಾನಸಿಕ ತಳಮಳದ ಮೂಲಕ ಅವರ ನಿಪುಣತೆಗೆ ಕುಂದು ತಗಲಿತೋ ಅಂತೂ ಅವರ ಮಾಂತ್ರಿಕ ಬೆರಳುಗಳು ಹಿಮ್ಲರನ ನೋವನ್ನು ನಿವಾರಿಸಲಾರ[illegible] ಹೋದವು. ಹಿಮ್ಲರ್ ಒದ್ದಾಡುತ್ತಿದ್ದ.

"ನಿಮಗೆ ಎಚ್ಚರಿಕೆಯಿತ್ತಿದ್ದೆ, ಕೇಳಲಿ[illegible] ನೀವು ಎರಡು ಭಾರಗಳನ್ನು ಒಮ್ಮೆಲೆ ಹೊ[illegible] ಲಾರಿರಿ. ನಿಮ್ಮ ನರಗಳು ಈಗ ನನ್ನ ಮಾ[illegible] ಕೇಳುವುದಿಲ್ಲ. ಎರಡು ಕಾರ್ಯಗಳಲ್ಲಿ ಕಡಿ[illegible] ಮಹತ್ವದ್ದನ್ನು ಬಿಟ್ಟುಕೊಡಿ. ನಾನು ನಿಮ್ಮ[illegible] ಖಂಡಿತ ಗುಣಪಡಿಸುತ್ತೇನೆ" ಎಂದ[illegible] ವರು.

ಹಿಮ್ಲರ್ ಹೇಳಿದ: "ಇಲ್ಲ ಸಾಧ್ಯವಿಲ್ಲ. ನೀ[illegible] ಪ್ರಯತ್ನ ಮಾಡಿ."

"ಮಾಡುತ್ತೇನೆ." ಆದರೆ ಅವರಿಂದ[illegible] ಅವರ ಪ್ರಯತ್ನ ವ್ಯರ್ಥವಾಯಿತು.

೧೯೪೧, ಎಪ್ರಿಲ್ ತಿಂಗಳಾರಂಭದ[illegible] ಜರ್ಮನ್ನರು ಯುಗೊಸ್ಲಾವಿಯದ ಮೇಲೆ ದಾ[illegible] ಮಾಡಿದರು. ಯುಗೋಸ್ಲಾವಿಯದ ಪ[illegible] ಸಮಯದಲ್ಲಿ ಸಮೀಪವಿರಬೇಕೆಂದು ಹಿಟ್ಲ[illegible] ಯುಗೊಸ್ಲಾವಿಯದ ಗಡಿಯ ಬಳಿ ಠಾ[illegible] ಊರಲು ಹಿಮ್ಲರ್ ಅವನ ಜೊತೆಗೆ ಹೋ[illegible] ಬೇಕಾಯಿತು. ಈ ಪ್ರವಾಸ ಅವನನ್ನು ಮ[illegible] ಪ್ರಾಯನನ್ನಾಗಿ ಮಾಡಿತು. ಹಿಟ್ಲರನನ್ನು ಕಾ[illegible] ಬೇಕಾದಾಗ ಹೊರತು ಅವನು ತನ್ನ ಖಾಸ[illegible] ರೇಲ್ವೆ ಡಬ್ಬಿಯಲ್ಲಿ ಮಲಗಿಕೊಂಡೇ ಇರುತ್ತಿ[illegible] ಹಗಲಿರುಳು ಕರ್ಸ್ಟೆನ್ ಅವನ ಬಳಿ ಇರಬ[illegible] ಕಾಯಿತು.

"ನೋಡಿದಿರಾ ಹರ್ ರೈಹ್ಸ್‌ಫ್ಯುರರ್, ಎ[illegible] ವನ್ನೂ ನೀವು ಒಮ್ಮೆಲೆ ಮಾಡಲಾರಿರಿ. ಗ[illegible] ಪಾರಿನ ದಿನವನ್ನು ಮುಂದಕ್ಕೆ ಹಾಕಿ[illegible] ಕರ್ಸ್ಟೆನ್ ಪುನಃ ಪುನಃ ಹೇಳುತ್ತಿದ್ದರು.

ಹಿಮ್ಲರನ ಮುಖ ನೋವು ಬರಿಸಿದ ಬೆ[illegible] ನಿಂದ ತೊಯ್ದುಹೋಗಿರುತ್ತಿತ್ತು. ಆದರೂ ಅ[illegible] ತೇಕುತ್ತಲೇ "ಸಾಧ್ಯವಿಲ್ಲ. ನನ್ನ ಸರ್ವಸ್ವ[illegible] ಫ್ಯೂರರ್‌ನಿಗೆ ಮೀಸಲಾಗಿದೆ" ಎನ್ನುತ್ತಿದ್ದನು.

ಗಡೀಪಾರಿನ ದಿನಕ್ಕೆ ಇನ್ನು ಒಂದೇ ಒಂ[illegible] ವಾರ ಉಳಿದಿದ್ದಾಗ ಒಂದು ರಾತ್ರಿ ನಸುಕಿನ[illegible] ಎರಡು ಗಂಟೆಗೆ ಕರ್ಸ್ಟೆನ್ನರಿಗೆ ಹಿಮ್ಲರನ [illegible] ಬಂತು. ಹಿಮ್ಲರನ ನೋವು ಅತ್ಯಸಾಧ್ಯ[illegible] ಗಿತ್ತು. "ದಯವಿಟ್ಟು ನನಗೆ ಸಹಾಯ ಮಾ[illegible]

ಉಸಿರಾಡಿಸಲಾರೆ" ಎಂದು ಗೋಗರೆದ.

ಕರ್‍ಸ್ಟೆನ್‌ರು ಅವನ ಮಂಚದ ಹತ್ತಿರ ಖುರ್ಚಿಯ ಮೇಲೆ ಕುಳಿತು ಪ್ರೀತಿಯ, ಬಿನ್ನಹದ ದನಿಯಲ್ಲಿ ಹೇಳಿದರು "ಹರ್ ರೈಹ್ಸ್ ಫ್ಯೂರರ್, ನಾನು ನಿಮ್ಮ ಸ್ನೇಹಿತ. ನಿಮಗೆ ಸಹಾಯ ಮಾಡಬಯಸುತ್ತೇನೆ. ಆದರೆ ದಯವಿಟ್ಟು ಈ ಡಚ್ ಪ್ರಕರಣವನ್ನು ಮುಂದಕ್ಕೆ ಹಾಕಿ. ಈ ಪ್ರಕರಣ ಉದ್ಭವಿಸುವ ಮೊದಲು ಚಿಕಿತ್ಸೆ ಎಷ್ಟು ಯಶಸ್ವಿಯಾಗಿತ್ತು ಯೋಚಿಸಿ. ಹಿಟ್ಲರನ ಬಳಿಗೆ ಹೋಗಿ ಗಡೀಪಾರಿನ ದಿನವನ್ನು ಮುಂದಕ್ಕೆ ಹಾಕಲು ಕೇಳಿಕೊಂಡರೆ ಚಿಕಿತ್ಸೆ ಪುನಃ ಮೊದಲಿನಂತೆ ಯಶಸ್ವಿಯಾಗುವುದು."

ಡಾಕ್ಟರರ ಒಂದು ಕೈ ಹಿಡಿದುಕೊಂಡು ಹಿಮ್ಲರ್ "ಹೌದು ಹೌದು, ಡಾಕ್ಟರ್, ನೀವನ್ನುವುದು ನಿಜ. ಆದರೆ ನಾನು ಫ್ಯೂರರರಿಗೆ ಏನು ಹೇಳಲಿ ?" ಎಂದ.

"ಎರಡೂ ಹೊಣೆಯನ್ನು ಒಮ್ಮೆಲೆ ಹೊರಲಾರೆ ಎನ್ನಿ. ಹಡಗುಗಳ ಅಭಾವ, ರಸ್ತೆಗಳಲ್ಲಿಯ ಗದ್ದಲದ ವಿಚಾರ ಹೇಳಿ. ಈ ಕೆಲಸದ ಭಾರದಿಂದ ನಿಮ್ಮ ಪ್ರಾಣಕ್ಕೆ ಗಂಡಾಂತರವಿದೆ, ಎಸ್‌ಎಸ್ ಕಾರ್ಯಪೂರ್ತಿಗೆ ಆತಂಕವಾಗಿದೆ ಎನ್ನಿ."

"ಸರಿ. ಹಿಟ್ಲರನೊಡನೆ ಮಾತಾಡುತ್ತೇನೆ. ಅಷ್ಟಕ್ಕಾದರೂ ಶಕ್ತಿ ಬರುವಂತೆ ಮಾಡಿ."

ಕರ್‍ಸ್ಟೆನ್ನರಿಗೆ ಸ್ಫೂರ್ತಿ ಬಂತು. ಯಶಸ್ಸಿನ ನಂಬಿಗೆಯಾಯಿತು. ಅವರು ಮಾಲೀಸು ಮಾಡುತ್ತಿರುವಂತೆ ಹಿಮ್ಲರ್ "ಹಾ! ನೋವು ಕಡಿಮೆಯಾಯಿತು. ಹೌದು." ಎನ್ನುತ್ತ ನಡೆದ.

ಮಾಲೀಸು ಮುಗಿಯಿತು. ಹಿಮ್ಲರ್ ನಿಧಾನವಾಗಿ ಎದ್ದು ನಿಂತು "ನೋವಿಲ್ಲ" ಎಂದ.

"ಹಿಟ್ಲರನೊಡನೆ ಮಾತನಾಡುವ ನಿರ್ಧಾರ ಮಾಡಿದಿರೆಂದೇ ಗುಣವಾಗಿದೆ. ಈಗಿಂದೀಗಲೇ ನೀವು ಮಾತಾಡಬೇಕು."

ಅಷ್ಟರಲ್ಲಿ ಫೋನಿನ ಗಂಟೆ ಬಾರಿಸಿತು. ಹಿಮ್ಲರ್ ಅದನ್ನೆತ್ತಿಕೊಂಡ. ಫೋನನ್ನು ಕೆಳಗಿಟ್ಟ ಬಳಿಕ ಆತ "ಯುಗೊಸ್ಲಾವಿಯ ನಮ್ಮದಾಯಿತು. ಫ್ಯೂರರ್ ಇದೀಗ ಬರ್ಲಿನ್ನಿಗೆ ಹೊರಟಿದ್ದಾರೆ. ನಾನೂ ಬರಬೇಕೆಂದು ಅಪ್ಪಣೆ ಮಾಡಿದ್ದಾರೆ. ನನ್ನ ಟ್ರೇನು ಹೊರಡಲು ಸ[illegible] ವಾಗಿದೆ" ಎಂದ.

ಹಿಮ್ಲರ್ ತನ್ನ ಕಾಠಿನ್ಯವನ್ನು ಮತ್ತೆ ಪ್ರಾ[illegible] ಮಾಡಿಕೊಂಡಿದ್ದ. ತಾನಿವನನ್ನು ಬಲು ಬ[illegible] ಗುಣಪಡಿಸಿದನೆ ಎಂದು ಕರ್‍ಸ್ಟೆನ್‌ರಿಗೆ ಸಂದೇ[illegible] ಬಂತು. ಆದರೆ ದೈವ ಅನುಕೂಲವಾಗಿ[illegible] ಹಾದಿಯಲ್ಲಿ ಹಿಮ್ಲರನಿಗೆ ಪುನಃ ನೋವು ಕ[illegible] ಸಿತು ಕರ್‍ಸ್ಟೆನ್ನರು ತಮ್ಮ ಚಿಕಿತ್ಸೆಯ[illegible] ವಿಲಂಬಗೊಳಿಸುತ್ತ ಹೋದದ್ದರಿಂದ ಬರ್ಲಿ[illegible] ತಲುಪುವ ಹೊತ್ತಿಗೆ ಹಿಮ್ಲರ್ ಮೃತಪ್ರಾ[illegible] ನಾಗಿಬಿಟ್ಟಿದ್ದ. "ನೋಡಿದಿರಾ, ನೀವು ಮುಂ[illegible] ಹಾಕಿದಷ್ಟೂ ನಿಮ್ಮ ಸ್ಥಿತಿ ಕಠಿಣವಾಗುತ್ತ[illegible]

"ಹೌದು. ನೀವು ಕಾಳಜಿ ಬಿಡಿ" ಎ[illegible] ಹಿಮ್ಲರ್.

ಸ್ಟೇಶನ್ನಿನಿಂದ ಹಿಮ್ಲರ್ ನೆಟ್ಟಗೆ ಹಿಟ್ಲರನ[illegible] ಹೋದ. ಎರಡು ತಾಸುಗಳ ನಂತರ [illegible] ಕರ್‍ಸ್ಟೆನ್‌ರಿಗೆ ಫೋನ್ ಮಾಡಿದ. "ಫ್ಯೂ[illegible] ಎಷ್ಟು ಪ್ರತಿಭಾಶಾಲಿಯೋ ಅಷ್ಟೆ ಉದಾರಿಯ[illegible] ಆಗಿದ್ದಾನೆ. ಗಡೀಪಾರು ಮುಂದಕ್ಕೆ ಹಾ[illegible] ಟ್ಟಿದೆ. ನನಗೆ ಲೇಖೀ ಅಪ್ಪಣೆ ಸಿಕ್ಕಿದೆ."

ಕರ್‍ಸ್ಟೆನ್‌ರ ಉದ್ದೇಶದಲ್ಲಿ ಹಿಮ್ಲ[illegible] ಒಂದಿನಿತೂ ಸಂಶಯವಿರಲಿಲ್ಲ. ಆದರೆ ಹೆ[illegible] ಚ್‌ನಿಗೆ ಅನುಮಾನಪಿದ್ದೇ ಇತ್ತು.

ಒಂದು ದಿನ ಕರ್‍ಸ್ಟೆನ್ನರಿಗೆ ಗೆಸ್ಟಪೊಪ್ರವ[illegible] ಹೇಡ್ರಿಚ್‌ನ ಕರೆ ಬಂತು. ಹಿಮ್ಲರ್ ವ[illegible] ಬ್ರಾಂಡ್ ಅಕಸ್ಮಾತ್ತಾಗಿ ಮ್ಯುನಿಚ್‌ಗೆ ಹೊ[illegible] ದ್ದರು. ಕರ್‍ಸ್ಟೆನ್ನರು ಹಿಮ್ಲರನ ಕಚೇರಿಗೆ ಹೋ[illegible] "ನಾನು ಹೇಡ್ರಿಚ್‌ನ ಆಫೀಸಿಗೆ ಹೊ[illegible] ತ್ತೇನೆಂದು ರೈಹ್ಸ್‌ಫ್ಯೂರರ್‌ಗೆ ಹೇಳಿ. ಅತಿ [illegible] ತ್ವದ ಮಾತಿದು. ತಪ್ಪದೆ ಹೇಳಿ" ಎ[illegible] ಅಲ್ಲಿದ್ದ ಎಸ್.ಎಸ್. ಅಧಿಕಾರಿಗೆ ಸೂ[illegible] ಹೇಡ್ರಿಚ್‌ನ ಆಫೀಸಿಗೆ ತೆರಳಿದರು.

ಹೇಡ್ರಿಚ್ ವಿನಯದಿಂದಲೆ ಕರ್‍ಸ್ಟೆನ್[illegible] ಸ್ವಾಗತಿಸಿ ಅದು ಇದು ಮಾತಾಡುತ್ತ ಒ[illegible] ಮೊದಲಿನದೇ ವಿನಯಪೂರ್ಣ ಧ್ವನಿ[illegible] "ಕ್ಷಮಿಸಿ, ನಿಮ್ಮನ್ನು ನಾನು ಬಂಧಿಸಬೇಕಾ[illegible] ಡಚ್ ಗಡೀಪಾರಿನ ವಿಚಾರದಲ್ಲಿ ನೀವೇ [illegible]

ಶನ ಮೇಲೆ ಪ್ರಭಾವ ಬೀರಿದಿರೆಂದು ನನಗೆ ಖಾತ್ರಿಯಾಗಿದೆ" ಎಂದ.

"ಓ! ನನಗೆ ತುಂಬ ಮಹತ್ವ ಕೊಡುತ್ತಿದ್ದೀರಿ."

ಹೇಡ್ರಿಚ್ ಕೂಡಲು ನೇವರಿಸಿಕೊಳ್ಳುತ್ತ "ಡಚ್ ದರಬಾರಿ ಡಾಕ್ಟರನಾಗಿದ್ದ ಒಬ್ಬಾತ ನಮ್ಮ ಮಿತ್ರ ಎಂದು ಯಾರೂ ನನ್ನನ್ನು ನಂಬಿಸಲಾರರು. ನಿಮ್ಮನ್ನು ಯಾರು ಜರ್ಮನಿಗೆ ಕಳಿಸಿದರು ಎಂದು ತಿಳಿಯಬಯಸುತ್ತೇನೆ" ಎಂದ.

"ಈ ಪ್ರಶ್ನೆಗೆ ಹಿಮ್ಲರನೇ ಹೆಚ್ಚು ಚೆನಾಗಿ ಉತ್ತರವೀಯಬಹುದು."

ಮಗ್ಗಲ ಕೋಣೆಯಲ್ಲಿ ಟೆಲಿಫೋನ್ ಗಂಟೆ ಬಾರಿಸಿತು. ಹೇಡ್ರಿಚ್ ಎದ್ದುಹೋಗಿ ಮಾತಾಡಿ ಬಂದು "ಹುಂ! ಏನನ್ನುತ್ತಿದ್ದೆ ನಾನು? ಹಾಲಂಡಿನ ವಿಚಾರ ಅಲ್ಲವೆ? ಅಲ್ಲಿ ಏನೇನಾಗುತ್ತಿದೆ ಎಂಬ ಬಗ್ಗೆ ನಿಮಗೆ ಇಷ್ಟೆಲ್ಲ ಮಾಹಿತಿ ಹೇಗೆ ದೊರೆಯುತ್ತಿದೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ನಿಮ್ಮ ಸುದ್ದಿಗಾರರ ಸುಳಿವು ಕೊಡುವಿರಾ?" ಎಂದ.

ಕರ್‍ಸ್ಟೆನ್ ತಮ್ಮ ಭಯವನ್ನು ನಗೆಯಲ್ಲಿ ಮುಚ್ಚಿಕೊಂಡು "ಬಹುಶಃ ನನಗೆ ಜ್ಞಾನ-ದೃಷ್ಟಿಯಿರಬೇಕು" ಎಂದರು.

"ನಾನೂ ಹಾಗೆಯೆ ಇರಬೇಕು. ನೀವು ಯಾರು ಎಂದು ಕೂಡ ನನಗೆ ಅಂದಾಜು ಆಗಹತ್ತಿದೆ. ಬೇಗನೆ ಅದನ್ನು ಸಿದ್ಧಮಾಡುವೆ."

ಆ ಮೇಲೆ ಎದ್ದುನಿಂತು ಹೇಡ್ರಿಚ್ ನಿರ್ಧಾರದ ದನಿಯಲ್ಲಿ ಹೇಳಿದ. "ನೀವೀಗ ಸ್ವತಂತ್ರರಿದ್ದೀರಿ. ಹಿಮ್ಲರ್ ಇದೀಗ ಫೋನ್ ಮಾಡಿದ್ದರು. ನಿಮ್ಮ ನಿಷ್ಠೆಯ ಬಗ್ಗೆ ಅವರು ಹೊಣೆ ಹೊತ್ತುಕೊಳ್ಳುವರಂತೆ. ನಿಮ್ಮನ್ನು ಬಿಡುಗಡೆ ಮಾಡಲು ಕಟ್ಟಪ್ಪಣೆ ಮಾಡಿದ್ದಾರೆ. ಆದರೆ ಪುನಃ ಇಲ್ಲಿಗೆ ಬರಲು ಸಿದ್ಧರಾಗಿರಿ. ನಾನು ಮತ್ತೊಮ್ಮೆ ಭೆಟ್ಟಿಯಾಗುತ್ತೇನೆಂಬುದು ಖಂಡಿತ."

ಆದರೆ ಆ ಭೆಟ್ಟಿ ಘಟಿಸಲೇ ಇಲ್ಲ.

೧೯೪೧ರ ಸೆಪ್ಟೆಂಬರ್ ತಿಂಗಳಲ್ಲಿ ಒಂದು ವಿಶೇಷ ಕಾರ್ಯಕ್ಕಾಗಿ ಹೇಡ್ರಿಚ್ ಬೊಹೇಮಿಯಕ್ಕೆ ಕಳಿಸಲ್ಪಟ್ಟಾಗ ಝೆಕ್ ದೇಶಭಕ್ತರು ಅವನನ್ನು ಪ್ರೇಗ್‌ನಲ್ಲಿ ಕೊಂದುಹಾಕಿದರು. ಗೆಸ್ಟಪೊ ಪ್ರಮುಖನೆಂದು ಅರ್‍ನ್ಸ್ ಕಾಲ್ಟೆನ್ ಬ್ರುನರ್ ಎಂಬಾತ ನೇಮಿಸಲ್ಪಟ್ಟ.

೧೯೪೧, ಜೂನ್ ೨೨ರಂದು ಹಿಟ್ಲರ್ ತನ್ನೆಲ್ಲ ದಾಳಗಳನ್ನು ಎಸೆದ. ಆತ ಸೋವಿಯಟ್ ರಶಿಯದ ವಿರುದ್ಧ ತನ್ನೆಲ್ಲ ಸೈನ್ಯವನ್ನು ಕಳಿಸಿದ. ಹಿಮ್ಲರನ ಖಾಸಗಿ ಟ್ರೇನು ಪೂರ್ವ ಗಡಿಗೆ ಹೊರಟಾಗ ಆತ ಕರ್‍ಸ್ಟೆನರನ್ನೂ ಕರೆದೊಯ್ದ.

ಪೂರ್ವಪ್ರಶಿಯದಲ್ಲಿ ಸಂಚಾರಿ ಕೇಂದ್ರ ಕಚೇರಿ ಸ್ಥಾಪಿಸಲ್ಪಟ್ಟಿತು. ಪ್ರತಿನಿತ್ಯ ಟ್ರೇನು ತನ್ನ ನಿರ್ದಿಷ್ಟ ಸ್ಥಾನದಲ್ಲಿ ತಂಗಿದೊಡನೆ ಹಿಮ್ಲರನ ಗೂಢಚಾರರು ಸ್ಥಾನಬದ್ಧ ಶಿಬಿರಗಳನ್ನು ಏರ್ಪಡಿಸುವ, ಜನರನ್ನು ಬಂಧಿಸುವ, ಮರಣದಂಡನೆಗಳನ್ನು ವಿಧಿಸುವ ಕಾರ್ಯದಲ್ಲಿ ಮಗ್ನರಾಗಿರುತ್ತಿದ್ದರು. ತುಸುವೇ ದೂರದಲ್ಲಿದ್ದ ಹಿಟ್ಲರನ ಕಚೇರಿಗೆ ಹಿಮ್ಲರ್ ಪ್ರತಿನಿತ್ಯ ಹೋಗಿ ಅವನನ್ನು ಕಾಣುತ್ತಿದ್ದ.

ರಶಿಯದಲ್ಲಿ ದೊರಕಿದ ಪ್ರಥಮ ವಿಜಯದಿಂದ ಹಿಮ್ಲರನ ಅಧಿಕಾರಿಗಳು ಮತ್ತರಾಗಿದ್ದುದು ಅವರ ಜೊತೆಯಲ್ಲೆ ಊಟಮಾಡುತ್ತಿದ್ದ ಕರ್‍ಸ್ಟೆನ್ನರಿಗೆ ಕಾಣಿಸುತ್ತಲಿತ್ತು. "ಪ್ರತಿಯೊಬ್ಬ ಜರ್ಮನ್ ಸೈನಿಕನಿಗೂ ರಶಿಯದಲ್ಲಿ ಆಸ್ತಿ ಸಿಗುವುದು. ರಶಿಯವು ಜರ್ಮನ್ನರ ಸ್ವರ್ಗವಾಗುವುದು" ಎಂದು ಅವರು ಅನ್ನುತ್ತಿದ್ದರು.

ಮೂರು ತಿಂಗಳ ವರೆಗೆ ಜರ್ಮನ್ನರ ಪ್ರಗತಿ ರಭಸವಾಗಿ ನಡೆಯುತ್ತಿದ್ದಾಗ ಹಿಮ್ಲರನ ಕಾರ್ಯಭಾರ ವಿಪರೀತವಾಗಿರುತ್ತಿತ್ತು. ಹೀಗಾಗಿ ಅಕ್ಟೋಬರ್ ತಿಂಗಳ ವರೆಗೂ ಕರ್‍ಸ್ಟೆನ್‌ರಿಗೆ ಬರ್ಲಿನ್ನಿಗೆ ಮರುಳುವುದಾಗಲಿಲ್ಲ. ಅಪಾರ ಹಾನಿಯಾಗಿದ್ದರೂ ರಶಿಯನ್ನರು ಪ್ರತಿಭಟಿಸುತ್ತಲೇ ಇದ್ದರು

ಆ ಶರದೃತುವಿನಲ್ಲಿ ಒಮ್ಮೆ ಹಿಮ್ಲರನ ನೋವು ವಿಪರೀತವಾಗಿದ್ದಾಗ "ಮತ್ತೇನಾಯಿತೀಗ?" ಎಂದು ಡಾಕ್ಟರರು ಕೇಳಲು ಹಿಮ್ಲರ್ ಅವರಿಗೆ ತನ್ನ ಗೌಪ್ಯವನ್ನು ಹೇಳಿದ. "ನೀವೊಬ್ಬರೇ ನನ್ನ ಮಿತ್ರರು. ನಿಮಗೆಲ್ಲ ಹೇಳುತ್ತೇನೆ. ಒಪ್ಪಂದ ಮಾಡಿಕೊಳ್ಳೋಣವೆಂದು ಹಿಟ್ಲರ್ ಇಂಗ್ಲಂಡಿಗೆ ಅನೇಕ ಸಲ ಹೇಳಿದ. ಆದರೆ ಆ ದೇಶವನ್ನಾ

ಳುವ ಯಹೂದಿಗಳು ಅವನ್ನು ನಿರಾಕರಿಸಿದರು. ಬ್ರಿಟನ್ ಮತ್ತು ಜರ್ಮನಿಗಳ ನಡುವಿನ ಯುದ್ಧದಷ್ಟು ಕೆಡುಕಾದದ್ದು ಮತ್ತಾವುದೂ ಇಲ್ಲ. ಆದರೆ ಯಹೂದಿಗಳು ಅಂಥ ಯುದ್ಧ ನಡೆಯುವಂತೆ ಎಲ್ಲ ಪ್ರಯತ್ನ ಮಾಡುವರೆಂದು ಹಿಟ್ಲರನಿಗೆ ಗೊತ್ತಿದೆ. ಅವರು ಅಧಿಕಾರದಲ್ಲಿರುವವರೆಗೆ ಜಗತ್ತಿನಲ್ಲಿ ಶಾಂತಿ ಇರದು. ಆದ್ದರಿಂದ ನಮ್ಮ ಅಧಿಕಾರಕಕ್ಷೆಯೊಳಗಿರುವ ಎಲ್ಲ ಯಹೂದಿಗಳನ್ನು ನಾಶಮಾಡಲು ಹಿಟ್ಲರ್ ನನಗೆ ಅಪ್ಪಣೆ ಮಾಡಿದ್ದಾನೆ. ಈ ಕುಲದ ನಿಃಪಾತವಾಗಬೇಕು."

"ಛೆ! ಛೆ! ಇದೆಂಥ ಅನಾಹುತವಾದೀತೆಂದು ಯೋಚಿಸಿ. ಜರ್ಮನಿಯ ಬಗ್ಗೆ ಜಗತ್ತು ಏನೆಂದು ತಿಳಿದುಕೊಂಡೀತು?"

"ಮಹಾಪುರುಷರು ಹೆಣಗಳನ್ನು ದಾಟಿಯೆ ಮುಂದಕ್ಕೆ ಹೋಗಬೇಕಾಗುವುದು. ಅದವರ ದುರ್ವಿಧಿ." ಇಷ್ಟೆಂದ ಬಳಿಕ ಹಿಮ್ಲರ್ ಮುಖ ತಗ್ಗಿಸಿ ಸುಮ್ಮನೆ ಕುಳಿತ. ಆತ ತುಸು ಉದ್ರಿಕ್ತನಾದಂತಿತ್ತು.

"ನಿಮ್ಮ ಮನಕ್ಕೆ ಈ ಅತ್ಯಾಚಾರ ಹಿಡಿಸುತ್ತಿಲ್ಲ. ಇಲ್ಲವಾದರೆ ನೀವಿಷ್ಟು ಉದ್ರಿಕ್ತರಾಗಿರುತ್ತಿರಲಿಲ್ಲ." ಎಂದರು ಕರ್ಸ್ಟೆನ್.

ಹಿಮ್ಲರ್ ಆಶ್ಚರ್ಯದಿಂದ ತಲೆಯೆತ್ತಿ ನುಡಿದ. "ಛೆ! ಛೆ! ಹಾಗೇನಿಲ್ಲ, ನಾನು ಮೂರ್ಖನಂತೆ ಆಚರಿಸಿದೆ. ಹಿಟ್ಲರರು ಇದೆಲ್ಲವನ್ನೂ ಹೇಳಿದಾಗ ನಾನು 'ಫ್ಯೂರರ್, ನಿಮಗಾಗಿ ನಾನು ಮತ್ತು ನನ್ನ ಎಸ್‌ಎಸ್ ಸಾಯಲು ಕೂಡ ಸಿದ್ಧರಿದ್ದೇವೆ. ಆದರೆ ದಯವಿಟ್ಟು ಈ ಕೆಲಸವನ್ನು ನನಗೆ ಹೇಳಬೇಡಿ' ಎಂದುಬಿಟ್ಟೆ."

ಮುಂದಿನ ಕಥೆಯನ್ನೂ ಹಿಮ್ಲರ್ ಹೇಳಿದ. ಹಿಮ್ಲರನ ಮಾತು ಕೇಳಿ ಹಿಟ್ಲರ್ ಹುಚ್ಚನಂತೆ ಜಿಗಿದೆದ್ದು ಹಿಮ್ಲರನ ಕುತ್ತಿಗೆ ಹಿಡಿದು "ನಿನ್ನನ್ನು ಇಷ್ಟೊಂದು ಘನತೆಗೇರಿಸಿದೆ. ಈಗ ನೀನು ನನ್ನ ಅಪ್ಪಣೆಯನ್ನು ಧಿಕ್ಕರಿಸುತ್ತಿರುವಿ, ನೀನು ದ್ರೋಹಿಯಂತೆ ಆಚರಿಸುತ್ತಿರುವಿ" ಎಂದು ಗರ್ಜಿಸಿದ. ಹಿಮ್ಲರ್ ಆಗ ಅಂಜಿಕೆ ನಿರಾಶೆಗಳಿಂದ ಕುಗ್ಗಿಹೋಗಿ "ಕ್ಷಮಿಸಿ. ನಿಮ್ಮ ಆಜ್ಞೆಗಳೆಲ್ಲವನ್ನೂ ಪಾಲಿಸುವೆ. ನಾನು ದ್ರೋಹಿಯೆಂದು ಮಾತ್ರ ಹೇಳಬೇಡಿ" ಎಂದಿದ್ದ.

ಆದರೆ ಹಿಟ್ಲರ್ ಶಾಂತನಾಗಲಿಲ್ಲ. ಆತ ಪುನಃ ಕೂಗಿ ಕಾಲು ಅಪ್ಪಳಿಸಿದ್ದ. "ಯುದ್ಧ ಬೇಗನೆ ಮುಗಿದುಹೋಗುವುದು. ಯುದ್ಧ ಮುಗಿದಾಗ ಈ ಜಗತ್ತಿನಲ್ಲಿ ಒಬ್ಬನೇ ಒಬ್ಬ ಯಹೂದಿ ಬದುಕಿರುವುದಿಲ್ಲವೆಂದು ಜಗತ್ತಿಗೆ ಮಾತು ಕೊಟ್ಟಿದ್ದೇನೆ. ನಾವು ಬೇಗನೆ ಕೆಲಸ ಮಾಡಬೇಕು. ನಿನ್ನಲ್ಲಿ ಆ ಶಕ್ತಿಯಿದೆಯೆಂದು ನನಗನಿಸುವುದಿಲ್ಲ" ಎಂದಿದ್ದನಾತ.

ಇಷ್ಟನ್ನೆಲ್ಲ ಹೇಳಿದ ಮೇಲೆ ಹಿಮ್ಲರ್ ಒದೆತದಿಂದ ನಾಯಿಯಂತೆ ಕರ್ಸ್ಟೆನ್‌ರ ಮುಖ ನೋಡಿ "ತಿಳಿಯಿತೇ ಈಗ?" ಎಂದ.

ಕರ್ಸ್ಟೆನ್ನರಿಗೆ ಅರ್ಥವಾಯಿತು. ಯಹೂದಿಗಳ ಕಗ್ಗೊಲೆಗಾಗಿ ಹಿಮ್ಲರ್ ಚಿಂತಾಕ್ರಾಂತನಾಗಿರಲಿಲ್ಲ. ಹಿಟ್ಲರನಿಗೆ ತನ್ನಲ್ಲಿ ಪೂರ್ಣ ವಿಶ್ವಾಸವಿಲ್ಲವಲ್ಲ ಎಂದವನಿಗೆ ಖೇದವಾಗಿತ್ತು.

೧೯೪೨ರ ಚಳಿಗಾಲದಲ್ಲೊಂದು ದಿನ ಹಿಮ್ಲರ್ "ವಿಪರೀತ ತಲೆನೋವು, ಅನಿದ್ರೆ ಮತ್ತು ತಲೆಸುತ್ತುವಿಕೆಗಳಿಂದ ಬಳಲುವವರನ್ನು ಉಪಚರಿಸಬಲ್ಲಿರಾ?" ಎಂದು ಕೇಳಿದಾಗ ಕರ್ಸ್ಟೆನ್ ಆಶ್ಚರ್ಯಚಕಿತರಾದರು. "ನಾನು ರೋಗಿಯನ್ನು ನೋಡಬೇಕು" ಎಂದರವರು.

"ನಾನು ಹೇಳುವುದನ್ನು ನೀವು ಅತಿ ಗುಪ್ತವಾಗಿಡಬೇಕು" ಹಿಮ್ಲರ್ ದೀರ್ಘಶ್ವಾಸವೆಳೆದುಕೊಳ್ಳುತ್ತ ಹೇಳಿದ.

"ರೋಗಿಗಳ ಗುಟ್ಟನ್ನು ಕಾಯ್ದುಕೊಳ್ಳುವುದು ನನ್ನ ವೃತ್ತಿಯ ಧರ್ಮ."

"ಕ್ಷಮಿಸಿ. ಆದರೆ.." ಹಿಮ್ಲರ್ ತಿಜೋರಿಯಿಂದ ಒಂದು ಕಾಗದದ ಕಟ್ಟುತಂದು ಕರ್ಸ್ಟೆನ್ನರ ಕೈಗಿತ್ತು "ಓದಿ ನೋಡಿ. ಫ್ಯೂರರ್ ಬೇನೆಯ ಬಗ್ಗೆ ಇದು ಒಂದು ಗುಪ್ತ ವರದಿಯಾಗಿದೆ" ಎಂದ.

ಯಾಕೆ? ಹಿಮ್ಲರ್ ಯಾಕಿದನ್ನು ತೋರಿಸಿದ? ಮತ್ತಾವ ಚಿಂತೆ ಅವನಿಗೆ ತಗಲಿದೆ? ಹಿಟ್ಲರನ ಬುದ್ಧಿಭ್ರಂಶವಾಗಿಬಿಟ್ಟಿದೆಯೆ? ಈ ಜರ್ಮನಿ ಹೊಡೆತ ತಿನ್ನಲಾರಂಭಿಸಿದ್ದರಿಂದ ಹಿಟ್ಲರನ ಹುಚ್ಚು ಕೋಪಾಟೋಪ ಮಿತಿಮೀ

ಅತ್ಯುತ್ತಮವಾಗಿ ಪ್ರಯೋಗಿಸುವಂತೆ ತಯಾರಿಸಲ್ಪಟ್ಟು!



ಎಸ್ಟ್ರೆಲಾ

ರೇಡಿಯೋ ಬ್ಯಾಟರಿ

ನೀವು ಕೋರುತ್ತಿರುವ ಎಲ್ಲಾ ವಿಧದ ಗುಣಗಳನ್ನು ಈ ರೇಡಿಯೋ ಬ್ಯಾಟರಿಯಿಂದ ಪಡೆಯುವಿರಿ– ಮಿತವ್ಯಯವಾದ, ದೀರ್ಘಕಾಲ ಬಾಳುವ, ಗಟ್ಟಿಮುಟ್ಟಾದ ಮತ್ತು ಅಧಿಕ ಶಕ್ತಿಯನ್ನೀಯುವ ತಯಾರಿಕೆಯಾಗಿದೆ. • ಡ್ರೈಸೆಲ್ ಬ್ಯಾಟರಿಗಳ ತಯಾರಿಕೆಯಲ್ಲಿ 20 ವರ್ಷಗಳ ಅಗಾಧ ಅನುಭವದ ಉತ್ಪಾದನೆಯಾಗಿರುತ್ತದೆ ಇವು • ಅಂತರರಾಷ್ಟ್ರೀಯ ಪ್ರಮಾಣಕ್ಕೆ ತಕ್ಕಂತೆ ತಯಾರಿಸಲ್ಪಟ್ಟು ಪರೀಕ್ಷಿಸಿ ಸಿದ್ಧಗೊಳಿಸಲ್ಪಟ್ಟವೆ.

ನಿಮ್ಮ ರೇಡಿಯೋ ವ್ಯಾಪಾರಿಗಳಲ್ಲಿ ದೊರೆಯುತ್ತವೆ

ಎಸ್ಟ್ರೆಲಾ ಬ್ಯಾಟರಿಸ್ ಲಿ. ಬೊಂಬಾಯಿ – ಮದ್ರಾಸ್ – ಡಿಲ್ಲಿ – ಕಲ್ಕತ್ತ – ಕಾನ್‌ಪುರ

EB.G.7.K.

ಬಿಟ್ಟಿದೆಯೆ?

ಆ ವರದಿ ೨೬ ಪುಟಗಳಷ್ಟು ದೀರ್ಘವಾಗಿತ್ತು. ಅದರ ಸಾರಾಂಶ: ಹಿಟ್ಲರನಿಗೆ ಅವನ ತಾರುಣ್ಯದಲ್ಲಿ ಸಿಫಿಲಿಸ್ ರೋಗ ತಗಲಿತ್ತು. ಅದರಿಂದ ಗುಣಹೊಂದಿ ಆತ ಪೇಸ್‌ವಾಕ್ ಆಸ್ಪತ್ರೆಯಿಂದ ಹೊರಬಿದ್ದಿದ್ದ. ಆದರೆ ೧೯೩೭ ರಲ್ಲಿ ಆ ರೋಗ ಇನ್ನೂ ಜೀವಂತವಿರುವುದು ಕಾಣಿಸಿತು. ೧೯೪೨ ರಲ್ಲಿ ಸಿಫಿಲಿಟಿಕ್ ಪ್ಯಾರಾಲಿಸಿಸ್‌ಗೆ ಹಿಟ್ಲರ್ ಕ್ರಮೇಣ ಬಲಿಯಾಗುತ್ತಿದ್ದಾನೆಂದು ಖಚಿತವಾಯಿತು.

ಕರ್ಸ್ಟೆನ್ ಕಾಗದವನ್ನು ಮೌನವಾಗಿಯೆ ಹಿಮ್ಲರನ ಕೈಗೆ ಕೊಟ್ಟರು. ಆ ಕಾಗದದ ಅಂಶಗಳು ಎಷ್ಟು ಭೀಕರವಾಗಿದ್ದವೆಂದರೆ ಕ್ಷಣಕಾಲ ಅವರ ಮತಿ ಕುಂಠಿತವಾಗಿಹೋಯಿತು.

"ಹುಂ. ಏನು ಮಾಡಲು ಸಾಧ್ಯ, ಹೇಳಿ ?"

"ನಾನು ಈ ರೋಗಕ್ಕೆ ಚಿಕಿತ್ಸೆ ಮಾಡಲಾರೆ. ನಾನು ಮಾನಸಿಕ ರೋಗಗಳ ತಜ್ಞನಲ್ಲ. ಈಗ ಹಿಟ್ಲರನಿಗೆ ಚಿಕಿತ್ಸೆ ನಡೆಯುತ್ತಿದೆಯೆ?"

"ಹಿಟ್ಲರನ ಡಾಕ್ಟರರಾದ ಮಾರೆಲ್‌ರು ಇಂಜೆಕ್ಷನ್‌ಗಳನ್ನು ಕೊಡುತ್ತಿದ್ದಾರೆ. ಇದರಿಂದ ರೋಗಕ್ಕೆ ಆತಂಕವುಂಟಾಗಿ ಹಿಟ್ಲರನ ಕಾರ್ಯಕ್ಷಮತೆ ಸುರಕ್ಷಿತವಾಗಿರುತ್ತದೆ ಎಂದವರು ಹೇಳುತ್ತಾರೆ."

"ಅದರ ನಂಬಿಗೆ ಏನು? ಕ್ರಮೇಣ ಬಲಿಯುವ ಸಿಫಿಲಿಟಿಕ್ ಪ್ಯಾರಾಲಿಸಿಸ್‌ಗೆ ಗ್ಯಾರಂಟಿ ಔಷಧವಿಲ್ಲ."

"ನನಗದು ಗೊತ್ತಿದೆ."

ಹಿಮ್ಲರ್ ಶತಪಥ ಹಾಕುತ್ತ ಉದ್ರಿಕ್ತ ಸ್ವರದಲ್ಲಿ ಮಾತಾಡತೊಡಗಿದ "ಯಾವನೊ ಒಬ್ಬ ಸಾಮಾನ್ಯ ರೋಗಿಯ ಮಾತಲ್ಲ ಇದು. ಹಿಟ್ಲರನನ್ನು ಮಾನಸೋಪಚಾರದ ಆಸ್ಪತ್ರೆಯಲ್ಲಿ ಪರೀಕ್ಷಿಸುವಂತಿಲ್ಲ. ಹಾಗೆ ಮಾಡಿದರೆ ಅದು ಶತ್ರುಗಳಿಗೆ ಗೊತ್ತಾಗಿ ಅವರು ಜರ್ಮನ್ನರಿಗೆಲ್ಲ ಅದನ್ನು ತಿಳಿಸಿಬಿಡುವರು. ಹಾಗಾದರೆ ಅನಾಹುತವಾದೀತು. ಗೊತ್ತಾಯಿತೇ ಈಗ ನನ್ನ ಸಂಕಟ, ಚಿಂತೆ? ಅಡಾಲ್ಫ್ ಹಿಟ್ಲರ್ ಎಂದರೆ ಒಬ್ಬ ಮಹಾಪುರುಷ ಎಂದು ಜಗತ್ತು ತಿಳಿದಿದೆ. ಇತಿಹಾಸದಲ್ಲಿ ಅವನ ಹೆಸರು ಆ ರೀತಿಯೆ ಇರಬೇಕು. ಜಗತ್ತಿನಲ್ಲಿಯೆ ಆತ ಶ್ರೇಷ್ಠ ಮೇಧಾ[illegible] ಪುರುಷ. ಆತನ ಕೆಲಸ ಹೆಚ್ಚು ಕಡಿಮೆ ಮ[illegible] ದಿರುವಾಗ ಈಗಾತ ಬೇನೆ ಬಿದ್ದರೆ ತೊಂ[illegible] ಯೇನು ?"

ಕರ್ಸ್ಟೆನ್‌ರು ಈ ಸುದ್ದಿಯನ್ನು ಬ್ರಾಂ[illegible] ಕಿವಿಗೆ ಹಾಕಿದಾಗ ಆತ "ಎಲ್ಲಿಯೂ ಈ ಸು[illegible] ಯನ್ನೆತ್ತಬೇಡಿ. ಹಿಮ್ಲರ್‌ನನ್ನು ಬಿಟ್ಟರೆ ಗೊ[illegible] ರಿಂಗ್ ಮತ್ತು ಬಾರ್ಮನ್‌ರಿಗೆ ಮಾತ್ರ[illegible] ಸುದ್ದಿ ಗೊತ್ತಿರಬೇಕು. ವಿದೇಶಿಯರಾದ ನಿ[illegible] ಗೊತ್ತಾಗಿದೆಯೆಂದು ಬಹಿರಂಗವಾದರೆ ನಿ[illegible] ಪ್ರಾಣಕ್ಕೇ ಸಂಚಕಾರ ಬಂದೀತು" ಎಂದ.

ಕರ್ಸ್ಟೆನ್‌ರು ಹಾಗೆಯೆ ಮಾಡಿದರು. ಹಿ[illegible] ರನ ಮುಂದೆ ಅವರು ಪುನಃ ಈ ಪ್ರಸ್ತಾಪವ[illegible] ತ್ತಲೇ ಇಲ್ಲ. ಆಮೇಲೊಂದು ಸಾರಿ ಹಿಮ್ಲರ[illegible] ಈ ಮಾತನ್ನೆತ್ತಿದ. ಹಿಟ್ಲರನ ಚಿಕಿತ್ಸೆಯ ವಿ[illegible] ಯದಲ್ಲಿ ಡಾಕ್ಟರರು ಏನಾದರೂ ಯೋ[illegible] ಮಾಡಿದ್ದಾರೆಯೆ ಎಂದಾತ ಕೇಳಿದ.

ಈ ವಿಚಾರದಿಂದ ತುಂಬ ತ್ರಸ್ತರಾಗಿ[illegible] ಡಾಕ್ಟರರು ಉತ್ತರ ಕೊಡುವಾಗ ಎಲ್ಲ ಮುಂ[illegible] ಗ್ರತೆಯನ್ನು ಬದಿಗೆ ಸರಿಸಿದರು. ಈ ರೋಗದಿ[illegible] ಹಿಟ್ಲರನ ಬುದ್ಧಿಯ ಸಮತೋಲ ತಪ್ಪುವು[illegible] ತಲೆನೋವು, ಅನಿದ್ರೆ, ಕೈನಡುಗುವಿಕೆ, [illegible] ಯವಗಳ ಪಾರ್ಶ್ವವಾಯು ಮುಂತಾದ ಬ[illegible] ಲಕ್ಷಣಗಳೆಲ್ಲ ಹೆಚ್ಚುವವು; ಹಿಟ್ಲರನ ಭ್ರ[illegible] ಮಿತಿಯಿಲ್ಲವಾಗುವುದು; ಡಾ. ಮಾರೆಲ್ಲರ [illegible] ತ್ಸೆಯನ್ನು ಮುಂದುವರಿಸುವುದರಿಂದ ದೊ[illegible] ಗಂಡಾಂತರವಿದೆ; ಹಿಟ್ಲರನ ತೀರ್ಮಾನದಿ[illegible] ಲಕ್ಷಗಟ್ಟಲೆ ಜನರ ಭವಿತವ್ಯದ ಮೇಲೆ ಅಪ[illegible] ಪರಿಣಾಮವಾಗುವುದು; ಈ ತೀರ್ಮಾನಗ[illegible] ಬುದ್ಧಿಸ್ತಿಮಿತದಲ್ಲಿದ್ದಾಗ ಮಾಡಲ್ಪಟ್ಟವೆ ಅಥ[illegible] ಭ್ರಮೆಯ ಅವಸ್ಥೆಯಲ್ಲಿ ಮಾಡಲ್ಪಟ್ಟವೆ ಎಂ[illegible] ಹೇಗೆ, ಯಾರು ಹೇಳಬಲ್ಲರು ಎಂದಿತ್ಯಾದಿಯ[illegible] ಡಾಕ್ಟರ್ ಕರ್ಸ್ಟೆನ್ ಹೇಳಿದರು.

ರೈಹ್ಸ್‌ಫ್ಯುರರ್ ಮಾತಾಡಲಿಲ್ಲ. ತಮ್ಮ [illegible] ವನ್ನು ಕಂಡು ತಾವೇ ಆಶ್ಚರ್ಯಚಕಿತ[illegible] ಕರ್ಸ್ಟೆನ್‌ರು ಹಿಟ್ಲರನ ಬುದ್ಧಿಸ್ಥೈರ್ಯ[illegible] ವಿಚಾರದಲ್ಲೆ ಸಂದೇಹ ಬಂದಿರುವಾಗ ಹಿಮ್ಲ[illegible] ಅವನನ್ನು ಫ್ಯುರರ್ ಎಂದು ಮನ್ನಿಸುವುದು[illegible]

ಎಷ್ಟು ರುಚಿಕರ !



ಮನೆಗಳಿಗೆ
—ಹೋಟೆಲುಗಳಿಗೆ

ಬ್ರೂಕ್ ಬಾಂಡ್
ಸ್ಪೆಷಲ್ ಹೋಟಲ್ ಬ್ಲೆಂಡ್

ಡಸ್ಟ್ ಟೀ

3 ಗಾತ್ರಗಳಲ್ಲಿ ದೊರೆಯುತ್ತದೆ
500 ಗ್ರ್ಯಾಮ್, 100 ಗ್ರ್ಯಾಮ್,
50 ಗ್ರ್ಯಾಮ್

JWT BB 387

ಯಲ್ಲ ಎಂದು ಹೇಳಿದರು.

"ನಾನು ಇದನ್ನೆಲ್ಲ ಯೋಚಿಸಿದ್ದೇನೆ. ನೀವನ್ನುವುದು ನ್ಯಾಯ. ಆದರೆ ಇಲ್ಲಿ ತರ್ಕಕ್ಕೆ ಸ್ಥಳವಿಲ್ಲ. ಈಗ ರಥದ ಕುದುರೆಗಳನ್ನು ಬದಲಿಸುವುದು ಸಾಧ್ಯವಿಲ್ಲ. ಮತ್ತೆ ಫ್ಯುರರ್‌ನ ವಿರುದ್ಧ ಹೋಗುವುದು ಶಕ್ಯವೇ ಇಲ್ಲ. 'ನಿಷ್ಠೆಯೆ ಗೌರವ' ಎಂಬ ತತ್ವದ ಎಸ್‌ಎಸ್‌ನ ಅಧಿಪತಿ ನಾನು. ನಾನೇ ಹೇಗೆ ವಿರುದ್ಧವರ್ತನೆ ಮಾಡಲಿ? ಅಧಿಕಾರ ಲಾಲಸೆಯಿಂದ ನಾನು ವರ್ತಿಸಿದೆ ಎಂದು ಇಡೀ ಜಗತ್ತು ಅಂದೀತು" ಹಿಮ್ಲರ್ ಹೇಳಿದ.

"ಅಂದರೆ ನೀವು ಹಿಟ್ಲರನ ಬೇನೆ ಹೆಚ್ಚಿ ಅನಾಹುತವಾಗಲು ಬಿಡುವಿರಾ? ಇಡೀ ಜರ್ಮನ್ ಜನತೆಯ ಅದೃಷ್ಟವನ್ನು ಅತ್ಯಂತ ಭೀಕರವಾದ ಮಾನಸಿಕ ರೋಗದಿಂದ ಬಳಲುವವನ ಕೈಗೊಪ್ಪಿಸುವಿರಾ?"

೧೯೪೩, ಸೆಪ್ಟೆಂಬರ್ ತಿಂಗಳಲ್ಲಿ ಹೆಲ್ಸಿಂಕಿಗೆ ಬಂದು ವರದಿ ಮಾಡಲು ಫಿನ್ನಿಶ್ ಸರಕಾರ ಕರ್‌ಸ್ಟೆನ್ನರನ್ನು ಕೇಳಿತು. ಈಗ ಫಿನ್‌ಲಂಡ್ ಜರ್ಮನಿಯ ಪರವಾಗಿ ಯುದ್ಧದಲ್ಲಿ ಸೇರಿಕೊಂಡಿದ್ದರಿಂದ ಮತ್ತು ಕರ್‌ಸ್ಟೆನ್ ಫಿನ್ನಿಶ್ ನಾಗರಿಕರಾದ್ದರಿಂದ ಕರ್‌ಸ್ಟೆನ್ನರು ಅಲ್ಲಿಗೆ ಹೋಗುವುದನ್ನು ಹಿಮ್ಲರ್ ಸುಲಭದಲ್ಲಿ ತಡೆಯಲಾರದವನಾಗಿದ್ದ.

ಕರ್‌ಸ್ಟೆನ್ನರು ಹೆಲ್ಸಿಂಕಿಗೆ ಹೋಗುವಾಗ ಸ್ಟಾಕ್‌ಹೋಮ್‌ನಲ್ಲಿ ಇಳಿದು ಸ್ವೀಡನ್ನಿನ ಅಧಿಕಾರಿಗಳೊಂದಿಗೆ ಮಾತುಕತೆಯಾಡಬೇಕು ಎಂದು ಸ್ವೀಡನ್ನಿನ ರಾಯಭಾರಿ ಆಮಂತ್ರಣವಿತ್ತ. ಸ್ವೀಡನ್ ತಟಸ್ಥ ರಾಷ್ಟ್ರವಾದ್ದರಿಂದ ಕರ್‌ಸ್ಟೆನ್ ಅಲ್ಲಿಗೆ ಹೋದರೆ ಜರ್ಮನ್ನರಿಗೆ ಅವರ ಮೇಲಿನ ಅಧಿಕಾರ ತಪ್ಪಿ ಹೋಗುತ್ತಿತ್ತಾದ್ದರಿಂದ ಈ ಭೆಟ್ಟಿಯಾಗಲು ಆತಂಕ ಬರುವಂತಿತ್ತು. ಆದರೆ ಸ್ವೀಡನ್ನಿನಲ್ಲಿ ೫,೦೦೦ ಫಿನ್ನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದುದರಿಂದ ತಾವಲ್ಲಿಗೆ ಹೋಗಬೇಕು ಎಂದು ಯೋಚಿಸಿದ ಕರ್‌ಸ್ಟೆನ್ನರು ಆ ಅವಕಾಶ ಕೊಡಲು ಹಿಮ್ಲರನನ್ನು ಕೇಳಿದರು.

"ಹೋಗಿ. ಆದರೆ ತಿರುಗಿ ಬರಬಾರದೆಂದೇನಾದರೂ ನಿಮ್ಮ ವಿಚಾರ.."

"ಛೆ ಛೆ ! ನನ್ನಮೇಲೆ ಇಂಥ ಸಂದೇಹ ಬ... ವಂಥ ಕಾರ್ಯವನ್ನೇನಾದರೂ ಮಾಡಿದ್ದೇನೆಯೆ..."

"ಇಲ್ಲ. ನನ್ನನ್ನು ಕ್ಷಮಿಸಿ. ಆದರೆ ನ... ಜೀವನವೇ ಹಾಗಾಗಿಬಿಟ್ಟಿದೆ. ನಾನು ಯಾರನ... ನಂಬಲಾರದಂಥ ಪರಿಸ್ಥಿತಿ ಇದೆ. ಆದರೆ ಈ ಬ... ತ್ತಿನಲ್ಲಿ ನಿಮ್ಮೊಬ್ಬರ ಪ್ರಾಮಾಣಿಕತೆ ಹಾಗ... ಸದ್ವರ್ತನೆಗಳಲ್ಲಿ ಮಾತ್ರ ನನಗೆ ನಂಬಿಗೆಯಿದ...

ಸ್ವೀಡನ್ ತಲುಪಿದಾಗ ಈ ನಾಲ್ಕು ವರ್ಷ... ಗಳಲ್ಲಿ ಮೊದಲ ಬಾರಿ ಸ್ವತಂತ್ರವಾಗಿ ಉಸಿ... ದುಕೊಳ್ಳುವಂತೆ ಕರ್‌ಸ್ಟೆನ್ನರಿಗೆ ಅನಿಸಿತು.

ಆದರೆ ಸ್ವೀಡನ್ನಿನ ವಿದೇಶಮಂತ್ರಿಯ ಮಾ... ಕೇಳಿ ಅವರ ಆನಂದ ಕರಗಿತು. "ಜರ್ಮನಿ... ಮೇಲೆ ಯುದ್ಧಸಾರಬೇಕೆಂದು ಮಿತ್ರರಾಷ್ಟ್ರಗ... ನಮ್ಮ ಮೇಲೆ ಒತ್ತಾಯ ತರುತ್ತಿವೆ. ಆದ... ನಮ್ಮ ತಟಸ್ಥ ನೀತಿ ಮತ್ತು ಹಿತಕ್ಕೆ ಇ... ವಿರುದ್ಧವಾಗಿದೆ. ಯುದ್ಧರಂಗಕ್ಕಿಳಿದ ಮ... ದಿನವೇ ಈ ಸ್ಟಾಕ್‌ಹೋಮ್ ಭಗ್ನಾವಶೇ... ವಾಗಿಬಿಡುವುದು. ಆದರೆ ಮಿತ್ರರಾಷ್ಟ್ರಗಳಿ... ಇನ್ನೂ ಹೆಚ್ಚು ಸಹಾಯಕವಾಗುವಂಥ ಒಂ... ಯೋಜನೆಯನ್ನು ನಾನು ಮಾಡಿದ್ದೇನೆ. ಸಾ... ವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾನಬ... ಶಿಬಿರಗಳಲ್ಲಿರುವವರನ್ನು ಉಳಿಸಬೇಕೆಂದಿದ್ದೇ... ನೀವು ನನಗೆ ಸಹಾಯ ಮಾಡುವಿರಾ?" ಸ್ವೀ... ನ್ನಿನ ವಿದೇಶಮಂತ್ರಿ ಕ್ರಿಶ್ಚನ್ ಗುಂಥರ್ ಹೇ... ದನು.

ಕರ್‌ಸ್ಟೆನ್ ಸಂತೋಷದಿಂದ, ಉತ್ಸಾ... ದಿಂದ ಒಪ್ಪಿಕೊಂಡರು. ಸ್ಥಾನಬದ್ಧ ಶಿಬಿ... ಗಳಲ್ಲಿದ್ದ ಸಹಸ್ರಗಟ್ಟಲೆ ಕೈದಿಗಳನ್ನು ಸ್ವೀ... ನ್ನಿಗೆ ತರಲು ಅದಕ್ಕೊಂದು ಯೋಜನೆ ಮಾ... ದರು. ರೆಡ್‌ಕ್ರಾಸ್ ಸಂಸ್ಥೆಯ ಮಧ್ಯಸ್ಥಿ... ಯಿಂದ ಸ್ಥಾನಬದ್ಧರನ್ನು ಸ್ವೀಡನ್ನಿಗೆ ತರಬೇ... ಕೆಂದಾಯಿತು. ಆದರೆ ಇದಕ್ಕಾಗಿ ಹಿಮ್ಲರ... ಒಪ್ಪಿಗೆ ಪಡೆಯುವ ಮಹಾಕಠಿನ ಕಾರ್ಯ... ಹೊಣೆ ಕರ್‌ಸ್ಟೆನ್ನರ ಮೇಲೆ ಹೊರಿಸಲ್ಪಟ್ಟಿತ...

ಕರ್‌ಸ್ಟೆನ್ನರು ಹೆಲ್ಸಿಂಕಿಗೆ ಹೋಗಿ ಸರಕಾರ... ವರದಿಯನ್ನೊಪ್ಪಿಸಿ ಜರ್ಮನಿಗೆ ಮರಳಿದರು... ತನ್ನ ಹೆಂಡತಿ ಮತ್ತು ಮಗುವನು ಸಾ...

ನಾಲ್ಕು ಔಷಧಗಳಿಂದ ಕೂಡಿದ

'ಅನಾಸಿನ್'

ನೋವನ್ನು ಉಪಶಮನಗೊಳಿಸಲು ಅಧಿಕ ಉತ್ತಮವಾಗಿದೆ


1. 'ಅನಾಸಿನ್' ನೋವನ್ನು ಅತಿ ಶೀಘ್ರವಾಗಿ ಗುಣಪಡಿಸುತ್ತದೆ. ಡಾಕ್ಟರರ ಸುರಕ್ಷಿತ ಔಷಧದಂತೆ ಶಾಸ್ತ್ರೀಯ ಕ್ರಮದಲ್ಲಿ ಸಮ್ಮಿಲಿತವಾದ ನಾಲ್ಕು ಔಷಧಗಳಿಂದ ಕೂಡಿದ ಅನಾಸಿನ್ ತಲೆನೋವು, ಶೀತ, ಜ್ವರ, ಹಲ್ಲುನೋವು ಮತ್ತು ಸ್ನಾಯುಗಳ ನೋವನ್ನು ಸಂಪೂರ್ಣವಾಗಿ ಅತಿ ಶೀಘ್ರವಾಗಿ ಉಪಶಮನಗೊಳಿಸುತ್ತದೆ.

2. 'ಅನಾಸಿನ್' **ಗಾಬರಿಗೊಳಿಸುವ ದುರ್ಬಲ ನರಗಳಿಗೆ ಶಾಂತತೆಯನ್ನೀಯುತ್ತದೆ.** ಅನಾಸಿನ್ ನರಗಳ ಬಿಗಿತವನ್ನು ಬಹಳ ಪ್ರಭಾವಪೂರ್ಣವಾಗಿ ತೆಗೆದು ನೀವು ಆರಾಮದಲ್ಲಿರುವಂತೆ ಮಾಡುತ್ತದೆ.

3. 'ಅನಾಸಿನ್' **ನಿರುತ್ಸಾಹವನ್ನು ಹೋಗಲಾಡಿಸುತ್ತದೆ.** ಹೆಚ್ಚಾಗಿ ನೋವಿನೊಡನೆ ಬರುವ ನಿರುತ್ಸಾಹವನ್ನು ಅನಾಸಿನ್ ಹೋಗಲಾಡಿಸುತ್ತದೆ.

4. 'ಅನಾಸಿನ್' **ಜ್ವರವನ್ನು ಕಡಿಮೆ ಮಾಡುತ್ತದೆ.** ಅನಾಸಿನ್‌ನ ತಯಾರಿಕೆಯಲ್ಲಿ ಕ್ವಿನಿನ್ ಸೇರಿರುವುದರಿಂದ ಔಷಧಗಳ ಆ ಸಮ್ಮಿಲನವು ಜ್ವರವನ್ನು ತಗ್ಗಿಸುವುದಕ್ಕೆ ಅತ್ಯುತ್ತಮವಾಗಿದೆ.

* ನಿರ್ಮಲವಾಗಿ ಸೀಲ್ ಮಾಡಿದ ಸೆಲೋಫೇನ್ ಪ್ಯಾಕ್‌ನಲ್ಲಿ 2 ಬಿಲ್ಲೆಗಳೂ, ಭದ್ರವಾಗಿ ಪಿಲ್ಫರ್-ಪ್ರೂಫ್ ಕ್ರಮದಲ್ಲಿ ಮುಚ್ಚಲ್ಪಟ್ಟ ಸೀಸೆಯಲ್ಲಿ 32 ಬಿಲ್ಲೆಗಳೂ,—ಮನೆಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ— ದೊರೆಯುತ್ತವೆ.





Registered User: GEOFFREY MANNERS & CO. LIMITED.

KAN 2 44 (A)

ಹೋಮನಲ್ಲಿಡಬೇಕೆಂದು ಅವರಿಗೆ ಅನಿಸಿತಾದರೂ ಹಿಮ್ಲರನ ಪೂರ್ಣ ವಿಶ್ವಾಸ ತನ್ನಲ್ಲಿರುವುದು ಅಗತ್ಯವೆಂದು ಅವರು ಮನಗಂಡವರಾದ್ದರಿಂದ ತಾವೇನಾದರೂ ಹಾಗೆ ಮಾಡಿದರೆ ಅವನಿಗೆ ಸಂದೇಹವುಂಟಾದೀತೆಂದು ತಿಳಿದು ಹೆಂಡತಿ ಮಗಳನ್ನು ತಮ್ಮ ಸಂಗಡವೇ ಇಟ್ಟುಕೊಂಡರು.

ಅವರು ಮಾಡಿದ್ದು ಸರಿಯಾಗಿತ್ತು. ನವೆಂಬರ್ ೨೬ ರಂದು ಹಿಮ್ಲರ್ ಅವರೊಡನೆ ಫೋನಿನಲ್ಲಿ ಮಾತಾಡುವಾಗ ಮೊದಲಿಗೇ "ಹೆಂಡತಿ ಮಗಳನ್ನು ಸ್ವೀಡನ್ನಿನಲ್ಲಿ ಬಿಟ್ಟುಬಂದಿರಿ ತಾನೇ ?" ಎಂದು ಸಹಜ ವಿಚಾರಿಸುವವರಂತೆ ಕೇಳಿದ.

"ಇಲ್ಲ. ಇಲ್ಲಿಯೆ ನನ್ನ ಬಳಿ ಇದ್ದಾರೆ."

"ಹಾದೇ? ಸಂತೋಷ. ಸಂತೋಷ. ನಿಮಗಿನ್ನೂ ಜರ್ಮನ್ನರ ವಿಜಯದಲ್ಲಿ ನಂಬಿಕೆಯಿದೆ ಎಂದಾಯಿತು. ಕ್ಷಮಿಸಿ. ನಿಮ್ಮ ಬಗ್ಗೆ ನಾನು ಅನೇಕ ಸುದ್ದಿಗಳನ್ನು ಕೇಳಿದ್ದೇನೆ. ಆದರೆ ಈಗ ನೀವು ಸನ್ಮಿತ್ರರು ಎಂದು ಖಚಿತವಾಯಿತು."

ಇನ್ನು ತಾನು ವಹಿಸಿಕೊಂಡ ಕಾರ್ಯವನ್ನು ಹೇಗೆ ಮಾಡಬೇಕು ಎಂದು ಕರ್‌್ಸಟೆನ್ ಯೋ[...] ನೆಗೊಳಗಾದರು. ಗೆಸ್ಟಪೊದವರ ಕೈಯಿಂ[...] ಜನರನ್ನು ಪಾರುಮಾಡುವುದೆಂದರೆ ಮೃತ್ಯುವಿ[...] ಕೈಯಿಂದ ಪಾರುಮಾಡುವಂತೆಯೆ ಇತ್ತು[...] ಕರ್‌್ಸಟೆನ್ನರಿಗೆ ಈ ಕಾರ್ಯದಲ್ಲಿ ಸಹಾಯರ ಅಗ[...] ವಿತ್ತು. ಹಿಮ್ಲರನ ಜೊತೆಯಲ್ಲಿ ನಿಕಟವರ್ತಿ[...] ಳಾಗಿ ಕೆಲಸ ಮಾಡುತ್ತಿದ್ದ ಕರ್ನಲ್ ವಾಲ್ಟ[...] ಸ್ಕೆಲೆನ್‌ಬರ್ಗ್ ಮತ್ತು ಜನರಲ್ ಗೊಟ್ಲೊ[...] ಬರ್ಜರ್ ಎಂಬಿಬ್ಬರ ವಿಚಾರ ಅವರಿಗೆ ಹೊ[...] ಯಿತು.

ಮೊದಮೊದಲು ಕರ್‌್ಸಟೆನ್ನರನ್ನು ಕಂ[...] ಸೇರದ ಬರ್ಜರ್ ಹಿಮ್ಲರನ ಸಲಹೆಯಂತೆ ಅ[...] ರಿಂದ ತನ್ನ ಕಾಯಿಲೆಗೆ ಉಪಚಾರ ಮಾಡಿ[...] ಕೊಳ್ಳಬೇಕಾಯಿತು. ಉಪಚಾರ ಮಾಡಿ[...] ಕೊಳ್ಳುತ್ತಿದ್ದಂತೆ ಅವನಿಗೆ ಕರ್‌್ಸಟೆನ್ನರ ಬ[...] ಸ್ನೇಹಾದರವೆನಿಸತೊಡಗಿದವು. ಎಸ್‌ಬ[...]

ಅಧಿಕಾರಿಯಾಗಿದ್ದರೂ ಬರ್ಜರಗೆ ಗೆಸ್ಟಪೊದವರ ಅತ್ಯಾಚಾರ ಸೇರಿಕೆಯಾಗುತ್ತಿರಲಿಲ್ಲ. ಬರ್ಜರ್‌ನಿಗೆ ೫೦ ವರ್ಷಗಳಾಗಿದ್ದವು.

ಸ್ಕೆಲೆನ್‌ಬರ್ಗ್ ಬೇರೆ ತರದ ಮನುಷ್ಯನಾಗಿದ್ದ. ತರುಣನಾಗಿದ್ದ. ಈತ ಸುಸಂಸ್ಕೃತನಾಗಿದ್ದ. ಈಗಾಗಲೇ ಕರ್ನಲ್‌ನಾಗಿದ್ದ ಈತ ಜನರಲ್‌ನಾಗುವ ಆಶೆಯಿಂದ ಹಿಮ್ಲರನ ಕೃಪೆಗಾಗಿ ಪ್ರಯತ್ನಿಸುತ್ತಿದ್ದ. ಎರಡು ವರ್ಷಗಳ ಹಿಂದೆ ಅವನನ್ನು ತಪಾಸಿಸಲು ಕರ್ಸ್ಟೆನ್ನರಿಗೆ ಹೇಳಿ ಹಿಮ್ಲರ್ "ಅವನನ್ನು ಕಾಳಜಿಯಿಂದ ತಪಾಸಿಸಿ. ಆತ ಸಮರ್ಥ. ಆದರೆ ಅವನ ಅತಿ ಮಹತ್ವಾಕಾಂಕ್ಷೆಯಿಂದ ನನಗೆ ಕಾಳಜಿಯಾಗಿದೆ" ಎಂದಿದ್ದ.

ಸ್ಕೆಲೆನ್‌ಬರ್ಗ್ ಕರ್ಸ್ಟೆನ್ನರ ಬಳಿಗೆ ಬಂದಾಗ ಅವರಿಬ್ಬರೂ ಒಬ್ಬರನ್ನೊಬ್ಬರು ಮೌನವಾಗಿ ದೃಷ್ಟಿಯಿಂದಲೇ ಅಳೆದು ನೋಡಿದರು. ಸ್ಕೆಲೆನ್‌ಬರ್ಗನ ಪ್ರಕೃತಿಯ ಬಗ್ಗೆ ಮಾತೆತ್ತದೆ ಕರ್ಸ್ಟೆನ್ನರು "ನಿಮ್ಮ ಭೆಟ್ಟಿಯಾದದ್ದು ಸಂತೋಷ ಕರ್ನಲ್. ನಿಮ್ಮ ತ್ವರಿತ ಯಶಸ್ಸಿನಿಂದಾಗಿ ಹಿಮ್ಲರನ ಜನರಲ್ಲನೇಕರು ನಿಮ್ಮ ಮೇಲೆ ಅಸೂಯೆ ಕಾರುತ್ತಿದ್ದಾರೆ. ನಾವು ಮಿತ್ರರಾದರೆ ನಾನು ನಿಮಗೆ ತುಂಬ ಸಹಾಯ ಮಾಡಬಲ್ಲೆ" ಎಂದರು.

"ಹೌದು. ಡಾಕ್ಟರ್, ಬಲ್ಲೆ ನಾನು ಅದನ್ನೆಲ್ಲ. ನಿಮ್ಮ ಸ್ನೇಹಯಾಚನೆಗಾಗಿಯೆ ಬಂದಿರುವೆ. ನಾನೇನು ಮಾಡಲಿ ಹೇಳಿ?"

ಅಂದಿನಿಂದ ಸ್ಕೆಲೆನ್‌ಬರ್ಗ್ ಕರ್ಸ್ಟೆನ್ನರ ಕಾರ್ಯಗಳಿಗೆ ಸಹಾಯಮಾಡುತ್ತಿದ್ದ.

ಹಿಮ್ಲರನ ಬಳಿ ಮಾತೆತ್ತುವ ಮೊದಲು ಕರ್ಸ್ಟೆನ್ನರು ತನ್ನ ಯೋಜನೆಯನ್ನು ಈ ಇಬ್ಬರ ಮುಂದಿಟ್ಟರು. ಅವರು ಎಣಿಸಿದ್ದಕ್ಕಿಂತಲೂ ಅವರಿಬ್ಬರಿಂದ ಅವರಿಗೆ ಹೆಚ್ಚು ಬೆಂಬಲ ಸಿಕ್ಕಿತು. ಹಿಟ್ಲರನ ಕಥೆ ಮುಗಿದಂತೆಯೆ ಎಂದುಕೊಂಡ ಸ್ಕೆಲೆನ್‌ಬರ್ಗನಿಗೆ ಸಹಸ್ರಾರು ಕೈದಿಗಳನ್ನು ರಕ್ಷಿಸಿದರೆ ಮಿತ್ರರಾಷ್ಟ್ರಗಳಿಗೆ ಜಯವಾದಾಗ ಅದು ತನಗೆ ಅನುಕೂಲವಾದೀತು ಎಂದೆನಿಸಿತು. ಬರ್ಜರನಿಗೂ ನಡೆದಿದ್ದ ಅತ್ಯಾಚಾರಗಳಿಂದ ಜುಗುಪ್ಸೆಯುಂಟಾಗಿ ಬಿಟ್ಟಿತ್ತು. ಹೀಗಾಗಿ ಬ್ರ್ಯಾಂಡ್‌ನನ್ನು ಹಿಡಿದು ಕರ್ಸ್ಟೆನ್ನರಿಗೆ ಮೂವರು ಮಿತ್ರರು— ನಾಝಿ ಆಳಿಕೆಯಲ್ಲಿ ಮಹತ್ವದ ಸ್ಥಾನದಲ್ಲಿದ್ದ ಮೂವರು ಮಿತ್ರರು ದೊರೆತಂತಾಯಿತು.

ಹೇಡ್ರಿಚ್‌ನ ಸ್ಥಾನಕ್ಕೆ ಬಂದಿದ್ದ ಗೆಸ್ಟಪೊ ಪ್ರಮುಖ ಕಾಲ್ಟೆನ್‌ಬ್ರನರ್ ಮತ್ತು ಅವನ ಅಧಿಕಾರಿಗಳೆಲ್ಲ ಕರ್ಸ್ಟೆನ್‌ರನ್ನು ದ್ವೇಷಿಸುತ್ತಿದ್ದರು: ಹಿಂಸಾಪ್ರಿಯನಾಗಿದ್ದ ಕಾಲ್ಟೆನ್‌ಬ್ರನರನಂತೂ ಕರ್ಸ್ಟೆನ್ ಯಾರೇ ಆಗಲಿ ಒಬ್ಬನನ್ನು ರಕ್ಷಿಸಿದಾಗ ಉರಿದೇಳುತ್ತಿದ್ದ. "ಆ ದುಷ್ಟನ ಮೇಲೆ ಕಣ್ಣಿರಲಿ. ಆತ ನಿನ್ನ ಕೊಲೆ ಮಾಡಿಸಲೂ ಸಿದ್ಧನಿದ್ದಾನೆ" ಎಂದು ಬ್ರ್ಯಾಂಡ್ ಕರ್ಸ್ಟೆನ್ನರಿಗೆ ಎಚ್ಚರಿಕೆಯಿತ್ತಿದ್ದ.

ಅನೇಕ ತಿಂಗಳುಗಳ ವರೆಗೆ ಹಿಮ್ಲರನ ಮುಂದೆ ಯಾವ ನಿಶ್ಚಿತ ಸೂಚನೆಗಳನ್ನೂ ಕರ್ಸ್ಟೆನ್ ಇಡಲಿಲ್ಲ. ಡೆನ್ಮಾರ್ಕ್, ನಾರ್ವೆ ಮತ್ತು ಹಾಲಂಡುಗಳ ಸ್ಥಾನಬದ್ಧ ಶಿಬಿರಗಳಲ್ಲಿರುವ ಕೈದಿಗಳಲ್ಲಿ ಅನೇಕರು ಜರ್ಮನ್ ಕುಲದವರು ಎಂದು ಮಾತ್ರ ಸಾಧ್ಯವಿದ್ದಾಗಲೆಲ್ಲ ಹೇಳುತ್ತಿದ್ದರು. ೧೯೪೪ರ, ಜೂನ್ ತಿಂಗಳಲ್ಲಿ ಮಿತ್ರರು ನಾರ್ಮಂಡಿಯ ಮೇಲೆ ದಾಳಿ ಮಾಡಿದಾಗ ಮಾತ್ರ ಅವರು ಹಿಮ್ಲರನ ಮೇಲೆ ತಮ್ಮ ಪ್ರಭಾವ ಕೆಡವಲು ಎಲ್ಲ ಪ್ರಯತ್ನ ಮಾಡಹತ್ತಿದರು. ನಿಧಾನವಾಗಿಯೇ ಆದರೂ ಹಿಮ್ಲರನ ಮೇಲಿನ ಹಿಟ್ಲರನ ಪ್ರಭಾವ ಕರಗತೊಡಗಿತು. "ಹೌದು. ನೀವನ್ನುವುದು ನಿಜ. ನಾವು ಇಡೀ ಜಗತ್ತನ್ನು ಕೊಲ್ಲಬಾರದು. ಜರ್ಮನ್ ಕುಲದ ಮೇಲೆ ನಾವು ಔದಾರ್ಯ ತೋರಿಸಬೇಕು" ಎಂದು ಹಿಮ್ಲರ್ ಒಂದು ದಿನ ಹೇಳಿದ.

ಆದರೆ ಮುಂದೆ ಕೆಲವಾರಗಳ ನಂತರ ಜರ್ಮನ್ ಕರ್ನಲ್‌ನೊಬ್ಬ ಬಾಂಬು ಎಸೆದು ಹಿಟ್ಲರನನ್ನು ಕೊಲ್ಲಲೆತ್ನಿಸಿದಾಗ ಹಿಮ್ಲರನ ಹಿಟ್ಲರ್ ಭಕ್ತಿ ಮೊದಲಿನ ಉಗ್ರರೂಪ ತಾಳಿತು. ಈ ಆಕ್ರಮಣಕ್ಕೆ ಪ್ರತಿಯಾಗಿ ೨೦೦೦ ಜರ್ಮನ್ ಅಧಿಕಾರಿಗಳನ್ನು ಬಂಧಿಸಲು ಹಿಟ್ಲರ್ ಹಿಮ್ಲರನಿಗೆ ಆಜ್ಞೆಯಿತ್ತಾಗ ಹಿಮ್ಲರ್ ಮತ್ತು ಕಾಲ್ಟೆನ್‌ಬ್ರನರ್ ನಿಷ್ಕರುಣಿಗಳಾಗಿ ಅಪರಾಧಿಗಳು ನಿರ

ಪರಾಧಿಗಳು ಎನ್ನದೆ ಅತ್ಯಾಚಾರಕ್ಕಾರಂಭಿ
ದರು.

ಈ ಕಾರ್ಯದಲ್ಲಿ ತೊಡಗಿದ್ದಾಗಲೇ ಅಗಸ
೧ ರಂದು ಹಿಮ್ಲರ್ ಮತ್ತೆ ನೋವಿನಿಂದ ನ
ಳುತ್ತ ಕರ್ಸ್ಟೆನ್ನರಿಗೆ ಅವಸರದ ಕರೆ ಕಳಿಸಿ
ಬರ್ಲಿನ್ ಬಿಟ್ಟು ಹೊರಡಲು ಕರ್ಸ್ಟೆನ್ನ
ತಯಾರಿ ನಡೆಸಿದ್ದಾಗಲೇ ಮೋಟರ್‌ಸೈಕಲ್ಲಿ
ಮೇಲೆ ಧಾವಿಸುತ್ತ ಬಂದ ಸೈನಿಕನೊ
"ಸ್ಕೆಲೆನ್‌ಬರ್ಗರು ಪತ್ರ ಕೊಟ್ಟಿದ್ದಾರೆ" ಎಂ
ಪತ್ರ ಕೊಟ್ಟ.

"ಎಚ್ಚರಿಕೆ. ಹಿಮ್ಲರನ ಕೃಪೆ ನಿಮ್ಮ ಮೇಲಿ
ವುದಾದರೂ ನಿಮ್ಮನ್ನು ಕೊಲ್ಲಿಸಲು ಕಾಲ್ಟೆನ
ಬ್ರನರ್ ಹೊಂಚುಹಾಕುತ್ತಿದ್ದಾನೆ. ನೀವು
ಸಲ ಎಂದಿನಂತೆ ಓಗರ್ಾನಿನ್‌ಬರ್ಗದ ಮೇಲಿಂ
ಹೋಗಬೇಡಿ. ಹೋದರೆ ಮರಣ ಬಂದೀತ
ಎಂದಿತ್ತು ಪತ್ರದಲ್ಲಿ.

ಕರ್ಸ್ಟೆನ್ನರು ಹಾಗೇ ಮಾಡಿದರು. ಹಾ
ಯಲ್ಲಿ ಅವರಿಗೇನೂ ಆಪತ್ತು ಒದಗಲಿಲ್ಲ. ಅ
ಕಾಶ ಸಿಕ್ಕೊಡನೆ ಕರ್ಸ್ಟೆನ್ನರು ಹಿಮ್ಲರನಿ
ಸ್ಕೆಲೆನ್‌ಬರ್ಗನ ಚೀಟಿ ತೋರಿಸಿದರು. ಹಿಮ್ಲರ
ಕೂಡಲೆ ಈ ವಿಷಯದ ನಿಜಾಂಶ ತಿಳಿಯಲೆಂದ
ಬ್ರಾಂಡ್‌ನನ್ನು ಬರ್ಲಿನ್ನಿಗೆ ಕಳಿಸಿದ.

ಮರುದಿನವೇ ಮರಳಿಬಂದ ಬ್ರಾಂಡ್ ಸ್ಕೆಲೆ
ಬರ್ಗ್ ನಿಜವನ್ನೆ ಹೇಳಿದ್ದಾನೆಂದು ತಿಳಿಸಿದ
ಓಗರ್ಾನಿನ್‌ಬರ್ಗದಲ್ಲಿ ಕರ್ಸ್ಟೆನ್ ಮತ
ಅವರ ಡ್ರೈವರನನ್ನು ಗುಂಡಿಕ್ಕಲು ಜನರು ನೇಮಿ
ಸಲ್ಪಟ್ಟಿದ್ದರು. ಗುಂಡಿಕ್ಕಿದ ಮೇಲೆ ಕಾವಲ
ಸೈನಿಕರ ಅಧಿಕಾರಿ ಕಾಲ್ಟೆನ್‌ಬ್ರನರಿಗೆ "ಬಂದ
ಕಾರು ಅಪ್ಪಣೆ ಮಾಡಿದರೂ ನಿಲ್ಲಲಿಲ್ಲ. ಅ
ಕ್ಕಾಗಿ ಅದರ ಮೇಲೆ ಗುಂಡುಹಾರಿಸಿದೆವು
ಎಂದು ವರದಿ ಮಾಡಲಿದ್ದ. ಆಗ ಕಾಲ್ಟೆನ
ಬ್ರನರ್ ಹಿಮ್ಲರನಿಗೆ ಕರ್ಸ್ಟೆನ್ನರಿಗೊದಗಿ
ಅಪಮೃತ್ಯುವಿನ ಬಗ್ಗೆ ವಿಷಾದಪೂರ್ವಕ ಸುದ
ಕಳಿಸಲಿದ್ದ.

ಈ ಸುದ್ದಿ ಮುಟ್ಟಿದಾಗ ಹಿಮ್ಲರ್ ಚಿಕಿ
ಹೊಂದುತ್ತಿದ್ದ. ಆತ ಕೋಪದಿಂದ ನಡು
ಎದ್ದು "ನಾನೀಗ ಊಟ ಮಾಡಲಿದ್ದೇನ
ಊಟಕ್ಕೆ ಕಾಲ್ಟೆನ್‌ಬ್ರನರನನ್ನು ಆಮಂತ್ರಿಸ

ಎಂದು ಬ್ರ್ಯಾಂಡ್‌ನಿಗೆ ಹೇಳಿದ.

ಊಟ ಮೌನವಾಗಿಯೆ ಸಾಗಿತು. ಕೊನೆಗೆ ಕಾಲ್ಟೆನ್‌ಬ್ರನರ್ ತನ್ನ ದ್ವೇಷವನ್ನು ಹೆಚ್ಚು ಕಡಿಮೆ ಬಹಿರಂಗಪಡಿಸುತ್ತಲೇ ಕರ್ಸ್ಟೆನ್‌ರೊಡನೆ ಸಂಭಾಷಣೆ ಶುರುಮಾಡಿದ. ಆಗ ಹಿಮ್ಲರ್ ನಡುವೆ ಬಾಯಿಹಾಕಿ "ಕಾಲ್ಟನ್ ಬ್ರನರ್, ಇಲ್ಲಿ ಕೇಳು. ಕರ್ಸ್ಟೆನ್ ಸತ್ತ ಮೇಲೆ ನೀನು ಒಂದು ತಾಸೂ ಬದುಕಿರುತ್ತಿರಲಿಲ್ಲ" ಎಂದ.

ಕಾಲ್ಟೆನ್‌ಬ್ರನರ್‌ನ ಮುಖ ಬಿಳುಪೇರಿ ಹೋಯಿತು.

ಹಿಮ್ಲರ್ ಹೇಳಿದ: "ಡಾಕ್ಟರ್ ಕರ್ಸ್ಟೆನ್ ಮತ್ತು ನೀನು ಇಬ್ಬರೂ ದೀರ್ಘಕಾಲ ಬದುಕಿರುತ್ತೀರಿ ಎಂದಾಶಿಸಿದ್ದೇನೆ. ನೀವಿಬ್ಬರೂ ನನಗೆ ಅಗತ್ಯವಾಗಿದ್ದೀರಿ. ಯಾವ ಬಗೆಯ ಅಪಘಾತವಾದರೂ ನಾನು ಸಹಿಸೆನು. ಕರ್ಸ್ಟೆನ್‌ರಿಗೇನಾದರೂ ಆದಲ್ಲಿ ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ತಿಳಿಯಿತೇ ಕಾಲ್ಟೆನ್‌ಬ್ರನರ್ ?"

"ಹೌದು."

ಕರ್ಸ್ಟೆನ್ನರ ಕೊಲೆಯ ಈ ಪ್ರಯತ್ನದಿಂದ ಅವರ ಬೆಲೆ ಹಿಮ್ಲರನ ದೃಷ್ಟಿಯಲ್ಲಿ ಇನ್ನಿಷ್ಟು ಏರಿತು. ಈ ಸಂಧಿಸಾಧಿಸಿ ಸ್ವೀಡಿಶ್ ಜನರ ಪ್ರಾಣ ಉಳಿಸುವ ತಮ್ಮ ಹಂಚಿಕೆಯನ್ನ ಕರ್ಸ್ಟೆನ್ನರು ಧೈರ್ಯದಿಂದ ಮುಂದುವರಿಸಿದರು.

ಆದರೆ ಯಶಸ್ಸು ಅವರಿಗೆ ಸುಲಭವಲ್ಲಿ ಬರಲಿಲ್ಲ. ೧೯೪೪, ಡಿಸೆಂಬರ್ ಎರಂದು ಅವರು ಪಟ್ಟಿಗೆದ್ದು ಒದರಾಡಿದ್ದರ ಪರಿಣಾಮವಾಗಿ ಅವರು ತಮ್ಮ ಕಾರ್ಯದಲ್ಲಿ ಬಹುಮಟ್ಟಿಗೆ ವಿಜಯ ಸಂಪಾದಿಸಿದ್ದು ಒಂದು ವಿಚಿತ್ರ ಯೋಗವೇ ಸರಿ.

ಕಾರ್ಲ್‌ಪೆಂಘುಲ್ ಕರ್ಸ್ಟೆನ್‌ರ ಮಿತ್ರ. ಹಿಟ್ಲರನ ಕೊಲೆಯ ಸಂಚಿನಲ್ಲಿದ್ದನೆಂಬ ಆರೋಪಕ್ಕಾಗಿ ಆತ ಬಂಧಿಸಲ್ಪಟ್ಟು ಮರಣದಂಡನೆಗೆ ಗುರಿಯಾಗಿದ್ದ, ಅಪರಾಧ ಬಲು ಹಿರಿದಾಗಿದ್ದುದರಿಂದ ಅವನ ಬಿಡುಗಡೆಯ ಮಾತನ್ನೆತ್ತುವಂತಿರಲಿಲ್ಲ. ಆದರೆ ವೆಂಘುಲ್‌ನ ಪ್ರಾಣವುಳಿಸುವೆನೆಂದು ಹಿಮ್ಲರನಿಂದ ಕರ್ಸ್ಟೆನ್ನರು ವಚನ ಪಡೆದುಕೊಂಡರು. ಹಿಮ್ಲರ್ ತನ್ನ ವಚನವು ಪ್ರಮಾಣವೆಂದು ಹೇಳಿದ್ದ.

ಆದರೆ ಡಿಸೆಂಬರ್ ಎರಂದು ವೆಂಘುಲ್‌ನನ್ನು ಗಲ್ಲಿಗೇರಿಸಿದ ಸುದ್ದಿ ಕರ್ಸ್ಟೆನ್ನರಿಗೆ ತಿಳಿಯಿತು. ಅವರಿಗಾದ ಆಘಾತ ಎಷ್ಟು ಪ್ರಬಲವಿತ್ತೆಂದರೆ ಅವರು ಹಿಂದುಮುಂದಿನ ಯೋಚನೆಮಾಡದೆ ಧಡಾರೆಂದು ಹಿಮ್ಲರನ ಕೋಣೆಯ ಬಾಗಿಲು ತೆಗೆದು ಉರಿಮುಖದಿಂದ ಅವನೆದುರು ನಿಂತರು.

"ಹ್ಹುಂ! ನಿಮ್ಮ ವಚನದ ಬೆಲೆ ಇಷ್ಟೇಯೇನು? ಜರ್ಮನಿಯ ಮಹಾ ಧುರೀಣನೊಬ್ಬನ ಪೂರ್ತಿ ಬೆಲೆ ಇದೇ ತಾನೇ?"

ಹಿಮ್ಲರನ ತುಟಿ ನಡುಗಿತು. ಮುಖ ತಗ್ಗಿತು. ಯಾವ ಮನುಷ್ಯನ ಪ್ರೀತಿ ಗೌರವಗಳಿಗಾಗಿ ಆತ ಹಂಬಲಿಸುತ್ತಿದ್ದನೊ ಅಂಥವನ ಮುಂದೆ ಕೀಳಾಗುವುದು ಅವನಿಗೆ ಅಸಹ್ಯವಾಯಿತು. "ನನ್ನ ಮಾತು ನಂಬಿ. ನಾನು ಏನನ್ನೂ ಮಾಡಲಾರದವನಾಗಿದ್ದೆ. ಏನು ಬೇಕಾದ್ದಾದರೂ ವೆಂಘುಲ್ ಸಾಯಲೇಬೇಕೆಂದು ಹಿಟ್ಲರ್ ಹಟಹಿಡಿದಿದ್ದ."

ಕರ್ಸ್ಟೆನ್ನರು ಮಾತಾಡದೆ ಹೊರಟುನಿಂತರು. "ಹೋಗಬೇಡಿ, ಹೋಗಬೇಡಿ, ನನ್ನ ಮಾತು ಕೇಳಿ."

ಆದರೆ ಕರ್ಸ್ಟೆನ್ನರು ಕೇಳಲಿಲ್ಲ. ಬಾಗಿಲನ್ನು ಮತ್ತೆ ಧಡಾರನೆ ಮುಚ್ಚಿಕೊಂಡು ಅವರು ಹೋಗಿಬಿಟ್ಟರು.

ಹೊರಗಿನ ಕಚೇರಿಯಲ್ಲಿ ಬ್ರ್ಯಾಂಡ್ ಅವರನ್ನು ಸಮಾಧಾನಪಡಿಸಿದ. ಹಿಟ್ಲರನ ಮುಂದೆ ಹಿಮ್ಲರನ ಆಟ ನಡೆಯುವುದಿಲ್ಲವೆಂದು ಆತ ತಿಳಿಸಿದಾಗ ಕರ್ಸ್ಟೆನ್ನರು ಶಾಂತರಾಗಿ ಪುನಃ ಹಿಮ್ಲರನ ಬಳಿಗೆ ಹೋಗಿ ಹೇಳಿದರು: "ನಿಮ್ಮ ಸರ್ವಾಧಿಕಾರವಿರುವಲ್ಲಿ ನೀವು ನಿಮ್ಮ ಮಾತು ನಡೆಸಿಕೊಟ್ಟರೆ ವೆಂಘುಲನ ವಿಷಯದಲ್ಲಿ ಹಿಟ್ಲರನ ಮುಂದೆ ನಿಮ್ಮದು ನಡೆಯಲಿಲ್ಲ ಎಂದು ನಂಬುತ್ತೇನೆ"

"ಸರಿ. ಆಣೆ ಮಾಡಿ ಹೇಳುತ್ತೇನೆ, ಏನು ಆಗಬೇಕೊ ಹೇಳಿ."

೫೦ ಜನ ನಾರ್ವೆಜಿಯನ್ ವಿದ್ಯಾರ್ಥಿಗಳು, ೫೦ ಜನ ಡೇನಿಶ್ ಪೋಲೀಸರು, ೩೦೦೦ ಡಚ್, ಫ್ರೆಂಚ್, ಬೆಲ್ಜಿಯನ್ ಮತ್ತು ಪೋಲೀಶ್

ಸ್ತ್ರೀಯರನ್ನು, ಸ್ವೀಡನ್ ಅವರನ್ನು ಕರೆದುಕೊ
ಳ್ಳಲು ಸಿದ್ಧವಾದ ಕೂಡಲೆ ಬಿಡುಗಡೆ ಮಾಡು
ನೆಂದೂ ಮಿತ್ರರಾಷ್ಟ್ರಗಳ ಬಾಂಬ್ ದಾಳಿ
ಕ್ಷೇತ್ರದಿಂದ ಎಲ್ಲ ಸ್ಕ್ಯಾಂಡಿನೇವಿಯನ್ ಸ
ಯಾಳುಗಳನ್ನು ದೂರ ಸಾಗಿಸುವೆನೆಂದ
ಹಿಮ್ಲರ್ ವಚನವಿತ್ತ.

ಕರ್ಸ್ಟೆನ್ನರಿಗೆ ಇನ್ನೂ ಪೂರ್ತಿ ಸಮಾಧಾ
ವಾಗಲಿಲ್ಲ. ೨೦೦೦ ಯಹೂದ್ಯರನ್ನು ಕರೆಸಿಕೊ
ಳ್ಳಲು ಸ್ವೀಜರ್ಲಂಡ್ ಈಗಿಂದೀಗ ಸಿದ್ಧವಿತ್ತ
ಆದರೆ ಹಿಮ್ಲರ್ ಗಾಬರಿಯಿಂದ ಹೇಳಿ
"ಅಯ್ಯೋ ಸಾಧ್ಯವಿಲ್ಲ. ಅವರನ್ನು ಬಿಟ್ಟುಕೊಟ್ಟ
ಹಿಟ್ಲರ್ ನನ್ನನ್ನು ನಾನು ನಿಂತಲ್ಲಿಯೇ ಗಲ್ಲಿಗೇರ
ಬಿಡುತ್ತಾನೆ."

ಆದರೆ ಕರ್ಸ್ಟೆನ್ ಮತ್ತೂ ಮತ್ತೂ ವಿನ
ಮಾಡಿಕೊಂಡಾಗ "ನಾನು ೨೦೦೦ ಹೆಚ್ಚಂ
೩೦೦೦ ಜನರನ್ನು ಬಿಡುಗಡೆ ಮಾಡು
ಅದಕ್ಕೂ ಹೆಚ್ಚಾಗಿ ದಯವಿಟ್ಟು ಕೇಳಬೇಡಿ
ಎಂದ ಹಿಮ್ಲರ್.

ಮುಂದೆ ಎರಡು ತಿಂಗಳವರೆಗೂ ಹಿಮ್ಲರ್
ವಚನವನ್ನು ಮರೆತವನಂತಿದ್ದ. ಆಮೇಲೊಂ
ದಿನ ೨೭೦೦ ಯಹೂದ್ಯರನ್ನು ಗ್ಯಾಸ್ ಚೇಂ
ನಲ್ಲಿ ಕೊಲ್ಲಿಸುವ ಅಪ್ಪಣೆ ಬಂತು. ಈ ಅಭಾ
ರನ್ನು ತುಂಬಿಕೊಂಡ ಟ್ರೇನು ಹೊರಟು ನಿ
ತಿತ್ತು. ಇವರನ್ನೊಯ್ಯುತ್ತಿದ್ದ ಅಧಿಕಾರಿ ಹೊ
ಡುವ ಅಪ್ಪಣೆ ಕೊಡಲು ಹಿಮ ರನ ಕಚೇ
ಫೋನ್ ಮಾಡಿ ಕೇಳಿಕೊಂಡ.

ಈ ವಿಷಯ ತಿಳಿಸಿದ ಬ್ರಾಂಡನಿಗೆ ಹಿಮ್ಲ
ಕೇಳಿದ :

"ಎಷ್ಟೆಂದಿ ? ೨೭೦೦?" ಈ ಸಂಖ್ಯೆ ಅ
ನೆನಪನ್ನು ಪ್ರಚೋದಿಸಿತು. ಆತ "ಸರಿ.
ಟ್ರೇನನ್ನು ಪೂರ್ವಕ್ಕೆ ಕಳಿಸುವ ಬದಲು ಸ್ವಿ
ರ್ಲಂಡಿನ ಗಡಿಗೆ ಕಳಿಸು. ಸ್ವಿಝರ್ಲಂ
ಅಧಿಕಾರಿಗಳಿಗೆ, ಗೆಸ್ಟಪೊದವರಿಗೆ ಮತ್ತು ನ
ಗಡಿಕಾವಲಿನವರಿಗೆ ಈ ವಿಷಯ ತಿಳಿಸು" ಎಂ

ಹಿಮ್ಲರ್ ಪ್ರಸನ್ನಚಿತ್ತದಿಂದ "ವ್ಹಾ! ೨೭೦
ಯಾರೊ ಬೇಕಂತಲೇ ಈ ಸಂಖ್ಯೆಯನ್ನು ಒ
ಸಿರುವಂತೆ ಕಾಣುತ್ತದೆ. ಬಹಳ ಹೆಚ್ಚೂ ಇ
ಕಡಿಮೆಯೂ ಇಲ್ಲ. ಒಬ್ಬ ಒಳ್ಳೆಯ ಡಾಕ

ಹುಚ್ಚನ್ನು ತಣಿಸಲು ಅಗತ್ಯವಾದಷ್ಟೇ ಇದೆ."

ಡಾಕ್ಟರರ ಈ ಹುಚ್ಚು ಆ ಹತಭಾಗ್ಯ ೨೭೦೦ ಜನರಿಗೆ ಅಮೃತವಾಯಿತು. ಅವರೆಲ್ಲ ಸಾವಿನ ಬದಲು ಪ್ರಾಣವನ್ನೂ ಸೆರೆಮನೆಯ ಬದಲು ಸ್ವಾತಂತ್ರ್ಯವನ್ನೂ ಸ್ವಿಟ್ಜರ್ಲ್ಯಾಂಡಿನಲ್ಲಿ ಪಡೆದರು.

ಜರ್ಮನಿಯ ಮೇಲಿನ ದಿಗ್ಬಂಧನ ಬಿಗಿಯಾದಂತೆ ಹಿಟ್ಲರನ ಹುಚ್ಚು ರೌದ್ರ ಮಿತಿಮೀರಿತು. ಶತ್ರು ಸೈನ್ಯ ಎಂಟು ಕಿಲೊಮಿಟರುಗಳಷ್ಟು ದೂರದಲ್ಲಿ ಬಂದಾಗ ಸ್ಥಾನಬದ್ಧ ಶಿಬಿರಗಳನ್ನು ಮದ್ದಿನಿಂದ ಹಾರಿಸಿ ಬಿಡಲು ಆತ ಹಿಮ್ಲರನಿಗೆ ಅಪ್ಪಣೆ ಮಾಡಿದ್ದ. ಸ್ಥಾನಬದ್ಧ ಶಿಬಿರಗಳಲ್ಲಿ ೮ ಲಕ್ಷ ಸೆರೆಯಾಳುಗಳಿದ್ದುದರಿಂದ ಈ ನರಹತ್ಯೆಯನ್ನು ತಡೆಯಲು ಮಿತ್ರರಾಷ್ಟ್ರಗಳು ಸ್ವೀಡನ್ನನ್ನು ಬಿನ್ನವಿಸಿಕೊಂಡವು. ಸ್ವೀಡನ್ನಿನ ಅಧಿಕಾರಿಗಳು ಕರ್ಸ್ಟೆನ್ನರಿಗೆ ವಿನಂತಿಮಾಡಿಕೊಂಡರು.

"ಈ ಮಾತು ಹೌದೇ?" ಎಂದು ಒಂದು ದಿನ ಮಾಲೀಸು ಮಾಡುತ್ತಿದ್ದಾಗ ಕರ್ಸ್ಟೆನ್ ಕೇಳಿದರು.

"ಹೌದು. ನಾವು ಸೋಲುವುದಾದರೆ ನಮ್ಮ ಶತ್ರುಗಳು ನಮ್ಮೊಂದಿಗೆ ಸಾಯಬೇಕು" ಎಂದ ಹಿಮ್ಲರ್.

"ಹಿಂದೆ ಆಗಿಹೋದ ಜರ್ಮನ್ ಮಹಾನಾಯಕರು ಹೀಗೆಂದೂ ಮಾಡುತ್ತಿರಲಿಲ್ಲ. ನೀವು ಇಂದು ಜರ್ಮನಿಯ ಅತಿ ದೊಡ್ಡ ನಾಯಕರು. ನೀವೀಗ ಹಿಟ್ಲರನಿಗಿಂತಲೂ ಬಲಶಾಲಿಗಳಾಗಿರುವಿರಿ. ನಿಮ್ಮ ದೇಶ ಕುಸಿಯುತಿದೆ. ನಿಮ್ಮ ಸೈನ್ಯ ಎಲ್ಲೆಲ್ಲಿಯೂ ಪೆಟ್ಟು ತಿನ್ನುತ್ತಿದೆ. ಸೇನಾಪತಿಗಳು ಹತಬಲರಾಗಿದ್ದಾರೆ. ನಿಮ್ಮ ಬಳಿ ಇರುವುದು ಎಸ್‌ಎಸ್ ಪೋಲೀಸದಲವೊಂದೇ."

ಹಿಮ್ಲರ್ ಉತ್ತರವೀಯಲಿಲ್ಲ. ಕರ್ಸ್ಟೆನ್ನರ ಮಾತುಗಳು ನಿಜವೆಂದು ಅವನಿಗೆ ಗೊತ್ತಿತ್ತು. ಆದರೆ ನಾಯಕತ್ವದ ಪೂರ್ಣ ಹೊಣೆ ಹೊರುವ ವಿಚಾರ ಅವನನ್ನು ಗಾಬರಿಗೊಳಿಸಿತು.

"ಹೀಗಿರುವಾಗ ಉದಾರರಾಗಿ ವರ್ತಿಸಿ" ಕರ್ಸ್ಟೆನ್ ಹೇಳಿದರು.

"ಆದರೆ ನನ್ನನ್ಯಾರು ಅದಕ್ಕಾಗಿ ಅಭಿನಂದಿಸುವರು? ಯಾರೂ ಇಲ್ಲ."

"ಯಾಕೆ? ಇತಿಹಾಸ ನಿಮ್ಮನ್ನು ಅಭಿನಂದಿಸುವುದು. ೮ ಲಕ್ಷ ಜನರ ಪ್ರಾಣ ಉಳಿಸಿದ್ದಕ್ಕಾಗಿ ಕೃತಜ್ಞತೆಯಿಂದ ಕಾಣುವುದು."

ಹಿಮ್ಲರ್ ಭುಜ ಹಾರಿಸಿದ. ಕರ್ಸ್ಟೆನ್ ಮಾತು ನಿಲ್ಲಿಸಿದರು. ಆದರೆ ಮರುದಿನ, ಮತ್ತೆ ಮೂರನೆಯ ದಿನ ಅದೇ ಮಾತನ್ನು ಪ್ರಸ್ತಾಪಿಸಿದರು. ಬ್ರಾಂಡ್, ಬರ್ಜರ್ ಮತ್ತು ಸ್ಕೆಲೆನ್‌ಬರ್ಗರೂ ಹಾಗೆಯೆ ಮಾಡಿದರು.

ಅಂತೂ ಕೊನೆಗೆ ೧೯೪೫, ಮಾರ್ಚ್ ೧೨ ರಂದು ದ್ವಿತೀಯ ಮಹಾಯುದ್ಧದಲ್ಲಿ ಅಪೂರ್ವವಾದ ಒಂದು ಕಾಗದವನ್ನು ತನ್ನ ಕೈಯಿಂದಲೇ ಹಿಮ್ಲರ್ ಬರೆದ. "ಮಾನವತೆಯ ಹೆಸರಿನಲ್ಲಿ ಒಂದು ಕರಾರು" ಎಂದು ಶೀರ್ಷಿಕೆಯಿದ್ದ ಆ ಕಾಗದದಲ್ಲಿ

೧. ಸ್ಥಾನಬದ್ಧ ಶಿಬಿರಗಳನ್ನು ಮದ್ದಿನಿಂದ ಹಾರಿಸಲಾಗುವುದಿಲ್ಲ.

೨. ಇನ್ನು ಒಬ್ಬನೇ ಒಬ್ಬ ಯಹೂದಿಯನ್ನು ಗಲ್ಲಿಗೇರಿಸುವುದಿಲ್ಲ.

೩. ಯಹೂದಿ ಸೆರೆಯಾಳುಗಳಿಗೆ ಸ್ವೀಡನ್ನು ಪಾರ್ಸಲ್ಲುಗಳನ್ನು ಕಳಿಸಬಹುದು.

ಈ ಕಾಗದಕ್ಕೆ ಮೊದಲು ಹಿಮ್ಲರ್ ಸಹಿ ಹಾಕಿದ, ಆ ಮೇಲೆ ಕರ್ಸ್ಟೆನ್ ಹಾಕಿದರು.

ಕೆಲ ದಿನಗಳ ಮೇಲೆ ಈ ಮಹಾ ವಾರ್ತೆಯನ್ನು ಸ್ಟಾಕ್‌ಹೋಮಿಗೆ ಕಳಿಸುತ್ತ ಕರ್ಸ್ಟೆನ್ನರು "ಹಿಮ್ಲರನನ್ನು ಕಾಣಲು ಜಾಗತಿಕ ಯಹೂದಿ ಕಾಂಗ್ರೆಸ್ಸಿನ ಒಬ್ಬ ಪ್ರತಿನಿಧಿಯನ್ನು ಕರೆತರಲೂ ನಾನು ಅನುಮತಿ ಪಡೆದುಕೊಂಡಿದ್ದೇನೆ" ಎಂದು ತಿಳಿಸಿದರು.

"ಛೆ! ಇದೇನು ಭ್ರಮೆ? ನೀವು ಮಾಂತ್ರಿಕ ಡಾಕ್ಟರರೆನ್ನುವುದು ನಿಜವಾದರೂ ಈ ಕಾರ್ಯ ನಿಮಗೂ ಅಸಾಧ್ಯವಾದದ್ದು" ಎಂದು ಕ್ರಿಶ್ಚನ್ ಗುಂಥರ್ ಹೇಳಿದರು.

ಆದರೆ ಕರ್ಸ್ಟೆನ್ನರ ಮಾತು ಸತ್ಯವಾಯಿತು. ಇನ್ನೂ ೫೦೦೦ ಯಹೂದಿಗಳನ್ನು ಬಿಡುಗಡೆ ಮಾಡಲು ಹಿಮ್ಲರನನ್ನು ಪ್ರೇರೇಪಿಸಿದ ಕರ್ಸ್ಟೆ

ನ್ನರು ಈ ಬಿಡುಗಡೆಯ ಯೋಜನೆಯನ್ನು ಹಾಕಲು ಒಬ್ಬ ಯಹೂದಿಯನ್ನು ಭೆಟ್ಟಿಯಾಗಲು ಕೇಳಿಕೊಂಡಿದ್ದರು. ಮೊದಲಿಗೆ ಒದರಾಡಿದ್ದರೂ ಹಿಮ್ಲರ್ ತನಗಿಂತಲೂ ದೃಢವಾದ ಇಚ್ಛಾಶಕ್ತಿಗೆ ಶರಣುಹೋದವನಂತೆ ಹಾರ್ಝ್‌ವಾಲ್ಡ್‌ನಲ್ಲಿ ಯಹೂದಿ ಪ್ರತಿನಿಧಿಯನ್ನು ಕಾಣಲು ಒಪ್ಪಿದ್ದ.

ಎಪ್ರಿಲ್ ೧೯ ರಂದು ಸ್ಟಾಕ್‌ಹೋಮ್‌ನಿಂದ ಕರ್ಸ್ಟೆನ್ ಮತ್ತು ಜಾಗತಿಕ ಯಹೂದಿ ಕಾಂಗ್ರೆಸ್ಸಿನ ಪ್ರತಿನಿಧಿ ನಾರ್ಬರ್ಟ್ ದ ಮಾಸೂರ್ ಹಿಮ್ಲರನೇ ಒದಗಿಸಿದ್ದ ವಿಮಾನದಲ್ಲಿ ಬರ್ಲಿನ್ನಿಗೆ ಪ್ರಯಾಣ ಮಾಡಿದರು.

ಸ್ವಸ್ತಿಕ ಚಿಹ್ನವನ್ನು ಹೊತ್ತಿದ್ದ ವಿಮಾನಗಳಲ್ಲಿ ಕೊನೆಯದಾಗಿ ಹಾರಿದ ವಿಮಾನ ಇದೇ ಆಗಲಿತ್ತು. ಅದರಲ್ಲಿ ಕರ್ಸ್ಟೆನ್ ಮತ್ತು ಮಾಸೂರ್- ಇಬ್ಬರೇ ಪ್ರಯಾಣಿಕರಿದ್ದರು. ವಿಮಾನ ಬರ್ಲಿನ್ ಸಮೀಪಿಸಿದಾಗ ರಶಿಯನ್ ತೋಫುಗಳ ಗರ್ಜನೆ ಅವರಿಗೆ ಕೇಳಿಸಿತು. ಮನೆಯೊಂದರಲ್ಲಿ ಸಿಕ್ಕಬಿದ್ದಿದ್ದ ಹಿಟ್ಲರ್ ಕೊನೆಯ ಹುಚ್ಚು ಅಪ್ಪಣೆಗಳನ್ನು ಕಳಿಸತೆ ಗಿದ್ದ.

ಕರ್ಸ್ಟೆನ್ ಮತ್ತು ಮಾಸೂರ್ ಮಧ್ಯರಾ ಹಾರ್ಝ್‌ವಾಲ್ಡನ್ನು ತಲುಪಿದರು. ಎರಡು ತಾ ಗಳ ನಂತರ ನಾಗರಿಕ ಉಡುಪಿನಲ್ಲಿ ಸ್ಕೆಲ ಬರ್ಗ ಬಂದ. ಆತ ದಣಿದು ಕಂಗೆಟ್ಟಿ ಎಲ್ಲ ಸೆರೆಯಾಳುಗಳನ್ನು ಕೊಲ್ಲಬೇಕೆಂಬ ಹಿ ರನ ಹುಚ್ಚು ಅಪ್ಪೇ ಬಲವತ್ತರವಾಗಿ ತಗಲಿ ಮಾರ್ಟಿನ್ ಬೋರ್‌ಮನ್ ಹಿಮ್ಲರನ ಮೇ ಪ್ರಬಲ ಒತ್ತಾಯ ತರುತ್ತಿರುವುದಾಗಿ ಆತ ಸಿದ. ನಾಝಿ ಪಕ್ಷದ ನಾಯಕನಾಗಿದ್ದ ಬೊ ಮನ್ ಮತ್ತು ಹಿಟ್ಲರನ ನಿಕಟ ಸಂಬ ಕ್ಕಾಗಿ ಅಸೂಯೆಪಟ್ಟುಕೊಳ್ಳುತ್ತಿದ್ದ ಹಿಮ್ಲ ಈ ಒತ್ತಾಯಕ್ಕೆ ಬಲಿಬೀಳಬಹುದು ಎಂ ಸ್ಕೆಲೆನ್‌ಬರ್ಗ್ ಹೇಳಿದ.

"ನೀವು ಈಗಲೇ ಹಿಮ್ಲರನ ಹತ್ತರ ಅವನ
ವಚನಭಂಗವಾಗುವುದಿಲ್ಲೆಂಬ ಆಶ್ವಾಸನ ಪಡೆ
ಯಬೇಕು. ಅವನೇನಾದರೂ ತಿರುಗಿಬಿದ್ದರೆ
ನಾನು ಮತ್ತು ಬ್ರಾಂಡ್ ಅವನ ಆಜ್ಞೆ ಹೊರಗೆ
ಕಳಿಸಲ್ಪಡದಂತೆ ಪ್ರಯತ್ನಿಸುವೆವು" ಎಂದ
ನಾತ.

ಹಿಮ್ಲರನನ್ನು ಹಾರ್ಝವಾಲ್ಡಿಗೆ ಕರತರ
ಲೆಂದು ಮರುದಿನ ಮುಂಜಾನೆ ಹೊರಟ ಸ್ಕೆಲೆನ್
ರ್ಗ್ "ಬರುವುದು ಸ್ವಲ್ಪ ತಡವಾದೀತು.
ಟ್ಲರನ ಜನ್ಮದಿನದ ಸಮಾರಂಭದಲ್ಲಿ ಹಿಮ್ಲರ್
ಾಗವಹಿಸಲಿದ್ದಾನೆ" ಎಂದು ಹೇಳಿದ.

ರಾತ್ರಿ ಬಹಳ ತಡವಾಗಿ ಬ್ರಾಂಡ್ ಮತ್ತು
ಕೆಲೆನ್‌ಬರ್ಗರೊಂದಿಗೆ ಹಿಮ್ಲರ್ ಬಂದ. ಮಿತ್ರ
ಾಷ್ಟ್ರಗಳ ವಿಮಾನದಾಳಿಯಿಂದ ಅವರ ಪ್ರಯಾ
ಕ್ಕೆ ಬಲು ತೊಂದರೆಯಾಗಿತು.

ತನ್ನ ಕರಿ ಸಮವಸ್ತ್ರವನ್ನು ತೊಟ್ಟು ಹಿಮ್ಲರ್
ದಕ್ಕೆ ಪದಕಗಳನ್ನು ತಗಲಿಸಿಕೊಂಡಿದ್ದ.
ರ್ಚೆಗೆಂದು ಎಲ್ಲರೂ ಕುಳಿತುಕೊಂಡಾಗ ಆತ
ಾವ ಸಂಕೋಚವಿಲ್ಲದೆ ಯಹೂದ್ಯರ ಸಮ
ಯ ಬಗ್ಗೆ ದೀರ್ಘ ಭಾಷಣ ಮಾಡಿದ. ಆತ
ಟ್ಟು, ದ್ವೇಷಗಳನ್ನು ತೋರಿಸದಿದ್ದರೂ ಯ-
ೂದಿವಿರೋಧಿ ಭಾವನೆಯನ್ನು ಮುಚ್ಚಿಡಲಿಲ್ಲ.

ಮಾಸೂರ್‌ನ ಸಹನಾಶಕ್ತಿಯನ್ನು ಕಂಡು
ರ್ಸ್ಟೆನ್ನರು ಪ್ರಭಾವಿತರಾದರು. ಯಹೂದಿ
ಳು ವಿಷಮಜ್ವರವೇ ಮುಂತಾದ ರೋಗಗಳನ್ನು
ಬ್ಬಿಸುವ ಸಾಧನವಾಗಿರುವರೆಂದೇ ಈ ರೋಗ
ಳ ಹಿಡುಗನ್ನು ತಡೆಗಟ್ಟಲು ಅವರನ್ನು ಗ್ಯಾಸ್
ೇಂಬರಿಗೆ ಕಳಿಸಲಾಗಿತ್ತೆಂದು ಹಿಮ್ಲರ್ ಹೇಳಿ
ಾಗ ಕರ್ಸ್ಟೆನ್ನರೇ "ಹಿಂದಿನ ವಿಚಾರ ಮಾತ
ಡಲು ನಾವಿಲ್ಲಿ ಸೇರಿಲ್ಲ. ಇನ್ನು ಏನೇನನ್ನು
ಳಿಸಬಲ್ಲೆವೆಂಬ ವಿಚಾರವೇ ಮುಖ್ಯವಾದದ್ದು"
ಂದರು.

"ಹೌದು. ಜರ್ಮನಿಯಲ್ಲಿನ್ನೂ ಇರುವ ಎಲ್ಲ
ಹೂದಿಗಳ ಪ್ರಾಣ ಉಳಿಸುವ ಆಶ್ವಾಸನ
ಡೆಯಬೇಕಾಗಿದೆ" ಎಂದ ಮಾಸೂರ್.

ಚರ್ಚೆ ದೀರ್ಘವಾಗಿತ್ತು; ತಾಪದಾಯಕ
ಗಿತ್ತು. ಈ ಕೊನೆಯ ಗಳಿಗೆಯಲ್ಲಿ ಕೂಡ
ಮ್ಲರನಿಗೆ, ಎಲ್ಲಿ ಹಿಟ್ಲರನಿಗೆ ತನ್ನ ಕಾರಸ್ಥಾನ
ಗೊತ್ತಾಗುವುದೋ ಎಂಬ ಅಂಜಿಕೆಯಿತ್ತು. ಆತ
ಮಾಸೂರನ ವಿನಂತಿಗೆ ಒಪ್ಪಿಕೊಂಡಾಗ ನಸು
ಕಿನ ಆರು ಗಂಟೆಯಾಗಿತ್ತು.

ಬೆಳಕು ಹರಿಯುತ್ತಿರುವಾಗ ಹಿಮ್ಲರನನ್ನು
ಕಳಿಸಲು ಕರ್ಸ್ಟೆನ್ ಅವನ ಕಾರಿನ ವರೆಗೆ
ಹೋದರು. ಅವರಲ್ಲೊಬ್ಬರೂ ಮಾತಾಡಲಿಲ್ಲ.

ಕಾರನ್ನು ಹತ್ತುತ್ತ ಹಿಮ್ಲರ್ ಹೇಳಿದ.
"ಡಾಕ್ಟರ್, ನಾನಿನ್ನು ಎಷ್ಟು ಕಾಲ ಜೀವದಿಂದಿ
ರುವೆನೆಂದು ನನಗೆ ತಿಳಿಯದು. ಏನೇ ಆದರೂ
ನನ್ನ ಬಗ್ಗೆ ಕೆಟ್ಟ ವಿಚಾರಗಳನ್ನಿಟ್ಟುಕೊಳ್ಳ
ಬೇಡಿ. ನಾನು ಮಹಾಪ್ರಮಾದಗಳನ್ನೆಸಗಿರು
ವುದು ನಿಜ. ಆದರೆ ನಾನು ಕಠಿನಹೃದಯಿ
ಯಾಗಬೇಕೆಂದು ಹಿಟ್ಲರನ ಇಚ್ಛೆಯಾಗಿತ್ತು.
ನಮ್ಮ ಜೊತೆಗೆ ಜರ್ಮನಿಯ ಶ್ರೇಷ್ಠ ಅಂಶವೂ
ಮಾಯವಾಗುವುದು." ಆಮೇಲೆ ಕರ್ಸ್ಟೆನ್ನರ
ಕೈಯನ್ನು ಅಮುಕಿ "ನಿಮ್ಮ ಉಪಕಾರ ಬಹಳ
ವಾಗಿದೆ ನನ್ನ ಮೇಲೆ. ನನ್ನ ಮೇಲೆ ಕರುಣೆ
ಯಿರಲಿ. ನಾನು ನನ್ನ ಕುಟುಂಬದ ಯೋಚನೆ
ಮಾಡುತ್ತಿದ್ದೇನೆ" ಎಂದ.

ಇತಿಹಾಸದಲ್ಲಿ ಇನ್ನಾವನಿಗಿಂತಲೂ ಹೆಚ್ಚು
ಜನರ ಸಂಹಾರಕ್ಕೆ ಅಪ್ಪಣೆ ಮಾಡಿದ್ದ ಆ
ಮನುಷ್ಯನ ಕಣ್ಣಲ್ಲಿ ನೀರೂರಿದ್ದನ್ನು ಕರ್ಸ್ಟೆನ್ನರು
ನಸುಕಿನ ಆ ಶೀತಲ—ಮಂದ ಪ್ರಕಾಶದಲ್ಲಿ
ಕಂಡರು.

ಎರಡು ವಾರಗಳ ನಂತರ ಜರ್ಮನಿ ಶರ
ಣಾಗತವಾಯಿತು. ಬದುಕುಳಿದ ನಾಝಿ ಧುರೀ
ಣರಲ್ಲಿ ಹೆಚ್ಚಿನವರು ಬಂಧಿಸಲ್ಪಟ್ಟಿದ್ದರೂ
ಹಿಮ್ಲರ್ ಇನ್ನೂ ಸ್ವತಂತ್ರನಾಗಿಯೆ ಇದ್ದ.

೧೯೪೫, ಮೇ ೨೧. ಜರ್ಮನಿಯ ಬ್ರೆಮರ್
ನೋರ್ಡ್ ಎಂಬ ಸಣ್ಣ ಊರಿನಲ್ಲಿ ಬ್ರಿಟಿಶ್
ಕಾವಲುಗಾರರಿಗೆ ಹೆನ್ರಿಚ್ ಹಿಝಿಂಗರ್
ಎಂಬಾತ ಸಿಕ್ಕಿದ. ಹೆಚ್ಚಿನ ತಪಾಸಣೆಯಲ್ಲಿ
ಹಿಮ್ಲರನೇ ಈ ಹೆಸರನ್ನಿಟ್ಟುಕೊಂಡಿರುವುದು
ತಿಳಿಯಿತು. ಆತ ಮೀಸೆ ಬೋಳಿಸಿಕೊಂಡಿದ್ದ.
ಸೆರೆಮನೆಯಲ್ಲಿ ಹಿಮ್ಲರ್ ವಿಷ ನುಂಗಿ ತನ್ನ
ವಿಚಾರಣೆಯಾಗುವುದನ್ನು ತಪ್ಪಿಸಿಕೊಂಡ.

ಬರ್ಜರನಿಗೆ ೨೫ ವರ್ಷ ಶಿಕ್ಷೆಯಾದರೂ ಐದು

ವರ್ಷಗಳ ನಂತರ ಅವನ ಬಿಡುಗಡೆಯಾಯಿತು. ಇಂದಾತ ಬಾಗಿಲು ಪಡದೆಗಳಿಗೆ ಹಾಕುವ ಸರಳುಗಳ ಕಾರಖಾನೆಯೊಂದನ್ನು ನಡೆಸುತ್ತಿದ್ದಾನೆ. ಆರು ವರ್ಷ ಶಿಕ್ಷೆಯಾಗಿ ಎರಡು ವರ್ಷಗಳಾದಮೇಲೆ ಬಿಡುಗಡೆ ಹೊಂದಿದ ಸ್ಕೆಲೆನ್‌ಬರ್ಗ್ ಮುಂದೆ ಒಂದೇ ವರ್ಷದಲ್ಲಿ ಸತ್ತ.

ಹಿಮ್ಲರನ ದಾನವೀ ಅಪ್ಪಣೆಗಳಿಗೆಲ್ಲ ಹೊಣೆಗಾರನೆಂದು ಬ್ರಾಂಡನಿಗೆ ಗಲ್ಲಿನ ಶಿಕ್ಷೆಯಾಯಿತು. ಕರ್ಸ್ಟೆನ್ ಎಷ್ಟು ಪ್ರಯತ್ನಿಸಿದರೂ ಅಧ್ಯಕ್ಷ ಟ್ರೂಮನ್ನರಿಗೆ ಬರೆದುಕೊಂಡರೂ ಪ್ರಯೋಜನವಾಗಲಿಲ್ಲ.

ಯುದ್ಧಾನಂತರ ಕರ್ಸ್ಟೆನ್ನರು ಸ್ವೀಡನ್ನಿನಲ್ಲಿ ನೆಲಸಿದರು. ಆದರೆ ಬಹಳ ಕಾಲ ಅವರು ಜನರ ತಿರಸ್ಕಾರವನ್ನು ಹೊಂದಬೇಕಾಯಿತು. ಅವರು ನಾಝಿ ಕೊಲೆಗಡಕರಲೆ ಹೀನನೆಸಿದ ಹಿಮ್ಲರನ ಡಾಕ್ಟರರಾಗಿರಲಿಲ್ಲವೆ? ಕರ್ಸ್ಟೆನ್ನರಿಂದ ಸಹಾಯ
ಹೊಂದಿದ್ದ ಕೆಲವು ಡಚ್ಚರೇ ಅವರ ಮೇಲೆ
ಗೆದ್ದು ಅವರ ವಿಚಾರಣೆ ನಡೆಸಲು ಕೇಳಿಕೊ
ಡರು. ೧೯೪೯ ರಲ್ಲಿ ವಿಚಾರಣಾ ಸಮಿತಿಯೊ
ಸಹಸ್ರಾರು ಕಾಗದ ಪತ್ರಗಳನ್ನು ಸಾಕ್ಷಿಗಳ
ತಪಾಸಿಸಿ ಕರ್ಸ್ಟೆನ್ನರು ನಿರ್ದೋಷಿಗಳೆ
ಸಾರಿತು. ಡಚ್ ಸರಕಾರ ಅವರಿಗೆ ಪದವಿಯ
ಸನ್ಮಾನಿಸಿತು.

೧೯೫೩ರಲ್ಲಿ ಕರ್ಸ್ಟೆನ್ನರಿಗೆ ಸ್ವೀಡನ್ನಿನ ನಾ
ಕತ್ವ ದೊರಕಿತು. ಸರಕಾರ ಪ್ರಕಟನೆ
ಅವರು ಸಹಸ್ರಾರು ಕೈದಿಗಳ ಪ್ರಾಣ
ಸಿದ ಬಗ್ಗೆ ಅವರನ್ನು ಪ್ರಶಂಸಿಸಿ ಅಭಿನಂ
ಲಾಯಿತು. ೧೯೬೦ ಎಪ್ರಿಲ್ ೧೬
ಹೃದಯ ವಿಕಾರದಿಂದ ಸಾಯುವವ
ಕರ್ಸ್ಟೆನ್ನರು ಸ್ಟಾಕ್‌ಹೋಮಿನಲ್ಲಿ ವಾಸಿ
ಜರ್ಮನಿ, ಸ್ವೀಡನ್ ಮತ್ತು ಫ್ರಾನ್ಸ್
ತಮ್ಮ ವೈದ್ಯಕೀಯ ವೃತ್ತಿಯನ್ನು ಯಶಸ್ವಿ
ನಡೆಸಿದರು.

ರುಚಿಗೆ! ಗುಣಕ್ಕೆ!! ತೃಪ್ತಿಗೆ!!!

ಪ್ರತಿದಿನ ಒಂದಕ್ಕೆ

ಎರಡು ಕೋಟಿಗೂ

ಮೇಲ್ಪಟ್ಟು ಬೀಡಿಗಳ ತಯಾರಿಕೆಯಿಂದ ದಕ್ಷಿಣ ಭಾರತದಲ್ಲಿ

ಮೊದಲನೆಸ್ಥಾನವನ್ನು ಗಳಿಸಿರುವ ಭಾರತದ ಬೃಹತ್ ಉದ್ಯಮದ ಉತ್ಪನ್ನಗಳು



ಪ್ರಧಾನ ಕಚೇರಿ:

ಮಂಗಳೂರು ಗಣೇಶ ಬೀಡಿ ವರ್ಕ್ಸ್

ಸಂತೆಪೇಟೆ, ಮೈಸೂರು

TELEGRAM "AROMA" TELEPHONE 421

...le Magazine owned by The Loka Shikshana Trust Hubli is printed and published

